# ಶ್ರೀ ವಿದ್ಯಾರಣ್ಯ ಸ್ವಾಮಿಗಳು

ಪಂಡಿತ ಭೀಮಾಜಿ ಜೀವಾಜಿ ಹುಲಿಕವಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಪುನರ್ಮುದ್ರಣ ಯೋಜನೆ : ಪುಷ್ಪ - ೧೪

ಶ್ರೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಬಿರುದಾಂಕಿತ

# ಶ್ರೀವಿದ್ಯಾರಣ್ಯಸ್ವಾಮಿಗಳು

ವಿದ್ಯಾಭ್ಯಾಸಸುದೀಪಮಂ ಪೊರೆದವಂ ದಾರಿದ್ರ್ಯವಾತೌಘದಿಂ ।
ಸದ್ಯೋಗಿಪ್ರವರಂ ಸ್ವಧರ್ಮಕುಶಲಂ ಸಾಮ್ರಾಜ್ಯಸಂಸ್ಥಾಪಕಂ ॥
ವಿದ್ಯಾದೇವಿಯ ಸುಪ್ರಸಾದಫಲರೂಪೋದ್ಗ್ರಂಥಜನ್ಮಪ್ರದಂ ।
ವಿದ್ಯಾರಣ್ಯಮಹೋದಯಂ ಗುರುವರಂ ಗೆಲ್ಗಂ ಯಶೋರಾಶಿಯಿಂ ॥

ಸಂ. ಭೀಮಾಜಿ ಜೀವಾಜಿ ಹುಲಿಕವಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಶ್ರೀವಿದ್ಯಾರಣ್ಯಸ್ವಾಮಿಗಳು :
ಸಂ. ಭೀಮಾಜಿ ಜೀವಾಜಿ ಹುಲಿಕವಿ
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

●

ಆರ್ಥಿಕ ನೆರವು : ಕರ್ನಾಟಕ ರಾಜ್ಯ ಸರಕಾರ

●

SHREEVIDYAARANYASWAAMIGALU :
Life Sketch of Sri Vidyaranya Swamy in Kannada by
Pt. Bheemaji Jeevaji Hulikavi

Published in 1985 by
Siddhaling Pattanshetti
Secretary,
Karnatak Vidyavardhak Sangha, Dharwad - 580 001

© Karnatak Vidyavardhak Sangha, Dharwad

Pages : 136 Copies : 5000

Printed at
Lalita Mudranalaya, Market, Dharwad - 580 001

# ಮೊದಲ ಮಾತು

ಕ್ರಿ. ಶ. ೧೮೯೦ ರಲ್ಲಿ ಸ್ಥಾಪಿತಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕದ ಅತ್ಯಂತ ಪ್ರಾಚೀನವಾದ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಕನ್ನಡದ ಜನನಾಡಿಯನ್ನು ಮಿಡಿದ ತುಂಬ ಮಹತ್ವದ ಸಂಸ್ಥೆಯಾಗಿದೆ. ಕರ್ನಾಟಕದ ಅನೇಕ ಬರೆಹಗಾರರು ಕವಿಗಳು ಸಾಮಾಜಿಕ ಕಾರ್ಯಕರ್ತರು ಈ ಸಂಸ್ಥೆಯಿಂದ ಸ್ಫೂರ್ತಿ ಪಡೆದು, ಹೆಸರು ಪಡೆದು ನಾಡಿನ ತುಂಬ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಂಡಿದ್ದಾರೆ.

ತನ್ನ ಹುಟ್ಟಿನಾರಭ್ಯದಿಂದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸುತ್ತ ಬಂದಿದೆ. ಹಲವಾರು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಧಾರವಾಡವನ್ನು ಕೇಂದ್ರ ವನ್ನಾಗಿ ಇಟ್ಟುಕೊಂಡು ಸಮಸ್ತ ಕರ್ನಾಟಕದ ಲೇಖಕರನ್ನು, ವಿಚಾರವಂತರನ್ನು ಒಂದುಗೂಡಿಸಿ ಬೆಳಕಿಗೆ ತರುವ ಕಾರ್ಯವನ್ನು ಸಂಘವು ಮೊದಲಿನಿಂದ ನಿಯಮಿತವಾಗಿ ಮಾಡುತ್ತ ಬಂದಿದೆ.

ಕನ್ನಡ ಬರೆಹಗಾರರ ಬಳಗವನ್ನು ಕಟ್ಟಿ ಅವರಿಂದ ವಿವಿಧ ವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಸಿ ಅಥವಾ ಸ್ಪರ್ಧೆಗಳನ್ನು ಏರ್ಪಡಿಸಿ ಗ್ರಂಥರಚನೆಗೆ ಪ್ರೋತ್ಸಾಹ ನೀಡಿ ತನ್ಮೂಲಕ ಮೂಡಿಬಂದ ಕೃತಿಗಳನ್ನು ತುಂಬ ಪರಿಶ್ರಮದಿಂದ ಪ್ರಕಟಿಸಿ ಅವುಗಳನ್ನು ನಾಡಿನ ತುಂಬ ಹರಡಿದ್ದ ಕನ್ನಡಾಭಿಮಾನಿಗಳಿಗೆ ತಲುಪಿಸುವ ಮಹತ್ವದ ಚಾರಿತ್ರಿಕ ಹೊಣೆಗಾರಿಕೆಯನ್ನು ಸಹ ಸಂಘವು ನಿರ್ವಹಿಸಿಕೊಂಡು ಬಂದಿದೆ.

ಈ ನಿಟ್ಟಿನಲ್ಲಿ ಸಂಘವು ಸಾಹಿತ್ಯಿಕ ಜಗತ್ತಿನಲ್ಲಿ ಬಹುಕಾಲ ಉಳಿಯುವಂಥ ನೂರಾರು ಪುಸ್ತಕಗಳನ್ನು ಪ್ರಕಟಿಸಿದ್ದು ಅವು ಸಂಘದ ಚರಿತ್ರೆಯಲ್ಲಿ ಉಳಿಯುವಂಥ ಕೃತಿಗಳು. ಈಚೆಗೆ ಕೆಲವು ವರ್ಷಗಳಿಂದ ಸಂಘದ ಪ್ರಕಾಶನ ವಿಭಾಗವು ನಾಡಿನಲ್ಲಿ ಬೆಳೆದು ಬಂದ ಪ್ರಕಾಶನದ ಪ್ರಸಾರದೊಂದಿಗೆ ಸ್ಪರ್ಧಾತ್ಮಕವಾಗಿ ಹೊಂದಿಕೊಂಡು ಹೋಗಲಾಗದೆ ಪುಸ್ತಕ ಪ್ರಕಟಣೆಯ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು.

ಈಗ ಅನತಿ ಕಾಲದಲ್ಲಿಯೇ ತನ್ನ ಆಯುಷ್ಯದ ನೂರನೆಯ ವರ್ಧಂತಿ ಉತ್ಸವ ವನ್ನು ಸಂಘವು ಆಚರಿಸಲಿರುವ ಸಂದರ್ಭದಲ್ಲಿ ಪೂರ್ವಭಾವಿಯಾಗಿ ತನ್ನ ಪ್ರಾಚೀನ ಗೌರವವನ್ನು ಮೆರೆದ ಕೆಲವಾರು ಕೃತಿಗಳನ್ನು ಆಯ್ದುಕೊಂಡು ಅವುಗಳ ಮರು ಮುದ್ರಣದ ಯೋಜನೆಯನ್ನು ಹಾಕಿಕೊಂಡಿತು. ಹಿಂದೆ ಸಂಘವು ಪ್ರಕಟಿಸಿದ ಅನೇಕ ಪುಸ್ತಕಗಳು ಇಂದು ಕಾಲಗರ್ಭದಲ್ಲಿ ಸೇರಿಹೋಗಿ ಅವುಗಳ ಪ್ರತಿಗಳು, ಕೆಲವು ಕೃತಿ

ಗಳ ಹೆಸರುಗಳು ಸಹ ಗೊತ್ತಿಲ್ಲದಂತೆ ಆಗಿಬಿಟ್ಟಿವೆ. ಸಂಘದ ಇಡೀ ಚರಿತ್ರೆಯನ್ನು ಒಟ್ಟುಗೂಡಿಸಿ ಮಹತ್ವದ ಸಂಶೋಧನ ಗ್ರಂಥವೊಂದನ್ನು ಜವಾಬ್ದಾರಿಯುತ ವಿದ್ವಾಂಸರೊಬ್ಬರಿಂದ ಬರೆಸಬೇಕೆಂಬ ವಿಚಾರ ಸಹ ಸಂಸ್ಥೆಗಿದೆ. ಅದಕ್ಕೆ ಅನುಕೂಲಕರವಾಗಿ ಸಹಾಯಕವಾಗುವಂಥ ಕಾರ್ಯವೆಂದು ಸದ್ಯ ಉಪಲಬ್ಧವಿದ್ದ ಕೃತಿಗಳಲ್ಲಿ ಹದಿನೈದು ಪುಸ್ತಕಗಳನ್ನು ಆಯ್ದು ಅವುಗಳ ಮರುಮುದ್ರಣದ ಯೋಜನೆಯೊಂದನ್ನು ಹಮ್ಮಿಕೊಂಡು ಅದರ ವಿವರವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ೧೯೮೪ರ ಪೂರ್ವಾರ್ಧದಲ್ಲಿ ಸಲ್ಲಿಸಲಾಯಿತು. ಆಗ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ನ. ನಾ. ಕಠಾವಿ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಬಗ್ಗೆ ತಾವು ಇಟ್ಟುಕೊಂಡಿದ್ದ ಅಭಿಮಾನವನ್ನು ಹೃತ್ಪೂರ್ವಕವಾಗಿ ನೆನೆದು ಸಂಘವು ಹಮ್ಮಿಕೊಂಡ ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಎಲ್ಲ ರೀತಿಯ ನೆರವು ನೀಡುವುದಾಗಿ ಆಶ್ವಾಸನೆ ಕೊಟ್ಟರು. ಅದರಂತೆ ಯೋಜನೆಯನ್ನು ಒಪ್ಪಿ ಸರಕಾರವು ಹದಿನೈದು ಪುಸ್ತಕಗಳ ಪ್ರಕಾಶನಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಡುವಂತೆ ವ್ಯವಸ್ಥೆ ಮಾಡಿದ ಮಾನ್ಯ ಶ್ರೀ ಕಠಾವಿ ಅವರು ಸಂಘವು ಆ ಅನುದಾನವನ್ನು ಸ್ವೀಕರಿಸುವ ಹೊತ್ತಿಗೆ ಭೌತಿಕವಾಗಿ ಇಲ್ಲವಾದದ್ದು ಸಂಘಕ್ಕೆ ಬಹಳ ದೊಡ್ಡ ನೋವು. ಹದಿನೈದು ಕೃತಿಗಳ ಪ್ರಕಾಶನದ ಈ ಸಂದರ್ಭದಲ್ಲಿ ಸಂಘವು ಅತ್ಯಂತ ಕೃತಜ್ಞತೆಯಿಂದ ಶ್ರೀ ಕಠಾವಿ ಅವರನ್ನು ಸ್ಮರಿಸುತ್ತದೆ.

ಸಂಘವು ಮರುಮುದ್ರಣದ ಪ್ರಕಾಶನ ಯೋಜನೆಯ ಮೊದಲ ಹಂತವಾಗಿ ಆಯ್ದುಕೊಂಡ ಹದಿನೈದು ಕೃತಿಗಳು ಇವು :

೧) ಶೌರ್ಯಸಾಗರ
೨) ಕನ್ನಡಿಗರ ಜನ್ಮಸಾರ್ಥಕತೆ
೩) ನರಕಾಸುರ ವಿಜಯವ್ಯಾಯೋಗಂ
೪) ಕರ್ನಾಟಕ ಕಥಾಸರಿತ್ಸಾಗರ
೫) ಮೋಹಿನೀ ಅಥವಾ ನಿಂದಕರ ನಡವಳಿ
೬) ಕನ್ನಡ ಮಾತು ತಲೆಯೆತ್ತುವ ಬಗೆ
೭) ಕಾಲಿದಾಸ ಚರಿತ್ರ
೮) ಕರ್ಣಾಟಕ ಯಯಾತಿನಾಟಕಂ
೯) ಗೃಹವೈದ್ಯಕವು
೧೦) ಭಾರತೀಯ ವಿದುಷಿಯರು
೧೧) ಶ್ರೇಯಃಸಾಧನ
೧೨) ಪಂಡಿತರಾಜ ಜಗನ್ನಾಥ
೧೩) ಇಸೋಪನ ಚರಿತ್ರೆ

೧೪) ಶ್ರೀವಿದ್ಯಾರಣ್ಯಸ್ವಾಮಿಗಳು
೧೫) ನರಗುಂದದ ಬಂಡಾಯ

ಕ್ರಮವಾಗಿ ಪ್ರಕಟವಾಗುತ್ತಿರುವ ಈ ಕೃತಿಗಳು ಸಹ ವಿಷಯ ವೈವಿಧ್ಯ, ಆ ಕಾಲದ ಭಾಷಾ ಸೌಂದರ್ಯ, ವ್ಯಾಕರಣ ಹಾಗೂ ಭಾಷಾಶಾಸ್ತ್ರದ ದೃಷ್ಟಿಕೋನ ಹಾಗೂ ಬೆಳೆಯಬೇಕಾಗಿದ್ದ ಒಂದು ಭಾಷೆಯ ನಿರಂತರ ಪರಿಶ್ರಮದ ವಿಕಾಸಶೀಲ ಘಟ್ಟ ಮುಂತಾದ ದೃಷ್ಟಿಯಿಂದ ಪ್ರಮುಖ ಆಯಾಮಗಳನ್ನು ಹೊಂದಿರುವಂಥವು. ಈ ಕೃತಿಗಳನ್ನು ಆಗ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕಾಗಿ ರಚಿಸಿಕೊಟ್ಟ ಆಯಾ ಲೇಖಕರು ತಮ್ಮ ಕೃತಿಗಳ ಸ್ವಾಮ್ಯವನ್ನು ಸಂಘಕ್ಕೆ ನೀಡಿದ್ದು ಈಗ ಈ ಕೃತಿಗಳ ಏಕಸ್ವಾಮ್ಯ ಹೊಂದಿದ ಸಂಘವು ಆ ಎಲ್ಲ ಲೇಖಕರನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಈ ಕೃತಿಗಳಲ್ಲಿ ಯಾವುದೇ ಬದಲಾವಣೆ ಅಥವಾ ಹೊಸ ಸೇರ್ಪಡೆ ಇತ್ಯಾದಿ ಮಾಡದೆ ಅವು ಇದ್ದ ಮೂಲ ಸ್ಥಿತಿಯಲ್ಲಿಯೇ ಮರುಮುದ್ರಿಸಲಾಗಿದೆ. ಐತಿಹಾಸಿಕ ದೃಷ್ಟಿಯಿಂದ ಈ ಕೃತಿಗಳನ್ನು ಅಭ್ಯಸಿಸುವವರಿಗೆ ಯಾವ ದೃಷ್ಟಿಯಿಂದಲೂ ವ್ಯತ್ಯಯ ಬರದ ಹಾಗೆ ಇವುಗಳ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲಾಗಿದೆ. ಈಗ ಬೇರೆ ಎಲ್ಲಿಯೂ ಉಪಲಬ್ಧವಿರದ ಈ ವಿರಳ ಕೃತಿಗಳನ್ನು ಹೀಗೆ ಅವು ಇದ್ದ ಸ್ವರೂಪದಲ್ಲಿಯೇ ಉಪಲಬ್ಧಗೊಳಿಸಿ ಅವುಗಳ ಆಯುಷ್ಯ ಹಾಗೂ ಅಸ್ತಿತ್ವಗಳನ್ನು ಇನ್ನಷ್ಟು ಸುಭದ್ರಗೊಳಿಸುವ ನಿಟ್ಟಿನಲ್ಲಿ ಈ ಮರುಮುದ್ರಣಗಳು ಜನತೆಗೆ ಪ್ರಯೋಜನಕಾರಿಯಾದರೆ ಸಂಘದ ಶ್ರಮ ಸಾರ್ಥಕವಾದಂತೆ.

ಈ ಕೃತಿಗಳನ್ನು ಪ್ರಕಟಿಸಲು ಆರ್ಥಿಕ ನೆರವು ನೀಡಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಾವು ವಿಶೇಷವಾಗಿ ಕೃತಜ್ಞರಾಗಿದ್ದೇವೆ. ಈ ಹದಿನೈದು ಕೃತಿಗಳಲ್ಲದೆ ಕರ್ನಾಟಕ ವಿದ್ಯಾವರ್ಧಕ ಸಂಘದ ಇನ್ನಿತರ ಎಲ್ಲ ಕೃತಿಗಳನ್ನು ಹೀಗೆ ಮರುಮುದ್ರಣ ಮಾಡಿ ನಾಡಿನ ತುಂಬ ಅವು ವ್ಯಾಪಿಸುವಂತೆ ಮಾಡುವ ಉದ್ದೇಶ ನಮಗಿರುವುದರಿಂದ ಇನ್ನು ಮುಂದೆಯೂ ಕರ್ನಾಟಕ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಮ್ಮ ಈ ಬೃಹತ್ ಯೋಜನೆ ಯಶಸ್ವಿಯಾಗಿ ಮುಂದುವರಿಯುವಂತೆ ನಮಗೆ ಆರ್ಥಿಕ ನೆರವನ್ನು ನೀಡಿ ಇಂಥ ಒಂದು ಐತಿಹಾಸಿಕ ಉಪಕ್ರಮದ ಮೂಲಕ ಪ್ರಕಾಶಿತಗೊಳ್ಳುವ ಕೃತಿಗಳ ಪುನರುಜ್ಜೀವನಕ್ಕೆ ಕಾರಣವಾಗಿ ನಮ್ಮ ಬೆನ್ನು ತಟ್ಟಲಿ ಎಂದು ಆಶಿಸುತ್ತೇವೆ.

ಧಾರವಾಡದ ಗವ್ಹರ್ನಮೆಂಟ ಹಾಯಸ್ಕೂಲದಲ್ಲಿ ಅಸಿ. ಮಾಸ್ತರ ಆಗಿದ್ದ ಪಂ. ಭೀ. ಜೀ. ಹುಲಿಕವಿಯವರು ಕನ್ನಡ ಮತ್ತು ಸಂಸ್ಕೃತದಲ್ಲಿ ಸಮಾನವಾದ ಅಧಿಕಾರ ಹೊಂದಿದ್ದರು. ಕನ್ನಡ ಮತ್ತು ಕಂನಾಡಿನ ಮಕ್ಕಳ ಬಗ್ಗೆ ಅಪಾರ ಪ್ರೀತಿ ಮತ್ತು ಮಮತ್ವವನ್ನು ತಾಳಿದ್ದರು. ಆ ಕಾಲಕ್ಕೆ ಕೇವಲ ವಿದೇಶೀಯರ ಕಣ್ಣುಗಳಿಂದ ನಮ್ಮ

ಚರಿತ್ರೆಯನ್ನು ನೋಡುವ ಪ್ರಸಂಗವನ್ನು ತಪ್ಪಿಸಿ ನಮ್ಮ ದೃಷ್ಟಿಯಿಂದ ನಮ್ಮ ಇತಿಹಾಸವನ್ನು ತಿಳಿಯುವ ಮಹತ್ವವನ್ನು ಬೋಧಿಸಿದ ವಿರಳ ಗ್ರಂಥಗಳಲ್ಲಿ ಒಂದಾದ ಪ್ರಸ್ತುತ ಕೃತಿ 'ಶ್ರೀ ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ ಬಿರುದಾಂಕಿತ **ಶ್ರೀವಿದ್ಯಾರಣ್ಯಸ್ವಾಮಿಗಳು**' ಎಂಬುದನ್ನು ಅವರು ತುಂಬ ಶ್ರಮವಹಿಸಿ ಸಿದ್ಧಪಡಿಸಿದ್ದಾರೆ. ಜೀವನ ಚರಿತ್ರೆ, ಇತಿಹಾಸ, ದೇಶಾಭಿಮಾನ, ಭಾಷಾಭಿಮಾನ, ವಿದ್ವತ್ತು, ಸಂಶೋಧನೆ, ಸಾಹಿತ್ಯಿಕ ಮೌಲ್ಯಗಳು ಮುಂತಾದ ಹಲವು ದೃಷ್ಟಿಯಿಂದ ಮಂಡಿತವಾದ ಈ ಕೃತಿಯು ಕರ್ನಾಟಕ ವಿದ್ಯಾವರ್ಧಕ ಸಂಘದ ವಾಗ್ಭೂಷಣ ಗ್ರಂಥಮಾಲೆಯ ೭೯ ನೆಯ ಪುಷ್ಪವಾಗಿ ೧೯೩೨ರಲ್ಲಿ ಪ್ರಕಟವಾದಾಗ ಇದರ ಬೆಲೆ ಕೇವಲ ಒಂದು ರೂಪಾಯಿ ಇತ್ತು. ಶ್ರೀವಿದ್ಯಾರಣ್ಯರನ್ನು, ಹಂಪಿ ಹಾಗೂ ವಿಜಯನಗರ ಸಾಮ್ರಾಜ್ಯವನ್ನು ಸ್ಮರಿಸುವಲ್ಲಿ ಪ್ರತಿಯೊಬ್ಬರಿಗೂ ಅಗತ್ಯವಾದ ಕೈಗನ್ನಡಿಯಂತಿರುವ ಈ ಕೃತಿಯ ಬಗ್ಗೆ ನಮಗೆ ತುಂಬ ಅಭಿಮಾನವಿದೆ.

ಕರ್ನಾಟಕದ ಜನತೆ, ಸಾಹಿತ್ಯಾಸಕ್ತ ಸ್ನೇಹಿತರು, ಗ್ರಂಥಾಲಯಗಳ ಅಧಿಕಾರಿಗಳು ಪ್ರಾಚೀನ ಕೃತಿ ಸಂಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕೃತಿಗಳ ಪ್ರತಿಗಳನ್ನು ಕೊಂಡು ಆರ್ಥಿಕವಾಗಿ ಸಹಾಯ ಮಾಡಿದಾಗ ಇನ್ನುಳಿದ ಕೃತಿಗಳನ್ನು ಬೇಗನೆ ಬೆಳಕಿಗೆ ತರುವ ನಮ್ಮ ಯೋಜನೆ ಬಹು ಬೇಗನೆ ಕಾರ್ಯಗತಗೊಳ್ಳುವಲ್ಲಿ ಸಂದೇಹವಿಲ್ಲ.

ಈ ಕೃತಿಯ ಪ್ರಕಟಣೆಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಸಹಾಯ ಸಲ್ಲಿಸಿದ ಎಲ್ಲ ಆತ್ಮೀಯರಿಗೆ ಹಾಗೂ ಲಲಿತ ಮುದ್ರಣಾಲಯದ ಸಿಬ್ಬಂದಿಗೆ ಕೃತಜ್ಞತೆಗಳು.

| | | |
|---|---|---|
| ೧-೮-೧೯೮೫ | **ಸಿದ್ಧಲಿಂಗ ಪಟ್ಟಣಶೆಟ್ಟಿ** | **ಪಾಟೀಲ ಪುಟ್ಟಪ್ಪ** |
| ಧಾರವಾಡ | ಪ್ರಧಾನ ಕಾರ್ಯದರ್ಶಿ | ಅಧ್ಯಕ್ಷರು |

# ಮೊದಲಿನ ಒಂದೆರಡು ಮಾತುಗಳು

ರಾಮಾಯಣ ಮಹಾಭಾರತಗಳ ಕಾಲವು ಆಗಿ ಹೋಗಿ ಐದಾರು ಸಹಸ್ರ ವರ್ಷಗಳಾದುವು. ಆ ಕಾಲದ ಅನಂತರ ಭರತ ಖಂಡದಲ್ಲಿ ಅನೇಕ ಅಧಿರಾಜರೂ ರಾಜರೂ ಆಳಿದರು; ಅನೇಕ ವೀರರು ಜನಿಸಿದರು; ಮತಸ್ಥಾಪಕರು ಮತಗಳನ್ನು ಸ್ಥಾಪಿಸಿದರು. ಆದರೆ ಅವರ ಸಂಬಂಧವಾಗಿ ಪ್ರಮಾಣಶೀಲವಾಗಿ ಬರೆದ ಗ್ರಂಥಗಳು ನಮ್ಮ ದೇಶದಲ್ಲಿ ಇಲ್ಲ. ಈ ೫-೬ ಸಾವಿರ ವರ್ಷಗಳ ಕಾಲಾವಧಿಯಲ್ಲಿ ನಾವು ಮತ್ತೆ ಮತ್ತೆ ರಾಮಾಯಣ ಮಹಾಭಾರತ ಗ್ರಂಥಗಳಲ್ಲಿಯ ಸಂಗತಿಗಳನ್ನೇ ಬರೆಯುತ್ತಲಿದ್ದೇವೆ. ದೇವತಾಂಶಸಂಭೂತರಾದ ರಾಮಭೀಮಾದಿ ಪುರಾಣಪುರುಷರ ಚರಿತ್ರ ಪಠನದಿಂದ ಸಾಮಾನ್ಯ ಜನರಲ್ಲಿ ಆತ್ಮವಿಶ್ವಾಸಾದಿ ಗುಣಗಳು ಜನಿಸುವದು ಅಷ್ಟು ಸುಲಭವಲ್ಲ. ಆದರೆ ತಮ್ಮಂತೆಯೇ ಮಾನವರಾದ ತಮ್ಮ ಪೂರ್ವಜರ ಅಭಿಮಾನಪೂರ್ಣವಾದ ಚರಿತ್ರೆಗಳನ್ನು ಓದಿ ಮನ್ನಿಸಿದರೆ ಜನರಲ್ಲಿ ಧೈರ್ಯಶೌರ್ಯಾದಿ ಗುಣಗಳು ಜನಿಸುವವು; ಅನೇಕ ಮಹತ್ವದ ಕಾರ್ಯಗಳೂ ಅವರಿಂದ ಆಗುವವು.

ಆತ್ಮವಿಶ್ವಾಸವು ರಾಷ್ಟ್ರದಲ್ಲಿ ಹುಟ್ಟಬೇಕಾದರೆ ಪೂರ್ವಜರ ವೈಭವಪೂರ್ಣವಾದ ಚರಿತ್ರೆಯ ಪಠನವು ಅತ್ಯಾವಶ್ಯಕವು. ಪಾಶ್ಚಾತ್ಯರು ಆರಂಭದಿಂದ ಶಾಲೆಗಳಲ್ಲಿ ತಮ್ಮ ಬಾಲಕರಿಗೆ ಇತಿಹಾಸ ಕಥೆಗಳನ್ನು ಓದಿಸುತ್ತಾರೆ; ಚಿಕ್ಕಂದಿನಿಂದಲೇ ಅವರಲ್ಲಿ ತಮ್ಮ ದೇಶದ ಸಲುವಾಗಿಯೂ ತಮ್ಮ ಪೂರ್ವಜರ ಸಲುವಾಗಿಯೂ ಅಭಿಮಾನವನ್ನು ಹುಟ್ಟಿಸುತ್ತಾರೆ. ಯುರೋಪಿಯನ್ ಬಾಲಕರ ಶಾಲೆಯಲ್ಲಿಯ ಪಾಠಪದ್ಧತಿಗಳನ್ನು ನೋಡಿದರೆ ಈ ಮಾತಿನ ಸತ್ಯಾಂಶವು ತಿಳಿದು ಬರುತ್ತದೆ. ನಮ್ಮಲ್ಲಿ ಇತಿಹಾಸ ಜ್ಞಾನದ ಲಾಲಸೆ ಇಲ್ಲ. ನಮ್ಮ ಪೂರ್ವಜರ ಇತಿಹಾಸವು ನಮಗೆ ಗೊತ್ತಿಲ್ಲ. ನಾವು ಓದುವ ಇತಿಹಾಸಗಳಲ್ಲಿ ಅನ್ಯರ ಪರಾಕ್ರಮದ ಕಥೆಗಳು ತುಂಬಿರುತ್ತವೆ. ಭರತಖಂಡದ ಜನರನ್ನು ಅನ್ಯರು ಹೇಗೆ ಗೆದ್ದರು? ಅವರ ರಾಜ್ಯವನ್ನು ಹೇಗೆ ತೆಗೆದುಕೊಂಡರು?—ಮುಂತಾದ ಸಂಗತಿಗಳನ್ನು ಕಲಿಸುವ ಇತಿಹಾಸ ಗ್ರಂಥಗಳನ್ನು ನಮ್ಮ ಬಾಲಕರು ಶಾಲೆಗಳಲ್ಲಿ ಓದುತ್ತಾರೆ; ಅದರಿಂದ ದೇಶಕ್ಕೆ ಅಪಾಯವೇ ಆಗುತ್ತದೆ.

ಪೂರ್ವಕಾಲದಲ್ಲಿ ಭಾರತವರ್ಷದಲ್ಲಿ ರಾಜರು, ರಾಯಭಾರಿಗಳು, ಸೇನಾನಾಯಕರು ಇವರು ಮಾತ್ರವೇ ದೇಶಕಾರ್ಯಗಳನ್ನು ನಡೆಯಿಸುತ್ತಿದ್ದರೋ, ಅಥವಾ ಪ್ರಜಾಸಮುದಾಯವೂ ಬುದ್ಧಿಪೂರ್ವಕವಾಗಿ ಅವರೊಡನೆ ಸೇರಿರುತ್ತಿತ್ತೋ?—ಎಂಬ ಪ್ರಶ್ನೆಗೆ ತಕ್ಕ ಸಮಾಧಾನವು ಈಗ ಪ್ರಚಾರದಲ್ಲಿರುವ ಇತಿಹಾಸ ಪುಸ್ತಕಗಳಲ್ಲಿ ಕಾಣಬರುವದಿಲ್ಲ.

ಇತಿಹಾಸ ಲೇಖಕರು ಅರಸರ ಕಾಮಕ್ರೋಧಗಳನ್ನೂ, ಮಂತ್ರಿಗಳ ತಂತ್ರಕೃತ್ರಿಮಗಳನ್ನೂ, ಸೇನಾಪತಿಗಳ ಜಯಾಪಜಯಗಳನ್ನೂ ವರ್ಣಿಸಿರುವರೇ ಹೊರತು ಸಾಮಾನ್ಯ ಜನರ ಜೀವನವಿಧಾನ, ಅವರ ಅಭಿಪ್ರಾಯಾಭಿಲಾಷೆಗಳು, ಅವರ ಉತ್ಸಾಹ ಸಾಹಸಗಳು ಇವುಗಳನ್ನು ಕುರಿತು ಪ್ರಸ್ತಾಪಿಸಿಲ್ಲ. ಯಾವ ರಾಯನು ಯಾವ ರಾಜ್ಯದ ಮೇಲೆ ದಂಡೆತ್ತಿ ಹೋದನು ? ಅಥವಾ ಯಾವ ರಾಯನ ಮಗಳನ್ನು ಅಪಹರಿಸಿದನು? ಮತ್ತು ಯಾವ ಯಾವ ಭೋಗಗಳನ್ನನುಭವಿಸಿದನು ? ಈ ಮೊದಲಾದ ವಿಷಯಗಳನ್ನು ತಿಳಿಸುವ ಗ್ರಂಥಗಳು ಹೇರಳವಾಗಿವೆ. ಆದರೆ ಪ್ರಜಾಕೋಟಿಯು ಹೇಗೆ ಬಾಳಿತು ? ಪ್ರಜೆಗಳಿಗೆ ಯಾರು ಗುರುವಾಗಿಯೂ ಮುಂದಾಳಾಗಿಯೂ ಇದ್ದರು ? ಅವರ ಕಷ್ಟಾನಿಷ್ಟಗಳು ಯಾವ ರೀತಿಯಲ್ಲಿ ಪರಿಹೃತವಾದುವು ? ಮತ್ತು ಉಚ್ಚತಮ ಧ್ಯೇಯವು ಯಾವುದಾಗಿತ್ತು ? ಈ ಮೊದಲಾದ ವಿಷಯಗಳನ್ನು ವಿಚಾರ ಮಾಡುವ ಪುಸ್ತಕಗಳು ಕೆಲವು ಕೂಡ ಸದ್ಯಕ್ಕೆ ದೊರೆಯುವಂತಿಲ್ಲ. ಯಾವ ಗ್ರಂಥವನ್ನು ಈಗ ನಾವು ಸಾಮಾನ್ಯವಾಗಿ ಇತಿಹಾಸವೆಂದು ಕರೆಯುತ್ತೇವೋ ಅದು ನಿಜವಾಗಿ ದೇಶದ ಇತಿಹಾಸವಲ್ಲ; ಅದು ಕೇವಲ ರಾಜಕಥೆಯು.

ಆದರೆ ನಮ್ಮ ದೇಶದ ಇತಿಹಾಸವೇ ಇಲ್ಲವೆನ್ನುವದು ಸಾಹಸವೇ ಸರಿ. ನಮ್ಮ ಪೂರ್ವಜರು ಸ್ವತಂತ್ರವಾದ ಬುದ್ಧಿವ್ಯಾಪಾರವಿಲ್ಲದವರಾಗಿಯೂ, ದೇಶಹಿತಚಿಂತನೆಯಿಲ್ಲದವರಾಗಿಯೂ, ಪೌರುಷವಿಹೀನರಾಗಿಯೂ ಇದ್ದು ಕುರಿಯ ಹಿಂಡು ಕುರುಬನಿಗಧೀನವಾಗಿರುವಂತೆ ಸರ್ವ ವಿಷಯಗಳಲ್ಲಿಯೂ ತಮ್ಮ ರಾಜರಿಗೆ ಅಧೀನರಾಗಿದ್ದರೆಂದು ವಾದಿಸಹೊರಟರೆ, ಅವರು ನಮಗಾಗಿ ಬರೆದಿಟ್ಟಿರುವ ಗ್ರಂಥಕೋಟಿಯೂ ಅವರು ಹಾಕಿಕೊಟ್ಟಿರುವ ಸತ್ಸಂಪ್ರದಾಯಗಳೂ ಅವರು ಕಟ್ಟಿರುವ ಗುಡಿಗೋಪುರಗಳೂ ವಾಗ್ಬಂಧಕಗಳಾಗುತ್ತವೆ. ಜಗದ್ವಿಖ್ಯಾತಗಳಾಗಿಯೂ ನಾನಾ ಜನಾಂಗಗಳ ಆದರಣೆಗೂ ಶ್ಲಾಘನೆಗೂ ಪಾತ್ರಗಳಾಗಿಯೂ ಇರುವ ವಿವಿಧ ದರ್ಶನಗಳನ್ನು ಸ್ಥಾಪಿಸಿದ ತತ್ತ್ವವಿಚಾರಕರೂ, ಕಾವ್ಯನಾಟಕಗಳನ್ನು ರಚಿಸಿದ ಕಲ್ಪನಾಚತುರರೂ, ಧರ್ಮಶಾಸ್ತ್ರಗಳನ್ನು ಬರೆದ ನೀತಿಸೂಕ್ಷ್ಮಜ್ಞರೂ, ಮಹಾಪ್ರಾಸಾದಗಳನ್ನು ನಿರ್ಮಿಸಿದ ಶಿಲ್ಪಿಶ್ರೇಷ್ಠರೂ, ಗಾಯನಚಿತ್ರ ಕಲೆಗಳ ಕ್ರಮಗಳನ್ನು ಏರ್ಪಡಿಸಿದ ಕಲಾಭಿಜ್ಞರೂ ಯಾವ ಜನರಲ್ಲಿ ಹುಟ್ಟಿದರೋ ಆ ಜನರಲ್ಲಿ ಪೌರುಷವಿಶೇಷವೂ, ಕಾರ್ಯೋತ್ಸಾಹವೂ, ಪರಿಪಕ್ವಬುದ್ಧಿಯೂ, ಘನಸಂಕಲ್ಪಗಳೂ ಇದ್ದಿಲ್ಲವೆಂದು ಸರ್ವಥಾ ಹೇಳಲಾಗುವದಿಲ್ಲ. ಅಪಾರವಾದ ಭಾರತೀಯ ಸಾಹಿತ್ಯಸಾಗರದಲ್ಲಿಯೂ, ಪ್ರಾಚೀನಾಗಾರಗಳ ಅವಶಿಷ್ಟಾಂಶಗಳಲ್ಲಿಯೂ ಶ್ರಮಪಟ್ಟು ಹುಡುಕಿದರೆ ನಮ್ಮ ಪೂರ್ವಜರ ಚರಿತ್ರೆಯು–ಸಮಗ್ರವಾಗಿಯಲ್ಲದಿದ್ದರೆ ಖಂಡಖಂಡವಾಗಿಯಾಗಿಯಾದರೂ – ಈಗಲೂ ದೊರೆತೀತೆಂದು ಪಂಡಿತರಾದವರು ಹೇಳುತ್ತಿರುವರು. ಆದರೆ ಆ ಖಂಡಾಂಶಗಳನ್ನಾಯ್ದು ತೆಗೆದು, ಅವುಗಳ ಯಾಥಾರ್ಥ್ಯವನ್ನು ನಿಷ್ಕರ್ಷಿಸಿ, ಅವುಗಳನ್ನು ಯುಕ್ತವಾಗುವಂತೆ ಜೋಡಿ

ಸುವ ಕಷ್ಟಕಾರ್ಯವನ್ನು ಕೈಗೊಳ್ಳಲು ಸಮರ್ಥರೂ ಶ್ರದ್ಧಾನ್ವಿತರೂ ಆದ ಇತಿಹಾಸ ಲೇಖಕರು ಇನ್ನೂ ದುರ್ಲಭರಾಗಿರುವರು. ಅಂತಹರು ಅವತರಿಸಿ ನಮ್ಮ ಪೂರ್ವೇತಿಹಾಸವನ್ನು ರಾಜವಂಶಾವಳಿಮಾತ್ರವಲ್ಲದೆ, ಪ್ರಜಾವೃತ್ತಾಂತವೆನಿಸುವ ರೀತಿಯಲ್ಲಿ ಬರೆಯುವ ವರೆಗೂ, ಇತಿಹಾಸ ಪಠನದಿಂದುಂಟಾಗುವ ಎಲ್ಲ ಪ್ರಯೋಜನಗಳೂ ನಮಗೆ ನಿಜವಾಗಿ ಲಭಿಸಲಾರವು. ತಮ್ಮ ಪೂರ್ವಿಕರ ಆಶಯಗಳನ್ನೂ, ಜೀವಪ್ರಕ್ರಿಯೆಯನ್ನೂ, ತಮ್ಮ ಸಮಾಜವು ಪಾರಂಪರ್ಯವಾಗಿ ಬದುಕಿ ಬೆಳೆದ ರೀತಿಗಳನ್ನೂ ಯಾವ ಜನರು ತಿಳಿದುಕೊಳ್ಳುವದಿಲ್ಲವೋ ಅವರು ತಮ್ಮ ತಾತ್ಕಾಲಿಕ ಸ್ವರೂಪವನ್ನೂ ಕರ್ತವ್ಯವನ್ನೂ ಅರಿತುಕೊಳ್ಳಲಾರರು. ಯಾರಿಗೆ ಸ್ವಸ್ವರೂಪಜ್ಞಾನವಿರುವದಿಲ್ಲವೋ ಅವರಿಗೆ ಆತ್ಮೋನ್ನತಿಯ ಮಾರ್ಗವೂ ಗೋಚರಿಸುವದಿಲ್ಲ. ಈ ಕಾರಣದಿಂದ ದೇಶದ ಪುರಾವೃತ್ತವನ್ನು ಸಾಧ್ಯವಾದ ಮಟ್ಟಿಗೂ ವಿಶದವಾಗಿ ತಿಳಿದುಕೊಳ್ಳುವದು ಪ್ರತಿಯೊಬ್ಬನ ಪ್ರಥಮಕರ್ತವ್ಯವಾಗಿರುತ್ತದೆ. ಅದನ್ನು ಪಿತೃಋಣದ ಒಂದು ಭಾಗವೆಂದೇ ಭಾವಿಸಬೇಕು.

ಪ್ರಸ್ತುತಕ್ಕೆ ವಿಜಯನಗರದ ಇತಿಹಾಸವನ್ನೇ ಉದಾಹರಣೆಗಾಗಿ ತೆಗೆದುಕೊಳ್ಳುವ. ನಮ್ಮ ಎದುರಿಗೆ ಹಂಪೆಯ ಹಾಳು ಪಟ್ಟಣವು ನಮಗೆ ಕಾಣಿಸುತ್ತಿದ್ದರೂ, ಅಲ್ಲಿಯೂ, ದೇಶದಲ್ಲಿ ಎತ್ತನೋಡಿದರತ್ತಲೂ, ಶಿಲಾಶಾಸನಗಳು ಹರಡಿದ್ದರೂ ಅನ್ಯದೇಶೀಯರೂ ಅನ್ಯಭಾಷೆಯವರೂ ಪುಸ್ತಕಗಳನ್ನೂ ಲೇಖನಗಳನ್ನೂ ಬರೆದ ಬಳಿಕ ಆ ಸಾಮ್ರಾಜ್ಯದ ಸಂಗತಿಗಳು ನಮಗೆ ತಿಳಿದುವು. ಶಾಲೆಗಳಲ್ಲಿಯೂ ವಿದ್ಯಾನಿಲಯಗಳಲ್ಲಿಯೂ ಓದುವ ಇತಿಹಾಸ ಗ್ರಂಥಗಳಲ್ಲಿ ಆ ಸಾಮ್ರಾಜ್ಯದ ಸಂಬಂಧವಾಗಿ ವಿಶೇಷ ಸುಳಿವೇ ಇಲ್ಲ. ಸುಶಿಕ್ಷಿತರೆನಿಸಿಕೊಳ್ಳುವವರಿಗೆ ಈ ಸಾಮ್ರಾಜ್ಯದ ಸಂಬಂಧವಾಗಿ ಏನೂ ಗೊತ್ತಿಲ್ಲ. ಸುಶಿಕ್ಷಿತರಿಗೂ ಗೊತ್ತಾಗದ ಸಂಗತಿಯು ಸಾಮಾನ್ಯರಿಗೆ ತಿಳಿಯುವ ಬಗೆ ಹೇಗೆ ? ಈ ಪ್ರಕಾರದ ಶೋಚನೀಯ ಸ್ಥಿತಿಯು ಇರುವುದರಿಂದ ವಿಜಯನಗರದ ಸಾಮ್ರಾಜ್ಯದ ಸಂಬಂಧವಾಗಿ ಅವರ ಹಗೆಗಳಾದ ಮುಸಲ್ಮಾನರ ಗ್ರಂಥಗಳಿಂದಲೂ, ಆ ಕಾಲದಲ್ಲಿ ಈ ದೇಶದಲ್ಲಿ ಬಂದು ಪ್ರವಾಸಮಾಡಿ ಹೋದ ಪಾಶ್ಚಾತ್ಯರು ಬರೆದ ಗ್ರಂಥಗಳಿಂದ ದೊರೆತ ಸಂಗತಿಗಳಿಂದಲೂ ಅಭಿಮಾನದಿಂದ ನಾವು ಅವರ ವಂಶಜರೆಂದು ಹೇಳಿಕೊಳ್ಳುವವರು ಇತಿಹಾಸವನ್ನು ಕಲಿಯಬೇಕಾಗಿದೆ. ಹಗೆಗಳು ತಮ್ಮ ಶತ್ರುಜನರ ಸಂಬಂಧವಾಗಿ ನಿಜವಾದ ಇತಿಹಾಸವನ್ನು ಬರೆಯುವದಿಲ್ಲ; ಪ್ರವಾಸಿಕರಿಗೆ ಎಲ್ಲ ಸಂಗತಿಗಳೂ ತಿಳಿಯುವದಿಲ್ಲ. ಆದುದರಿಂದ ವಿಜಯನಗರದ ಸಂಬಂಧವಾಗಿ ಪೂರ್ಣ ಸಂಗತಿಗಳಿದ್ದ ಪ್ರಮಾಣಶೀಲವಾದ ಇತಿಹಾಸ ಗ್ರಂಥವನ್ನು ಬರೆಯುವದು ಬಹಳೇ ಕಠಿಣವಾಗಿರುತ್ತದೆ. ಪರಮಾತ್ಮನ ಅನುಗ್ರಹವೂ ವಾಚಕ ಮಹಾಶಯರ ಸಹಾನುಭೂತಿಯೂ ದೊರೆತರೆ ವಿಜಯನಗರದ ಇತಿಹಾಸವೊಂದನ್ನು ಬರೆಯಬೇಕೆಂಬ ಅಭಿಲಾಷೆಯು ಪ್ರಸ್ತುತ ಲೇಖಕನಲ್ಲಿ ಇದೆ. ಇರಲಿ.

ಮೇಲೆ ಹೇಳಿದಂತೆ ಕಠಿಣವಾದ ಪರಿಸ್ಥಿತಿಯಿದ್ದರೂ, ಬೇರೆ ಬೇರೆ ವಿದ್ವಾಂಸರು ಬರೆದ ಲೇಖಗಳಿಂದಲೂ ಉಲ್ಲೇಖಗಳಿಂದಲೂ ಸಂಗ್ರಹಿಸಿ ಸ್ವಾಮಿಗಳವರ ಈ ಚರಿತ್ರೆಯನ್ನು ಬರೆಯುವಾಗ ನನಗೆ ಇದ್ದ ಇತರ ಅನನುಕೂಲತೆಗಳನ್ನು ಅಲ್ಲಲ್ಲಿ ಉಲ್ಲೇಖಿಸಿದ್ದೇನೆ. ಆದರೂ ಇದ್ದಷ್ಟು ಅವಕಾಶದಲ್ಲಿ ನಾನು ನೋಡಿದ ಪುಸ್ತಕಾದಿಗಳನ್ನು ಇದರಡಿಯಲ್ಲಿ ಉಲ್ಲೇಖಿಸಿ ಆಯಾ ಲೇಖಕರ ಋಣದಿಂದ ಅಂಶತಃ ಮುಕ್ತನಾಗಬೇಕೆಂದು ಬಯಸುತ್ತೇನೆ.

೧) ಮಿ. ರಾಬರ್ಟ ಸಿವೆಲ್ (Mr. Robert Sewel) ಕಲೆಕ್ಟರ, ಬಳ್ಳಾರಿ ಇವರು ಸುಮಾರು ೪೨೫ ಪುಟಗಳ ಒಂದು ಸುಂದರವಾದ ಇತಿಹಾಸವನ್ನು ಬರೆದು ಕ್ರಿ.ಶ. ೧೯೦೦ ನೆಯ ವರ್ಷದಲ್ಲಿ ಪ್ರಸಿದ್ಧ ಮಾಡಿದರು. ಅದಕ್ಕವರು ಇಬ್ಬರು ಪೋರ್ತುಗೀಸ್ ಪ್ರವಾಸಿಗಳ ಪ್ರವಾಸವೃತ್ತಗಳ ಆಧಾರವನ್ನು ಮುಖ್ಯವಾಗಿ ತೆಗೆದುಕೊಂಡಿರುವರಲ್ಲದೆ, ಶಿಲಾಲೇಖಗಳು, ತಾಮ್ರಶಾಸನಗಳು, ಮುಸಲಮಾನೀ ಇತಿಹಾಸ, ದೇಶೀಯ ಗ್ರಂಥಗಳು ಮತ್ತು ದಂತಕಥೆಗಳು ಇವೆಲ್ಲ ಸಾಧನಗಳಿಂದ ದೊರೆಯುವ ಇತಿಹಾಸವನ್ನು ಅದರಲ್ಲಿ ಸಂಗ್ರಹಿಸಿದ್ದಾರೆ. ಆ ಗ್ರಂಥಕ್ಕೆ ಅವರು "ವಿಜಯನಗರ ಅಥವಾ ವಿಸ್ಮೃತಸಾಮ್ರಾಜ್ಯ"ವೆಂದು ಹೆಸರಿಟ್ಟಿದ್ದಾರೆ. ಇದರಲ್ಲಿ ವಿದ್ಯಾರಣ್ಯರ ವಿಷಯದಲ್ಲಿ ಪ್ರಸಿದ್ಧವಾದ ಆಖ್ಯಾಯಿಕೆಗಳ ಹೊರತು ಇನ್ನಾವ ಸಂಗತಿಯನ್ನೂ ತೃಪ್ತಿಕರವಾಗುವಂತೆ ಅವರು ಕೊಟ್ಟಿಲ್ಲ. ಆದರೂ ವಿಜಯನಗರ ಮತ್ತು ಸಾಮ್ರಾಜ್ಯ ಇವುಗಳ ಸ್ಥಾಪನೆಯಲ್ಲಿ ವಿದ್ಯಾರಣ್ಯರೇ ಅಧ್ವರ್ಯುಗಳಾಗಿದ್ದರೆಂಬ ಉಲ್ಲೇಖವು ಇದರಿಂದ ಎರಡು ಮೂರು ಕಡೆಗಳಲ್ಲಿ ದೊರೆಯುತ್ತದೆ.

೨) ವಿಜಯನಗರ ಸಾಮ್ರಾಜ್ಯದ ಇತಿಹಾಸದ ಪುನರುಜ್ಜೀವನದ ಕಾರ್ಯವನ್ನು ಬೆಂಗಳೂರಿನ ಶ್ರೀ ಸೂರ್ಯನಾರಾಯಣರಾವ, ಬೀ. ಏ. ಇವರು ಕೈಕೊಂಡು ತಮ್ಮ ಉದ್ದಿಷ್ಟಗ್ರಂಥದ ೩೬೧ ಪುಟಗಳ ಪೂರ್ವಾರ್ಧವನ್ನು ಇಂಗ್ಲಿಷದಲ್ಲಿ ಬರೆದು ಮದ್ರಾಸದಲ್ಲಿ ಕ್ರಿ.ಶ. ೧೯೦೫ ನೆಯ ವರ್ಷದಲ್ಲಿ ಪ್ರಸಿದ್ಧ ಮಾಡಿದರು. ಈ ಗ್ರಂಥದಲ್ಲಿ ಅಲ್ಲಲ್ಲಿ ಶ್ರೀ ಸೂರ್ಯನಾರಾಯಣರಾಯರ ದೇಶಾಭಿಮಾನವು ಚನ್ನಾಗಿ ಪ್ರಕಟವಾಗಿದೆ. ಸಿವೆಲ್ ಸಾಹೇಬರು ತಮ್ಮ ಗ್ರಂಥಕ್ಕೆ ಕೊಟ್ಟ ಹೆಸರು ಇವರಿಗೆ ಸರಿದೋರಲಿಲ್ಲ. ಆದುದರಿಂದ ಅವರು ಅದನ್ನು ಬದಲಿಸಿ "ಸದಾಸ್ಮರಣೀಯವಾದ ವಿಜಯನಗರ ಸಾಮ್ರಾಜ್ಯದ ಇತಿಹಾಸವು" ಎಂದು ತಮ್ಮ ಗ್ರಂಥಕ್ಕೆ ಹೆಸರನ್ನು ಕೊಟ್ಟರು. ಇದರಲ್ಲೆ ಶ್ರೀವಿದಾರಣ್ಯ ಸ್ವಾಮಿಗಳ ಚರಿತ್ರೆಯು ಒಂದು ಸ್ವತಂತ್ರ ಭಾಗದಲ್ಲಿ ವರ್ಣಿತವಾಗಿದೆ.

೩) ಶ್ರೀ ನಾರಾಯಣ ಕೃಷ್ಣ ಗದ್ರೆ ಎಂಬವರು ಬರೆದ "ಮಹಾರಾಷ್ಟ್ರ ಮಹೋದಯಾಚಾ ಪೂರ್ವರಂಗ (೧೨೦೦–೧೫೦೦)" ಎಂಬ ೨೮೦ ಪುಟಗಳುಳ್ಳ ಒಂದು ಗ್ರಂಥವು ಶ್ರೀ ಸರಸ್ವತೀ ಮಂದಿರದಲ್ಲಿ ಮುದ್ರಿತವಾಗಿ ಪ್ರಸಿದ್ಧಿಸಲ್ಪಟ್ಟಿದೆ. ಈ ಗ್ರಂಥವು ಭಾಷೆ, ಅರ್ಥ ಮತ್ತು ಪ್ರಬಂಧ ಎಂಬ ಮೂರು ದೃಷ್ಟಿಯಿಂದಲೂ ಉತ್ತಮ

ವಾಗಿದೆ. ವಿಜಯನಗರದ ಸಂಬಂಧವಾಗಿಯೂ ವಿದ್ಯಾರಣ್ಯರ ಸಂಬಂಧವಾಗಿಯೂ, ಮಾಧವಮಂತ್ರಿಯ ಸಂಬಂಧವಾಗಿಯೂ ಅನೇಕ ಸಂಗತಿಗಳು ಈ ಗ್ರಂಥದಿಂದ ತಿಳಿದು ಬರುತ್ತದೆ.

೪) ಕೈಲಾಸವಾಸಿ ವೇ. ಶಾ. ಸಂ. ರಘುನಾಥಶಾಸ್ತ್ರಿ ಗೋಡಬೋಲೆ ಇವರ "ಅರ್ವಾಚೀನ ಕೋಶ"ದಲ್ಲಿ ವಿದ್ಯಾರಣ್ಯರ ವಿಷಯದ ಕೆಲವು ಸಂಗತಿಗಳು ತಿಳಿಯುತ್ತವೆ.

೫) ಆನಂದಾಶ್ರಮ ಸಂಸ್ಕೃತ ಗ್ರಂಥಾವಲಿಯೊಳಗಿನ ಶ್ರೀ ರುದ್ರಾಧ್ಯಾಯದ ಪ್ರಸ್ತಾವನೆಯಲ್ಲಿ ಕೈ. ವಾಮನಶಾಸ್ತ್ರಿ ಇಸಲಾಮಪುರಕರ ಇವರು ಒಂದು ದಾನಪತ್ರದ ಅವತರಣವನ್ನು ಕೊಟ್ಟು ಶ್ರೀವಿದ್ಯಾರಣ್ಯರ ಸಂಕ್ಷಿಪ್ತ ಇತಿವೃತ್ತವನ್ನು ಬರೆದಿದ್ದಾರೆ.

೬) ಪಂಡಿತ ವಿಷ್ಣುಶಾಸ್ತ್ರಿ ಬಾಪಟ ಇವರು ತಮ್ಮ ಪಂಚದಶೀ ವಿವರಣದ ಪ್ರಸ್ತಾವನೆಯಲ್ಲಿ ವಿದ್ಯಾರಣ್ಯರ ಸಂಬಂಧವಾದ ಕೆಲವು ಸಂಗತಿಗಳನ್ನು ಬರೆದು ಚರ್ಚಿಸಿದ್ದಾರೆ.

೭) ಶ್ರೀ ಕಾಶೀನಾಥ ಕೃಷ್ಣ ಲೇಲೆ ಇವರು "ವಿವಿಧ ಜ್ಞಾನ ವಿಸ್ತಾರ" ದಲ್ಲಿ ವಿದ್ಯಾರಣ್ಯರ ವಿಷಯಕವಾದ ಒಂದೆರಡು ವಿಸ್ತೃತವಾದ ಲೇಖಗಳನ್ನು ಬರೆದಿದ್ದಾರೆ. ಅವುಗಳಲ್ಲಿ ವಿದ್ಯಾರಣ್ಯರ ವಿಷಯದಲ್ಲಿಯೂ ವಿಜಯನಗರದ ವಿಷಯದಲ್ಲಿಯೂ ಅನೇಕ ಉಪಯುಕ್ತವಾದ ಮಹತ್ವದ ಸಂಗತಿಗಳು ಅಡಕವಾಗಿವೆ.

೮) ವಿದ್ಯಾರಣ್ಯರಿಂದ ರಚಿತವಾದ ಅನೇಕ ಗ್ರಂಥಗಳಲ್ಲಿ ಅವರ ವಿಷಯಕ ವಾದ ಉಲ್ಲೇಖಗಳಿವೆ.

೯) ಶ್ರೀ ವೆಂಕಟೇಶ ಭೀಮರಾವ ಆಲೂರ ಇವರು ಶ್ರೀವಿದ್ಯಾರಣ್ಯಸ್ವಾಮಿಗಳ ಚರಿತ್ರವೆಂಬ ಒಂದು ಪುಸ್ತಕವನ್ನು ಕನ್ನಡದಲ್ಲಿ ಬರೆದು ಪ್ರಸಿದ್ಧ ಮಾಡಿದ್ದಾರೆ. ಸ್ವಾಮಿ ಗಳವರ ಚರಿತ್ರೆಯು ಇದರಲ್ಲಿ ಒಳ್ಳೆ ಮನೋಹರವಾಗಿ ವರ್ಣಿತವಾಗಿದೆ.

೧೦) ಶ್ರೀ ಆಲೂರರವರೇ "ಕರ್ಣಾಟಕ ಗತವೈಭವ" ಎಂಬ ಮತ್ತೊಂದು ಉತ್ತಮ ಪುಸ್ತಕವನ್ನು ಕನ್ನಡದಲ್ಲಿ ಬರೆದಿದ್ದಾರೆ. ಅದು ವಿಜಯನಗರದ ವಿಸ್ತೃತ ವಾದ ಇತಿಹಾಸಕ್ಕೆ ಪ್ರಸ್ತಾವನಾರೂಪವಾಗಿದೆಯೆಂದು ಅವರೇ ಹೇಳಿದ್ದಾರೆ. ಈ ಪುಸ್ತಕದಿಂದಲೂ ನಮಗೆ ಅನೇಕ ಸಂಗತಿಗಳು ಗೊತ್ತಾಗುತ್ತವೆ.

೧೧) ಕೈ. ವಾ. ಶ್ರೀ ಬಾಳಾಚಾರ್ಯ ಸಕ್ಕರಿ, ಶಾಂತಕವಿ ಇವರು ವಿದ್ಯಾ ರಣ್ಯರ ಚರಿತ್ರೆಯನ್ನು ಕುರಿತು ಸುಂದರವಾದ ಒಂದು ಕೀರ್ತನವನ್ನು ಕನ್ನಡದಲ್ಲಿ ಪ್ರಕಟಿಸಿದ್ದಾರೆ.

೧೨) ಶ್ರೀ ಡಿ. ವಿ. ಗುಂಡಪ್ಪ ಇವರು ಸಾಹಿತ್ಯಪರಿಷತ್ಪತ್ರಿಕೆಯಲ್ಲಿ ಶ್ರೀ ವಿದ್ಯಾರಣ್ಯರ ಚರಿತ್ರೆಯನ್ನು ಕುರಿತು ಒಂದು ವಿಸ್ತೃತವಾದ ಮಹತ್ವದ ಲೇಖವನ್ನು ಪ್ರಸಿದ್ಧಿಸಿದ್ದಾರೆ.

ಇವುಗಳ ಹೊರತು ಕೆಲಕೆಲವು ಚಿಕ್ಕಪುಟ್ಟ ಲೇಖನಾದಿಗಳ ಸಹಾಯವು ನನಗೆ ದೊರೆತಿದೆ. ಅವುಗಳಲ್ಲಿ ಕೆಲವುಗಳ ನಾಮನಿರ್ದೇಶನವು ಅಲ್ಲಲ್ಲಿ ಈ ಪುಸ್ತಕದಲ್ಲಿ ಮಾಡ ಲ್ಪಟ್ಟಿದೆ. ಸುಪ್ರಸಿದ್ಧ ಲೇಖಕರೂ, ಇತಿಹಾಸಜ್ಞರೂ, ನಾಟಕಕಾರರೂ ಎಂಬುದಾಗಿ ಅನೇಕ ರೀತಿಯಿಂದ ಪ್ರಖ್ಯಾತರಾದ ಶ್ರೀ ನರಸಿಂಹ ಚಿಂತಾಮಣಿ ಕೇಳಕರ ಇವರು 'ಅಮಾತ್ಯಮಾಧವ' ಎಂಬ ಒಂದು ನಾಟಕವನ್ನು ಬರೆದಿದ್ದಾರೆ. ಪ್ರಸ್ತುತ ಪುಸ್ತಕ ವನ್ನು ಬರೆಯುವದಕ್ಕಿಂತ ಮೊದಲು, ಆ ನಾಟಕವನ್ನು ನಾನು ನೋಡಿದ್ದಿಲ್ಲ. ಇದನ್ನು ಬರೆಯುವ ಕೆಲಸವನ್ನು ಕೈಕೊಂಡ ಮೇಲೆ ಪುಸ್ತಕದ ಹೆಸರನ್ನೂ, ಲೇಖಕರ ಹೆಸರನ್ನೂ ಕೇಳಿದ ಕೂಡಲೇ ಆ ಪುಸ್ತಕವನ್ನು ಓದುವ ಕುತೂಹಲವು ನನ್ನಲ್ಲಿ ಉಂಟಾಯಿತು. ಮೊದಲೇ ಶ್ರೀ ವಿದ್ಯಾರಣ್ಯರ ಚರಿತ್ರೆಯಂತಹ ಸಕಲರಸಪರಿಪೂರ್ಣವಾದ ಸಂವಿಧಾನ ಕವು; ಅದರಲ್ಲಿಯೂ ಶ್ರೀ ಕೇಳಕರರಂತಹ ಕುಶಲರೂ, ನುರಿತವರೂ, ವಿದ್ವಾಂಸರೂ ಆದ ಲೇಖಕರು; ಅಂದಮೇಲೆ ಕೇಳುವದೇನು ? ಎಂಬ ಭಾವನೆಯು ನನ್ನಲ್ಲಿ ಹುಟ್ಟಿತು. ಆದುದರಿಂದ ಆ ಪುಸ್ತಕವನ್ನು ಕ್ರಯಕ್ಕೆ ತಕ್ಕೊಂಡು ಓದಿದೆನು. ಆದರೆ ವಾಚನಾ ನಂತರ ಸಂಪೂರ್ಣ ನಿರಾಶೆಯಾಯಿತೆಂದು ಬರೆಯಲು ವಿಷಾದಿಸುತ್ತೇನೆ. ಅದರಲ್ಲಿ ಐತಿಹಾಸಿಕ ತಥ್ಯವು ನನಗೆ ಸ್ವಲ್ಪವೂ ದೊರೆಯಲಿಲ್ಲ; ಇಷ್ಟೇ ಅಲ್ಲ; ಹಲಕೆಲವು ಸಂದರ್ಭ ಗಳಲ್ಲಿ ಉಂಟಾದ ಇತಿಹಾಸ ವಿಪರ್ಯಾಸವನ್ನು ನೋಡಿ ಕೆಡಕೆನಿಸಿತು ಅದರಲ್ಲಿಯೂ ಶ್ರೀ ಕೇಳಕರರಂತಹರ ಲೆಕ್ಕಣಿಕೆಯಿಂದ ಈ ಕೃತಿಯು ಉದ್ಭವಿಸಿದುದಕ್ಕಾಗಿ ಮತ್ತೂ ಕೆಡಕೆನಿಸಿತು. ಶ್ರೀ ಕೇಳಕರರು ಮೂಲ ಇಂಗ್ಲಿಷ ನಾಟಕವನ್ನು ಅನುಸರಿಸಿ ಹೆಸರು ಗಳನ್ನು ಮಾತ್ರ ಬದಲಿಸುತ್ತ ಬಂದ ಮೂಲಕ ಹೀಗಾಗಿರಬಹುದು. ಕರ್ನಾಟಕ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ಐತಿಹಾಸಿಕ ಹಾಗು ಕಾಲ್ಪನಿಕ ಪಾತ್ರಗಳ ಹೆಸರೂ, ಉಡಿಗೆತೊಡಿಗೆಗಳೂ, ಇತರ ವ್ಯವಸ್ಥೆಯೂ ಕನ್ನಡಿಗರಂತೆಯೇ ಇರದಿರುವುದು ಅನೌ ಚಿತ್ಯವಲ್ಲವೇ ? ಇಷ್ಟು ವಿಷಾದವನ್ನಿಲ್ಲಿ ವ್ಯಕ್ತಪಡಿಸಲು ಕಾರಣವೇನೆಂದರೆ — ಶ್ರೀ ವಿದ್ಯಾರಣ್ಯರ ಚರಿತ್ರೆಯಲ್ಲಿ ಅನೇಕ ಇತಿಹಾಸ ಗ್ರಂಥಗಳಿಗೂ, ನಾಟಕಕಾದಂಬರಿಗಳಿಗೂ ಉತ್ತಮವಾದ ಸಂವಿಧಾನಕಗಳು ಬೇಕಾದಷ್ಟು ಸಿಕ್ಕುತ್ತವೆ. ಹೀಗಿದ್ದು ಶ್ರೀ ಕೇಳಕರ ರಂತಹ ಸಮರ್ಥ ಲೇಖಕರು ಈ ಪ್ರಕಾರದ ನಾಟಕವನ್ನು ಬರೆಯುವದೆಂದರೆ ನಮ್ಮ ದುರ್ದೈವವೆಂದು ಹೇಳೋಣವೋ ? ಅಥವಾ ಇನ್ನೇನಾದರೂ ಕಾರಣವುಂಟೋ ?

ಇರಲಿ, ಪ್ರಸ್ತುತಚರಿತ್ರೆಯನ್ನು ಸಿದ್ಧಬಡಿಸುವದಕ್ಕೆ ಮೇಲೆ ಉಲ್ಲೇಖಿಸಿದ ಮಹನೀಯರ ಸಹಾಯವು ನನಗೆ ಮುಖ್ಯವಾಗಿ ಆಗಿದೆ. ಆದುದರಿಂದ ನಾನವರಿಗೆ ಎಷ್ಟು ಕೃತಜ್ಞನಾಗಿದ್ದರೂ ಸ್ವಲ್ಪವೇ ಇದೆ. ಇನ್ನು ಈ ಪುಸ್ತಕವು ಪ್ರಸ್ತುತ ರೂಪವನ್ನು ಹೊಂದಿ ವಾಚಕರ ಕೈಸೇರಬೇಕಾದರೆ ಇನ್ನೂ ಕೆಲವು ಮಿತ್ರ ಮಂಡಳಿಯ ನೆರವು ನನಗೆ ದೊರೆಯಿತು. ಅವರ ಸಹಾಯವಿಲ್ಲದೆ ಇದ್ದರೆ, ಈ ಪುಸ್ತಕವು ಹೊರ ಬೀಳುವದು ಅಶಕ್ಯವಾಗುತ್ತಿತ್ತೆಂದು ಹೇಳಬಹುದು. ಆದುದರಿಂದ ಈ ಸಂದರ್ಭ

ವಲ್ಲಿ ಅವರೆಲ್ಲರಿಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸದಿದ್ದರೆ ನಾನು ಕರ್ತವ್ಯವನ್ನು ಮರೆತಂತಾಗುತ್ತದೆ.

ಈ ವಿಷಯದಲ್ಲಿ ಮೊಟ್ಟಮೊದಲು ನಾನು "ಕರ್ನಾಟಕ ವಿದ್ಯಾವರ್ಧಕ ಸಂಘ"ಕ್ಕೆ ಅತ್ಯಂತ ಋಣಿಯಾಗಿದ್ದೇನೆಂಬುದನ್ನು ಉಲ್ಲೇಖಿಸುವುದು ನನ್ನ ಕರ್ತವ್ಯವಾಗಿದೆ. ನಾನು ಬರೆದ ಕೆಲವು ಪುಸ್ತಕಗಳನ್ನು ಪರೀಕ್ಷಿಸಿ ಬಹುಮಾನವನ್ನಿತ್ತು ಪ್ರೋತ್ಸಾಹಿಸುತ್ತ ಬಂದುದರಿಂದ ಹೊಸ ಹೊಸ ಕೃತಿಗಳನ್ನು ರಚಿಸುವ ಹುರುಪು ನನ್ನಲ್ಲಿ ಉಂಟಾಯಿತು. ಈಗ ವಾಗ್ಭೂಷಣದ ದ್ವಾರದಿಂದ ಪ್ರಕಟವಾಗುತ್ತಿರುವ "**ಕರ್ನಾಟಕ ಸ್ವಪ್ನ ವಾಸವದತ್ತಂ**" ಎಂಬ ನಾಟಕವು ವಾಚಕರ ಅವಲೋಕದನದಲ್ಲಿರಬಹುದು. ಇನ್ನು ಮುಂದೆ "**ನರಗುಂದದ ಬಂಡಾಯ!**" ಎಂಬ ಒಂದು ಪುಸ್ತಕವನ್ನು 'ಭೂಷಣ'ದ ದ್ವಾರದಿಂದಲೇ ಅರ್ಪಿಸುವೆನು. ಕರ್ನಾಟಕದಲ್ಲಿಯೇ ಪ್ರಸಿದ್ಧಿಹೊಂದಿದ ಈ ಸಂಸ್ಥಾನದ ಇತಿವೃತ್ತವು ಕನ್ನಡಿಗರೆನಿಸಿಕೊಳ್ಳುವ ಬಹಳ ಜನರಿಗೆ ಸಾದ್ಯಂತವಾಗಿ ಗೊತ್ತಿಲ್ಲದಿರುವುದು ಎಷ್ಟು ಶೋಚನೀಯ ಸ್ಥಿತಿಯು ! ಈ ಪುಸ್ತಕವು ಐತಿಹಾಸಿಕವಾದ ಮಹತ್ವದ ಅನೇಕ ತಥ್ಯಾಂಶಗಳನ್ನು ಒಳಗೊಂಡಿರುವದಲ್ಲದೆ, ಕಾದಂಬರಿಯಂತೆ ಸರಸವೂ, ಮನೋರಂಜಕವೂ ಆಗಿರುವುದು ! ಓದಿದ ಪ್ರತಿಯೊಬ್ಬನು ಉಜ್ವಲವಾದ ದೇಶಾಭಿಮಾನದಿಂದ ಪ್ರೇರಿತನೂ, ಗತವೈಭವದ ಸ್ಮರಣೆಯಿಂದ ಉದ್ದೀಪ್ತವಾದ ಅಂತಃಕರಣವುಳ್ಳವನೂ ಆಗಿ ಪ್ರಕೃತದಲ್ಲಿರುವ ಆತ್ಮಸ್ಥಿತಿಯನ್ನು ಕುರಿತು ಧಾರಾಕಾರವಾಗಿ ಕಣ್ಣೀರುಗಳನ್ನು ಸುರಿಸದೆ ಇರಲಾರನು ! ಸಾರಾಂಶವೇನಂದರೆ — ಪುಸ್ತಕವನ್ನು ಓದುವಾಗ ವಾಚಕನು ತನ್ಮಯವಾಗಿ ಬಾಹ್ಯಜಗತ್ತಿನ ಭಾನವನ್ನೇ ಮರೆಯುವನು ! ಇರಲಿ. ಇವೆಲ್ಲ ಪುಸ್ತಕಗಳು 'ಸಂಘ' ದ ದ್ವಾರದಿಂದ ಬೈಲಿಗೆ ಬರುವ ಸುಯೋಗವನು ಒದಗಿಸಿಕೊಟ್ಟ ಸರ್ವಶ್ರೇಯಸ್ಸು ಉದಾರ ಹೃದಯರಾದ ಮಿತ್ರವರ್ಯ ಶ್ರೀ ಕೃಷ್ಣರಾವ ಅಂಕಲಗಿ ಇವರಿಗೇ ಸಲ್ಲತಕ್ಕದ್ದು. ಇದಕ್ಕಾಗಿ ನಾನವರಿಗೆ ಚಿರಋಣಿಯಾಗಿದ್ದೇನೆ. ಸಂಘದ ಕಾರಕೂನರಾದ ಶ್ರೀ ಕೃಷ್ಣರಾವ ಕುಕನೂರ ಇವರಾದರೂ ನನಗೆ ಈ ವಿಷಯದಲ್ಲಿ ಹಲವು ಬಗೆಯಿಂದ ಸಹಾಯ ಮಾಡಿದ್ದಾರೆ.

ಶ್ರೀವಿದ್ಯಾರಣ್ಯರ ಕಾಲದ ವಿಜಯನಗರದ ಸಾಮ್ರಾಜ್ಯವನ್ನು ತೋರಿಸುವ ನಕ್ಷೆಯನ್ನು ಸದ್ಯಕ್ಕೆ ಧಾರವಾಡ ಟ್ರೇನಿಂಗ ಕಾಲೇಜದ ೩ ನೆಯ ವರ್ಷದ ವಿದ್ಯಾರ್ಥಿಯೂ ನನ್ನ ವಿಧೇಯ ಶಿಷ್ಯರಲ್ಲೊಬ್ಬನೂ ಆದ ಮಿ. ಗೋಗೇರಿ ಎಂಬವನು ತೆಗೆದುಕೊಟ್ಟಿದ್ದಾನೆ. ಕೊನೆಯಲ್ಲಿರುವ ಶ್ರೀವಿದ್ಯಾರಣ್ಯಾಷ್ಟಕವು ನನ್ನ ತಮ್ಮನಾದ ಚಿ. ಶಂಕರ ದತ್ತಾತ್ರಯ ಅಗ್ನಿಹೋತ್ರಿ ಇವನಿಂದ ರಚಿತವಾಗಿದೆ. ಇನ್ನು ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟದ್ದಕ್ಕಾಗಿ ಮಿ. ಚೌಗುಲೆ ಇವರ ಆಭಾರವನ್ನು ಲೇಖಕನೆಂಬ ದೃಷ್ಟಿಯಿಂದಲೂ 'ಸಂಘ'ದ ವತಿಯಿಂದಲೂ ಮನ್ನಿಸುವುದು ಉಚಿತವಾಗಿದೆ.

ಇಷ್ಟೆಲ್ಲ ಸಾಧನ ಸಂಪತ್ತಿಯು ಯಾವನ ಅನುಗ್ರಹದಿಂದ ದೊರೆಯಿತೋ, ಯಾವನ ವರಪ್ರಸಾದವು ನನ್ನಿಂದ ಈ ಕೃತಿಯನ್ನು ಪೂರ್ಣಗೊಳಿಸಿತೋ ಆ ಜಗನ್ನಿಯಂತೃವಾದ ಪರಮಾತ್ಮನ ಚರಣಗಳನ್ನು ಕಟ್ಟಕಡೆಗೆ ಅನನ್ಯಭಾವದಿಂದ ಭಜಿಸಿ ಈ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಧಾರವಾಡ,
ತಾ|| ೨-೧-೧೯೨೨

ವಿದ್ವದನುಚರ,
**ಭೀಮಾಜಿ ಜೀವಾಜಿ ಹುಲಿಕವಿ**

# ಅರ್ಪಣ ಪತ್ರಿಕೆ

ಭೂಮೇ ಮಾತರ್ನಿಧೇಹಿ ಮಾ ಭದ್ರಯಾ ಸುಪ್ರತಿಷ್ಠಿತಮ್ ।
ಸಂವಿದಾನಾ ದಿವಾ ಕವೇಶ್ರಿಯಾಂ ಮಾ ದೇಹಿ ಭೂಮ್ಯಾಮ್ ॥

ಅ. ವೇ. ಕಾಂ. ೧೨, ಸೂ. ೧, ಮ. ೬೩

ಎಲೈ ಮಾತೃಭೂಮಿಯೇ, ನನ್ನನ್ನು ಸವಿಚಾರಸಂಪನ್ನನನ್ನಾಗಿ
ಮಾಡು; ಅಹೋರಾತ್ರಿಯಲ್ಲಿಯೂ ದಿನ್ನ ಹಿತವನ್ನು ಚಿಂತಿಸುವಂತಹ
ಸೂಕ್ಷ್ಮ ವಿಚಾರವಂತನೂ ದೂರದರ್ಶಿಯೂ, ಜ್ಞಾನಿಯೂ ಆದ ಭಕ್ತರಿಗೂ,
ನನಗೂ ನಿನ್ನೊಳಗಿನ ಸಂಪತ್ತಿಯನ್ನು ಕೊಡು.

ಎಂಬುದಾಗಿ ಮೊದಲು ಮಾತೃಭೂಮಿಯನ್ನು ಅನನ್ಯಭಾವ
ದಿಂದ ಪ್ರಾರ್ಥಿಸಿ, ತನುಮನೋಧನಗಳಿಂದ
ಯಾರು ಯಾವಾಗಲೂ ಮಾತೃಭೂಸೇವಾ
ತತ್ಪರರಾಗಿರುವರೋ ಅಂತಹ
**ಸತ್ಪುತ್ರರ ಅಡಿದಾವರೆಗಳಲ್ಲಿ**
ಈ ಅಲ್ಪ ಕೃತಿಯನ್ನು
ಪ್ರೀತಿ ಪುರಃಸರವಾಗಿ
ಸಮರ್ಪಿಸಿದ್ದೇನೆ.

**ಭೀ. ಜೀ. ಹುಲಿಕವಿ**

# ಅನುಕ್ರಮಣಿಕೆ


| ವಿಷಯ | | | ಪೃಷ್ಠ ಸಂಖ್ಯೆ |
|---|---|---|---|
| ಮೊದಲ ಮಾತು | .... | .... | ೩ |
| ಮೊದಲಿನ ಒಂದೆರಡು ಮಾತುಗಳು | .... | .... | ೭ |
| ಅರ್ಪಣ ಪತ್ರಿಕೆ | .... | .... | ೧೫ |
| ೧ ಉಪೋದ್ಘಾತ | .... | .... | ೧೭ |
| ೨ ಕುಲವೃತ್ತಾಂತವೂ ಜ್ಞಾನೇಶ್ವರ ಸಾಮ್ಯವೂ | .... | .... | ೨೧ |
| ೩ ಜನ್ಮವೂ ವಯೋಮಾನವೂ | .... | .... | ೨೪ |
| ೪ ಅಧ್ಯಯನವೂ ಗುರುಗಳೂ | .... | .... | ೨೮ |
| ೫ ರಾಜ್ಯಸ್ಥಾಪನೆಯು | .... | .... | ೪೨ |
| ೬ ರಾಜವೃತ್ತವು | .... | .... | ೫೯ |
| ೭ ಧಾರ್ಮಿಕ ವಿಚಾರಗಳು | .... | .... | ೭೪ |
| ೮ ಗ್ರಂಥಗಳು | .... | .... | ೮೧ |
| ೯ ಉಪಸಂಹಾರ | .... | .... | ೧೦೦ |


## ಪೂರಕ ಪ್ರಕರಣ


| | | | |
|---|---|---|---|
| ೧ ವಿದ್ಯಾರಣ್ಯರ ಕಾಲದಲ್ಲಿ ಪಾಶ್ಚಾತ್ಯರ ಸ್ಥಿತಿ | .... | .... | ೧೧೪ |
| ೨ ವಿದ್ಯಾರಣ್ಯರೂ ವೇದಾಂತದೇಶಿಕರೂ | .... | .... | ೧೧೫ |
| ೩ ವಿಜಯನಗರದ ರಾಜ್ಯವಿಸ್ತರಣ | .... | .... | ೧೧೬ |
| ೪ ಬುಕ್ಕರಾಯನು | .... | .... | ೧೧೯ |
| ೫ ಮಾಧವಮಂತ್ರಿಯು | .... | .... | ೧೨೪ |
| ೬ ವಿಜಯನಗರದ ಅರಸರ ಮತ್ತು ವಿದ್ಯಾರಣ್ಯರ ಕಾಲದಲ್ಲಿ ವಾಙ್ಮಯೋತ್ಕರ್ಷ | | | ೧೨೫ |
| ೭ ತಾಳೀಕೋಟಿ ಕಾಳಗದೀಚೆಯ ವಿಜಯನಗರದ ಇತಿಹಾಸ | | .... | ೧೨೬ |
| ೮ ವಿಜಯನಗರವು ಕನ್ನಡದ ಸಾಮ್ರಾಜ್ಯವು | .... | .... | ೧೨೭ |
| ಕೊನೆಯ ಒಂದೆರಡು ಮಾತುಗಳು | .... | .... | ೧೩೨ |
| ಶ್ರೀ ವಿದ್ಯಾರಣ್ಯಾಷ್ಟಕವು | .... | .... | ೧೩೬ |

# ೧. ಉಪೋದ್ಘಾತ

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ |
ಗುರುಃಸಾಕ್ಷಾತ್ ಪರಬ್ರಹ್ಮಾತಸ್ಮೈ ಶ್ರೀಗುರವೇ ನಮಃ ||

ಸ್ವಾಮಿಗಳವರ ಚರಿತ್ರೆಯನ್ನು ಬರೆಯುವ ಗುರುತರವಾದ ಕಾರ್ಯವನ್ನು ಕೈಕೊಂಡ ಬಳಿಕ, ಈ ಕಾರ್ಯವನ್ನು ಎಷ್ಟರ ಮಟ್ಟಿಗೆ ಯೋಗ್ಯರೀತಿಯಿಂದ ನೆರವೇರಿಸುವೆನೆಂಬ ಭಯವು ತಲೆದೋರಲು ಸರ್ವಸಮರ್ಥನಾದ ಗುರುವಿಗೆ ಆರಂಭದಲ್ಲಿ ಶರಣಾಗತನಾದೆನು. ಅದಾವ ಕಾರಣದಿಂದಲೋ ಏನೋ, ಗುರುವಿಗೆ ಆರಂಭದಲ್ಲಿ ನಮಸ್ಕಾರ ಮಾಡಿದ ಕೂಡಲೇ "ಕಾಲಾಯ ತಸ್ಮೈ ನಮಃ" ಎಂದೆನ್ನಬೇಕೆಂದು ಮನಸ್ಸಿನಲ್ಲಿ ಬಲವತ್ತರವಾದ ಪ್ರೇರಣೆಯುಂಟಾಯಿತು. ಕಾರಣವು ಯಾವುದಾದರೂ ಇರಲಿ; ವಿಚಾರ ಮಾಡಿ ನೋಡಿದರೆ, ಆ ಪ್ರೇರಣೆಯಲ್ಲಿ ಅರ್ಥವಿದೆಯೆಂಬುದು ಮಾತ್ರ ಸ್ಪಷ್ಟವಾಗುವುದು. ಕನ್ನಡಿಗರಿಗೆ ಇತಿಹಾಸವಿಲ್ಲ; ಕನ್ನಡ ನುಡಿಯಲ್ಲಿ ಸ್ವಾರಸ್ಯವಿಲ್ಲ; ಕನ್ನಡಿಗರಲ್ಲಿ ರಾಜಕಾರ್ಯಧುರಂಧರರಿಲ್ಲ; ಮಹಾತ್ಮರಿಲ್ಲ; ಸಾರಾಂಶ— ಕನ್ನಡಿಗರಲ್ಲಿ ಉಜ್ವಲವಾದ ತೇಜಸ್ಸೇ ಇಲ್ಲ– ಈ ಬಗೆಯಾದ ಹೀನ ವಾಕ್ಯಗಳಿಂದ ಕರೆಯಿಸಿಕೊಂಡರೂ ನಮ್ಮ ಕನ್ನಡಿಗರು ಕೈಕಾಲು ಸಹ ಅಲ್ಲಾಡಿಸದೆ ನಿಶ್ಚಲರಾಗಿದ್ದರು ! ನಿಂದಕರ ದೃಷ್ಟಿಯಿಂದ ಇದ್ದಬಿದ್ದ ಅಲ್ಪಸ್ವಲ್ಪ ಇತಿಹಾಸವನ್ನು ಕೂಡ ಸದ್ದುಮುದ್ದಾದ ರೀತಿಯಲ್ಲಿ ಸಿವಿಲ್‌ಸಾಹೇಬರು ಹೇಳಬೇಕಾಯಿತು. ಅವರದಕ್ಕೆ "ನಷ್ಟಸ್ಮೃತಿಸಾಮ್ರಾಜ್ಯ" ವೆಂದೇ ಹೆಸರನ್ನಿಟ್ಟರು. ಅದು "ನ ಕದಾಪಿ ನಷ್ಟಸ್ಮೃತಿಸಾಮ್ರಾಜ್ಯ" ವೆಂದು ಮದ್ರಾಸದ ಪ್ರೊಫೆಸರರು ಕೂಗಿಹೇಳುವ ಪ್ರಯತ್ನ ಮಾಡಿದರು ! ಆದರೆ ಕನ್ನಡಿಗರೇನು ಮಾಡಿದರು! ಕೈತುರಿಸುತ್ತ ಕುಳಿತಿದ್ದರು. ಅದೂ ಒಂದು ಕಾಲ ! ಮುಂದೆ ಯಕ್ಷಿಣಿಯ ಯಷ್ಟಿಯು ಸ್ವಲ್ಪ ತಿರುಗಿತು ! ಇದರಂತೆ ಕನ್ನಡಿಗರಾದರೂ ತಮ್ಮನ್ನು ತಾವೇ ನೋಡಿಕೊಳ್ಳಹತ್ತಿದರು. ಅಜ್ಞಾನವೆಂಬ ಬೇನೆಯಿಂದ ಮೆತ್ತಿಹೋದ ಕನ್ನಡಿಗರ ಕಣ್ಣುಗಳು ಕಾಲವೆಂಬ ಕಣ್ಬೇಜದಿಂದ ತಿಳಿದುವು. 'ಗತವೈಭವ'ವು ಪ್ರಕಾಶಿತವಾಯಿತು. ಇಹವೈಭವವು ಶೂನ್ಯರೂಪದಲ್ಲಿರುವುದನ್ನು ತಿಳಿದು ಹಳಹಳಿಸಹತ್ತಿದರು; ಅದರ ಅಭಿವೃದ್ಧಿಗಾಗಿ ಸಂಘಟಿತ ಪ್ರಯತ್ನಗಳು ನಡೆದುವು. ಸಾಮಾಜಿಕ, ಧಾರ್ಮಿಕ, ವಾಙ್ಮಯಾತ್ಮಕ, ರಾಜಕೀಯ ಮೊದಲಾದ ಪ್ರತಿಯೊಂದು ವಿಷಯದಲ್ಲಿಯೂ ಕನ್ನಡಿಗರು ಸ್ವಾಭಿಮಾನವುಳ್ಳವರಾಗಹತ್ತಿರುವುದು ಅತ್ಯಂತ ಆನಂದದ ಸಂಗತಿಯು. ಹೀಗೆಲ್ಲ ಉಂಟಾದುದು ಏತರಿಂದ ? ಕಾಲಮಾಹಾತ್ಮ್ಯದಿಂದಂದಲ್ಲದೆ ಇನ್ನೇನು ಹೇಳೋಣ ?

ಕನ್ನಡಿಗರ ಉನ್ನತಿಗಾಗಿ ಈಗ ನಡೆದಿರುವ ಪ್ರಯತ್ನಗಳು ಸಾಕಷ್ಟು ಇಲ್ಲದೆ ಇದ್ದರೂ, ಅವುಗಳ ಗತಿಯು ಮೊದಲಿಗಿಂತಲೂ ಹೆಚ್ಚು ವೇಗದಿಂದ ನಡೆದಿದೆಯೆಂಬುದು

ಸಂತೋಷದ ಚಿಹ್ನವು. ಈ ಮೊದಲು ವಾಗ್ಭೂಷಣದಿಂದ ಹೊರಟ ಶಾಂತಕವಿಗಳ ಸಂಚಿಕೆಯೂ, ಈಗ ಹೊರಟಿರುವ ಶ್ರೀ ವಿಜಯವಿದ್ಯಾರಣ್ಯರ ಸಂಚಿಕೆಯೂ– ಅಲ್ಪ ಪ್ರಮಾಣದಿಂದಲೇ ಆಗಲೊಲ್ಲದೇಕೆ– ಕನ್ನಡಿಗರ ಸ್ವಕೀಯಾಭಿಮಾನವನ್ನೇ ತೋರ್ಪಡಿಸುವದಿಲ್ಲವೇ ? ತಮ್ಮಲ್ಲಿ ಆಗಿಹೋದ ಉಜ್ವಲ ವಿಭೂತಿಗಳ ಮತ್ತು ಸದ್ಯಃಕಾಲದ ಮಹಾತ್ಮರ ಸ್ಫೂರ್ತಿದಾಯಕವಾದ ಆಯುಷ್ಯಕ್ರಮವನ್ನು ಸರ್ವಾಂಗಗಳಿಂದಲೂ ಚರ್ಚಿಸುವಂತಹ ಲೇಖರತ್ನಗಳ ಮಾಸಪತ್ರಕರಂಡಗಳಲ್ಲಿ ತುಂಬಿ ತಮ್ಮ ದೇಶಬಾಂಧವರಿಗೆ ಅರ್ಪಿಸುವುದು ಸಾಮಾನ್ಯ ಪುಣ್ಯವಲ್ಲ! ಅದರ ಪರಿಣಾಮವಾದರೂ ಸಾಧಾರಣವಾದುದಲ್ಲ! ಆತ್ಮೋದ್ಧಾರದ ಬೀಜವೇ ಅದು! ಇತರ ಪ್ರಾಂತದವರೂ, ಇತರ ಭಾಷೆಯವರೂ ಈ ತರದ ಪ್ರಯತ್ನಗಳನ್ನು ಮಾಡಹತ್ತಿ ಎಷ್ಟೋ ವರ್ಷಗಳಾಗಿರುವುದರಿಂದ ಅವುಗಳ ಸತ್ಪರಿಣಾಮವನ್ನವರು ಈಗಲೇ ನೋಡಹತ್ತಿರುವರು. ನಾವು ಮಾತ್ರ ವಿವೇಕಶೂನ್ಯರಾದೆವು. ಈ ವಿಷಯದಲ್ಲಿ ನಾವು ಎಷ್ಟರ ಮಟ್ಟಿಗೆ ಸಂತಾಪಪಟ್ಟರೂ ಕಡಿಮೆಯೇ ಇದೆ! ಆದರೂ ಕಾಲವು ಕಳೆದುಹೋಗಿಲ್ಲ! ಇಷ್ಟು ದಿವಸಗಳ ವರೆಗೆ ಕೇವಲ ಕರ್ತವ್ಯಮೂಢರಾಗಿ ಕುಳಿತಿದ್ದೆವು. ಈಗ ಎಲ್ಲವೂ ಗೊತ್ತಾಗಿದೆ. ಕಾರ್ಯವನ್ನೂ ಆರಂಭಿಸಿದ್ದೇವೆ. ಅಂದಮೇಲೆ ಹಳಹಳಿಸಿ ಉಪಯೋಗವಿಲ್ಲ. ಬಹು ದಿವಸಗಳಿಂದ ಮರೆತು ಹೋಗಿದ್ದ ನಮ್ಮ ತೇಜಸ್ಸನ್ನು ಬೈಲಿಗೆಳೆಯುವುದೂ, ಆ ತೇಜೋನುಗುಣವಾದ ಕೃತಿಗಳನ್ನು ಮಾಡಿ ತೋರಿಸುವುದೂ ಕನ್ನಡಿಗನೆನಿಸಿಕೊಳ್ಳುವ ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಇದೇನು ಅಸಾಧ್ಯವಾದ ಮಾತಲ್ಲ! ಈಗೀಗ ನಮ್ಮ ಕನ್ನಡಿಗರಲ್ಲಿ ಉಂಟಾಗಿರುವ ನೂತನ ಜಾಗ್ರತಿಯನ್ನೂ, ದೇಶಸೇವೆಗಾಗಿ ಅವರು ಮಾಡುತ್ತಲಿರುವ ಸ್ವಾರ್ಥತ್ಯಾಗ ಆತ್ಮಾರ್ಪಣೆಗಳನ್ನೂ ನೋಡಿದರೆ, ಮುನ್ನಿನ ತೇಜವು ಅವರಲ್ಲಿ ಬೂದಿಮುಚ್ಚಿದ ಕೆಂಡದಂತೆ ಇನ್ನೂ ಗುಪ್ತ ರೀತಿಯಿಂದ ವಾಸವಾಗಿದೆಯೆಂದೂ, ಉಃಪೆಂದು ಊದುವ ಅವಕಾಶ ಸಿಕ್ಕರೆ ಅದು ತನ್ನ ಬೆಳಕನ್ನು ಹರಡುವದೆಂದೂ ಯಾರಿಗಾದರೂ ನಂಬಿಗೆ ಹುಟ್ಟುವಂತಿದೆ. ಆಗಲಿ, ಪರಮಾತ್ಮನ ದಯೆಯಿಂದ ಅಂತಹ ಸುಕಾಲವೂ ಪ್ರಾಪ್ತವಾಗಲಿ! ಅಂತಹ ಕಾಲವನ್ನು ಕಂಡು ಕನ್ನಡಿಗರ ಕಣ್ಣೂ, ಜನ್ಮವೂ, ಸರ್ವಸ್ವವೂ ಸಾಫಲ್ಯವನ್ನು ಹೊಂದಲಿ! ಸತ್ಪುತ್ರನ ನಿವಾಪಾಂಜಲಿಗಳಿಂದ ಪಿತೃಗಳ ಆತ್ಮಗಳು ತುಷ್ಟರಾಗುವಂತೆ, ಸ್ವರ್ಗದಲ್ಲಿದ್ದ ವೈಭವಶಾಲಿಗಳಾದ ಕರ್ಣಾಟಕದ ಪೂರ್ವಜರು ತಮ್ಮ ದೇಶಬಾಂಧವರ ಈ ತರದ ಪ್ರಯತ್ನರೂಪವಾದ ತರ್ಪಣದಿಂದ ಸಂತೋಷಚಿತ್ತರಾಗಲಿ !!!

ಕನ್ನಡಿಗರೇ, ನಿಜವಾಗಿಯೂ ನಿಮ್ಮ ಈ ಕರ್ತವ್ಯವನ್ನು ಜರುಗಿಸುವಿರಾ ? ಆಹಹಾ ! ಕನ್ನಡಿಗರು, ಕನ್ನಡಿಗಳ ವೈಭವ ಎಂದೊಡನೆಯೇ ಹಂಪೆ ವಿಜಯನಗರಗಳ ನೆನಪಾಗುತ್ತದೆ. ವಾಚಕರೇ, ವಿಜಯನಗರವನ್ನೆಂದಾದರೂ ನೋಡಿರುವಿರಾ ? ಕನ್ನಡಿಗನಾಗಿ ಹುಟ್ಟಿ ಹಂಪೆ ವಿಜಯನಗರಗಳನ್ನು ನೋಡದವನ ಬಾಳು ಹಾಳು !! ಹೋಗಿರಿ,

ಇಂದೇ ಅಲ್ಲಿಗೆ ಹೊರಡಿರಿ. ಆ ಹಾಳು ಪ್ರದೇಶದಲ್ಲಿ ನಿಮ್ಮ ಕಲ್ಪನಾಶ್ವಕ್ಕೆ ಕರಿಕೆಯು ಯಥೇಚ್ಛವಾಗಿ ಸಿಕ್ಕುವುದು. ಅಂತಶ್ಚಕ್ಷುವನ್ನು ಪರಿಷ್ಕಾರವಾಗಿ ಮಾಡಿಕೊಂಡು ಶ್ರೀ ವಿದ್ಯಾರಣ್ಯ ಸ್ವಾಮಿಗಳ ದರ್ಶನವನ್ನು ತೆಗೆದುಕೊಳ್ಳಿರಿ. ಕೃಷ್ಣದೇವರಾಯನ ವೈಭವವನ್ನು ನೋಡಿರಿ. ಬೇಡ. ಬೇಡ. ಅಲ್ಲಿ ಹೋಗಿ ನೀವು ಏನೇನು ಮಾಡಬೇಕೆಂಬುದನ್ನು ನಾನೇಕೆ ಹೇಳಬೇಕು ? ಮೇಲೆ ಹೇಳಿದಂತೆ ಕರಿಕೆಯಿಂದ ಪುಷ್ಟವಾದ ನಿಮ್ಮ ಕಲ್ಪನಾಶ್ವವನ್ನು ಹತ್ತಿಕೊಂಡು ಅಂತಶ್ಚಕ್ಷುವಿನಿಂದ ಏನೇನು ನೋಡುವಿರೆಂಬುದನ್ನು ನೀವೇ ಹೇಳಿರಿ. ಕನ್ನಡಿಗರೇ, ಕನ್ನಡಿಗರೇ, ಮಾತೃಭೂಮಿಯನ್ನೂ ಆಕೆಯ ವೈಭವವನ್ನೂ ಮರೆತು, ಅವಳಿಗೆ ದುಃಖವನ್ನುಂಟುಮಾಡಿ, ಹಿಂದಿನವರ ಹೆಸರಿಗೆ ಮಸಿ ಹಚ್ಚುವಂತಹ ಕುಲಕಂಟಕರಂತೆ ಬಾಳುವುದು ಮನುಷ್ಯಧರ್ಮವಲ್ಲ. ಹೀಗೆ ಬದುಕುವುದು ಘೋರಪಾತಕವು. ಈ ಪಾಪದ ಪರಿಮಾರ್ಜನವಾಗಬೇಕಾದರೆ, ಪಂಪಾಕ್ಷೇತ್ರಕ್ಕೆ ಹೋಗಿ, ಸಂತಾಪಾಗ್ನಿಯನ್ನು ಪ್ರಜ್ವಲಿತವಾಗಿ ಮಾಡಿ, ಅದರಲ್ಲಿ ಆತ್ಮವನ್ನು ಆಹುತಿಕೊಟ್ಟು, ಕಣ್ಣೀರುಗಳಿಂದ ನಂದಿಸಿ ಆ ಭಸ್ಮವನ್ನು ಮೈಗೆ ಬಳಿದುಕೊಂಡು ಬೈರಾಗಿಗಳಾಗಿರಿ !!!

ವಾಚಕರೇ, ಮೇಲೆ ಹೇಳಿದಂತೆ ಪತಿತಪಾವನ ಸಮರ್ಥವಾದ ಪಂಪಾಕ್ಷೇತ್ರದ ಐತಿಹಾಸಿಕ ಮಹಿಮೆಯು ಸಾದ್ಯಂತವಾಗಿ ನಮ್ಮೆಲ್ಲರಿಗೆ ತಿಳಿದಿದೆಯೇ ? ದುರ್ದೈವ ! ನಿರ್ದಯರಾದ ಮುಸಲ್ಮಾನರ ಉಪಟಳದಿಂದಲೂ, ಕಾಲನ ಕರಾಲ ವದನದಲ್ಲಿ ಸಿಕ್ಕು ಹೋದುದರಿಂದಲೂ ಎಷ್ಟೋ ಅಂಶಗಳು ಮುಚ್ಚಿಹೋಗಿವೆ. ಆದರೂ 'ದುಧಾಚೇತಹಾನ ತಾಕಾವರ ಭಾಗಲೇ' ಎಂದು ಹೇಳುವಂತೆ, ನಿಸ್ಖಲಿತವಾಗಿ ಉಪಲಬ್ಧವಾಗುವ ತಾಮ್ರಪಟಶಿಲಾಲೇಖಗಳಿಂದಲೂ, ಪ್ರವಾಸಿಕರ ಬರಹಗಳಿಂದಲೂ, ಗ್ರಂಥಾಂತರಗಳಲ್ಲಿ ದೊರೆಯುವ ಉಲ್ಲೇಖಗಳಿಂದಲೂ ನಾವು ಈಗ ಅದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿದ ಹೊರತು ಗತ್ಯಂತರವಿಲ್ಲ. ಹೀಗಿದ್ದರೂ, ಈಗಲೂ ವಿಜಯನಗರದಲ್ಲಿ ಕಂಡುಬರುವ ಭವ್ಯವಾದ ಕಟ್ಟಡಗಳೂ, ವಿಶಾಲವಾದ ಅಂಗಡಿಗಳ ಸಾಲುಗಳೂ, ಅರಮನೆಯ ಕೋಟೆಕೊತ್ತಳಗಳೂ ಪೂರ್ವದ ಹಿಂದೂ ಜನರ ವೈಭವದ ಹಾಗು ವಿದ್ವತ್ತೆಯ ನಿದರ್ಶಕವಾಗಿವೆ. ಅಲ್ಲಿ ಹೋಗಿ ಪ್ರಜ್ವಲಿತವಾದ ಅಂತಃಕರಣದಿಂದ ನಿರೀಕ್ಷಣೆ ಮಾಡಿದರೆ, ಅವುಗಳಿಗೆಲ್ಲ ಮೂಲಕಾರಣರಾದ ಮಹಾಪುರುಷರ ಅತುಲ ವಿದ್ವತ್ತೆ, ಅಸಮಾನ ಧೈರ್ಯ, ಅನುಪಮ ರಾಜಕಾರಣಪಟುತ್ವ, ಅಪ್ರತಿಮ ಭಕ್ತಿ ಮೊದಲಾದ ಅನೇಕ ಸದ್ಗುಣಗಳ ಕಲ್ಪನಾತರಂಗಗಳು ಪ್ರತಿಯೊಬ್ಬ ಕನ್ನಡಿಗನ ಹೃದಯಾಬ್ಧಿಯನ್ನು ಉಕ್ಕೇರಿಸತೊಡಗುವವು !

ಶ್ರೀವಿದ್ಯಾರಣ್ಯ ಸ್ವಾಮಿಗಳು ಭೂಲೋಕದಲ್ಲಿ ಅವತರಿಸಿ ಈ ವಿಜಯನಗರದಲ್ಲಿಯೇ ತಮ್ಮ ಮಹಾತ್ಮ್ಯವನ್ನು ಪ್ರಕಟಗೊಳಿಸಿದರು. ಸುಮಾರು ಇಪ್ಪತ್ತೊಂದು ನೂರು ವರ್ಷಗಳ ಪೂರ್ವದಲ್ಲಿ ಆರ್ಯ ಚಾಣಕ್ಯಮುನಿಯು ಅಪ್ರಸಿದ್ಧನಾದ ಮೌರ್ಯ

ಮೌರ್ಯ ಚಂದ್ರಗುಪ್ತನನ್ನು ಪಾಟಲೀಪುತ್ರದ ಸಿಂಹಾಸನದ ಮೇಲೆ ಕುಳ್ಳಿರಿಸಿ ಸ್ವದೇಶೀಯ ರಾಜಸತ್ತೆಯನ್ನು ಸ್ಥಾಪಿಸಿ ದುಷ್ಟರಿಂದಾಗುವ ಬಾಧೆಯನ್ನು ತಡೆದು ದೇಶದಲ್ಲಿ ಶಾಂತತೆಯ ಸಾಮ್ರಾಜ್ಯವನ್ನು ನೆಲೆಗೊಳಿಸಿದನಷ್ಟೇ; ಅದರಂತೆ ಸುಮಾರು ೬೦೦ ವರ್ಷಗಳ ಹಿಂದೆ ಶ್ರೀವಿದ್ಯಾರಣ್ಯ ಸ್ವಾಮಿಗಳು ದಕ್ಷಿಣ ಹಿಂದುಸ್ಥಾನದಲ್ಲಿ ಹರಿಹರನೆಂಬ ಅಪ್ರಸಿದ್ಧನಿಂದ ವಿಜಯನಗರದಲ್ಲಿ ದೇಶೀಯ ರಾಜ್ಯವನ್ನು ಸ್ಥಾಪನೆ ಮಾಡಿಸಿದರು. ವಿದ್ಯಾರಣ್ಯರು ರಾಜ್ಯಸ್ಥಾಪನೆ ಮಾಡಿದ ಕಾಲವು, ಚಾಣಕ್ಯನ ಕಾಲಕ್ಕಿಂತ ಹೆಚ್ಚು ಕಠಿಣವಾಗಿತ್ತು. ಯವನರ ಉಪದ್ರವವು ಮಿತಿಮೀರಿ ನಡೆದಿತ್ತು. ಅದನ್ನೆಲ್ಲ ತಗ್ಗಿಸಿ ಕರ್ನಾಟಕದಲ್ಲಿ ಅತ್ಯಂತ ಬಲವಾದ ರಾಜ್ಯವನ್ನು ಸ್ಥಾಪಿಸಿದ ಮೂಲಕ ಇವರಿಗೆ "ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯ"ರೆಂಬ ಬಿರುದು ಬಂತು. ಇದಲ್ಲದೆ ಇವರಿಗಿಂತ ಹಿಂದೆ ಮುನ್ನೂರು ನಾನೂರು ವರ್ಷಗಳವರೆಗೆ ಮಲಿನವಾಗುತ್ತ ಬಂದಿದ್ದ ಅದ್ವೈತ ಮತವನ್ನು ಇವರೇ ಪುನರುಜ್ಜೀವನಗೊಳಿಸಿದರು. ಆದುದರಿಂದ ಜಗದ್ಗುರು ಶ್ರೀಶಂಕರಾಚಾರ್ಯರ ತರುವಾಯ ನಮ್ಮ ದೇಶದಲ್ಲಿ ಪ್ರಸಿದ್ಧರಾದವರು ಕ್ರಿ. ಶ. ೮ ನೆಯ ಶತಮಾನದಲ್ಲಿ ಅವತರಿಸಿದರು. ಆ ಮೇಲೆ ಸುಮಾರು ೬೦೦ ವರ್ಷಗಳಾದ ಬಳಿಕ ಶೃಂಗೇರಿಯಲ್ಲಿರುವ ಆಚಾರ್ಯರ ಶಾರದಾ ಪೀಠದಲ್ಲಿ ಶ್ರೀವಿದ್ಯಾರಣ್ಯ ಸ್ವಾಮಿಗಳು ವಿರಾಜಮಾನರಾಗಿ 'ಜಗದ್ಗುರು'ಗಳೆಂಬ ಪದವಿಯನ್ನು ಹೊಂದಿದರು. ಹೀಗೆ ರಾಜಕಾರಣ ಮತ್ತು ಧರ್ಮಗಳೆಂಬ ಉಭಯಶಾಖೆಗಳಲ್ಲಿ ಶ್ರೀವಿದ್ಯಾರಣ್ಯರು ಧುರೀಣರಾಗಿದ್ದುದಲ್ಲದೆ ಲೋಕೋಪಕಾರಾರ್ಥಕವಾದ ವೇದಾಂತವಿಷಯಕವಾದ ಅನೇಕ ಅಮೌಲ್ಯ ಗ್ರಂಥರತ್ನಗಳನ್ನೂ ಈ ಮಹನೀಯರು ನಿರ್ಮಾಣ ಮಾಡಿರುವದರಿಂದ ವಾಙ್ಮಯಾತ್ಮಕ ದೃಷ್ಟಿಯಿಂದಲೂ ಇವರ ಚರಿತ್ರವು ಮನನೀಯವಾಗಿದೆ. ಈ ಪ್ರಕಾರ ಎಲ್ಲ ಪಾರ್ಶ್ವಗಳಿಂದಲೂ ಸ್ವಾಮಿಗಳವರ ಚರಿತ್ರೆಯನ್ನು ಸಾಧ್ಯವಿದ್ದ ಮಟ್ಟಿಗೆ ಪೂರ್ಣವಾಗಿ ತಿಳಿಯಪಡಿಸುವುದೇ ಈ ಚಿಕ್ಕ ಪುಸ್ತಕದ ಉದ್ದೇಶವಿರುತ್ತದೆ.

---

# ೨. ಕುಲವೃತ್ತಾಂತವೂ ಜ್ಞಾನೇಶ್ವರಸಾಮ್ಯವೂ

ಶ್ರೀವಿದ್ಯಾರಣ್ಯಸ್ವಾಮಿಗಳು ತುಂಗಭದ್ರೆಯ ದಂಡೆಯಲ್ಲಿ ಕಿಷ್ಕಿಂಧೆ ಅಥವಾ ಹಂಪೀ ಕ್ಷೇತ್ರದ ಸಮೀಪದಲ್ಲಿರುವ ಆನೆಯಗೊಂದಿಯಲ್ಲಿ ಒಬ್ಬ ತೈತ್ತಿರೀಯ ಶಾಖೆಯ ಬಡ ಬ್ರಾಹ್ಮಣನ ಕುಲದಲ್ಲಿ ಹುಟ್ಟಿದರು. ಪರಾಶರಸ್ಮೃತಿಯ ವ್ಯಾಖ್ಯಾನದಲ್ಲಿ ತಮ್ಮ ತಂದೆ, ತಾಯಿ, ಬಂಧುಬಳಗದವರ ವೃತ್ತಾಂತವನ್ನು ಅವರೇ ಸ್ವಲ್ಪದರಲ್ಲಿ ಹೀಗೆ ಹೇಳಿದ್ದಾರೆ:

ಶ್ರೀಮತೀ ಜನನೀ ಯಸ್ಯ ಸುಕೀರ್ತಿರ್ಮಾಯಣಃಪಿತಾ |
ಸಾಯಣಃ ಸೋಮನಾಥಶ್ಚ ಮನೋಬುದ್ಧೀ ಸಹೋದರೌ ||
ಯಸ್ಯ ಬೋಧಾಯನಂ ಸೂತ್ರ ಶಾಖಾ ಯಸ್ಯ ಚ ಯಾಜುಷೀ |
ಭಾರದ್ವಾಜಂ ಕುಲಂ ಯಸ್ಯ ಸರ್ವಜ್ಞಃ ಸ ಹಿ ಮಾಧವಃ ||

ಈ ಶ್ಲೋಕಗಳಲ್ಲಿ ತಮ್ಮ ತಂದೆ–ತಾಯಿಗಳ ಹೆಸರುಗಳನ್ನೂ ಬಂಧುಗಳ ಹೆಸರುಗಳನ್ನೂ, ಕುಲಗೋತ್ರಾದಿಗಳನ್ನೂ ಮಾತ್ರ ಹೇಳಿರುವರಲ್ಲದೆ ವಿಶೇಷವೇನೂ ಗೊತ್ತಾಗುವುದಿಲ್ಲವೆಂದು ಕೆಲವರು ಹೇಳಿರುವರು. ಆದರೆ ಇದರೊಳಗಿನ ಮೊದಲನೆಯ ಶ್ಲೋಕವಂತೂ ನಮಗೆ ಕಾಮಧೇನುವಿನಂತೆ ತೋರುವುದು. ಸಾಕ್ಷಾತ್ ಸ್ವಾಮಿಗಳವರ ವಾಕ್ಸುಧೆಯೇ ಅದು. ಅಂದಮೇಲೆ ಕೇಳುವುದೇನು ? "ದೇವಾ ದೈವೀಂ ನರಾ ನಾರೀಂ ಶಬರಾಶ್ಚಾಪಿ ಶಾಬರೀಂ ತಿರ್ಯಂಚೋಽಪೀಚ ತೈರಶ್ಚೀಂ ಮೇನಿರೇ ಭಗವದ್ಗಿರಮ್" ಎಂದು ಜೈನರು ಹೇಳುವಂತೆ ಅದಾದರೂ ಭಗವದ್ಭಾಷೆಗೆ ಸಮವಾಗಿಯೇ ಇದೆಯೆಂದು ಹೇಳಬಹುದು. ಈ ಅನುಷ್ಟುಪ್ ಶ್ಲೋಕಗಳೆಂಬ ಖನಿಯಲ್ಲಿ ಸ್ವಾಮಿಗಳವರು ತಮ್ಮ ಕುಟುಂಬದ ಚರಿತ್ರ ರತ್ನಗಣವನ್ನೇ ಸಂಗ್ರಹಿಸಿಟ್ಟಿದ್ದಾರೆ. 'ಸುಕೀರ್ತಿ' ಎಂಬ ಸಾಭಿಪ್ರಾಯ ವಿಶೇಷಣದಿಂದ ತಂದೆಯಾದ ಮಾಯಣ ಮತ್ತು ತಾಯಿಯಾದ ಶ್ರೀಮತಿ ಇವರ ಸಂಪೂರ್ಣವಾದ ವರ್ಣನೆಯನ್ನು ಮಾಡಿದಂತಾಗಿದೆ. ಮಾಯಣಭಟ್ಟರು ಘನವಿದ್ವಾಂಸರೂ, ಆಚಾರಶೀಲರೂ, ಕರ್ಮನಿಷ್ಠರೂ, ನಿಸ್ಪೃಹರೂ, ಶುಚಿಭೂತರೂ, ತಪಸ್ವಿಗಳೂ ಮತ್ತು ವ್ಯವಹಾರದಕ್ಷರೂ ಎಂದು ಆ ಕಾಲದಲ್ಲಿ ಎಲ್ಲ ಕಡೆಯಲ್ಲಿಯೂ ಪ್ರಸಿದ್ಧವಾಗಿರಲಿಕ್ಕೆಬೇಕು. ಅದರಂತೆಯೇ ಶ್ರೀಮತೀಬಾಯಿಯವರು ಸರ್ವಸ್ತ್ರೀಗುಣ ಸಂಪನ್ನರಾದ ಪತಿವ್ರತೆಯಾಗಿದ್ದು ಪುತ್ರವತ್ಸಲರೂ, ಭ್ರಾತ್ರವತ್ಸಲರೂ ಎಂದು ವಿಖ್ಯಾತಿಯನ್ನು ಪಡೆದಿರಲಿಕ್ಕೆಬೇಕು. ಅವರ ಮಕ್ಕಳು ಅಲ್ಪವಯಸ್ಸಿನಲ್ಲಿಯೇ ಅಷ್ಟೊಂದು ವಿದ್ವಾಂಸರೂ ವಿಚಾರಶೀಲರೂ, ಕಾರ್ಯನಿಪುಣರೂ ಆಗಬೇಕಾದರೆ ಅವರ ಗೃಹ ಶಿಕ್ಷಣವೇ ಕಾರಣವಾಗಿರಬೇಕೆಂದು ಅದಾರು ಹೇಳದಿರುವರು ? ಅವರ ಮನೆಯೆಂದರೆ ಒಂದು ವಿದ್ಯಾಶ್ರಮವಾಗಿರಬಹುದು; ಅಥವಾ ಧರ್ಮಗುರುಗಳನ್ನೂ ಕರ್ಮವೀರರನ್ನೂ ಸಿದ್ಧಗೊಳಿಸುವ ದೊಡ್ಡದೊಂದು ವಿದ್ಯಾಲಯವೇ ಆಗಿರಬಹುದು; ಅದರೊಳಗಿಂದ ವಿದ್ವಾಂಸರೂ ಕಾರ್ಯಕ್ಷಮರೂ ಆದ ಅನೇಕ ಬ್ರಾಹ್ಮಣ ವೀರರು ಹೊರಹೊರಟರ

ಬಹುದು; ಮತ್ತು ಇಂತಹ ಕಾರ್ಯದಕ್ಷಪುರುಷರು ವಿಜಯನಗರದ ರಾಜ್ಯವ್ಯವಸ್ಥೆಯಲ್ಲಿ ಎಷ್ಟೋ ಕರ್ತೃತ್ವವನ್ನು ತೋರಿಸಿರಬಹುದು.

ಸಾಯಣ ಮತ್ತು ಸೋಮನಾಥರ ವರ್ಣನೆಯು 'ಮನೋಬುದ್ಧೀ' ಎಂಬ ಒಂದೇ ವಿಶೇಷಣದಿಂದ ಪೂರ್ಣವಾಗಿದೆ. ಸಾಯಣನು ವಿದ್ವಾಂಸನಾಗಿ ದೊಡ್ಡ ರಾಜನೀತಿಜ್ಞನೂ, ರಾಜಕಾರ್ಯನಿಷ್ಣಾತನೂ ಆದನು. ಆತನು ತನ್ನ ಆಯುಷ್ಯವನ್ನೆಲ್ಲ ಮಾಧವನಂತೆ ಸರಸ್ವತಿಯ ಸೇವೆಯಲ್ಲಿಯೂ, ರಾಜ್ಯಕಾರಭಾರದಲ್ಲಿಯೂ ಕಳೆದನು. ಹರಿಹರ, ಬುಕ್ಕ ಮತ್ತು ಎರಡನೆಯ ಹರಿಹರ ಈ ಮೂವರು ರಾಜರ ಉತ್ಕರ್ಷದ ಆಳಿಕೆಯಲ್ಲಿ ತನ್ನ ಹಿರಿಯ ಅಣ್ಣನಾದ ಮಂತ್ರಿವರ್ಯ ಮಾಧವಾಚಾರ್ಯನಿಗೆ ದಕ್ಷಿಣ ಹಸ್ತತುಲ್ಯನಾಗಿ ಕಾರ್ಯದಕ್ಷಸಹಾಯಕನಾಗಿದ್ದನು. ಎರಡನೆಯ ಹರಿಹರನ ಕಾಲದಲ್ಲಂತೂ ಬಹಳೇ ಪ್ರಸಿದ್ಧನಾದನು. ಗ್ರಂಥರಚನೆಯಲ್ಲಿಯೂ ರಾಜ್ಯಕಾರಭಾರದಲ್ಲಿಯೂ ಅವನು ಅನೇಕ ಕಲ್ಪನೆಗಳನ್ನೂ ಆಲೋಚನೆಗಳನ್ನೂ ಮಾಡಬೇಕಾಗಿರಬಹುದು; ಕಠಿನವಾದ ಎಷ್ಟೋ ರಾಜಕೀಯ ಸಮಸ್ಯೆಗಳನ್ನು ಬಿಡಿಸಬೇಕಾಗಿರಬಹುದು; ಆದುದರಿಂದಲೇ ಅವನಿಗೆ ಸರ್ವೇಂದ್ರಿಯಾಧ್ಯಕ್ಷವಾದ ಮನಸ್ಸಿನ ಉಪಮೆಯನ್ನು ಕೊಟ್ಟಿದ್ದಾರೆ. ಚಿಕ್ಕವನಾದ ಸೋಮನಾಥನು ಬುದ್ಧಿವಂತನೂ ದೃಢನಿಶ್ಚಯವುಳ್ಳವನೂ ಸ್ಪಷ್ಟ ಮಾತಾಡುವವನೂ ಆಗಿದ್ದನು. ಎಲ್ಲರಿಗಿಂತ ಚಿಕ್ಕವನಾಗಿದ್ದರೂ ಎಲ್ಲರಿಗಿಂತಲೂ ಜಾಣನಾಗಿದ್ದಾನೆಂದು ಆತನು ಹೆಸರಾಗಿರಬಹುದು. ಪ್ರಪಂಚದ ನಿಃಸಾರತೆಯನ್ನು ಅರಿತು "ಕೌಮಾರ ಆಚರೇತ್ಪ್ರಾಜ್ಞೋ ಧರ್ಮಾನ್ ಭಾಗವತಾನಿಹ" ಎಂಬ ಭಾಗವತೋಕ್ತಿಯನ್ನು ಅನುಸರಿಸಿ ಚಿಕ್ಕ ವಯಸ್ಸಿನಲ್ಲಿಯೇ ಅವನು ವಿವಿದಿಷಾ ಸನ್ಯಾಸವನ್ನು ಗ್ರಹಣ ಮಾಡಿ ಪರಮಾರ್ಥ ಮಾರ್ಗವನ್ನವಲಂಬಿಸಿ ಶೃಂಗೇರೀಮಠದಲ್ಲಿ ವಿದ್ಯಾತೀರ್ಥ ಗುರುಗಳ ಸೇವೆಯಲ್ಲಿ ನಿರತನಾದನು. ಈ ಪ್ರಕಾರ ಸಂಸಾರದ ಅಸಾರತೆಯನ್ನು ಪೂರ್ವ ವಯಸ್ಸಿನಲ್ಲಿಯೇ ತಿಳಿದವನಾಗಿ ಆತ್ಮೋದ್ಧಾರ ಹಾಗು ಜಗದುದ್ಧಾರದ ಪಂಥವನ್ನು ಅವಲಂಬಿಸಿದುದರಿಂದ ಅವನಿಗೆ ನಿಶ್ಚಯಾತ್ಮಕ ಬುದ್ಧಿಯ ಉಪಮೆಯನ್ನು ಕೊಟ್ಟಿದ್ದಾರೆ.

ಮೂರನೆಯದಾಗಿ ಮಾಧವನು ಪ್ರಪಂಚ ಮತ್ತು ಪರಮಾರ್ಥಗಳೆರಡರಲ್ಲಿಯೂ ನಿಪುಣನಾಗಿದ್ದನು. ಆದುದರಿಂದ ಆತನಿಗೆ ಕೊಟ್ಟ 'ಸರ್ವಜ್ಞ' ಎಂಬ ವಿಶೇಷಣವು ಅತ್ಯಂತ ಅನುರೂಪವಾಗಿದೆ. 'ಮಾಧವ' ಎಂಬುದು ನಮ್ಮ ಚರಿತ್ರನಾಯಕರಾದ ಶ್ರೀವಿದ್ಯಾರಣ್ಯಸ್ವಾಮಿಗಳ ಪೂರ್ವಾಶ್ರಮದ ಹೆಸರೆಂದು ಬೇರೆ ಹೇಳಬೇಕಾಗಿಲ್ಲ.

ಈ ಶುದ್ಧಕುಲವನ್ನು ಕುರಿತು ಸೂಕ್ಷ್ಮರೀತಿಯಿಂದ ವಿಚಾರಮಾಡಿದರೆ ಪುರಾಣದೊಳಗಿನ ಅನಸೂಯೆ ಮತ್ತು ಅತ್ರಿಋಷಿಗಳ ನೆನಪೂ, ಅವರಿಂದ ಉತ್ಪನ್ನರಾದ ಬ್ರಹ್ಮ ವಿಷ್ಣು ಮಹೇಶಾತ್ಮಕರಾದ ದಿವ್ಯ ತ್ರಿಮೂರ್ತಿಗಳ ನೆನಪೂ ಆಗುತ್ತದೆ. ಅದರಂತೆ ಅರ್ವಾಚೀನ ಕಾಲದಲ್ಲಿ ಆಪೇಗಾವದಲ್ಲಿ ಆಗಿಹೋದ ವಿಠ್ಠಲರುಕ್ಮಿಣಿಯರೂ, ಅವರ

ಪುಣ್ಯಶ್ಲೋಕಪುತ್ರತ್ರಯರೂ ನೆನಪಾಗುತ್ತಾರೆ. ಮತ್ತು ಆಪೇಗಾವದ ಶುದ್ಧ ಯಜುರ್ವೇದೀ ಬ್ರಾಹ್ಮಣರ ವಂಶದಲ್ಲಿ ವರ್ಣಾಶ್ರಮ ಧರ್ಮಗಳನ್ನು ಸರಿಯಾಗಿ ಪರಿಪಾಲಿಸುವದಕ್ಕಾಗಿಯೇ ಅವತರಿಸಿರಬಹುದೆಂಬ ಊಹೆಯು ಸಹಜವಾಗಿ ಮನಸ್ಸಿನಲ್ಲಿ ಬರುತ್ತದೆ. ಅನಧಿಕಾರಿತ್ವದ ಮೂಲಕ ಪೂರ್ವಜನ್ಮದಲ್ಲಿ ವರ್ಣಾಶ್ರಮ ಧರ್ಮವನ್ನು ರಕ್ಷಿಸುವುದಕ್ಕೆ ಅವರಿಗೆ ಪ್ರತಿಬಂಧಕವಾಗಿರಬಹುದು! ಅದು ಹೇಗೇ ಇರಲಿ. ಇವೆರಡೂ ಕುಟುಂಬಗಳಲ್ಲಿರುವ ಸಾಮ್ಯವು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುತ್ತದೆ.

ಆಪೇಗಾವದ ಅವತಾರದಲ್ಲಿ ಸುಂದರ ಪ್ರತಿಭಾಜನ್ಯವಾಗಿಯೂ, ರಸಭರಿತವಾಗಿಯೂ, ಪ್ರಮಾಣಭೂತವಾಗಿಯೂ ಇರುವ ತಾತ್ವಿಕ ಗ್ರಂಥಗಳನ್ನು ಪ್ರಾಕೃತ ಭಾಷೆಯಲ್ಲಿ ಬರೆದು ಅನಧಿಕಾರಿಗಳಾದ ಆಬಾಲವೃದ್ಧರಿಗೆ ಪರಮಾರ್ಥಸಾಗರದಲ್ಲಿ ಸಂಚರಿಸಲು ಸಹಾಯಕವಾದ ಜ್ಞಾನೇಶ್ವರಿ ಮತ್ತು ಅಮೃತಾನುಭವ ಎಂಬ ನೌಕೆಗಳನ್ನು ರಚಿಸಿದರು. ಹಂಪೆಯ ಅವತಾರದಲ್ಲಿ ಮೂರು ವರ್ಣಗಳ ಜನರ ಕಿವಿಗೆ ಮಾತ್ರ ಬೀಳುವ ಶ್ರುತಿಗಳ ಅರ್ಥವನ್ನು ವಿಶದಪಡಿಸಿ, ಪರಮಾರ್ಥವನ್ನು ಸಾಧಿಸಿಕೊಳ್ಳಬೇಕಾದರೆ ಆವಶ್ಯಕವಾದ ಅನೇಕ ಉಪಾಯಗಳನ್ನು ತಿಳಿಯಪಡಿಸಿದರು. ಹಿಂದಿನ ಅವತಾರದಲ್ಲಿ ಜ್ಯೇಷ್ಠ ಬಂಧುವಾಗಿದ್ದ ಗುರುನಿವೃತ್ತಿನಾಥರು ಈ ಅವತಾರದಲ್ಲಿ ಕನಿಷ್ಠ ಬಂಧುವಾಗಿ ಸೋಮನಾಥನೆಂದು ಕರೆಯಿಸಿಕೊಂಡು ಮುಂದೆ "ಭಾರತೀತೀರ್ಥ" ಎಂಬ ಹೆಸರಿನಿಂದ ಗುರುಸ್ಥಾನಾಪನ್ನರಾಗಿ ಪೂಜ್ಯತೆಯನ್ನು ಪಡೆದರು. ಸೋಪಾನದೇವರು ಸಾಯಣರಾಗಿ ಸನಾತನ ವೈದಿಕಧರ್ಮಮಂದಿರಕ್ಕೆ ಸೋಪಾನಗಳನ್ನು ಕಟ್ಟಿದರು. ಜ್ಞಾನೇಶ್ವರರೇ ಶ್ರೀವಿದ್ಯಾರಣ್ಯಸ್ವಾಮಿಗಳು. ಹಿಂದಿನ ಅವತಾರದಲ್ಲಿ ಕೈಕೊಂಡ ಕಾರ್ಯವು ಪೂರ್ಣವಾಗದಿರಲು, ಈ ತ್ರಿಮೂರ್ತಿಗಳು ಅದನ್ನು ಪೂರ್ತಿಗೊಳಿಸುವದಕ್ಕೋಸ್ಕರವೇ ಪುನಃ ಅವತರಿಸಿರಬಹುದೆಂಬುದು ಈ ಉಭಯಕುಲದಲ್ಲಿರುವ ಸಾಮ್ಯವನ್ನು ನೋಡಿದರೆ ಸ್ಪಷ್ಟವಾಗಿ ಕಂಡುಬರುತ್ತದೆ.

ಶಬ್ದಸಾಮರ್ಥ್ಯಪ್ರಭಾವದಿಂದ ಈ ಶ್ಲೋಕದಿಂದ ಇನ್ನೊಂದು ಗೂಢವಾದ ಅರ್ಥವು ವ್ಯಕ್ತವಾಗುತ್ತದೆ. ಪಾರಮಾರ್ಥಿಕವಾದ ಅರ್ಥವನ್ನು ಗುಪ್ತವಾಗಿಟ್ಟು ವ್ಯಾವಹಾರಿಕವಾದ ವರ್ಣನೆಯನ್ನು ಮಾಡುವದು ಕವಿಗಳ ಸಾಂಪ್ರದಾಯವು. ಇಲ್ಲಿ ಶ್ರೀಮತಿಯೆಂದರೆ ಆದಿಮಾಯೆ; ಮತ್ತು ಮಾಯಣನೆಂದರೆ ಮಾಯಾವಿ ಪರಮೇಶ್ವರನು. 'ಮಾಯಾಂತುಪ್ರಕೃತಿಂವಿದ್ಯಾತ್ । ಮಾಯಿನಂ ತು ಮಹೇಶ್ವರಮ್ ।' ಎಂಬ ವಚನವು ಹೀಗೆ ಹೇಳುವುದಕ್ಕೆ ಆಧಾರಭೂತವಾಗಿದೆ. ಮಾಯಣ ಎಂಬ ಶಬ್ದವು ಮಾಯಿನ್ ಎಂಬುದರ ಅಪಭ್ರಂಶದಂತೆ ತೋರುತ್ತದೆ. ಈ ಅನಾದಿ ದಂಪತಿಗಳಿಂದ ಮೂವರು ಮಕ್ಕಳು ಹುಟ್ಟಿದರು. ಅವರು ತ್ರಿಗುಣಸ್ವರೂಪರು; ಅಥವಾ ಮನೋಬುದ್ಧ್ಯಹಂಕಾರ ಸ್ವರೂಪರು. ಈ ಮೂವರು ಕೂಡಿ ರಾಷ್ಟ್ರರೂಪವಾದ ಜೀವಾತ್ಮನ ಉದ್ಧಾರಕಾರ್ಯವನ್ನು ಪೂರ್ಣ ಮಾಡಿದರು.

---

# ೩. ಜನ್ಮವೂ ವಯೋಮಾನವೂ

ನಮ್ಮಲ್ಲಿ ಹಿಂದಕ್ಕೆ ಆಗಿಹೋದ ಮಹಾಪುರುಷರ ಕಾಲನಿರ್ಣಯವನ್ನು ಮಾಡುವದು ಎಷ್ಟು ಕಠಿನವಾಗಿದೆಯೆಂಬುದು ಎಲ್ಲರಿಗೂ ಗೊತ್ತಿದ್ದ ಮಾತೇ ಆಗಿದೆ. ಈ ಮಾತು ಸ್ವಾಮಿಗಳ ವಿಷಯದಲ್ಲಿಯೂ ಅಪವಾದಾತ್ಮಕವಾಗಿಲ್ಲ. ಆದರೂ ಸಾಧಾರಣ ಮಟ್ಟಿಗೆ ಅವರ ಕಾಲನಾವುದೆಂಬುದನ್ನು ನಿಶ್ಚಯಿಸುವ ಪ್ರಯತ್ನವನ್ನಿಲ್ಲಿ ಮಾಡಿದ್ದೇವೆ. 'ಗತ ವೈಭವ' ಕರ್ತರಾದ ಶ್ರೀ ವೆ. ಭೀ. ಆಲೂರರವರು ತಮ್ಮ 'ವಿದ್ಯಾರಣ್ಯರ ಚರಿತ್ರೆ' ಯಲ್ಲಿ ಸ್ವಾಮಿಗಳವರ ಜನ್ಮಮರಣದ ಶಕೆಗಳನ್ನು ಕ್ರಮವಾಗಿ ೧೧೮೯ ಮತ್ತು ೧೩೦೮ ಎಂದು ಬರೆದಿದ್ದಾರೆ. ಅದಕ್ಕವರು ಯಾವ ಆಧಾರವನ್ನೂ ಕೊಟ್ಟಿಲ್ಲ. ಇವರು ಕೊಟ್ಟ ಶಕೆಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗುವದು ಅವಶ್ಯವಾಗಿದೆಯೆಂಬುದು ಮುಂದಿನ ವಿಚಾರದಿಂದ ಕಂಡು ಬರಬಹುದು.

ಸ್ವಾಮಿಗಳವರು ಶಕೆ ೧೩೧೩ ರಲ್ಲಿ ಅಂದರೆ ಕ್ರಿ. ಶ. ೧೩೯೧ ರಲ್ಲಿ ತಮ್ಮ ಹೆಸರಿನಿಂದ ಅಂಕಿತವಾದ ಮಾಧವಪುರವೆಂಬ ಗ್ರಾಮವನ್ನು ೨೪ ಮಂದಿ ಬ್ರಾಹ್ಮಣರಿಗೆ ಅಗ್ರಹಾರ ಹಾಕಿಕೊಟ್ಟರು. ಅದರ ಮೊದಲಿನ ಹೆಸರು ಕುಚ್ಚೂರ ಎಂಬುದಾಗಿದ್ದು ಕೋಚರೆ ಎಂಬ ಹೆಸರಿನಿಂದ ಅದು ಈಗಾದರೂ ಪ್ರಸಿದ್ಧವಾಗಿದೆ. ವಿಜಯ ನಗರದ ರಾಜ್ಯ ಸ್ಥಾಪನೆಯು ಶಕೆ ೧೨೫೮ ರಲ್ಲಿ ಅಂದರೆ ೧೩೩೬ ರಲ್ಲಿ ಆಯಿತು. ಪ್ರಾರಂಭದಿಂದ ಶಕೆ ೧೩೧೩ ರ ವರೆಗೆ (ಕ್ರಿ. ಶ. ೧೩೯೧) ಅಂದರೆ ಸುಮಾರು ೫೬ ವರ್ಷಗಳ ವರೆಗೆ ರಾಜ್ಯ ಸೂತ್ರವು ಅವರ ಕೈಯಲ್ಲಿತ್ತು. ಈ ಕಾಲದಲ್ಲಿ ಬುಕ್ಕರಾಯನ ಮಗನಾದ ೨ನೆಯ ಹರಿಹರನು ರಾಜ್ಯಾರೂಢನಾಗಿದ್ದನು. ಮುಂದೆ ಸುಮಾರು ೩–೪ ವರ್ಷಗಳಾದ ಮೇಲೆ ಅವರು ಆಶ್ರಮಾಂತರ ಮಾಡಿರಬಹುದೆಂದು ಕಲ್ಪಿಸಿದರೆ, ಅವರು ಸುಮಾರು ೬೦ ವರ್ಷಗಳ ವರೆಗೆ ರಾಜ್ಯಕಾರಭಾರ ಮಾಡಿದಂತಾಗುತ್ತದೆ. ಇನ್ನು ರಾಜ್ಯಾರಂಭ ಕಾಲದಲ್ಲಿ ಸ್ವಾಮಿಗಳವರ ವಯಸ್ಸು ಎಷ್ಟಿತ್ತೆಂಬುದೊಂದು ಪ್ರಶ್ನೆಯು. ಅದಕ್ಕೆ ಬಲವಾದ ಆಧಾರಗಳೇನೂ ಇಲ್ಲ. ಆಗ ಅವರ ವಯಸ್ಸು ಸುಮಾರು ೩೦ ವರ್ಷಗಳದಿತ್ತೆಂದು ಕಲ್ಪಿಸಿದರೆ ಆಶ್ರಮಾಂತರ ಸಮಯಕ್ಕೆ ಅವರು ಸುಮಾರು ೯೦ ವರ್ಷದವರಿದ್ದಂತಾಗುವದು. ಆಶ್ರಮಾಂತರ ಮಾಡಿದ ಬಳಿಕ ಅವರು ಎಷ್ಟು ದಿವಸ ಬದುಕಿದ್ದರೆಂಬುದೂ ನಿಶ್ಚಿತವಾಗಿ ಹೇಳಲಿಕ್ಕೆ ಬರುವಂತಿಲ್ಲ. ಮೇಲಿನ ಕಲ್ಪನೆಯಂತೆ ನೋಡಲು ದಾನಪತ್ರ ಸಮಯದಲ್ಲಿ ಅವರ ವಯಸ್ಸು ಸುಮಾರು (೫೬ + ೩೦) = ೮೬ ವರ್ಷಗಳಾಗುತ್ತದೆ. ಆದುದರಿಂದ ಅವರು (೧೩೧೩—೮೬) = ೧೨೨೭ ನೆಯ ಶಕೆಯಲ್ಲಿ ಹುಟ್ಟಿದರೆಂದು ಹೇಳಬಹುದು. ಜ್ಞಾನೇಶ್ವರ ಮಹಾರಾಜರ ಸಮಾಧಿಶಕವು ೧೨೧೮ ಆಗಿದೆ. ಅವರ ಮರಣದ ತರುವಾಯ ಸುಮಾರು ೮–೧೦ ವರ್ಷಗಳ ಮೇಲೆ ವಿದ್ಯಾ

ರಣ್ಯರು ಜನಿಸಿದಂತಾಗುವದು. ಈ ಜನ್ಮಶಕೆಯು ನಿಜವೆಂದು ಭಾವಿಸಿದರೆ ಮೊದಲು ಹೇಳಿದ ಅವತಾರಕಲ್ಪನೆಯು ಸರಿಯಾಗುವುದು. ಒಂದು ವೇಳೆ ಇವರ ಸಮಕಾಲೀನತ್ವವಾಗಲಿ, ಪೂರ್ವಕಾಲೀನತ್ವವಾಗಲಿ ನಿಶ್ಚಿತವಾಗಿ ಗೊತ್ತಾದರೂ ಆ ಉಭಯಕುಲದಲ್ಲಿದ್ದ ಸಾಮ್ಯಕ್ಕೆ ಯಾವ ತರದ ಬಾಧೆಯೂ ಇಲ್ಲವೆಂಬುದು ಸ್ಪಷ್ಟವೇ ಇದೆ!

ಶ್ರೀ ಆಲೂರರವರು ಕೊಟ್ಟ ಶಕಮಾನಗಳಂತೆ ನೋಡಿದರೆ— ವಿದ್ಯಾರಣ್ಯರ ವಯಸ್ಸು ಆಶ್ರಮಾಂತರ ಸಮಯದಲ್ಲಿ ೬೪ ವರ್ಷಗಳೆಂದೂ, ಪೀಠಾರೋಹಣ ಸಮಯದಲ್ಲಿ ೧೧೩ ವರ್ಷಗಳೆಂದೂ, ಸಮಾಧಿ ಸಮಯದಲ್ಲಿ ೧೧೮ ವರ್ಷಗಳೆಂದೂ ತಿಳಿದುಬರುತ್ತದೆ. ಕೆಲವರು ಈ ವಯೋಮಾನದ ವಿಷಯವಾಗಿ ಕೆಲವು ಆಕ್ಷೇಪಗಳನ್ನು ತೆಗೆಯುತ್ತಾರೆ. ಬಡತನದಲ್ಲಿಯೇ ಬೆಳೆದವರು (ಮಾಧವಾಚಾರ್ಯರು ಮೊದಲಿನಿಂದ ಬಹಳ ಬಡವರಾಗಿದ್ದರೆಂಬುದು ಮುಂದಿನ ಅವರ ಚರಿತ್ರಭಾಗದಿಂದ ಗೊತ್ತಾಗುವದು.) ಇಷ್ಟು ದಿವಸಗಳವರೆಗೆ ಬದುಕುವುದು ವ್ಯಾವಹಾರಿಕ ದೃಷ್ಟಿಯಿಂದ ಸಮಂಜಸವೆಂದು ತೋರುವುದಿಲ್ಲ. ಅತ್ಯಂತ ಕಠಿಣವಾದ ರಾಜಕೀಯ ಭಾರವನ್ನು ಹೊರಬೇಕಾದ ಸಮಯದಲ್ಲಿಯೂ ಗ್ರಂಥರಚನಾಕಾಲದಲ್ಲಿಯೂ ಅವರು ಅತ್ಯಂತ ವೃದ್ಧರಾಗಿದ್ದರೆಂದು ಹೇಳಬೇಕಾಗುತ್ತದೆ. ಈ ಪ್ರಕಾರದ ಆಕ್ಷೇಪಣೆಗಳನ್ನು ತೆಗೆಯುವವರಿಗೆ ನಮ್ಮದೊಂದು ವಿಜ್ಞಪ್ತಿಯುಂಟು. ಸ್ವಾಮಿಗಳಂತಹ ಅಸಾಧಾರಣರ ವಿಷಯವನ್ನು ವಿಚಾರ ಮಾಡುವಾಗ ಎಲ್ಲ ವಿಧದಲ್ಲಿಯೂ ಪಾಮರರಾದ ನಮ್ಮಂತಹರ ದೃಷ್ಟಿಯನ್ನೇ ಉಪಯೋಗಿಸುವುದು ಸರಿಯಲ್ಲ. ಇರಲಿ, ನಾವು ಮೇಲೆ ಬರೆದ ಸ್ವಾಮಿಗಳವರ ವಯೋಮಾನದಲ್ಲಿ ಈ ತರದ ಆಕ್ಷೇಪಣೆಗಳಿಗೂ ಅವಕಾಶವಿಲ್ಲವೆಂಬುದು ಸ್ಪಷ್ಟವಿದೆ.

ಇನ್ನು ಸ್ವಾಮಿಗಳವರ ದೀರ್ಘಾಯುರ್ಮರ್ಯಾದೆಯ ವಿಷಯದಲ್ಲಿರುವ ಕೆಲವು ಪ್ರಮಾಣಗಳನ್ನು ಇಲ್ಲಿ ಉಲ್ಲೇಖಿಸುತ್ತೇವೆ. ಅವು ಅಷ್ಟೇನು ಬಲವಾದವುಗಳಲ್ಲ; ಆದರೂ ಅವು ಎಲ್ಲರಿಗೂ ತಿಳಿದಿರುವುದು ಅವಶ್ಯವೆಂದು ತೋರುವುದರಿಂದ ಇದರಡಿಯಲ್ಲಿ ಕೊಡುತ್ತೇವೆ.

೧) ದೇವ್ಯಪರಾಧಕ್ಷಮಾಪನಸ್ತೋತ್ರವೆಂಬುದೊಂದು ಸ್ತೋತ್ರವು ವಿದ್ಯಾರಣ್ಯರಿಂದ ರಚಿತವಾದುದೆಂದು ಎಲ್ಲರೂ ತಿಳಿಯುತ್ತಾರೆ. ಅದನ್ನವರು ಶೃಂಗೇರಿ ಪೀಠವನ್ನು ಆರೋಹಣ ಮಾಡಿದ ಬಳಿಕ ರಚಿಸಿರಲಿಕ್ಕೆ ಬೇಕೆಂದು ತೋರುತ್ತದೆ. ಯಾಕಂದರೆ, ಅದರ ಕಡೆಯ ಪದ್ಯದಲ್ಲಿ ಶಂಕರಾಚಾರ್ಯರ ಮುದ್ರಿಕೆಯಿದೆ. ಪೀಠಸ್ಥರಾದ ಯತಿಗಳೆಲ್ಲರೂ 'ಶಂಕರಾಚಾರ್ಯ' ರೆಂಬ ಪದವಿಯನ್ನು ಧಾರಣ ಮಾಡುವರೆಂಬುದು ಪ್ರಸಿದ್ಧವಾಗಿಯೇ ಇದೆ. ಈ ಸ್ತೋತ್ರದಲ್ಲಿ "ಮಯಾ ಪಂಚಾಶೀತೇರಧಿಕಮಪನೀತೇ ತು ವಯಸಿ" ಎಂದು ಉಲ್ಲೇಖವಿದೆ. ೮೫ಕ್ಕಿಂತ ಹೆಚ್ಚು ವರ್ಷಗಳು ತಮಗಾಗಿದ್ದವೆಂದು ಸ್ವಾಮಿಗಳವರೇ ಘಂಟಾಘೋಷವಾಗಿ ಹೇಳಿದ್ದಾರೆ. ಈ ವಯೋಮಾನವೂ, ನಾವು ಮೇಲೆ ಹೇಳಿದ ಆಶ್ರಮಾನಂತರದ ವಯೋಮಾನವೂ ಚೆನ್ನಾಗಿ ಕೂಡುತ್ತವೆ. ಶಂಕರಾ

ಚಾರ್ಯರು ೩೨ನೆಯ ವರ್ಷದಲ್ಲಿಯೇ ಅವತಾರಸಮಾಪ್ತಿಯನ್ನು ಮಾಡಿರುವರಾದುದ ರಿಂದ ಅವರ ವಯಸ್ಸಿಗೂ ಇದಕ್ಕೂ ಸಂಬಂಧವೇ ಇಲ್ಲ. ಇದಲ್ಲದೆ ಈ ಸ್ತೋತ್ರವು ವಿದ್ಯಾರಣ್ಯರಚಿತವೇ ಎಂಬುದಕ್ಕೆ ಒಂದೆರಡು ಅಂತಃಪ್ರಮಾಣಗಳೂ ಇವೆ. ಅವುಗಳಲ್ಲಿ ಅವರು ಒಂದೆರಡು ಕಡೆಗಳಲ್ಲಿ ತಮ್ಮ ಪೂರ್ವದಾರಿದ್ರ್ಯವನ್ನು ಉಲ್ಲೇಖಿಸಿದ್ದಾರೆ. ಆ ಪ್ರಮಾಣಗಳು ಯಾವವೆಂದರೆ :

ಅ) "ದ್ರವಿಣವಿರಹೇಣ" ಎಂದು ಎರಡನೆಯ ಶ್ಲೋಕದಲ್ಲಿದೆ.

ಬ) 'ನ ವಾ ದತ್ತಂ ದೇವಿ ದ್ರವಿಣಮಪಿ ಭೂಯಸ್ತವ ಮಯಾ |' ಎಂದು ೪ ನೆಯ ಶ್ಲೋಕದಲ್ಲಿದೆ.

ಕ) 'ನಿರಾತಂಕೋ ರಂಕೋ ವಿಹರತಿ ಚಿರಂ ಕೋಟಿಕನಕೈಃ' ಎಂದು ೬ನೆಯ ಶ್ಲೋಕದಲ್ಲಿದೆ.

ಈ ಉಲ್ಲೇಖಗಳನ್ನು ನೋಡಿದರೆ ಈ ಸ್ತೋತ್ರವು ವಿದ್ಯಾರಣ್ಯರದೇ ಎಂಬ ವಿಷಯದಲ್ಲಿ ಸಂಶಯವೇ ಉಳಿಯುವುದಿಲ್ಲ.

೨) ಶಿವಾಪರಾಧಕ್ಷಮಾಪನಸ್ತೋತ್ರವೆಂಬ ಮತ್ತೊಂದು ಸ್ತೋತ್ರವು ಮೇಲಿನದರಂತೆಯೇ ಶಂಕರಾಚಾರ್ಯರ ಮುದ್ರಾಂಕಿತವಾಗಿದ್ದು, ಅದನ್ನೂ ವಿದ್ಯಾರಣ್ಯರೇ ರಚಿಸಿದರೆಂಬುದಕ್ಕೆ ಅಂತಃಪ್ರಮಾಣಗಳೂ ಹೇರಳವಾಗಿವೆ. ಇದರಲ್ಲಿ ಆತ್ಮವೃತ್ತಕಥನದ ಮುಖಾಂತರವಾಗಿ ಸ್ವಾಮಿಗಳು ಜೀವದಶೆಯನ್ನು ವರ್ಣಿಸಿರುವುದೇನೋ ನಿಜ; ಆದರೆ ನಡುನಡುವೆ ಸ್ವಚರಿತ್ರದೊಳಗಿನ ವಿಶಿಷ್ಟ ಪ್ರಸಂಗಗಳನ್ನೂ ಉಲ್ಲೇಖಿಸಿದ್ದಾರೆ. ಆದುದ ರಿಂದ ಅದು ಆದಿಶಂಕರಾಚಾರ್ಯರದಲ್ಲ; ಅವರ ಪೀಠವನ್ನೇ ಆರೋಹಣ ಮಾಡಿದ ಆತ್ಮಮೋಕ್ಷದರ್ಶಿಯಾದ ಮತ್ತು ಪಶ್ಚಾತ್ತಾಪದಗ್ಧವಾದ ಯಾವದೊಂದು ವ್ಯಕ್ತಿಯು ದಾಗಿರಬೇಕೆಂದು ಸ್ಪಷ್ಟವಾಗುತ್ತದೆ. ಮತ್ತು ಆ ವ್ಯಕ್ತಿಯೆಂದರೆ ವಿದ್ಯಾರಣ್ಯರೇ ಎಂಬು ವದಕ್ಕೆ ಕೆಳಗಿನ ಉಲ್ಲೇಖಗಳು ಪ್ರಮಾಣವಾಗಿವೆ:

ಅ) ಪ್ರೌಢೋಽಹಂ ಯೌವನಸ್ಥೋ ವಿಷಯವಿಷಧರೈಃ
ಪಂಚಭಿರ್ಮರ್ಮಸಂಧೌ |
ದಷ್ಟೋ ನಷ್ಟೋ ವಿವೇಕಃ ಸುತಧನಯುವತಿಸ್ವಾದುಸೌಖ್ಯಂ ನಿಷಣ್ಣಃ ||
ಶೈವೀಚಿಂತಾವಿಹೀನಂ ಮಮ ಹೃದಯಮಹೋ
ಮಾನಗರ್ವಾಧಿರೂಢಮ್ |
ಕ್ಷಂತವ್ಯೋಮೇಽಪರಾಧಃ ಶಿವ ಶಿವ ಶಿವ ಭೋ ಶ್ರೀಮಹಾದೇವ
ಶಂಭೋ ||

ಬ) ವಾರ್ಧಕ್ಯೇ ಚೇಂದ್ರಿಯಾಣಾಂ ವಿನತಗತಮತಿಃ |

ಕ) ಕಿಂ ವಾಽನೇನ ಧನೇನ ವಾಜಿಕರಿಭಿಃ ಪ್ರಾಪ್ತೇನ ರಾಜ್ಯೇನ ಕಿಮ್ |
ಕಿಂ ವಾ ಪುತ್ರಕುಲತ್ರಮಿತ್ರಪಶುಭಿರ್ದೇಹೇನ ಗೇಹೇನ ಕಿಮ್ ||

ಈ ಉಲ್ಲೇಖಗಳು ಆದಿಶಂಕರಾಚಾರ್ಯರಿಗೆ ಸ್ವಲ್ಪವೂ ಸಂಬಂಧಿಸದೆ, ವಿದ್ಯಾರಣ್ಯರಿಗೆ ಸಂಪೂರ್ಣವಾಗಿ ಸಂಬಂಧಿಸುತ್ತವೆಂಬುದು ಸ್ಪಷ್ಟವಿದೆ. (ಬ) ಮತ್ತು (ಕ) ಪ್ರಮಾಣಗಳಲ್ಲಂತೂ ವಿದ್ಯಾರಣ್ಯರ ಉತ್ತರವಯಸ್ಸಿನೊಳಗಿನ ಸಾಕ್ಷಾತ್ಪ್ರತಿಬಿಂಬವು ಗೋಚರವಾಗುತ್ತದೆ. ಇದನ್ನು ನೋಡಿದರೆ ಪೂರ್ವವಯಸ್ಸಿನಲ್ಲಿ ಇವರಿಗೆ ಸುತಧನ ಯುವತಿಯರ ಸ್ವಾದುಸೌಖ್ಯವು ದೊರೆತಿತ್ತೆಂದು ತೋರುತ್ತದೆ. ಇದರ ಹೊರತು ವಿದ್ಯಾರಣ್ಯರ ಪ್ರಾಪಂಚಿಕ ಗೃಹಸೌಖ್ಯದ ವಿಷಯವಾಗಿ ಬೇರೆ ಎಲ್ಲಿಯೂ ಉಲ್ಲೇಖವಿದ್ದಂತೆ ಕಾಣುವುದಿಲ್ಲ.

ಸಾಧ್ಯವಿದ್ದ ಮಟ್ಟಿಗೆ ಸಾಧಾರಣವಾಗಿ ಸಮಂಜಸವೆನಿಸುವಂತೆ ಸ್ವಾಮಿಗಳವರ ಕಾಲವನ್ನು ಮೇಲೆ ಉಲ್ಲೇಖಿಸಿದೆ. ಆದರೆ ದೇಶಾಭಿಮಾನಿಗಳಾದ ಇತಿಹಾಸ ಸಂಶೋಧಕರು ಇತ್ತಕಡೆಗೆ ಹೆಚ್ಚು ಲಕ್ಷ್ಯಗೊಟ್ಟು ವಿಶ್ವಸನೀಯವಾದ ಆಧಾರಗಳಿಂದ ನಿಶ್ಚಿತವಾದ ಅಭಿಪ್ರಾಯವನ್ನು ಹೊರಗೆಡಹುವರೆಂದು ನಂಬಿದ್ದೇವೆ.

———

# ೪. ಅಧ್ಯಯನವೂ ಗುರುಗಳೂ

ಮಾಧವಾಚಾರ್ಯರ ತಂದೆ ತಾಯಿಗಳು ಬಹಳ ಬಡವರಾಗಿದ್ದರು. ಆದುದರಿಂದ ಇವರ ಬಾಲ್ಯವೆಲ್ಲ ದಾರಿದ್ರ್ಯದಲ್ಲಿಯೇ ಕಳೆದು ಹೋಯಿತು. ಆದರೂ ಇವರ ತಂದೆ ತಾಯಿಗಳಾಗಲಿ ಈ ಮೂವರು ಅಣ್ಣತಮ್ಮಂದಿರಾಗಲಿ ತಮ್ಮ ವಿದ್ಯಾವ್ಯಾಸಂಗದಲ್ಲಿ ಸ್ವಲ್ಪಾದರೂ ಅಲಕ್ಷ್ಯ ಮಾಡಲಿಲ್ಲ. ದ್ರವ್ಯಾಭಾವವು ದೊಡ್ಡವರ ಉನ್ನತಿಯ ಮಾರ್ಗದಲ್ಲಿ ಅಡ್ಡಬರುವದಿಲ್ಲ. ಇಷ್ಟೇ ಅಲ್ಲ; ಸಂಕಟಗಳಿಂದಲೇ ಅಂತಹರ ಸತ್ವವು ಒರೆಗೆ ಬಿದ್ದು ಹೆಚ್ಚಾಗಿ ಪ್ರಕಾಶಿತವಾಗುತ್ತದೆ. ಚಕಮುಕಿಯ ಕಲ್ಲಿನೊಳಗಿನ ಬೆಂಕಿಯು ಹೊರಬೀಳಬೇಕಾದರೆ ಲೋಹದ ಆಘಾತವು ಆವಶ್ಯಕವಷ್ಟೇ; ಅದರಂತೆಯೇ ಪ್ರತಿಕೂಲ ಪರಿಸ್ಥಿತಿಯೊಡನೆ ಹೋರಾಡುವುದರಿಂದಲೇ ಮಹಾತ್ಮರ ಉಜ್ವಲವಾದ ತೇಜಸ್ಸು ಹೊರ ಬೀಳುತ್ತದೆ.

ಮಾಧವ, ಸಾಯಣ ಮತ್ತು ಸೋಮನಾಥ ಈ ಮೂವರು ಸಹೋದರರು ಮನ ಮುಟ್ಟಿ ವಿದ್ಯಾವ್ಯಾಸಂಗ ಮಾಡಿ ಬೇಗನೆ ವೇದಶಾಸ್ತ್ರಾದಿ ಸರ್ವ ವಿದ್ಯೆಯಲ್ಲಿ ಪಾರಂಗತ ರಾದರು. ತಾವು ಮಾತ್ರ ಚತುಃಶಾಸ್ತ್ರ ಪಾರೀಣರಾದರೆ ತಮ್ಮ ಇತಿಕರ್ತವ್ಯವಾಯಿ ತೆಂದು ಇವರು ತಿಳಿಯಲಿಲ್ಲ. ತನ್ನಲ್ಲಿದ್ದ ವಿದ್ಯೆಯ ಲಾಭವು ಪರರಿಗೆ ಆಗದಿದ್ದರೆ ಆ ವಿದ್ಯೆಯಿಂದಾಗತಕ್ಕಷ್ಟು ಫಲವಾದಂತಾಗುವುದಿಲ್ಲ. ಆದುದರಿಂದಲೇ ಇವರು ತಾವು ವಿದ್ವಾಂಸರಾದ ಕೂಡಲೇ ವೇದಾಂತದಂತಹ ಗಹನವಾದ ವಿಷಯದ ಮೇಲೆ ಗ್ರಂಥ ಗಳನ್ನು ಬರೆಯಹತ್ತಿದರು. ಈ ತ್ರಿವರ್ಗದ ಕೃತಿಗಳು ಒಂದೇ ಸಮನಾಗಿರುವುದರಿಂದ ಅವುಗಳೊಳಗಿನ ತಾರತಮ್ಯಭಾವವನ್ನು ಕಂಡುಹಿಡಿಯುವದು ಪಂಡಿತರಿಗೆ ಕೂಡ ಅಸಾಧ್ಯವೆನಿಸುತ್ತದೆ. ವೈದಿಕ ಗ್ರಂಥಗಳ ಮೇಲೆ ಇವರು ಬರೆದ ಪ್ರಚಂಡವಾದ ಭಾಷ್ಯ ಗಳನ್ನು ನೋಡಿದರೆ ಮನಸ್ಸು ಆಶ್ಚರ್ಯಚಕಿತವಾಗುತ್ತದೆ. ಇದಲ್ಲದೆ ನ್ಯಾಯ, ಮೀಮಾಂಸೆ, ವ್ಯಾಕರಣ, ಜ್ಯೋತಿಷ, ಧರ್ಮಶಾಸ್ತ್ರ ಮೊದಲಾದ ವಿಷಯಗಳ ಮೇಲೆ ಇವರು ಸ್ವಧರ್ಮಪೋಷಕವಾದ ಪ್ರಮಾಣಭೂತ ಗ್ರಂಥಗಳನ್ನು ರಚಿಸಿದ್ದಾರೆ. ಈ ಮೂವರು ಬಂಧುಗಳಲ್ಲಿ ಮಾಧವ ಮತ್ತು ಸಾಯಣ ಇವರಿಬ್ಬರ ಹೆಸರಿಗೆ 'ಆಚಾರ್ಯ' ಎಂಬ ಸನ್ಮಾನವಾಚಕವಾದ ಪದವನ್ನು ಜೋಡಿಸುತ್ತಾರೆ.

ಇಷ್ಟು ವಿದ್ಯಾಸಂಪಾದನೆಯನ್ನು ಮಾಡಿದರೂ, ಮಾಧವಾಚಾರ್ಯರು ದಾರಿ ದ್ರ್ಯದ ಮೂಲಕವಾದ ಕಷ್ಟಗಳನ್ನು ಬಹಳವಾಗಿ ಅನುಭವಿಸಿದರು. ಇಂತಹ ಬಡತನ ದಲ್ಲಿ ಕೂಡ ಅವರ ಮನಸ್ಸಿನಲ್ಲಿ ಉಚ್ಚವಾದ ಆಕಾಂಕ್ಷೆಗಳು ಉದ್ಭವಿಸಿದವು. ಮಾಧವಾ ಚಾರ್ಯರಂತಹ ಘನವಿದ್ವಾಂಸರಲ್ಲಿ ಮಹತ್ವಾಕಾಂಕ್ಷೆಗಳು ಹುಟ್ಟದೆ ಇರುವದುಂಟೇ? ತಾವು ಬಡತನದ ದುಃಖವನ್ನು ಅನುಭವಿಸಿದ್ದ ಮೂಲಕ, ದಾರಿದ್ರ್ಯದಿಂದ ಪೀಡಿತವಾದ

ವೇದವು ಎಂದೂ ತಲೆಯೆತ್ತಲಾರದೆಂದು ಇವರು ಮನಗಂಡರು. ಆದುದರಿಂದಲೇ ಹಂಪೀ ಕ್ಷೇತ್ರದಲ್ಲಿರುವ ಕುಲಸ್ವಾಮಿನಿಯಾದ ಶ್ರೀಭುವನೇಶ್ವರಿಯ ದೇವಸ್ಥಾನದಲ್ಲಿ ಹನ್ನೆರಡು ವರ್ಷಗಳವರೆಗೆ ಗಾಯತ್ರೀಪುನಶ್ಚರಣಾದಿ ಘೋರ ತಪಶ್ಚರ್ಯವನ್ನು ಮಾಡಿದರು. ಆಚಾರ್ಯರ ದೃಢನಿಶ್ಚಯವನ್ನೂ, ಕಠಿಣವಾದ ತಪಸ್ಸನ್ನೂ ನೋಡಿ ಶ್ರೀ ಭುವನೇಶ್ವರಿಯು ಪ್ರಸನ್ನಳಾಗಿ "ನಿನಗೆ ಈ ಜನ್ಮದಲ್ಲಿ ದ್ರವ್ಯವು ಸಿಕ್ಕುವ ಸಂಭವವಿಲ್ಲ; ಆದರೆ ನೀನು ಪರರಿಗೆ ವರವನ್ನಿತ್ತರೆ ಅವರು ಭಾಗ್ಯಶಾಲಿಗಳಾಗಲಿ" ಎಂದು ವರವನ್ನು ಕೊಟ್ಟಳು. ಇದನ್ನು ಕೇಳಿ ಆಚಾರ್ಯರು ಖಿನ್ನರಾದರು. ಆದರೂ ಇದರಿಂದ ಇವರು ಎದೆಗುಂದಿದವರಾಗಲಿಲ್ಲ; ಮತ್ತು ಮನಸ್ಸಿನೊಳಗಿನ ಆಕಾಂಕ್ಷೆಗಳನ್ನೂ ಬಿಡಲಿಲ್ಲ. ಪರಮಾತ್ಮನು ಮನುಷ್ಯನನ್ನು ಪರೀಕ್ಷಿಸುವುದಕ್ಕಾಗಿ ಅವನ ಮೇಲೆ ಸಂಕಟಗಳನ್ನು ಒದಗಿಸುತ್ತಾನೆಂಬ ತತ್ವವನ್ನನುಸರಿಸಿ ಕೂಡಲೇ ಇವರು ವಿರಕ್ತಮನಸ್ಕರಾಗಿ ವಿದ್ಯಾವ್ಯಾಸಂಗದಲ್ಲಿಯೇ ಹೆಚ್ಚಾಗಿ ಲೀನರಾದರು.

ಹೀಗಿರುವಾಗ ಇವರ ಚಿಕ್ಕ ತಮ್ಮಂದಿರಾದ ಸೋಮನಾಥರೆಂಬವರು ಶೃಂಗೇರಿಯ ಶ್ರೀ ವಿದ್ಯಾತೀರ್ಥ ಸ್ವಾಮಿಗಳಿಂದ ಸನ್ಯಾಸ ದೀಕ್ಷೆಯನ್ನು ತೆಗೆದುಕೊಂಡರೆಂಬ ಸುದ್ದಿಯು ಇವರಿಗೆ ತಿಳಿಯಿತು. ಈಗ ಸೋಮನಾಥರ ವಯಸ್ಸು ಚಿಕ್ಕದಿತ್ತು. ಅವರ ವಿವಾಹಾದಿಗಳಿನ್ನೂ ಆಗಿದ್ದಿಲ್ಲ. ಇಂತಹ ಚಿಕ್ಕವನಿಗೆ ವಿದ್ಯಾತೀರ್ಥರು ಸನ್ಯಾಸ ದೀಕ್ಷೆಯನ್ನು ಕೊಟ್ಟದ್ದು ಮಾಧವಾಚಾರ್ಯರಿಗೆ ಸರಿದೋರಲಿಲ್ಲ. ಆದುದರಿಂದ ಅವರು ಶೃಂಗೇರಿಗೆ ಹೋಗಿ ಸೋಮನಾಥನು ವೇದಾರ್ಥವನ್ನು ಚೆನ್ನಾಗಿ ಅರಿತಿಲ್ಲವೆಂತಲೂ, ಅವನು ಸನ್ಯಾಸ ದೀಕ್ಷೆಗೆ ಯೋಗ್ಯನಿಲ್ಲವೆಂತಲೂ ವಿದ್ಯಾತೀರ್ಥರೊಡನೆ ವಾದಿಸಿದರು. ಅದೇ ದಿವಸ ರಾತ್ರಿ ಇವರ ಕುಲದೇವತೆಯು ಸ್ವಪ್ನದಲ್ಲಿ ಪ್ರತ್ಯಕ್ಷಳಾಗಿ ಇವರ ಗರ್ವವನ್ನು ಭೇದಿಸಿ, "ಸೋಮನಾಥನಂತೆಯೇ ನೀನೂ ಸನ್ಯಾಸ ದೀಕ್ಷೆಯನ್ನು ತೆಗೆದುಕೋ" ಎಂದು ಉಪದೇಶಿಸಿದಳು. ಮರುದಿವಸ ವಿದ್ಯಾತೀರ್ಥರಿಗೆ ಜಯಪತ್ರವನ್ನು ಕೊಟ್ಟು ಕ್ಷಮೆಯನ್ನು ಬೇಡಿಕೊಂಡು ಅವರಿಂದಲೇ ಸನ್ಯಾಸ ದೀಕ್ಷೆಯನ್ನು ತೆಗೆದುಕೊಂಡರು.

ಇಲ್ಲಿಂದ ಮುಂದೆ ಇವರು ವಿದ್ಯಾರಣ್ಯರೆಂಬ ಅನುರೂಪವಾದ ಹೆಸರನ್ನು ಧಾರಣ ಮಾಡಿದರು. ಎರಡು ವರ್ಷಗಳು ಕಳೆದ ಬಳಿಕ ವಿದ್ಯಾತೀರ್ಥ ಗುರುಗಳು ಸಮಾಧಿಸ್ಥರಾದರು. ಇದೇ ಸಂಧಿಯಲ್ಲಿ ಆನೆಗೊಂದಿಯಲ್ಲಿ ರಾಜ್ಯಕ್ರಾಂತಿಯುಂಟಾಗಿತ್ತು. ಈ ವರ್ತಮಾನವನ್ನು ಕೇಳಿದ ಕೂಡಲೇ ಮಾಧವಾಚಾರ್ಯರು ಶೃಂಗೇರಿಯಿಂದ ವಿಜಯನಗರಕ್ಕೆ ವಾಯುವೇಗದಿಂದ ಹೊರಟು ಹೋದರು. ವಿದ್ಯಾರಣ್ಯರಂತಹ ತೇಜಸ್ವಿಗಳಾದ ಪುರುಷರು ಇಂತಹ ರಾಷ್ಟ್ರೋಪಪ್ಲವದ ಸಂದರ್ಭದಲ್ಲಿ ಸುಮ್ಮನೆ ಕೂಡ್ರಬಹುದೇ? ಇವರ ತಮ್ಮಂದಿರಾದ ಸೋಮನಾಥರು ಭಾರತೀತೀರ್ಥರೆಂಬ ಹೆಸರಿನಿಂದ ಪೀಠಾಧಿಷ್ಠಿತರಾಗಿ ೪೭ ವರ್ಷಗಳ ವರೆಗೆ ಶಾರದಾಂಬೆಯ ಸೇವೆಯನ್ನು ಮಾಡಿ ಶಕೆ ೧೩೦೨ ರಲ್ಲಿ ಅಂದರೆ ಕ್ರಿ. ಶ. ೧೩೮೦ ರಲ್ಲಿ ಸಮಾಧಿಸ್ಥರಾದರು. ಅವರ ತರುವಾಯ ಶ್ರೀ ವಿದ್ಯಾ

[illegible] ಸ್ವಾಮಿಗಳಿಗೆ ಪೀಠಾಧಿಕಾರವು ಪ್ರಾಪ್ತವಾಯಿತು. ಚಿಕ್ಕ ತಮ್ಮನು ಪೀಠಾಧಿಷ್ಠಿತರಾಗಿರುವಾಗ ಶ್ರೀ ವಿದ್ಯಾರಣ್ಯರು ನೂತನ ಸಾಮ್ರಾಜ್ಯದ ಪ್ರಾಣಪ್ರತಿಷ್ಠೆಯನ್ನು ಮಾಡಿ ಸರ್ವ ಅರಾಜಕತೆಯನ್ನೂ, ಅದರಿಂದುಂಟಾದ ವಿಪತ್ತುಗಳನ್ನೂ ನಾಶಗೊಳಿಸಿ ಅಖಂಡವಾದ ಕೀರ್ತಿಯನ್ನು ಸಂಪಾದಿಸಿದರು. ಈಶ್ವರ ಕೃಪೆಯೆಂಬ ಅನುಕೂಲವಾದ ಗಾಳಿಯೂ, ಶ್ರೀ ವಿದ್ಯಾರಣ್ಯರಂತಹ ಕುಶಲಕರ್ಣಧಾರರೂ ಇದ್ದದರಿಂದ ಆ ರಾಜ್ಯ ನೌಕೆಯು ನಾನಾ ತರದ ವಿಪತ್ತುಗಳಿಗೂ ಹೆದರದೆ ಸುರಕ್ಷಿತವಾಗಿ ಸಂಚಾರ ಮಾಡ ಹತ್ತಿತು.

ಈ ಮೂವರು ಬಂಧುಗಳು ವಿದ್ವಾಂಸರಾಗಿದ್ದರೆಂದು ಹಿಂದೆ ಹೇಳಿದೆಯಷ್ಟೇ? ಗ್ರಂಥರಚನಾ ವಿಷಯದಲ್ಲಿ ಸಾಯಣ-ಮಾಧವರಷ್ಟು ಸೋಮನಾಥರ ಪ್ರಸಿದ್ಧಿಯಿಲ್ಲ. ಯಾಕೆಂದರೆ ಇವರು ಅಲ್ಪವಯಸ್ಸಿನಲ್ಲಿಯೇ ಸನ್ಯಾಸವನ್ನು ಅಂಗೀಕಾರ ಮಾಡಿ ಶೃಂಗೇರಿಯಲ್ಲಿ ವಿದ್ಯಾತೀರ್ಥ ಗುರುಗಳ ಸೇವೆಯಲ್ಲಿಯೂ, ಭಾರತೀತೀರ್ಥರೆಂಬ ಹೆಸರಿನಿಂದ ಪೀಠಾಧಿಷ್ಠಿತರಾಗಿ ಚಂದ್ರಮೌಲೀಶ್ವರ ಮತ್ತು ಶಾರದಾಂಬೆಯವರ ಪರಿಚರ್ಯೆಯಲ್ಲಿಯೂ ಕಾಲವನ್ನು ಕಳೆದರು. ಇವರಾದರೂ ಒಳ್ಳೇ ವಿದ್ವಾಂಸರೂ ಗ್ರಂಥಕರ್ತರೂ ಆಗಿದ್ದರು. ಮಾಧವಾಚಾರ್ಯರಿಗೆ ಗ್ರಂಥ ಬರೆಯುವ ವಿಷಯದಲ್ಲಿ ಸಾಯಣಾಚಾರ್ಯರು ಸಹಾಯಕರಾಗಿದ್ದರು; ಅಥವಾ ಅವರಿಬ್ಬರೂ ಕೂಡಿಯೇ ಗ್ರಂಥಗಳನ್ನು ಬರೆಯುತ್ತಿದ್ದರೆಂದೂ ಹೇಳಬಹುದು.

ಈ ಮೊದಲು ಹೇಳಿದಂತೆ ಗಹನವಾದ ವಿಷಯಗಳ ಮೇಲೆ ಮಾಧವಾಚಾರ್ಯರು ಬರೆದಿರುವ ಗ್ರಂಥರಾಶಿಯನ್ನು ನೋಡಿದರೆ ಅವರ ಅಗಾಧವಾದ ವಿದ್ವತ್ತೆಯು ನಿದರ್ಶನಕ್ಕೆ ಬಂದು ಅತ್ಯಂತ ಕೌತುಕವಾಗುತ್ತದೆ. ಆದುದರಿಂದ ಈ ಪ್ರಕಾರ ಅವರ ಗ್ರಂಥಗಳಲ್ಲಿ ಕಂಡುಬರುವ ವಿವಿಧ ವಿದ್ಯಾಕೋವಿದತ್ವವು ಅವರಿಗೆ ಹೇಗೆ ಪ್ರಾಪ್ತವಾಯಿತು? ಎಂಬ ಪ್ರಶ್ನೆಯು ಜಿಜ್ಞಾಸುವಿನಲ್ಲಿ ಸ್ವಾಭಾವಿಕವಾಗಿಯೇ ಹುಟ್ಟುವುದು. ಅವರ ಗ್ರಂಥಗಳ ಪ್ರಸ್ತಾವನೆಯನ್ನು ನೋಡಿದರೆ ಈ ಪ್ರಶ್ನೆಯ ಉತ್ತರವು ಸಿಕ್ಕುವದು. ಅವರು ತಮ್ಮ ಬೇರೆ ಬೇರೆ ಗ್ರಂಥಗಳಲ್ಲಿ ಬೇರೆ ಬೇರೆ ಗುರುಗಳಿಗೆ ನಮನ ಮಾಡಿ ಕೃತಜ್ಞತೆಯನ್ನು ವ್ಯಕ್ತಗೊಳಿಸಿದ್ದಾರೆ. ವೈದಿಕ ಗ್ರಂಥಗಳಲ್ಲಿ ಅವರು ಬಹುತರವಾಗಿ ವಿದ್ಯಾತೀರ್ಥ ಗುರುಗಳನ್ನು ವಂದಿಸಿದ್ದಾರೆ. ಅವರ ಪ್ರಸಿದ್ಧ ವೇದಾಂತ ಗ್ರಂಥವಾದ ಪಂಚದಶಿಯಲ್ಲಿ ತಮ್ಮ ಪ್ರಸಿದ್ಧ ವೇದಾಂತಗುರುಗಳಾದ ಶಂಕರಾನಂದ ಯತಿಗಳಿಗೆ ನಮಸ್ಕಾರ ಮಾಡಿದ್ದಾರೆ. ಜೈಮಿನೀಯನ್ಯಾಯಮಾಲಾವಿಸ್ತರದಲ್ಲಿ ತಮ್ಮ ಮುಖ್ಯ ಗುರುಗಳಾದ ವಿದ್ಯಾತೀರ್ಥರನ್ನು ಅಭಿವಾದಿಸಿ, ವೈಯಾಸಿಕ ನ್ಯಾಯಮಾಲಾ ಪ್ರಣೇತೃಗಳಾದ ಭಾರತೀತೀರ್ಥರ ಕೃಪೆಯನ್ನು ಕೃತಜ್ಞತಾಪೂರ್ವಕವಾಗಿ ಹೀಗೆ ಸ್ಮರಿಸಿದ್ದಾರೆ–

ಸ ವಂದ್ಯಾದ್ಭಾರತೀತೀರ್ಥಯತೀಂದ್ರಚತುರಾನನಾತ್ ।
ಕೃಪಾಮವ್ಯಾಹತಾಂ ಲಬ್ಧ್ವಾ ಪರಾರ್ಥಪ್ರತಿಮೋಽಭವತ್ ॥

ಮಾಧವಾಚಾರ್ಯರು ಜನ್ಮತಃ ಕುಶಾಗ್ರಬುದ್ಧಿಯವರು; ಅದರಲ್ಲಿಯೂ ಶ್ರೀ ಭಾರತೀತೀರ್ಥ, ಶ್ರೀ ಶಂಕರಾನಂದ, ಶ್ರೀ ವಿದ್ಯಾತೀರ್ಥರಂತಹ ಬ್ರಹ್ಮ-ವಿಷ್ಣು-ಮಹೇಶ್ವರ ಸಮಾನರಾದ ಗುರುಗಳ ವರಪ್ರಸಾದವು ಅವರಿಗೆ ದೊರೆಯಿತು. ಅಂದಮೇಲೆ ಕೇಳುವದೇನು? ಅದ್ಭುತವಾದ ಗ್ರಂಥಗಳನ್ನು ರಚಿಸಿ ಗುರುಗಳಿಗಿಂತಲೂ ಅಧಿಕವಾದ ಕೀರ್ತಿಯನ್ನು ಸಂಪಾದಿಸಿದರು.

ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ।
ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ॥

ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಮ್ ।
ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೈಹಿಕಮ್ ॥

ಎಂಬುದಾಗಿ ಭಗವಂತನು ಹೇಳಿರುವಂತಹ ಯೋಗಭ್ರಷ್ಟರ ಮಾಲಿಕೆಯಲ್ಲಿ ಶ್ರೀ ವಿದ್ಯಾರಣ್ಯರು ಬರುತ್ತಾರೆ. ಪೂರ್ವಜನ್ಮದ ಪುಣ್ಯವು ಇಹಲೋಕದಲ್ಲಿ ಫಲಿತವಾಗುವುದರಿಂದ ಅವರು ಹುಟ್ಟುವಾಗಲೇ ಅಷ್ಟೊಂದು ಪ್ರತಿಭಾಶಾಲಿಗಳಾಗಿದ್ದುದು ಆಶ್ಚರ್ಯದ ಮಾತಲ್ಲ!

ವಿದ್ಯಾರಣ್ಯರ ಚರಿತ್ರೆಯಲ್ಲಿ ಅವರ ಗುರುಗಳ ಸಂಬಂಧದ ಸಂಗತಿಯನ್ನು ಬರೆಯುವದೆಂದರೆ ಸ್ವಲ್ಪ ಮಟ್ಟಿಗೆ ವಿಷಯಾಂತರವಾದಂತೆ ತೋರಬಹುದು. ಆದರೆ ವಿದ್ಯಾರಣ್ಯರಂತಹ ಅದ್ವಿತೀಯ ವಿದ್ವಾಂಸರ ಗುರುಗಳ ಪರಿಚಯವನ್ನು ಮಾಡಿಕೊಳ್ಳುವದೆಂದರೆ ಕೇವಲ ಅಸಂಬದ್ಧ ಪ್ರಲಾಪವಲ್ಲ; ಮತ್ತು ವಿಸ್ಮೃತಿಯ ಜಠರದಲ್ಲಿ ಅಡಗಿಹೋದ ವಿದ್ಯಾವೈಭವದ ಮತ್ತು ಧರ್ಮೋನ್ನತಿಯ ವೃತ್ತಾಂತವನ್ನು ದೇಶಬಾಂಧವರ ಮುಂದೆ ಇಡುವದರಿಂದ ಅವರ ಅಭಿಮಾನವು ಜಾಗೃತವಾಗಿ ಉತ್ಸಾಹವು ಬೆಳೆಯುವುದು. ಆದುದರಿಂದ ಈ ಪ್ರಕರಣದಲ್ಲಿ ಆ ಗುರುತ್ರಯದ ವಿಷಯಕ್ಕೆ ತಿಳಿದ ಕೆಲವು ಅಂಶಗಳನ್ನು ಬರೆಯುತ್ತೇವೆ.

ಈ ಕಾಲದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಮುಸಲ್ಮಾನರ ಅಭಿಯೋಗಗಳಿಂದ ಎಲ್ಲ ಕಡೆಯಲ್ಲಿಯೂ ಕೋಲಾಹಲವು ತುಂಬಿಹೋಗಿತ್ತು. ಆದರೆ ದಕ್ಷಿಣ ಭಾರತದಲ್ಲಿ ಇದೇ ಸಮಯದಲ್ಲಿ ವಿದ್ವಾಂಸರೂ, ತಪಸ್ವಿಗಳೂ, ಪ್ರಭಾವಶಾಲಿಗಳೂ, ತತ್ವಜ್ಞಾನಿಗಳೂ, ಉಪದೇಶಕರೂ, ಗ್ರಂಥಕರ್ತರೂ ಉದಯಹೊಂದಿ ಮೆರೆಯುತ್ತಿದ್ದರು. ಪ್ರಭುಲೀಲೆಯು ಈ ವೈಚಿತ್ರ್ಯವನ್ನು ನೋಡಿ ಸಾನಂದ ಕೌತುಕವುಂಟಾಗುವುದು.

ವಿದ್ಯಾತೀರ್ಥ ಸರಸ್ವತಿ ಎಂಬ ಮಹಾಜ್ಞಾನಿಗಳಾದ ಯತಿಗಳು ಕಾಶಿಯೊಳಗಿನ ಶ್ರೀ ಶಂಕರಾಚಾರ್ಯರ ಕಾಮಕೋಟಿ ಎಂಬ ಪೀಠದ ಮೇಲೆ ಶಕೆ ೧೨೧೮ ರಿಂದ ಶಕೆ ೧೨೦೬ರ ವರೆಗೆ (ಕ್ರಿ. ಶ. ೧೨೯೭-೧೩೮೮ ಅಂದರೆ ೮೮ ವರ್ಷಗಳ ವರೆಗೆ) ವಿರಾಜಮಾನರಾಗಿದ್ದರು. ಅವರು ತಮ್ಮ ಆಯುಷ್ಯವನ್ನೆಲ್ಲ ವಿದ್ಯಾದಾನದಲ್ಲಿಯೂ ಧರ್ಮ ಪ್ರತಿಷ್ಠಾಪನೆಯಲ್ಲಿಯೂ ಕಳೆದರು. ಅವರಲ್ಲಿಯೂ ಅವರ ಶಿಷ್ಯರಲ್ಲಿಯೂ ಅನೇಕ ಶಿಷ್ಯ-

ಸ್ವತಿಸ್ಥರು ಸಿದ್ಧರಾಗಿ ಜಗದ್ಗುರು ಪೀಠದ ಪವಿತ್ರಕಾರ್ಯವನ್ನು ಭಕ್ತಿಯಿಂದಲೂ ದಕ್ಷತೆಯಿಂದಲೂ ಸಾಗಿಸಿದರು. ಆ ಕಾರಣದಿಂದಲೇ, ರಾಜ್ಯೋಪಪ್ಲವಾದಿ ದುರ್ಧರ ಸಂಕಟಗಳು ದೇಶದಲ್ಲಿ ಪ್ರಾಪ್ತವಾಗಿ ಪ್ರಕ್ಷುಬ್ಧವಾದ ದುರ್ಮತಸಾಗರದ ಭಯಂಕರವಾದ ತೆರೆಗಳು ಸನಾತನಧರ್ಮ ದುರ್ಗದ ಮೇಲೆ ಅಪ್ಪಳಿಸಹತ್ತಿದರೂ ರಾಷ್ಟ್ರದ ಸತ್ವವು ಸ್ಥಿರವಾಗಿ ಉಳಿದದ್ದಲ್ಲದೆ ಆ ದುರ್ಗಕ್ಕೆ ಯತ್ಕಿಂಚಿತ್ತಾದರೂ ಅಪಾಯವು ತಟ್ಟಲಿಲ್ಲ. ಇರಲಿ ಸಾಯಣಮಾಧವರ ಗುರುತ್ರಯದಲ್ಲಿ ಮುಖ್ಯರಾದ 'ವಿದ್ಯಾತೀರ್ಥ'ರ ವಿಷಯದಲ್ಲಿ ಯಾವ ಯಾವ ಅಂಶಗಳು ತಿಳಿಯುತ್ತವೆಂಬದನ್ನು ಪ್ರಕೃತಕ್ಕೆ ವಿಚಾರಿಸುವಾ.

## ೧. ಶ್ರೀವಿದ್ಯಾತೀರ್ಥರು

ಕಾಮಕೋಟಿ ಪೀಠದಲ್ಲಿ ಅಧಿಷ್ಠಿತರಾದ ಯತಿವರ್ಯರನ್ನು ಸ್ತುತಿಸುವ ಅನೇಕ ಸ್ತೋತ್ರಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ಜಗದ್ಗುರುರತ್ನಮಾಲಾ, ಮತ್ತು ಪುಣ್ಯಶ್ಲೋಕಮಂಜರಿ ಎಂಬ ಎರಡು ಸ್ತೋತ್ರಗಳಲ್ಲಿ ಅವರ ಇತಿವೃತ್ತವು ವಿಸ್ತಾರವಾಗಿ ವರ್ಣಿತವಾಗಿದೆ. ಜಗದ್ಗುರು ರತ್ನಮಾಲಾಸ್ತೋತ್ರದ ಟೀಕೆಯಲ್ಲಿ ವಿದ್ಯಾತೀರ್ಥ, ಶಂಕರಾನಂದ, ಭಾರತೀತೀರ್ಥ, ಸಾಯಣ, ಮಾಧವ ಮೊದಲಾದ ಗುರುಶಿಷ್ಯಪ್ರಶಿಷ್ಯರ ವೃತ್ತಾಂತವು ಒಳ್ಳೇ ಶೋಧಕ ದೃಷ್ಟಿಯಿಂದ ಕೊಡಲ್ಪಟ್ಟಿದೆ. ಅದರ ಮೇಲಿಂದ ಸಾಯಣ ಮಾಧವರ ವಿದ್ಯಾಗ್ರಹಣದ ಇತಿಹಾಸವು ವಿಶದವಾಗುವುದಲ್ಲದೆ ತತ್ಸಂಬಂಧದ ಎಷ್ಟೋ ಪ್ರಶ್ನೆಗಳಿಗೆ ಉತ್ತರಗಳೂ ಸಿಕ್ಕುವವು. ರತ್ನಮಾಲಿಕೆಯ ೭೬ನೆಯ ಶ್ಲೋಕದಲ್ಲಿ ಶ್ರೀ ವಿದ್ಯಾತೀರ್ಥ ಯತೀಂದ್ರರ ವಿಷಯದಲ್ಲಿ ಹೇಳಿರುವುದೇನೆಂದರೆ—

ಹೃದಿ ಸಾಯಣಮಾಧವೋಪದೇಷ್ಟೄನ್ ।
ಮದಿನಾಂ ವಾದವಿಧೌ ಶ್ರಮಪ್ರದೇಷ್ಟೄನ್ ॥
ನಮತ ಶ್ರುತಿಶೀಲನಾದತಂದ್ರಾನ್ ।
ಯಮಿ ವಿದ್ಯಾಧಿಕತೀರ್ಥದೇಶಿಕೇಂದ್ರಾನ್ ॥

ಅರ್ಥ : ಸಾಯಣಮಾಧವರ ಗುರುಗಳೂ, ಗರ್ವಿಷ್ಠರಾದ ವಾದಿಗಳನ್ನು ಸಮಾಧಾನಗೊಳಿಸುವವರೂ, ಶ್ರುತಿಗಳ ಚಿಂತನದಿಂದ ಅತಂದ್ರಿತರಾದವರೂ ಆದಂತಹ ಮಹಾಗುರುಗಳಾದ ಶ್ರೀ ವಿದ್ಯಾತೀರ್ಥಯತೀಂದ್ರರಿಗೆ ಮನಃಪೂರ್ವಕವಾಗಿ ನಮಸ್ಕಾರ ಮಾಡಿರಿ.

ಈ ಶ್ಲೋಕದ ಟೀಕೆಯಲ್ಲಿಯೂ ಇದರ ಮುಂದಿನ ಶ್ಲೋಕದ ಟೀಕೆಯಲ್ಲಿಯೂ ಎಷ್ಟೋ ಉಪಯುಕ್ತವಾದ ಸಂಗತಿಯು ಸಿಕ್ಕುತ್ತದೆ. ಅದಕ್ಕೆಲ್ಲ ಪುಣ್ಯಶ್ಲೋಕಮಂಜರಿಯೇ ಆಧಾರವಾಗಿದೆ.

ಈ ವಿದ್ಯಾತೀರ್ಥರು ಕಾಮಕೋಟಿ ಪೀಠದ ಐವತ್ತೊಂದನೆಯ ಆಚಾರ್ಯರು. ಇವರ ಬಿರುದಾವಲಿಯು ಬಹಳೇ ದೊಡ್ಡದಾಗಿದೆ. ವಿದ್ಯೇಶ, ವಿದ್ಯಾನಂದ, ಸರ್ವಜ್ಞ,

ವಿಷ್ಣು, ವಿದ್ಯಾಶಂಕರ ಮೊದಲಾದವುಗಳು ಅವರ ಬಿರುದುಗಳು. ಇದೊಂದೇ ಮಾತಿನಿಂದಲೇ ಈ ಯತಿವರ್ಯರ ಮಹತ್ವವು ಗೊತ್ತಾಗುತ್ತದೆ. ಮಾಧವಾಚಾರ್ಯರು ತಮ್ಮ ಸರ್ವದರ್ಶನ ಸಂಗ್ರಹದಲ್ಲಿ ಇವರನ್ನು 'ಸರ್ವಜ್ಞ ವಿಷ್ಣು' ಎಂಬ ಹೆಸರಿನಿಂದ ಸಂಬೋಧಿಸಿ ವಂದಿಸಿದ್ದಾರೆ. ಇವರ ತಂದೆಯ ಹೆಸರು ಶಾರ್ಙಪಾಣಿಯೆಂದೂ, ಪೂರ್ವಾಶ್ರಮದ ಹೆಸರು ಸರ್ವಜ್ಞವಿಷ್ಣುವೆಂದೂ ಪುಣ್ಯಶ್ಲೋಕಮಂಜರಿಯೊಳಗಿನ ಮುಂದಿನ ಶ್ಲೋಕದಿಂದ ಗೊತ್ತಾಗುವದು.

ಬಿಲ್ವಾರಣ್ಯಜಶಾರ್ಙ್ಗಪಾಣಿತನಯಃ ಸರ್ವಜ್ಞವಿಷ್ಣುಃ ಶ್ರಯನ್ |
ಸನ್ನ್ಯಾಸಂ ಗುರುಚಂದ್ರಶೇಖರಮುನೇರಾಸ್ಥಾಯ ಪೀಠೀಂ ಗುರೋಃ ||
ಯೋಗೀಶಸ್ಯ ಚ ಚಕ್ರರಾಜವಸತೇರ್ದೇವ್ಯಾಶ್ಚ ಸಕ್ತೋಽರ್ಚನೇ |
ಶ್ರೀಮನ್ಮಾಧವಬುಕ್ಕಭಾರತಿಯತಿಪ್ರಷ್ಟೈರ್ವರ್ಯಹಿಷ್ಟೈರ್ವೃತಃ ||

ಅರ್ಥ : ಬಿಲ್ವಾರಣ್ಯದಲ್ಲಿ ಹುಟ್ಟಿದವರೂ, ಶಾರ್ಙಪಾಣಿಯ ಮಕ್ಕಳೂ ಆದ ಸರ್ವಜ್ಞವಿಷ್ಣುಗಳು ೫೦ನೆಯ ಆಚಾರ್ಯರಾದ ಮುನಿ ಚಂದ್ರಶೇಖರಸರಸ್ವತಿಗಳಿಂದ ಸನ್ಯಾಸಾಶ್ರಮವನ್ನು ಸ್ವೀಕರಿಸಿ, ಅವರ ತರುವಾಯ ತಾವೇ ವಿದ್ಯಾರಣ್ಯರೆಂಬ ಹೆಸರಿನಿಂದ ಪೀಠಾರೋಹಣಮಾಡಿ ಸಾಯಣ, ಮಾಧವ, ಬುಕ್ಕ, ಭಾರತೀ ಯತಿ ಮೊದಲಾದವರಿಂದ ಪೂಜಿತರಾಗಿ ಶ್ರೀಚಕ್ರಾಧಿಷ್ಠಿತೆಯಾದ ತ್ರಿಪುರಸುಂದರೀದೇವಿಯ ಆರಾಧನೆಯನ್ನು ಮಾಡುತ್ತ ಪೀಠಾಧಿಕಾರವನ್ನು ನಡೆಯಿಸಿದರು.

ಶ್ರೀ ಚಂದ್ರಶೇಖರಸರಸ್ವತಿಗಳು ಇವರಿಗಿಂತ ಮೊದಲಿನ ಆಚಾರ್ಯರಾಗಿದ್ದು ಶ್ರೀ ವಿದ್ಯಾತೀರ್ಥರಿಗೆ ಗುರುಗಳಾಗಿದ್ದರೆಂಬುದು ಗುರುರತ್ನಮಾಲಿಕೆಯ ೭೫ನೇ ಶ್ಲೋಕದಿಂದ ಸಿದ್ಧವಾಗುತ್ತದೆ. "ನ ಪ್ರಭಾತರಲಂ ಜ್ಯೋತಿರುದೇತಿ ವಸುಧಾತಲಾತ್" ಎಂಬಂತೆ ವಿದ್ಯಾತೀರ್ಥರಂತಹರು ಯಾರ ಶಿಷ್ಯರಾಗಿದ್ದರೋ ಅವರೇನು ಸಾಮಾನ್ಯರಾಗಿರಲಿಕ್ಕಿಲ್ಲ ! ಶಿಷ್ಯಾದಿಚ್ಛೇತ್ಪರಾಜಯಂ" ಎಂಬ ಮಾತಾದರೂ ಇಲ್ಲಿ ಪ್ರತ್ಯಯಕ್ಕೆ ಬಂತು. ಮೇಲಿನ ಶ್ಲೋಕವನ್ನು ನೋಡಿದರೆ, ವೀರಬುಕ್ಕನೂ ವಿದ್ಯಾತೀರ್ಥರ ಶಿಷ್ಯಮಾಲಿಕೆಯೊಳಗಿನವನೊಬ್ಬನಾಗಿದ್ದನೆಂಬುದು ಲಕ್ಷ್ಯದಲ್ಲಿಡುವಂತಿದೆ. ವೇದಭಾಷ್ಯಗಳು, ಮೀಮಾಂಸೆಗಳು, ದರ್ಶನಗಳು ಇಂತಹ ವಿಷಯಗಳ ಮೇಲೆ ಗ್ರಂಥಗಳನ್ನು ರಚಿಸುವವರಿಗೆ ಪ್ರೋತ್ಸಾಹವನ್ನು ಕೊಡುವ ರಾಜನು ಭೋಜದೇವನಂತೆ ಸ್ವತಃ ವಿದ್ವಾಂಸನಾಗಿರಲಿಕ್ಕೆ ಬೇಕು.

ಸರ್ವದರ್ಶನಸಂಗ್ರಹದಲ್ಲಿ ಶ್ರೀವಿದ್ಯಾತೀರ್ಥರನ್ನು ನಮಿಸುವಾಗ ಶ್ರೀವಿದ್ಯಾರಣ್ಯರು ಅವರನ್ನು ಹೀಗೆ ಬಣ್ಣಿಸಿದ್ದಾರೆ:

ಪಾರಂಗತಂ ಸಕಲದರ್ಶನಸಾಗರಾಣಾಮ್ |
ಆತ್ಮೋಚಿತಾರ್ಥಚರಿತಾರ್ಥಿತಸರ್ವಲೋಕಮ್ ||
ಶ್ರೀಶಾರ್ಙಪಾಣಿತನಯಂ ನಿಖಿಲಾಗಮಜ್ಞಮ್ |
ಸರ್ವಜ್ಞವಿಷ್ಣುಗುರುಮನ್ವಹಮಾಶ್ರಯೇಽಹಮ್ ||

ಶ್ರೀಮತ್ಸಾಯಣದುಗ್ಧಾಬ್ಧಿಕೌಸ್ತುಭೇನ ಮಹೌಜಸಾ ।
ಕ್ರಿಯತೇ ಮಾಧವಾರ್ಯೇಣ ಸರ್ವದರ್ಶನಸಂಗ್ರಹಃ ॥

ಪೂರ್ವೇಷಾಮತಿದುಸ್ತರಾಣಿ ಸುತರಾಮಾಲೋಕ್ಯ ಶಾಸ್ತ್ರಾಣ್ಯಸೌ ।
ಶ್ರೀಮತ್ಸಾಯಣಮಾಧವಪ್ರಭುರುಪನ್ಯಾಸ್ಯತ್ ಸತಾಂ ಪ್ರೀತಯೇ ॥

ದೂರೋತ್ಸಾರಿತಮತ್ಸರೇಣ ಮನಸಾ ಶೃಣ್ವಂತು ತತ್ಸಜ್ಜನಾಃ ।
ಮಾಲ್ಯಂ ಕಸ್ಯ ವಿಚಿತ್ರಪುಷ್ಪರಚಿತಂ ಪ್ರೀತ್ಯೈ ನ ಸಂಜಾಯತೇ ॥

ಅರ್ಥ: ಎಲ್ಲ ದರ್ಶನಗಳಲ್ಲಿ ನಿಷ್ಣಾತರೂ, ಮೋಕ್ಷರೂಪವಾದ ಪುರುಷಾರ್ಥದ ಮಾರ್ಗವನ್ನು ತೋರಿಸಿ ಜನರನ್ನು ಕೃತಾರ್ಥರನ್ನಾಗಿ ಮಾಡಿದವರೂ ಶಾರ್ಙಪಾಣಿಯ ಮಕ್ಕಳೂ ಆದ ಸರ್ವಜ್ಞ ವಿಷ್ಣುಗುರುಗಳಿಗೆ ಯಾವಾಗಲೂ ನತನಾಗಿದ್ದೇನೆ. ಸಾಯಣ ಕ್ಷೀರಾಬ್ಧಿಗೆ ಕೌಸ್ತುಭಸ್ವರೂಪನೂ ಓಜಃಶಾಲಿಯೂ ಆದ ಮಾಧವಾರ್ಯನು ಸರ್ವದರ್ಶನ ಸಂಗ್ರಹವನ್ನು ರಚಿಸುತ್ತಾನೆ. ವಿವಿಧ ದರ್ಶನವಿಜ್ಞಾನವು ಬಹಳ ಕಠಿಣವಾದುದು. ಆದುದರಿಂದ ಪರೋಪಕಾರಾರ್ಥವಾಗಿ ಇಬ್ಬರೂ ಬಂಧುಗಳು ಈ ದರ್ಶನ ಮಾಲೆಯನ್ನು ರಚಿಸಿದರು. ಸಜ್ಜನರು ಇದನ್ನು ನಿರ್ಮಲತರ ಬುದ್ಧಿಯಿಂದ ಅವಲೋಕಿಸಬೇಕು. ವಿಚಿತ್ರ ಪುಷ್ಪ ರಚನೆಯು ಯಾರ ಮನಸ್ಸಿಗೆ ಬರುವದಿಲ್ಲ? ಅರ್ಥಾತ್ ಎಲ್ಲರ ಮನಸ್ಸಿಗೂ ಬರುತ್ತದೆ.

ಇಲ್ಲಿ ವಿದ್ಯಾತೀರ್ಥರ ಪೂರ್ವಾಶ್ರಮದ ಹೆಸರನ್ನೇ ಶ್ರೀ ವಿದ್ಯಾರಣ್ಯರು ಗ್ರಹಣ ಮಾಡಿದ್ದಾರೆ. ಆದುದರಿಂದ ಅವರು ಆಶ್ರಮಾಂತರ ಮಾಡುವುದಕ್ಕಿಂತ ಪೂರ್ವದಲ್ಲಿಯೇ ಈ ಗ್ರಂಥವು ಸಮಾಪ್ತವಾಗಿರಬಹುದು; ಯಾಕಂದರೆ ಆಶ್ರಮಾಂತರ ಮಾಡಿದ ಬಳಿಕ ಯತಿಗಳನ್ನು ಪೂರ್ವಾಶ್ರಮದ ಹೆಸರಿನಿಂದ ಸಂಬೋಧಿಸುವ ಪದ್ಧತಿಯು ಕಡಿಮೆ. 'ಸಾಯಣದುಗ್ಧಾಬ್ಧಿ' ಎಂಬುದರಿಂದ ಸಾಯಣವೆಂಬುದು ಕುಲನಾಮವಾಗಿರಬೇಕೆಂದು ಕೆಲವರು ಊಹಿಸುತ್ತಾರೆ. ಅವರ ಊಹೆಗೆ ಬಲವಾದ ಆಧಾರಗಳೇನೂ ಇಲ್ಲ. ಆದರೆ ಸಾಯಣರು ಮಾಧವಾಚಾರ್ಯರ ತಮ್ಮಂದಿರೆಂಬ ವಿಷಯಕ್ಕೆ ಮಾತ್ರ ಬಹಳ ಕಡೆಗಳಲ್ಲಿ ಆಧಾರಗಳು ಸಿಕ್ಕುತ್ತವೆ. ಮೇಲಿನ ಶ್ಲೋಕದಲ್ಲಿ ಸಾಯಣ ಎಂಬ ಸ್ಥಳದಲ್ಲಿ ಮಾಯಣ ಎಂದಿದ್ದರೆ ಯಾವ ಸಂದೇಹಕ್ಕೂ ಆಸ್ಪದವೇ ಇರುತ್ತಿದ್ದಿಲ್ಲ. ತಂದೆಯಾದ ಮಾಯಣನಿಗೆ ಕ್ಷೀರಾಬ್ಧಿಯ ಉಪಮೆಯು ಚೆನ್ನಾಗಿ ಶೋಭಿಸುತ್ತಿತ್ತು. ಅಥವಾ ಸಾಯಣ ಎಂಬುದು ವಂಶದ ಮೂಲ ಪುರುಷನ ಹೆಸರಾಗಲಿ, ಪ್ರಸಿದ್ಧ ಪೂರ್ವಜನ ಹೆಸರಾಗಲಿ ಆಗಿರಬಹುದೋ ಏನೋ ! ಸಾರಸ್ವತ ಸೇವೆಯಲ್ಲಿ ಉಭಯ ಬಂಧುಗಳು ಸಮನಾಗಿಯೇ ನಿರತರು; ಅಥವಾ ಸಾಯಣಾಚಾರ್ಯರು ಇನ್ನೂ ಸ್ವಲ್ಪ ಮೇಲಾದವರೇ ಆಗಿದ್ದರೆಂಬುದು ಮೂರನೆಯ ಶ್ಲೋಕದಲ್ಲಿ ತೋರಿಸಲ್ಪಟ್ಟಿದೆ. ಇದಕ್ಕಿಂತಲೂ ಹೆಚ್ಚಾಗಿ ಈ ವಿಷಯದಲ್ಲಿ ಯಾವ ನಿರ್ಣಯವನ್ನು ಹೇಳುವದಕ್ಕೂ ನಮ್ಮ ಬಳಿಯಲ್ಲಿ ಸಾಧನಗಳಿಲ್ಲ. ವಿಚಾರಶೀಲರಾದ ವಿದ್ವಾಂಸರು ಅವರ ಎಲ್ಲ ಗ್ರಂಥಗಳನ್ನು ಪರಿಶೀಲಿಸಿ ಖಂಡಿತವಾದ ಅಭಿಪ್ರಾಯವನ್ನು ಹೊರಗೆಡಹುವರೆಂದು ನಂಬಿದ್ದೇವೆ.

ಯಸ್ಯ ನಿಶ್ವಸಿತಂ ವೇದಾ ವೇದೇಭ್ಯೋಽಖಿಲಂ ಜಗತ್ |
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಮ್ ||

ಈ ನಮನವು ಸಾಯಣಮಾಧವೀಯಬಹುಳ ಗ್ರಂಥಗಳಲ್ಲಿಯೂ, ಭಾರತೀ ತೀರ್ಥರೇ ಮೊದಲಾದ ಸಮರ್ಥರಾದ ಶಿಷ್ಯರ ಗ್ರಂಥಗಳಲ್ಲಿಯೂ ಸಾಮಾನ್ಯವಾಗಿ ಕಂಡುಬರುತ್ತದೆ. ಇದರಲ್ಲಿ ವಿದ್ಯಾತೀರ್ಥರ ವಿಷಯದಲ್ಲಿದ್ದ ಅವರ ಶಿಷ್ಯರ ಪೂಜ್ಯ ಭಾವವು ವ್ಯಕ್ತವಾಗುತ್ತದೆ. ಗುರುಗಳಾದರೂ ಶಿಷ್ಯರ ವಿಷಯದಲ್ಲಿ ಅಕೃತ್ರಿಮ ಪ್ರೇಮವುಳ್ಳವರಾಗಿದ್ದರು. ವಿದ್ಯಾತೀರ್ಥರ ವಿಷಯವಾಗಿ ಸಾಯಣ ಮಾಧವೀಯ ಗ್ರಂಥಗಳಲ್ಲಿ ಸಿಕ್ಕುವ ಬೇರೆ ಒಂದೆರಡು ಉಲ್ಲೇಖಗಳನ್ನು ಇದರಡಿಯಲ್ಲಿ ಕೊಡುತ್ತೇವೆ:

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ |
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ||

ಋಗ್ವೇದಾದಿ ಭಾಷ್ಯಗಳ ಕೊನೆಯಲ್ಲಿ ಈ ಪ್ರಾರ್ಥನೆಯಿದೆ.

ಯದ್ವಿದ್ಯಾತೀರ್ಥಗುರವೇ ಶುಶ್ರೂಷಾನ್ಯಾ ನ ರೋಚತೇ ತಸ್ಮಾತ್ |
ಅಸ್ತ್ವೇತಾ ಭಕ್ತಿಯುತಾ ಶ್ರೀವಿದ್ಯಾತೀರ್ಥಪಾದಯೋಃ ಸೇವಾ ||

ವಿವರಣಪ್ರಮೇಯಸಂಗ್ರಹವೆಂಬ ಗ್ರಂಥದಲ್ಲಿ ವಿದಾರಣ್ಯರು ಹೇಳಿದ ಶ್ಲೋಕವಿದು.

ಪ್ರಣಮ್ಯ ಪರಮಾತ್ಮಾನಾಂ ಶ್ರೀ ವಿದ್ಯಾತೀರ್ಥರೂಪಿಣಮ್ |
ಜೈಮಿನೀಯನ್ಯಾಯಮಾಲಾ ಶ್ಲೋಕೈಃ ಸಂಗೃಹ್ಯತೇ ಸ್ಫುಟಮ್ ||

ಮಾಧವಾಚಾರ್ಯರು ಜೈಮಿನೀಯನ್ಯಾಯಮೀಮಾಂಸೆಯಲ್ಲಿ ಈ ಶ್ಲೋಕ ವನ್ನು ಹೇಳಿದ್ದಾರೆ.

ವಿದ್ಯಾತೀರ್ಥರು, ಭಾರತೀತೀರ್ಥರೇ ಮೊದಲಾದ ತಮ್ಮ ಎರಡು ಜನ ಮುಖ್ಯ ಶಿಷ್ಯರನ್ನು ಕಾಂಚಿಯಲ್ಲಿರಿಸಿ, ತಾವು ಹಿಮಾಲಯಕ್ಕೆ ಹೋಗಿ ಅಲ್ಲಿ ಹದಿನೈದು ವರ್ಷ ಗಳ ವರೆಗೆ ತಪಶ್ಚರ್ಯವನ್ನು ಮಾಡುತ್ತಿದ್ದರು. ಶ್ರೀ ಶಂಕರಾನಂದರನ್ನು ಮಾತ್ರ ತಮ್ಮ ಸಂಗಡ ಕರೆದುಕೊಂಡಿದ್ದರು. ಹಿಮಗಿರಿಗೆ ಹೋಗುವ ಮೊದಲು ಅವರು ಸುಮಾರು ೭೩ ವರ್ಷಗಳ ವರೆಗೆ ಪೀಠಾಧಿಷ್ಠಿತರಾಗಿದ್ದರು. ಶೀತಾಚಲದೊಳಗಿನ ತಪಸ್ಸು ಪೂರ್ಣವಾದ ಮೇಲೆ ಅವರು ಶಂಕರಾನಂದರೊಡನೆ ಕಾಂಚಿಗೆ ಮರಳಿ ಬಂದು ಪೀಠಾಧಿಕಾರದ ವ್ಯವಸ್ಥೆಯನ್ನು ಮಾಡಿ ಸಮಾಧಿಸ್ಥರಾದರು. ಈ ವರ್ಣನೆಯು ಪುಣ್ಯಶ್ಲೋಕಮಂಜರಿಯಲ್ಲಿ ಈ ಪ್ರಕಾರ ಮಾಡಲ್ಪಟ್ಟಿದೆ.

ಕಾಂಚ್ಯಾಮೇವ ಸಸಪ್ತತಿಂ ತ್ರಿಸಹಿತಾನ್ ವರ್ಷಾನ್ ವಿಭೂಷ್ಯಾಸನಮ್ |
ಶಿಷ್ಯಾನಷ್ಟದಿಶಾಗತಾಯಿತಯತೀನಾದಿಶ್ಯಪೀಠಾವನಮ್ |

ಯಾವತ್ಪಂಚದಶಾಬ್ದಿ ಪೂರ್ತಿಹಿಮವಚ್ಛೃಂಗಾಶ್ರಯಃ ಶಂಕರಾ- |
ನಂದೈಕಾನುಚರಸ್ತ್ವಚಾರ ಪರಮಂ ಧೀರಸ್ತಪೋ ದುಶ್ಚರಮ್ ||
ತಪಸ್ಯನ್ನೇವಾಸೌ ತರುಣತರಣೇರ್ಧಾಮ್ನಿ ಪರಮೇ |
ನಿಲೀನೋಂತ್ತರಹಿತ್ಯಾ ನಿಮಿಷತಿ ಶ ಪಾರ್ಶ್ವೇ ಪರಿಚರೇ |
ಶ್ರಿತೋ ರಕ್ತಾಸ್ತ್ವಬ್ದೇ ಪ್ರತಿಪದಿ ತಪಸ್ಯೇಷ ಬಹುತೇ |
ಸ್ವಸನ್ ಶಿಷ್ಯೋಽಪ್ಯಾತ್ಮಾರ್ಥ ನ್ಯವೃತದಸದತ್ ಸ್ವಂ ಚ ಸ ಮಠಮ್ ||

ಅತ್ರಾಂತರೇಷ್ಟಾಽಪಿಯಥಾನಿಯೋಗಮ್ |
ಆಚಾರ್ಯಪೀಠೀಮವಿರೋಧಮಾವುಃ |
ತಂ ಶಂಕರಾನಂದಮುದೀಕ್ಷ್ಯ ಹೃಷ್ಟಾಃ |
ದೇಷ್ಟುರ್ವಶಂ ತಂ ನಿರವಿಶಂತ ||

ಮೇಲಿನ ಅಷ್ಟಶಿಷ್ಯರೊಳಗಿನ ಆರು ಜನರ ವರ್ಣನೆಯು ಗುರುರತ್ನಮಾಲೆಯೊಳಗಿನ ಒಂದು ಶ್ಲೋಕದಲ್ಲಿದೆ. ಆ ಆರು ಜನರು ಯಾರೆಂದರೆ— (೧) ಸಚ್ಚಿದಾನಂದ, (೨) ಅದ್ವೈತ ಬ್ರಹ್ಮಾನಂದ, (೩) ಸಾಂದ್ರಾನಂದ, (೪) ಅದ್ವೈತಾನಂದ, (೫) ಮಹಾದೇವ, (೬) ಶಿವಾದ್ವೈತಸುಖಾನಂದ ಇವರು ಒಳ್ಳೇ ಪರಿಶ್ರಮದಿಂದ ಧರ್ಮರಕ್ಷಣೆಯ ಕಾರ್ಯವನ್ನು ನಡೆಸಿದರು. ಈ ಕಾಲದಲ್ಲಿ ಗೋವೆಯಲ್ಲಿ ಒಂದುಗೂಡಿದ ಮ್ಲೇಂಛರು ಆಂಧ್ರ ಕರ್ಣಾಟಕಾದಿ ದೇಶಗಳಲ್ಲಿದ್ದ ಹಿಂದೂಗಳ ಕುಲಾಚಾರವನ್ನೂ ವರ್ಣಾಶ್ರಮ ಧರ್ಮಗಳನ್ನೂ ಕೆಡಿಸುತ್ತಿದ್ದರು. ಲಿಂಗಾಯತ ಮತವು ಹೆಚ್ಚುತ್ತಿತ್ತು; ಮತ್ತು ದ್ವೈತಸಾಂಪ್ರದಾಯವು ಪ್ರಬಲವಾಯಿತು. ಆ ಕಾಲದಲ್ಲಿ ಇವರು ಅದ್ವೈತ ಮತವನ್ನು ಒಳ್ಳೇ ಸಾಹಸದಿಂದ ಕಾಯ್ದುಕೊಂಡರು. ಇವರು ಶೃಂಗೇರಿ ಮೊದಲಾದ ಸ್ಥಳಗಳಲ್ಲಿ ಆರು ಮಠಗಳನ್ನು ಸ್ಥಾಪಿಸಿದರು. ಇವರಲ್ಲಿ ಅದ್ವೈತಾನಂದರು ಎಲ್ಲರಲ್ಲಿಯೂ ವೃದ್ಧರಾಗಿದ್ದು ಶಂಕರಾನಂದರಿಗೆ ಗುರುಗಳಾಗಿದ್ದರು. ಈ ಅದ್ವೈತಾನಂದರಿಗೆ ಆನಂದಾತ್ಮರೆಂದೂ, ಭಾರತೀತೀರ್ಥರೆಂದೂ ಬೇರೆ ಎರಡು ಪ್ರಸಿದ್ಧವಾದ ಹೆಸರುಗಳಿದ್ದುವು. ಸದಾನಂದರು ವೇದಾಂತಸಾರ ಪ್ರಕರಣದ ಆರಂಭದಲ್ಲಿ ಅದ್ವಯಾನಂದರ ವರ್ಣನೆಯನ್ನು ಹೀಗೆ ಮಾಡಿದ್ದಾರೆ:

ಅರ್ಥತೋಽಪ್ಯದ್ವಯಾನಂದಮತೀತದ್ವೈತಲಕ್ಷಣಮ್ |
ಆತ್ಮಾರಾಮಮಹಂ ವಂದೇ ಶ್ರೀಗುರುಂ ಶಿವವಿಗ್ರಹಮ್ ||

ಅನಂತರ ಕೊನೆಯಲ್ಲಿ –

ಶ್ರೀಗುರೂನದ್ವಯಾನಂದಾನ್ ಸಾಂದ್ರಾನಂದಂ ಚ ತದ್ಗುರುಮ್ |
ತದ್ಗುರುಂ ಶಂಕರಾನಂದಂ ಪ್ರಣಮಾಮಿ ಪುನಃ ಪುನಃ ||

ಹೀಗೆಂದು ವರ್ಣಿಸಿದ್ದಾರೆ.

ಪ್ರಪಂಚದೊಳಗಿನ ಕ್ಷುದ್ರವಾದ ಸರ್ವ ಆಶೆಗಳನ್ನು ಪರಿತ್ಯಜಿಸಿ, ಮಠದಲ್ಲಿ ವಾಸ ಮಾಡುತ್ತ ಸ್ನಾನಸಂಧ್ಯಾಭಿಕ್ಷಾಟನಗಳನ್ನು ಕೈಕೊಂಡು, ಗುರುಸನ್ನಿಧಿಯಲ್ಲಿದ್ದು, ಗುರ್ವಾಜ್ಞೆಯನ್ನು ತಲೆಯಲ್ಲಾಂತು ಇತರತ್ರ ಸಂಚಾರವಮಾಡಿ ಬ್ರಹ್ಮಜ್ಞಾನ ವಿಷಯಕ ವಾದ ಪಠನಪಾಠನಗಳನ್ನು ಮಾಡುವುದೇ ಆ ಕಾಲದ ಶಿಷ್ಯರ ನಿತ್ಯ ಕೃತ್ಯವಾಗಿತ್ತು. ವ್ರತನಿಷ್ಠರಾಗಿ ಗುರುಶುಶ್ರೂಷೆಯಿಂದ ವಿನಯವಂತರೂ, ಕ್ರಿಯಾವಂತರೂ, ಶಾಂತ ದಾಂತರೂ ಆದ ಆ ವಿಷ್ವಾಂಸರೆತ್ತ ? ಮತ್ತು ವೈಷಯಿಕವಿದ್ಯೆಯ ಭೋಜನಶಾಲೆ ಯಲ್ಲುಂಡು ರುಗ್ಣರಾಗಿ ಜೀವವಂತರಾಗಿರುವ ಈಗಿನ ಪದವೀಧರರೆತ್ತ ? ಇರಲಿ. ಅದ್ವೈತಾನಂದರಿಗೆ ಆನಂದಾತ್ಮ ಮತ್ತು ಭಾರತೀತೀರ್ಥರೆಂಬ ಹೆಸರುಗಳಿದ್ದುವೆಂಬು ದನ್ನು ಶ್ರೀಶಂಕರಾನಂದರು ತಮ್ಮ ಬೃಹದಾರಣ್ಯೋಪನಿಷದ್ದೀಪಿಕೆಯಲ್ಲಿ ಹೀಗೆ ಪುಷ್ಟೀಕರಿಸಿದ್ದಾರೆ:

ಕಾಂಚೀಪೀಠಜುಷಃ ಕಠೋರಧಿಷಣಾನಿರ್ಧೂತದುರ್ಧೂರ್ವಹ- |
ದ್ವೈತಿವ್ರಾತದುರಾಗ್ರಹಭಯಾನ್ ಮಾಯಾವಿದೂರಕ್ರಿಯಾನ್ ||
ಆಚಾರ್ಯಾನ್ಮಮ ಚಂದ್ರಮೌಲಿಚರಣಧ್ಯಾನೈಕತಾನಾಶಯಾನ್ |
ವಿದ್ಯಾತೀರ್ಥಮಹೇಶ್ವರಾನ್ ಹೃದಿ ಸದಾ ವಿದ್ಯೋತಮಾನಾನ್ ಭಜೇ ||
ಸಚ್ಛಾತ್ರತ್ವೇಽಪಿ ಸಾಕ್ಷಾದ್ಗುರವ ಇವ ದಯಾಮೇದುರಾ ಯೇ
ಪುನರ್ಮಾಮ್ |
ಗೂಢೇಷ್ವರ್ಥೇಷು ಗಾಢಂ ವಿವರಣಸರಣೇಶ್ಚಕ್ರುರಾತ್ತಪ್ರವೇಶಮ್ ||
ಭಾರತ್ಯಾನಂದತೀರ್ಥಾಪರಬಿರುದವಹಾನದ್ವಯಬ್ರಹ್ಮಸೌಖ್ಯಾನ್ |
ವೃದ್ಧಾನ್ ಸಿದ್ಧಾನ್ಪ್ರಬುದ್ಧಾನಪಿ ಹೃದಿ ಸತತಂ ಭಾವಯೇಬ್ರಹ್ಮಭೂತಾನ್||
ದ್ವೈತಧ್ವಾಂತನಿಕೃಂತನಾಹರಧಿಪೈಃ ಶಿಷ್ಯೈರ್ವಿಶಿಷ್ಯಾಷ್ಟಭಿ- |
ರ್ವಿಷ್ಟಭ್ಯಾದ್ವಯವಿಷ್ಟರಾಷ್ಟಕಮಿತಃ ಶ್ರೀಮಾಧವಾದ್ಯೈರ್ಬುಧೈಃ ||
ಸ್ಪಷ್ಟಂ ಯೋ ವ್ಯದಧೀಷ್ಟ ಶಿಷ್ಟಪರಿಷತ್ಸ್ವದ್ವೈತಮೇವಾದ್ವಯ- |
ಬ್ರಹ್ಮಾನಂದಮುನೀಶ್ವರಂ ತಮನಘಂ ವಂದೇ ವಿರೂಪಾಕ್ಷಗಮ್ ||

ಈ ಮುನಿವರ್ಯರ ಸ್ತುತಿಯಲ್ಲಿ ಬ್ರಹ್ಮನಿಷ್ಠೆಗೆ ಹೆಚ್ಚು ಮಹತ್ವವಿದ್ದು ಇತಿಹಾಸವು ತುಂಬಿರುವದರಿಂದ ಮೇಲಿನ ಶ್ಲೋಕಗಳನ್ನಿಲ್ಲಿ ಅವತರಿಸಿದ್ದೇವೆ. ಕೊನೆಯ ಶ್ಲೋಕದಲ್ಲಿ ಹೇಳಿದಂತೆ ಗುರ್ವಾಜ್ಞೆಯಿಂದ ದುರ್ಮತದ ನಿರಸನವನ್ನು ಮಾಡುವದಕ್ಕಾಗಿ ಕರ್ಣಾಟಕ ದೇಶದಲ್ಲಿ ಎಂಟು ಸ್ಥಳಗಳಲ್ಲಿ ಎಂಟು ಬೇರೆ ಬೇರೆ ಮಠಗಳನ್ನು ಮಾಧವಾಚಾರ್ಯರು ಸ್ಥಾಪಿಸಿದರು. ಲಿಂಗಾಯತರ ಪ್ರಾಬಲ್ಯದ ಮೂಲಕ ಶೃಂಗೇರಿಯಲ್ಲಿದ್ದ ಶ್ರೀಶಂಕರಾ ಚಾರ್ಯರ ಮಠದ ಸಾಮರ್ಥ್ಯವು ಆ ಕಾಲದಲ್ಲಿ ಕುಗ್ಗಿತ್ತು. ಶ್ರೀವಿದ್ಯಾರಣ್ಯರು ಅದರ ಉದ್ಧಾರವನ್ನು ಮಾಡಿದರು. ಮತ್ತು ಮುಸಲ್ಮಾನೀ ಸತ್ತೆಯನ್ನು ನಿವಾರಣ ಮಾಡುವು

ದಕ್ಕಾಗಿ ಹರಿಹರನಿಂದ ವಿಜಯನಗರದ ರಾಜ್ಯವನ್ನು ಸ್ಥಾಪನೆಗೊಳಿಸಿದರು. ಆಗಿನಿಂದ ಅವರಿಗೆ ಪ್ರಾಪ್ತವಾದ "ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯ"ರೆಂಬ ಬಿರುದು ಇಂದಿನ ವರೆಗೂ ಪ್ರತೀಹಾರಿಗಳ ಮುಖದಲ್ಲಿದೆ. ಶೃಂಗೇರೀಮಠದ ಮುದ್ರೆಯಲ್ಲಿ ವಿದ್ಯಾಶಂಕರ ಎಂಬುದೊಂದು ಪದವಿದೆ. ಅದು ವಿದ್ಯಾತೀರ್ಥ ಮತ್ತು ಶಂಕರಾನಂದರ ಹೆಸರುಗಳ ಪೂರ್ವಾರ್ಧಗಳ ಸಂಯೋಗದಿಂದ ಸಿದ್ಧವಾದುದು. ಈ ವಿಷಯದಲ್ಲಿ ಗುರು ರತ್ನಮಾಲೆಯ ೭೭ ನೆಯ ಶ್ಲೋಕದ ಟೀಕೆಯಲ್ಲಿ ಶ್ರೀವಿದ್ಯಾರಣ್ಯ ಸ್ವಾಮಿಗಳ ವಿಷಯ ದಲ್ಲಿ ಒಂದು ಮನೋರಂಜಕವಾದ ಆಖ್ಯಾಯಿಕೆಯು ಕೊಡಲ್ಪಟ್ಟಿದೆ. ಅದನ್ನು ವಿದ್ವಾಂಸರಾದ ವಾಚಕರಿಗೋಸ್ಕರ ಇದರಡಿಯಲ್ಲಿ ಕೊಟ್ಟು— ಶ್ರೀವಿದ್ಯಾತೀರ್ಥರ ಚರಿತ್ರೆಯನ್ನು ಮುಗಿಸುತ್ತೇವೆ:

"ಅನಂತರಮಾಚಾರ್ಯಶ್ರೀಶಂಕರಭಗವತ್ಪಾದೇಭ್ಯ ಏಕಾದಶತಮಾದಾಚಾರ್ಯಾ ದಾರಭ್ಯ ಶೃಂಗಗಿರ್ಯಾಮಧಿಶಾರದಾಪೀಠಮಷ್ಟಾಷ್ಟಶತೀಂ ಯಾವದಭವನ್ ಕೇऽಪ್ಯ- ಧಿಷ್ಠಾತಾರಃ | ತದೇವಾಕ್ರಮಮುದಕ್ರಾಮನ್ನುದೂಢದ್ವೈತವೇತಾಲಾಭಿನಿವೇಶಾಃ ಪಿಶಾಚಾ ಇವ ಪ್ರಕಟಪೂರ್ಣಪ್ರಜ್ಞದರ್ಶನಾಃ ಸಮಂತತಃ ಕರ್ಣಾಟಾನ್ ಪರಿತ್ಯಕ್ತ ವೈದಿಕಾಚಾರಾ ಬ್ರಾಹ್ಮಣಬ್ರುವಾಃ | ಶಿಶಕಲಾಯಿಷಯ್ಯೈವೇಷಾಂ ದುರ್ಮತದುಷ್ಪ್ರ- ರೋಹದುರ್ಮದಸ್ಯ ತಾದಾತ್ವಿಕಾನಕ್ಷೋಭ್ಯಾದೀನ್ ಪ್ರಕ್ಷೋಭ್ಯ ಕಾಂಚ್ಯಾಮಧಿ ಶಾರದಾಮಠಮನುಗ್ರಹಾದ್ವಿದ್ಯಾತೀರ್ಥಶಂಕರಾನಂದಯೋರಾಚಾರ್ಯಂ ತೇ ವರ ತೋರಾಶ್ರಮಿತಾಮಧಿಗಮ್ಯ ಸಮ್ಯಕ್ಸ್ವರಬ್ರಹ್ಮಚಾರಿಣಸ್ಸಚ್ಚಿದಾನಂದಮುಖಾನಧಿ- ಕರ್ಣಾಟಮಷ್ಟಸೂದ್ದೇಶೇಷು ಶೃಂಗಗಿರ್ಯಾದಿಷು ಅಭಿನವಾರಚಿತ ಮಠಪೀಠಾದಿಪರಿ- ಕರೇಷ್ವರ್ಪಿತಾಚಾರ್ಯಮುದ್ರಮಾಸ್ಥಾಪ್ಯ ಸ್ವಯಂ ಚ ಸ್ವಸಾಚಿವ್ಯಸಂತುಷ್ಟಸಕಲ ಪ್ರಕೃತಿನಿ ವಿರೂಪಾಕ್ಷಕ್ಷೇತ್ರ ಏವ ಪ್ರಕಲ್ಪ್ಯೈಕಮಪಿಮಠಂ ಸಮಧಿತಿಷ್ಠನ್ ಸ್ವಸ್ಯ ಸ್ವಾಚಾರ್ಯಯೋಶ್ಚ ವಿದ್ಯಾತೀರ್ಥಶಂಕರಾನಂದಯೋರ್ನಾಮ್ನಾ ವಿದ್ಯಾರಣ್ಯ ವಿದ್ಯಾಶಂಕರಾನ್ಯತರಾಕಾರೇಣ ಲಾಂಛಿತಾನಿ ಶ್ರೀಮುಖಾನಿ ಸರ್ವತೋ ಮುಖಾನಿ ಪ್ರಚಾರಯನ್ ಆಜ್ಞಯ್ಯೈವ ಶಂಕರಾನಂದಸ್ಯ ಪ್ರಾತಿಷ್ಠಿಪತ್ಪುನರಪಿ ವೈದಿಕಾಚಾರ ಮಖಿಲವೇದವಿದಸೌ ಸಾಯಣಮಾಧವಾಚಾರ್ಯ ಏವೇತಿ | ಯದದ್ಯಾಪ್ಯೇತೇಷಾಂ ನವಾನಾಮಪಿ ಮಠಾನಾಮಸ್ತಿ ಶ್ರೀಮುಖಶಿರಸಿ ವಿದ್ಯಾರಣ್ಯವಿದ್ಯಾಶಂಕರಪದಯೋರನ್ಯ- ತರದಿತಿ ಶ್ರೀಮುಖಲೇಖವೈಖರ್ಯಾऽಪಿ ವಿದ್ಯಾರಣ್ಯಸ್ಯ ವಿದ್ಯಾಶಂಕರಯೋರಪಿ ಚ ಪಾದಪದ್ಮಾರಾಧಕಾ ಏವಾಮೀತಿ ಚ ಕರಬದರಯಾಬಾಲಮಾಪಂಡಿತಮಖಿಲಾನಾಮ್ |"

## ೨. ಶ್ರೀ ಶಂಕರಾನಂದರು

ಶ್ರೀ ವಿದ್ಯಾತೀರ್ಥಶಿಷ್ಯಾಂತರ್ಗತರಾದ ಶಂಕರಾನಂದರೇ ಸಾಯಣ ಮಾಧವರ ಎರಡನೆಯ ಗುರುಗಳು. ಇವರು ವಿದ್ಯಾತೀರ್ಥರ ಪಟ್ಟಶಿಷ್ಯರು. ಇವರು ದೊಡ್ಡ ತಪಸ್ವಿ ಗಳೂ ವಿದ್ವಾಂಸರೂ ಆಗಿದ್ದರು. ಇವರು ಅನೇಕ ವೈದಿಕ ಗ್ರಂಥಗಳಿಗೆ 'ದೀಪಿಕಾ'

ಎಂಬ ಟೀಕೆಯನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಸದ್ಯಕ್ಕೆ ಪ್ರಸಿದ್ಧವಾಗಿವೆ. ಅವು ಯಾವವೆಂದರೆ— (೧) ಈಶಾವಾಸ್ಯದೀಪಿಕಾ, (೨) ಕೇನೋಪನಿಷದ್ದೀಪಿಕಾ, (೩) ಪ್ರಶ್ನೋಪನಿಷದ್ದೀಪಿಕಾ (೪) ಮಾಂಡೂಕ್ಯೋಪನಿಷದ್ದೀಪಿಕಾ (೫) ತೈತ್ತಿರೀಯೋಪನಿಷದ್ದೀಪಿಕಾ, (೬) ಬೃಹದಾರಣ್ಯಕೋಪನಿಷದ್ದೀಪಿಕಾ. ಇವು ಆನಂದಾಶ್ರಮ ಮಾಲೆಯಲ್ಲಿ ಪ್ರಸಿದ್ಧವಾಗಿವೆ; ಮತ್ತು ಶ್ವೇತಾಶ್ವತರೋಪನಿಷದ್ದೀಪಿಕಾ, ನಾರಾಯಣೋಪನಿಷದ್ದೀಪಿಕಾ ಎಂಬವು ಪ್ರಸಿದ್ಧವಾಗದೆ ಇವೆ. ಇವಲ್ಲದೆ 'ಶಂಕರಾನಂದೀ' ಎಂಬ ಗೀತಾವ್ಯಾಖ್ಯೆಯಾದರೂ ಪ್ರಸಿದ್ಧವಾಗಿದೆ. ಇವರು ಬರೆದ ಎಲ್ಲ ಗ್ರಂಥಗಳಲ್ಲಿ ದೊಡ್ಡದು ಆತ್ಮಪುರಾಣವು. ಇದು ಸರ್ವೋಪನಿಷತ್ಸಾರವು.

ವಿದ್ಯಾರಣ್ಯರು ಪಂಚದಶಿಯ ಆರಂಭದಲ್ಲಿ ಶ್ರೀಶಂಕರಾನಂದರನ್ನು ವಂದಿಸಿದ್ದಾರೆ. ನೃಸಿಂಹೋತ್ತರತಾಪಿನಿಯೋಪದ್ಭಾಷ್ಯದ ಕೊನೆಯಲ್ಲಿ "ಶ್ರೀ ಶಂಕರಾನಂದಶಿಷ್ಯ ಶ್ರೀವಿರಣ್ಯವಿರಚಿತ" ಎಂದಿದೆ. ಇದರಿಂದ ಶ್ರೀ ವಿದ್ಯಾತೀರ್ಥರ ವಿಷಯದಲ್ಲಿದ್ದಂತೆಯೇ ಶ್ರೀ ಶಂಕರಾನಂದರ ವಿಷಯದಲ್ಲಿಯೂ ಶ್ರೀ ವಿದ್ಯಾರಣ್ಯರು ಭಕ್ತಿಯುಳ್ಳವರಾಗಿದ್ದರೆಂದು ಸ್ಪಷ್ಟವಾಗುತ್ತದೆ. ವಿವರಣಪ್ರಮೇಯ ಸಂಗ್ರಹದಲ್ಲಿ ಶ್ರೀ ವಿದ್ಯಾರಣ್ಯರು ಶ್ರೀ ಶಂಕರಾನಂದರ ವಿಷಯದಲ್ಲಿದ್ದ ಪೂಜ್ಯಭಾವವನ್ನು ಹೀಗೆ ವ್ಯಕ್ತಗೊಳಿಸಿದ್ದಾರೆ:

ಶ್ರೀಶಂಕರಾನಂದಪದಂ ಹೃದಬ್ಜೇ ।
ವಿಭ್ರಾಜತೇ ತದ್ಯತಯೋ ವಿಶಂತಿ ॥

ಪುಣ್ಯಶ್ಲೋಕಮಂಜರಿಯ ೭೮ ಮತ್ತು ೭೯ನೆಯ ಶ್ಲೋಕಗಳಲ್ಲಿ ಶ್ರೀ ವಿದ್ಯಾತೀರ್ಥರ ಮುಖ್ಯ ಶಿಷ್ಯರ ವರ್ಣನೆಯಿರುವದು. ಅದೇ ಗ್ರಂಥದ ೮೦ನೆಯ ಶ್ಲೋಕದಲ್ಲಿ ಶ್ರೀಶಂಕರಾನಂದರು ಇಂತು ವರ್ಣಿತರಾಗಿದ್ದಾರೆ.

ಖಲವೈಷ್ಣವತೈತಿಡೀಕಕೋಲಾ- ।
ಹಲಹೇಲಾಹಿತಗಾಲಿಸಕ್ತಿಜಾಲೈಃ ॥
ಶಿವಯನ್ ವರದಂ ಚಿರೇಣ ಸೌಮ್ಯಃ ।
ಶಿವಕೃನ್ಮೇಽಸ್ತು ಸ ಶಂಕರಃ ಪ್ರಣಮ್ಯಃ ॥

ಇದರಿಂದ ಅದ್ವೈತವೇದಾಂತ ವಿಷಯದಲ್ಲಿದ್ದ ಇವರ ಭಕ್ತಿ ಜ್ಞಾನಗಳು ಅಸದೃಶವಾಗಿದ್ದುವೆಂದು ವ್ಯಕ್ತವಾಗುತ್ತದೆ. ಪುಣ್ಯ ಶ್ಲೋಕಮಂಜರಿಯಲ್ಲಿಯೇ ಇನ್ನೊಂದು ಕಡೆಯಲ್ಲಿ ಶ್ರೀಶಂಕರಾನಂದರ ವರ್ಣನೆಯು ಹೀಗೆ ಇದೆ:

ಆದಿಶ್ಯಾಷ್ಟ ಯಮೀಶ್ವರಾನ್ ಸಮವಿತುಂ ಕರ್ಣಾಟದೇಶೇಽದ್ವಯಮ್ ।
ರೋದ್ಧುಂ ಸಾಯಣಮಾಧವೋಕ್ತವಿಧಯಾ ವೃದ್ಧಿಶ್ಚ ಮಧ್ವಾಧ್ವನಾಮ್ ॥
ವಿದ್ಯಾತೀರ್ಥಗುರೋರಸೋಢವಿರಹೋಽಪ್ಯಾವೃತ್ಯ ಶೀತಾಚಲಾತ್ ।
ತಸ್ಯೋಕ್ತಿರ್ಬಿಭರಾಂ ಬಭೂವ ಸ ಧುರಾಂ ಶ್ರೀರಾಮಕೋಟೀಮಠೇ ॥

ಶ್ರೀಮಧ್ಯಾರ್ಜುನಬಾಲಚಂದ್ರಮಖಿರಾಟ್ಸೂನುರ್ಮಹೇಶಾಹ್ವಯಃ ।
ವಿದ್ಯಾತೀರ್ಥಪದಾನ್ನಿಯಮ್ಯ ಸಮಯೇ ಸ್ವಾದ್ವೈತಮುದ್ಯೋತಯನ್ ||
ಅಧ್ಯಾಸ್ವಪ್ರತಿಕಾಮಕೋಟಿಶರದೋ ದ್ವಾತ್ರಿಂಶತಂ ದೇಹಿನಾಮ್ ।
ದ್ವೈತಧ್ವಾಂತನಿವಾರಣೋ ನವಮಠೀನಾಥೋ ನವಶ್ಶಂಕರಃ ||
ಸ ದುರ್ಮುಖಿನಿ ಸನ್ಮುಖೋ ಮಧುರವಾಙ್ಮಥೌ ಮೌನಿರಾಟ್ ।
ಪದೀಪ್ರತಿಪದಿಪ್ರಗೇಪ್ರರಿತಧೀಸ್ಮಿತೇ ಪಕ್ಷಕೇ ||
ಸಮಸ್ತಭುವನಾರ್ಚಿತಸ್ಸಕೃದುಮೇಶಯನ್ನಚ್ಯುತಮ್ ।
ಜಹೌ ತನುಮನುತ್ತಮಾಮವಿಶದಾಶು ನೈಜಂ ಮಹಃ ||

ಅರ್ಥ : ಶ್ರೀಶಂಕರಾನಂದಯತಿಗಳಿಗೆ ಶ್ರೀವಿದ್ಯಾತೀರ್ಥ ಗುರುಚರಣರ ವಿಯೋಗವನ್ನು ಸಹಿಸುವದಾಗಲಿಲ್ಲ. ಆದರೂ ಗುರುಗಳ ಆಜ್ಞೆಯಂತೆ ಹಿಮಗಿರಿಯಿಂದ ಮರಳಿ ಬಂದು ಕಾಮಕೋಟಿ ಪೀಠದ ಧುರವನ್ನು ವಹಿಸಿದರು. ಕರ್ನಾಟಕ ದೇಶದಲ್ಲಿ ಸಾಯಣ ಮಾಧವೋಕ್ತ ರೀತಿಯಿಂದ ಮಧ್ವಸಂಪ್ರದಾಯವನ್ನು ನಿರೋಧಿಸಿ ಅದ್ವೈತ ಸಂಪ್ರದಾಯವನ್ನು ಸಂರಕ್ಷಿಸುವದಕ್ಕೋಸ್ಕರ ತಮ್ಮ ಎಂಟು ಜನ ಶಿಷ್ಯರಿಗೆ ಅಪ್ಪಣೆಯನ್ನಿತ್ತರು. ಅವರ ತಂದೆಯ ಹೆಸರು ಮಧ್ಯಾರ್ಜುನಬಾಲಚಂದ್ರಯಾಜ್ಞಿಕ ಎಂಬದಾಗಿತ್ತು. ಅವರ ಪೂರ್ವಾಶ್ರಮದ ಹೆಸರು ಮಹೇಶನೆಂಬುದು. ಅವರು ಶ್ರೀವಿದ್ಯಾತೀರ್ಥ ಗುರುಗಳ ಸೇವೆಯನ್ನು ಭಕ್ತಿಯಿಂದ ಮಾಡಿದರು. ಅದ್ವೈತಮತಕ್ಕೆ ಉತ್ತೇಜನವನ್ನು ಕೊಟ್ಟರು. ಪೀಠದ ಕೆಲಸವನ್ನು ೩೨ ವರ್ಷಗಳವರೆಗೆ ಉತ್ತಮ ರೀತಿಯಿಂದ ಮಾಡಿ ನವಮಠೀನಾಥರಾದ ನವಶಂಕರರೆಂದು ಕರೆಯಿಸಿಕೊಂಡರು. ಪ್ರತಿಕೂಲರನ್ನು ಅನುಕೂಲರನ್ನಾಗಿ ಮಾಡಿಕೊಳ್ಳುವ ಸ್ವಭಾವದವರೂ, ಮಧುರಭಾಷಣಿಗಳೂ, ಯತಿರಾಜರೂ, ನಿರಂತರಶುದ್ಧಬುದ್ಧಿಯುಳ್ಳವರೂ, ಜಗದ್ವಂದ್ಯರೂ, ಒಮ್ಮೆ ವಿಷ್ಣುವಿನಿಂದ ಶಿವರೂಪವನ್ನು ಧಾರಣೆ ಮಾಡಿಸಿದವರೂ ಆದ ಶ್ರೀಶಂಕರಾನಂದರು ಚೈತ್ರ ಶುದ್ಧ ಪ್ರತಿಪದೆಯ ಬ್ರಹ್ಮಮುಹೂರ್ತದಲ್ಲಿ ಕ್ಷಣಭಂಗುರವಾದ ಈ ದೇಹವನ್ನು ತ್ಯಾಗಮಾಡಿ ನಿಜ ತೇಜಸ್ಸಿನಲ್ಲಿ ಪ್ರವೇಶಿಸಿದರು.

ಇನ್ನೊಂದು ಸ್ತೋತ್ರದಲ್ಲಿ 'ಬುಕ್ಕಭೂಪ ಶಿರೋರತ್ನ' ಎಂಬುದಾಗಿ ಶ್ರೀಶಂಕರಾನಂದರನ್ನು ಸ್ತುತಿಸಿದ್ದು ಕಂಡುಬರುತ್ತದೆ. ಅದರಿಂದ ಇವರು ಬುಕ್ಕರಾಜನಿಗೂ ಗುರುಗಳಾಗಿದ್ದರೆಂದು ಊಹಿಸಬಹುದಾಗಿದೆ. ಶ್ರೀವಿದ್ಯಾತೀರ್ಥರು ಸಮಾಧಿಯನ್ನು ಹೊಂದಿದಾಗ ಅಂದರೆ ಶಕೆ ೧೩೦೬ ರಲ್ಲಿ ಇವರು ಪೀಠಾರೋಹಣ ಮಾಡಿರಲಿಕ್ಕೆ ಬೇಕು. ತೈತ್ತಿರೀಯೋಪನಿಷದ್ದೀಪಿಕೆ, ಶ್ವೇತಾಶ್ವೇತಿಕೋಪನಿಷದ್ದೀಪಿಕೆ, ಮತ್ತು ಉಪನಿಷತ್ಸಮುಚ್ಚಯದೀಪಿಕೆ ಇವುಗಳ ಕೊನೆಯಲ್ಲಿ ಶ್ರೀಶಂಕರಾನಂದರು "ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಆನಂದಾತ್ಮಪೂಜ್ಯಪಾದಾಂಶಿಷ್ಯ" ಎಂಬುದಾಗಿ ಹೇಳಿಕೊಂಡಿದ್ದಾರೆ. ಆದುದರಿಂದ ಶಂಕರಾನಂದರ ಶ್ರೀಭಾರತೀತೀರ್ಥ (ಆನಂದಾತ್ಮ)ರಿಗೂ ಶಿಷ್ಯರಾಗಿರಬೇಕೆಂದು ತೋರುತ್ತದೆ.

## ೩. ಶ್ರೀಭಾರತೀತೀರ್ಥರು

ಇವರು ಶ್ರೀವಿದ್ಯಾರಣ್ಯರ ಮೂರನೆಯ ಗುರುಗಳು. ಪಂಚದಶಿಯ ಉತ್ತರಭಾಗದ ೯ ದೀಪಗಳನ್ನು ಇವರೇ ರಚಿಸಿದ್ದಾರೆ. ಮಾಧವಾಚಾರ್ಯಕೃತ ಕಾಲಮಾಧವದ ವ್ಯಾಖ್ಯಾನಕಾರರಾದ ಸುದರ್ಶನಮಾಧವರು ಶ್ರೀಭಾರತೀತೀರ್ಥರ ವಿಷಯದಲ್ಲಿ ಹೇಳುವದೇನಂದರೆ —

ವ್ಯಾಮೂಢಾನಾಮಿಹ ತನುಭೃತಾಂ ಜಾಹ್ನವೀತೀರ್ಥಮೇಕಮ್ |
ವಿದ್ಯಾತೀರ್ಥಪ್ರಕೃತಿವಿಮಲಂ ಸದ್ವಿವೇಕೋದಯಾನಾಮ್ ||
ಸರ್ವೇಷಾಂ ತು ಪ್ರಥಮಸುಖದಂ ಭಾರತೀತೀರ್ಥಮಾಹು |
ಸ್ತದ್ಭಾನಾನ್ಯೇ ವಿಮಲಮನಸೋ ನಿರ್ಣಯೇ ಶಕ್ತಿರಸ್ತಿ ||

ಈ ಪದ್ಯದಲ್ಲಿ ವಿದ್ಯಾತೀರ್ಥ ಮತ್ತು ಭಾರತೀತೀರ್ಥ ಎಂಬ ಪದಗಳು ಶ್ಲೇಷ ಗರ್ಭಿತವಾಗಿವೆ. ಕೊನೆಯಲ್ಲಿರುವ ತೀರ್ಥ ಎಂಬ ಶಬ್ದದಿಂದ ಉತ್ತರೋತ್ತರವಾಗಿ ಅಧಿಕಗುರುತ್ವವು ತೋರಿಸಲ್ಪಟ್ಟಿದೆ. ಭಾರತೀ ಎಂಬ ಪದದಿಂದ ವಿದ್ಯಾಧಿಷ್ಠಾತ್ರಿಯಾದ ಸರಸ್ವತಿಯು ಉಪಲಕ್ಷಿತೆಯಾಗುತ್ತಾಳೆಂಬುದು ಸ್ಪಷ್ಟವೇ ಇದೆ. ವೈಯಾಸಿಕನ್ಯಾಯ ಮಾಲೆಯಲ್ಲಿ —

ಪ್ರಣಮ್ಯ ಪರಮಾತ್ಮಾನಂ ಶ್ರೀವಿದ್ಯಾತೀರ್ಥರೂಪಿಣಮ್ |
ವೈಯಾಸಿಕನ್ಯಾಯಮಾಲಾ ಶ್ಲೋಕೈಃ ಸಂಗೃಹ್ಯತೇ ಸ್ಫುಟಮ್ ||

ಎಂದು ಶ್ರೀ ವಿದ್ಯಾತೀರ್ಥರನ್ನು ವಂದಿಸಿದ್ದಾರೆ. ಇದು, ಮಾಧವಾಚಾರ್ಯರು ಜೈಮಿನೀಯ ನ್ಯಾಯಮಾಲೆಯ ಆರಂಭದಲ್ಲಿ ರಚಿಸಿದ ವಂದನಶ್ಲೋಕದ ಪ್ರತಿಚ್ಛಾಯೆಯೆಂಬುದು ಸ್ಪಷ್ಟವಾಗಿದೆ. ಶಿಷ್ಯರು ಪ್ರಾಚೀನಕಾಲದಲ್ಲಿ ಗುರುಗಳಿಂದ ಮುಖ್ಯವಾಗಿ ಅಧ್ಯಾತ್ಮವಿದ್ಯೆಯನ್ನು ಕಲಿಯುತ್ತಿದ್ದರಾದ ಮೂಲಕ, ಅವರು ತಮ್ಮ ಗುರುಗಳನ್ನು ಪರಮಾತ್ಮಸ್ವರೂಪರೆಂದೇ ತಿಳಿಯುತ್ತಿದ್ದರು.

ಈ ಪ್ರಕರಣದಿಂದ ವಾಚಕರಿಗೆ ಕೊಂಚ ಬೇಸರ ಉಂಟಾಗಿರಬಹುದು. ಆದರೆ ಈ ವೃತ್ತಾಂತದಿಂದ ಆಗಿನ ಕಾಲದ ಪ್ರಚಂಡವಾದ ವಾಙ್ಮಯದ ಇತಿಹಾಸದ ಮೇಲೆ ಎಷ್ಟೋ ಬೆಳಕು ಬೀಳುವುದು. ಆದುದರಿಂದ ಅವರು ನಮ್ಮನ್ನು ಕ್ಷಮಿಸುವರೆಂದು ನಂಬಿದ್ದೇವೆ.

# ೫. ರಾಜ್ಯಸ್ಥಾಪನೆಯು

ಕರ್ನಾಟಕದ ಕೊನೆಯ ಮನೆತನವೇ ವಿಜಯನಗರವು. ಬಾದಾಮಿಯ ಚಾಲುಕ್ಯರೇ ಮೊದಲಿನವರೆನ್ನಬಹುದು; ಇವರಿಗಿಂತ ಹಿಂದೆ ಕದಂಬ, ಗಂಗ ಮೊದಲಾದ ಅರಸರು ಕರ್ನಾಟಕದಲ್ಲಿ ಆಳಿದ್ದರು; ಆದರೂ ಇಡೀ ಕನ್ನಡ ನಾಡು ಒಬ್ಬನೇ ಅರಸನ ಏಕಚ್ಛತ್ರಾಧಿಪತ್ಯಕ್ಕೆ ಒಳಗಾದದ್ದು, ಬಾದಾಮಿಯ ಚಾಲುಕ್ಯರ ಕಾಲದಲ್ಲಿಯೇ. ಆಗ ಸ್ಥಾಪಿತವಾದ ಏಕಚ್ಛತ್ರಾಧಿಪತ್ಯವು ರಾಷ್ಟ್ರಕೂಟರ ಕಾಲಕ್ಕೂ ಕಲ್ಯಾಣದ ಚಾಲುಕ್ಯರ ಕಾಲಕ್ಕೂ ಅವಿಚ್ಛಿನ್ನವಾಗಿ ನಡೆಯಿತು. ಮುಂದೆ ಈ ರಾಜ್ಯವು ಎರಡು ಪಾಲುಗಳಾಗಿ ವಿಭಾಗಿತವಾಯಿತು. ಉತ್ತರದ ಅರ್ಧಭಾಗವು ದೇವಗಿರಿಯ ಯಾದವರ ವಶಕ್ಕೂ ದಕ್ಷಿಣದ ಅರ್ಧಭಾಗವು ಹೊಯ್ಸಳ ಯಾದವರ ಅಧೀನಕ್ಕೂ ಒಳಪಟ್ಟಿತು. ಮುಸಲ್ಮಾನರು ಉತ್ತರ ಭಾಗವನ್ನು ನುಂಗಿ, ದಕ್ಷಿಣ ಭಾಗವನ್ನು ಎತ್ತಿಹಾಕುವ ಆಲೋಚನೆಯಲ್ಲಿದ್ದರು. ಇವರ ಮೊದಲನೆಯ ಪ್ರಹಾರವು ದೇವಗಿರಿಯ ಯಾದವರಿಗೂ, ವರಂಗಲ್ಲದ ಕಾಕತೀಯ ಅರಸರಿಗೂ ತಗಲಿತು. ಆ ಪೆಟ್ಟು ತಗಲುವ ವರೆಗೆ ಮಿಕ್ಕ ಅರಸರು ಎಚ್ಚರಗೊಳ್ಳಲಿಲ್ಲ. ಆದರೆ ಆ ಪೆಟ್ಟು ತಗಲಿದ ಕೂಡಲೆ ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಹಾಹಾಕಾರವೆದ್ದಿತು. ಮುಸಲ್ಮಾನರು ಪ್ರಬಲರಾದ ಶತ್ರುಗಳಾದುದರಿಂದ ಒಬ್ಬೊಬ್ಬರೇ ಅವರೆದುರಿಗೆ ನಿಂತರೆ ನಡೆಯಲಾರದೆಂದು ಬಗೆದು, ಎಲ್ಲರೂ ಒಕ್ಕಟ್ಟಾಗಿ ನಿಲ್ಲುವದು ಅವಶ್ಯವೆಂಬ ಕಲ್ಪನೆಯು ಆಗ ಉದ್ಭವಿಸಿತು. ಈ ಕಲ್ಪನೆಯ ಮೂಲೋತ್ಪಾದಕರೇ ಶ್ರೀವಿದ್ಯಾರಣ್ಯಸ್ವಾಮಿಗಳು. ಚದರಿಹೋದ ಚಿಕ್ಕ ಚಿಕ್ಕ ರಾಜ್ಯಗಳನ್ನು ಒಟ್ಟುಗೂಡಿಸಿ ಮುಸಲ್ಮಾನರೆದುರಿಗೆ ಒಕ್ಕಟ್ಟಿನಿಂದ ನಿಲ್ಲುವಂತೆ ಮಾಡಿದುದೇ ಶ್ರೀ ವಿದ್ಯಾರಣ್ಯರು ಮಾಡಿದ ಮಹತ್ವದ ಕೆಲಸವು. ಪರದೇಶೀಯ ಶತ್ರುಗಳಿಗೆ ಎದುರಾಗಬೇಕಾದರೆ ನಾವು ನಮ್ಮ ಒಳಜಗಳಗಳೆಲ್ಲವನ್ನೂ ಮರೆತುಬಿಡಬೇಕೆಂಬ ತತ್ವವನ್ನು ಶ್ರೀ ವಿದ್ಯಾರಣ್ಯಸ್ವಾಮಿಗಳೇ ಮೊದಲು ಕಲಿಸಿದರು. ಈ ತತ್ವವನ್ನರಿಯದ ಮೂಲಕವೇ ಉತ್ತರ ಹಿಂದುಸ್ಥಾನವು ಮುಸಲ್ಮಾನರ ವಶದಲ್ಲಿ ಹೋಯಿತು; ಮತ್ತು ಈ ತತ್ವವನ್ನು ಮರೆತದ್ದರಿಂದಲೇ ಮುಸಲ್ಮಾನರು ಬಲಾಢ್ಯರಾದ ವಿಜಯನಗರದ ಅರಸರೊಡನೆ ಸುಮಾರು ಇನ್ನೂರು ವರ್ಷಗಳವರೆಗೆ ಕಾದಬೇಕಾಯಿತು; ಹಾಗು ಕಟ್ಟಕಡೆಗೆ, ಈ ತತ್ವವನ್ನು ಕಂಡುಹಿಡಿದು, ತಮ್ಮ ತಪ್ಪನ್ನು ತಿದ್ದಿಕೊಂಡು, ಒಕ್ಕಟ್ಟಿನಿಂದ ನಡೆದುದರಿಂದಲೇ ಅವರು ವಿಜಯನಗರವನ್ನು ನಾಮಶೇಷ ಮಾಡುವದಕ್ಕೆ ಸಮರ್ಥರಾದರು !

ಇರಲಿ, ಸುಮಾರು ಎರಡು ಶತಮಾನಗಳ ವರೆಗೆ ವಿಜಯನಗರದ ಅರಸರು, ಮುಸಲ್ಮಾನರ ಉಪಟಳವು ಕೃಷ್ಣಾ ನದಿಯ ದಕ್ಷಿಣ ದಿಕ್ಕಿನ ಪ್ರದೇಶದಲ್ಲಿ ಆಗದಂತೆ ತಡೆದು ಹಿಡಿದರೆಂಬುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ದಕ್ಷಿಣ ಹಿಂದುಸ್ಥಾನಕ್ಕೆ

ಅತ್ಯಂತ ದುರ್ಘಟವಾದ ಸಂಕಟವೊದಗಿದಾಗ ಅದನ್ನು ಸಂರಕ್ಷಿಸಿದ್ದು ಚಿಕ್ಕ ಪುಟ್ಟ ಕೆಲಸವಲ್ಲ. ಹೀಗೆ ಮುಸಲ್ಮಾನರ ಹಾವಳಿಯನ್ನು ತಡೆದು, ತಮ್ಮ ಪೂರ್ವ ವೈಭವವನ್ನು ಕಾಯ್ದುಕೊಂಡದ್ದು ವಿಜಯನಗರದ ಅರಸರಿಗೆ ಅತ್ಯಂತ ಗೌರವಾಸ್ಪದವಾದ ಸಂಗತಿಯಾಗಿದೆ.

ಶ್ರೀ ವಿದ್ಯಾರಣ್ಯ ಸ್ವಾಮಿಗಳು ಹುಕ್ಕಬುಕ್ಕರನ್ನು ಪ್ರೋತ್ಸಾಹಿಸಿ ಈ ಸ್ವರಾಜ್ಯ ಸ್ಥಾಪನೆಯ ಕಾರ್ಯವನ್ನು ಕೊನೆಗಾಣಿಸಿದರು. ಇವರು ಆ ಕಾಲದಲ್ಲಿ ಶೃಂಗೇರಿಯಲ್ಲಿ ಶ್ರೀ ಶಂಕರಾಚಾರ್ಯರ ಸ್ಥಾನಾಪನ್ನರಾಗಿದ್ದರೆಂದು ಹಿಂದೆ ಹೇಳಿದೆಯಷ್ಟೇ; ಆದರೆ ಶ್ರೀ ವಿದ್ಯಾರಣ್ಯರಂತಹ ಮಹತ್ವಾಕಾಂಕ್ಷಿಗಳಿಗೆ ಇಂತಹ ಪ್ರಸಂಗದಲ್ಲಿ ಸುಮ್ಮನೇ ಕೂಡ್ರುವದು ಹ್ಯಾಗಾದೀತು? ದೇಶಕ್ಕೆ ಇಂತಹ ವಿಪತ್ತು ಬಂದೊದಗಿದಾಗ ಸುಮ್ಮನೆ ಮೂಗು ಹಿಡಿದುಕೊಂಡು ಕೂಡ್ರುವದು ಮಾತ್ರವೇ ತಮ್ಮ ಕರ್ತವ್ಯವಲ್ಲವೆಂದೂ, ಆ ತಮ್ಮ ಧರ್ಮರಕ್ಷಣಾರ್ಥವಾಗಿಯೇ ಸ್ವರಾಜ್ಯವನ್ನು ಸ್ಥಾಪಿಸುವದು ತಮ್ಮ ಆದ್ಯ ಕರ್ತವ್ಯವೆಂದೂ ಆಲೋಚಿಸಿ ಅವರು ವಿಜಯನಗರದಲ್ಲಿ ರಾಜ್ಯವನ್ನು ಸ್ಥಾಪಿಸಿದರು.

ಉಪೋದ್ಘಾತದಲ್ಲಿ ಹೇಳಿದಂತೆ, ಸ್ವಾಮಿಗಳವರು ರಾಜಕೀಯ, ಧಾರ್ಮಿಕ ಮತ್ತು ವಾಙ್ಮಯಾತ್ಮಕ ದೃಷ್ಟಿಯಿಂದ ಬಹಳ ಮಹತ್ವದ ಕೆಲಸವನ್ನು ಮಾಡಿರುತ್ತಾರೆ; ಆದರೂ ಅವರ ರಾಜಕೀಯ ಕಾರ್ಯಕ್ಕೆ ನಾವು ಹೆಚ್ಚು ಮಹತ್ವವನ್ನು ಕೊಡುತ್ತೇವೆ. ಇವರು ಕೇವಲ ಚಾತುರ್ಯದಿಂದಲೂ ಧೈರ್ಯದಿಂದಲೂ ವಿಜಯನಗರದಲ್ಲಿ ರಾಜ್ಯವನ್ನು ಸ್ಥಾಪಿಸಿದರು; ಈ ರಾಜ್ಯಸ್ಥಾಪನೆಯ ಕಲ್ಪನೆಯು ಇವರಿಂದಲೇ ಉದ್ಭೂತವಾದುದು; ಮತ್ತು ಹೊಸದು. ಆದರೆ ಇವರ ವೇದಾಂತ ಮತವು ಹೊಸದಲ್ಲ. ಅದು ಶ್ರೀ ಶಂಕರಾಚಾರ್ಯರಿಂದ ಹುಟ್ಟಿದುದು. ಇವರು ಅದನ್ನು ಪುನರುಜ್ಜೀವನಗೊಳಿಸಿದರು. ಆಗಿನ ಕಾಲಕ್ಕೆ ದೇಶದಲ್ಲಿ ರಾಜಕಾರಣಕ್ಕೆ ಹೆಚ್ಚು ಮಹತ್ವವಿತ್ತು. ಭರತ ಭೂಮಿಯು ಪಾರತಂತ್ರ್ಯ ಪಂಕದಲ್ಲಿ ಸಿಕ್ಕಿಬೀಳುವ ಪ್ರಸಂಗವು ಬಂದಿತ್ತು. ಹಿಂದೂ ಧರ್ಮವು ನಾಮಶೇಷವಾಗುವ ಹೊತ್ತು ಬಂದಿತ್ತು. ರಾಜ್ಯಸ್ಥಾಪನೆಯಾಗದಿದ್ದರೆ ಹಿಂದೂ ಜನರ ಸ್ವಾತಂತ್ರ್ಯವೂ ಧರ್ಮವೂ ಕೂಡಿಯೇ ನಾಶವಾಗುತ್ತಿದ್ದವು. ಇಂತಹ ಸಮಯದಲ್ಲಿ ಪರಮಪವಿತ್ರವಾದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವದೇ ಪರಮ ಧರ್ಮವೂ ಆದ್ಯ ಕರ್ತವ್ಯವೂ ಆಗಿತ್ತು. ಸ್ವಾಮಿಗಳವರು ಈ ತತ್ವವನ್ನೇ ಸ್ವರಾಜ್ಯ ಸ್ಥಾಪನೆಯ ಮೂಲಕ ಜಗತ್ತಿನಲ್ಲಿ ಪ್ರಕಟಗೊಳಿಸಿದರು.

ಶ್ರೀ ವಿದ್ಯಾರಣ್ಯರ ರಾಜಕಾರಣದ ಮಹತ್ವವು ಚೆನ್ನಾಗಿ ಲಕ್ಷ್ಯದಲ್ಲಿ ಬರಬೇಕಾದರೆ, ಆಗಿನ ಕಾಲದಲ್ಲಿ ಹಿಂದುಸ್ಥಾನದ ಪರಿಸ್ಥಿತಿಯು ಯಾವ ಪ್ರಕಾರದ್ದಿತ್ತೆಂಬುದನ್ನು ಸ್ವಲ್ಪ ವಿಶದವಾಗಿ ತಿಳಿದುಕೊಳ್ಳುವದು ಅವಶ್ಯವಿದೆ.

ಮೂರ್ತಿಭೇದಕನೆಂದು ಹೆಸರಾದ ಗಿಝನೀಮಹಮ್ಮದನು ಕ್ರಿ. ಶ. ೧೦೦೧ ರಲ್ಲಿ ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದನು. ಅವನು ಮೊದಲು ಪಂಜಾಬ, ಮುಲ್ತಾನ

ಮೊದಲಾದ ಪ್ರಾಂತಗಳಿಗೂ ಆ ಮೇಲೆ ಇತರ ಸ್ಥಾನಗಳಿಗೂ ಕೊಳ್ಳೆಯಿಕ್ಕಿ ಹಿಂದಕ್ಕೆ ತಿರುಗಿದನು. ಬರಬರುತ್ತ ಅವನು ಹೆಚ್ಚು ಹೆಚ್ಚು ಮುಂದಕ್ಕೆ ಬಂದು ಮತ್ತೆ ತಿರುತಿರುಗಿ ಹೋದನು. ಅವನು ಕ್ರಿ. ಶ. ೧೦೨೧ ರಲ್ಲಿ ಕಲಿಂಗವನ್ನೂ, ಕ್ರಿ. ಶ. ೧೦೨೩ ರಲ್ಲಿ ಕಾಠೇವಾಡವನ್ನೂ ಹೊಕ್ಕನು. ಆದರೆ ಅವನು ಒಂದೇ ಸ್ಥಳವನ್ನು ಹಿಡಿದುಕೊಂಡು ಎಂದೂ ಕೂಡ್ರಲಿಲ್ಲ. ಇಲ್ಲಿಯೇ ನೆಲೆಸಿ ಆಳಬೇಕೆಂಬ ವಿಚಾರವೇ ಅವನ ಮನಸ್ಸಿನಲ್ಲಿ ಬರಲಿಲ್ಲ. ಬೇರೆ ದಾಳಿಗಾರರೂ ಇವನಂತೆಯೇ ಬಂದು ಲೂಟಿ ಮಾಡಿಕೊಂಡು ತಿರುಗಿ ಹೋದರು. ಆದರೆ ಧನತೃಷ್ಣೆಯೂ, ರಾಜ್ಯತೃಷ್ಣೆಯೂ ಬಹಳ ಕೆಟ್ಟವು. ಮುಂದೆ ಬಂದ ಮುಸಲ್ಮಾನರ ಮನಸ್ಸಿನಲ್ಲಿ ಇಲ್ಲಿಯೇ ಕಾಲೂರಿ ನಿಲ್ಲಬೇಕೆಂಬ ವಿಚಾರವು ತಲೆದೋರಿತು. ಆದುದರಿಂದ ಇನ್ನೂರು ವರ್ಷಗಳ ತರುವಾಯ ಮುಸಲ್ಮಾನರು ದಿಲ್ಲಿಯಲ್ಲಿಯೇ ಸ್ಥಿರವಾಗಿ ನೆಲೆಗೊಂಡರು. ಅಂದಿನಿಂದ ಒಂದೇ ಸಮನೇ ಯುದ್ಧಗಳು ನಡೆದು ಉತ್ತರ ಹಿಂದುಸ್ತಾನದಲ್ಲಿ ಶಾಂತತೆಯೇ ಇಲ್ಲದಾಯಿತು. ಜಯಪಾಲ, ಪೃಥ್ವೀರಾಜ ಮೊದಲಾದ ಒಬ್ಬಿಬ್ಬರ ಹೊರತು ಅವರನ್ನು ತಡೆಯುವವರು ಯಾರೂ ಇದ್ದಿಲ್ಲ. ಆದುದರಿಂದ ~~ದಿಲ್ಲಿ~~ಯಲ್ಲಿ ಸಿಂಹಾಸನವನ್ನು ಸ್ಥಾಪಿಸುವದಕ್ಕೂ, ತಮ್ಮ ಧರ್ಮವನ್ನು ಈ ದೇಶದಲ್ಲಿ ಹಬ್ಬಿಸುವದಕ್ಕೂ ಅವರಿಗೆ ಅನುಕೂಲವಾಯಿತು. ಮುಂದೆ ೧೩ ನೆಯ ಶತಮಾನದ ಅಂತ್ಯದಲ್ಲಿ ಅವರು ದಕ್ಷಿಣ ಹಿಂದುಸ್ತಾನದಲ್ಲಿ ಕಾಲು ಚಾಚತೊಡಗಿದರು. ಕ್ರಿ. ಶ. ೧೨೯೩ ರಲ್ಲಿ ದಿಲ್ಲಿಯ ಅರಸನ ಅಣ್ಣನ ಮಗನಾದ ಅಲ್ಲಾವುದ್ದೀನ ಖಿಲಜಿ ಎಂಬವನು ದೇವಗಿರಿಯನ್ನು ಹಿಡಿದುಕೊಂಡನು; ನಾಲ್ಕು ವರುಷಗಳಾದ ಮೇಲೆ ಅವನು ಗುಜರಾಥದ ಮೇಲೆ ಬಿದ್ದನು. ಕ್ರಿ. ಶ. ೧೩೦೩ ರಲ್ಲಿ ವರಂಗಲವನ್ನು ತೆಗೆದುಕೊಳ್ಳಬೇಕೆಂದು ಯತ್ನ ಮಾಡಿದನು. ಆದರೆ ಅದು ಸಾಧ್ಯವಾಗಲಿಲ್ಲ. ೧೩೦೬ ನೆಯ ಇಸ್ವಿಯಲ್ಲಿ ಮಲಿಕಕಾಫರನು ಒಂದು ಲಕ್ಷ ಸೈನ್ಯದೊಂದಿಗೆ ದಕ್ಷಿಣ ಹಿಂದುಸ್ತಾನವನ್ನು ಹೊಕ್ಕು, ದೇವಗಿರಿಯನ್ನು ಮುತ್ತಿ ಅಲ್ಲಿಯ ಅರಸನಾದ ರಾಮದೇವನನ್ನು ಸೋಲಿಸಿದನು. ಕ್ರಿ. ಶ. ೧೩೦೯ ರಲ್ಲಿ ಮುಂದೆ ಅಡಿಯನ್ನಿಕ್ಕಿ ವರಂಗಲ್ಲಿಗೆ ಬಂದು, ಅಲ್ಲಿಯ ಅರಸನನ್ನು ಸೋಲಿಸಿ, ಅವನೊಡನೆ ಒಪ್ಪಂದವನ್ನು ಮಾಡಿಕೊಂಡು ಅಪಾರ ದ್ರವ್ಯವನ್ನು ಕಪ್ಪವಾಗಿ ಸೆಳೆದುಕೊಂಡನು. ೧೩೧೦ ನೆಯ ಇಸ್ವಿಯಲ್ಲಿ ಹೊಯ್ಸಳ ಬಲ್ಲಾಳರ ರಾಜಧಾನಿಯಾದ ದ್ವಾರಸಮುದ್ರವನ್ನು ಹೊಕ್ಕು ಲೂಟಿ ಮಾಡಿದನು. ಕ್ರಿ.ಶ. ೧೩೧೨ರಲ್ಲಿ ಅವನು ದೇವಗಡವನ್ನು ಹೊಕ್ಕು ಅಲ್ಲಿಯ ಅರಸನಾದ ಶಂಕರದೇವನನ್ನು ಕೊಲ್ಲಿಸಿದನು. ಮಲಿಕಕಾಫರನು ಹಾಗೆಯೇ ಮಲಬಾರ ದಂಡೆಯಿಂದ ರಾಮೇಶ್ವರದ ವರೆಗೆ ಹೋಗಿ ಅಲ್ಲಿ ಒಂದು ಮಸೀದೆಯನ್ನು ಕಟ್ಟಿಸಿ ತನ್ನ ಲೂಟಿ ಸಹಿತವಾಗಿ ಬಾದಶಹನ ಬಳಿಗೆ ತಿರುಗಿಹೋದನು. ಈ ಮೇರೆಗೆ ಮುಸಲ್ಮಾನರು ಉತ್ತರದಿಂದ ದಕ್ಷಿಣದ ವರೆಗೆ ಪಾರಾಗಿ ಹೋದರೂ, ಅವರನ್ನು ತಡೆದು ನಿಲ್ಲಿಸುವವರು ಯಾರೂ ಇದ್ದಿಲ್ಲ. ಅವರು ಸ್ವಭಾವಶೂರರು; ಮತ್ತು ಹಿಂದೂ ಧರ್ಮವನ್ನು ಮುರಿದು ತಮ್ಮ ಧರ್ಮವನ್ನು ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಪ್ರೇರಿತರಾದವರು. ಇಂತಹ

ರನ್ನು ಅಡ್ಡಗಟ್ಟುವ ಸಾಮರ್ಥ್ಯವು, ತಮ್ಮ ತಮ್ಮೊಳಗೆ ಹೊಡೆದಾಡಿ ನಿರ್ವೀರ್ಯರಾದ ಹಿಂದೂ ಅರಸರಲ್ಲಿ ಹೇಗೆ ಬರಬೇಕು? ಆದುದರಿಂದ ಮುಸಲ್ಮಾನರ ಚಲ್ಲಾಟಕ್ಕೆ ಹೆಚ್ಚು ಅನುವು ದೊರೆಯಿತು. ಕ್ರಿ. ಶ. ೧೩೧೮ ರಲ್ಲಿ ದಿಲ್ಲಿಯ ಮುಬಾರಿಕನು ದೇವಗಿರಿಗೆ ಬಂದು, ಅಲ್ಲಿಯ ಹತಭಾಗ್ಯರಾಜನಾದ ಹರಿಪಾಲದೇವನ ಮೈದೊಗಲನ್ನು ಸುಲಿಸಿ, ಅವನ ರುಂಡವನ್ನು ಪಟ್ಟಣದ ಅಗಸೆಯ ಬಾಗಿಲಿಗೆ ಕಟ್ಟಿದನು. ೧೩೨೩ ನೆಯ ಇಸ್ವಿಯಲ್ಲಿ ದಿಲ್ಲಿಯ ಸುಲತಾನನು ವರಂಗಲ್ಲನ್ನು ಮುತ್ತಿ, ಅಲ್ಲಿಯ ಅರಸನಾದ ಪ್ರತಾಪ ರುದ್ರದೇವನನ್ನು ಹೆಂಡರು ಮಕ್ಕಳೊಡನೆ ಸೆರೆಹಿಡಿದು ದಿಲ್ಲಿಗೆ ಕಳುಹಿದನು.

ಮುಂದೆ ಕ್ರಿ. ಶ. ೧೩೨೫ರಲ್ಲಿ ಮಹಮ್ಮದ ತಘಲಖನು ದಿಲ್ಲಿಯ ಪಟ್ಟವೇರಿದನು. ಆಗಂತೂ ಹಿಂದೂ ಜನರ ಗೋಳಾಟಕ್ಕೆ ಆಳವಿಲ್ಲದೆ ಹೋಯಿತು. ಇವನು ಶೂರನೂ ಜಾಣನೂ ಅತ್ಯಂತ ಸಾಹಸಿಯೂ ಇದ್ದರೂ, ಅತ್ಯಂತ ವಿಕ್ಷಿಪ್ತನೂ ಕ್ರೂರನೂ ಹಿಂದೂ ಧರ್ಮದ ದ್ವೇಷಿಯೂ ಆಗಿದ್ದನು. ಆದುದರಿಂದ ಇವನ ಆಳಿಕೆಯಲ್ಲಿ ಹಿಂದೂ ಜನರಿಗೆ ಪರಮಾವಧಿ ಸಂಕಟಗಳೊದಗಿದವು. ಹಿಂದೂ ಧರ್ಮದ ಕಡುಹಗೆಯಾದ ಇವನು ದಕ್ಷಿಣ ಹಿಂದುಸ್ತಾನವನ್ನೆಲ್ಲ ಯವನಮಯವಾಗಿ ಮಾಡಬೇಕೆಂದು ಆಲೋಚಿಸಿದನು. ಮಲಿಕ ಕಾಫರನು ದಕ್ಷಿಣವಲ್ಲಿ ಬಂದು ಹೋದಾಗಿನಿಂದ ಹಿಂದೂ ಜನರಲ್ಲಿ ಏನೂ ಹುರುಳಿಲ್ಲೆಂಬುದನ್ನು ಮುಸಲ್ಮಾನರು ಚೆನ್ನಾಗಿ ಮನಗಂಡಿದ್ದರು. ಆದುದರಿಂದ ದಕ್ಷಿಣವನ್ನು ಗೆಲ್ಲುವದಕ್ಕಾಗಿ ಮಹಮ್ಮದನು ತನ್ನ ಒಬ್ಬ ಸೈನಿಕನನ್ನು ಸೈನ್ಯದೊಂದಿಗೆ ಕಳುಹಿದನು.

ಈ ಮಹಮ್ಮದನ ಅಪ್ಪಣೆಯನ್ನು ಯಾರೂ ಮೀರುವಂತಿದ್ದಿಲ್ಲ. ಒಂದು ವೇಳೆ ಯಾರಾದರೂ ಅಂತಹ ಸಾಹಸಕ್ಕೆ ಮನಸ್ಸು ಮಾಡಿದರೆ ಅವರನ್ನು ಅಮಾನುಷ ರೀತಿಯಿಂದ ಪೀಡಿಸುತ್ತಿದ್ದನು. ಇವನು ದೇವಗಿರಿಗೆ ದೌಲತಾಬಾದವೆಂದು ಹೆಸರಿಟ್ಟು ತನ್ನ ರಾಜಧಾನಿಯನ್ನು ದಿಲ್ಲಿಯಿಂದ ಅಲ್ಲಿಗೆ ಒಯ್ಯಬೇಕೆಂದು ನಿಶ್ಚಯಿಸಿದನು. ಈ ಎರಡೂ ಪಟ್ಟಣಗಳ ನಡುವಿನ ಅಂತರವು ೬೦೦ ಮೈಲು ಇದ್ದು, ದಿಲ್ಲಿಯ ಜನರಿಗೆಲ್ಲ ದೌಲತಾಬಾದಿಗೆ ಸಾಗುವಂತೆ ಕಟ್ಟಪ್ಪಣೆ ಮಾಡಿದನು. ದಾರಿಯಲ್ಲಿ ಸಾವಿರಗಟ್ಟಲೆ ಹೆಂಗಸರೂ, ಹುಡುಗರೂ, ಮುದುಕರೂ ಸತ್ತುಹೋದರು. ಈ ಪ್ರವಾಸವನ್ನು ಪ್ರತ್ಯಕ್ಷವಾಗಿ ನೋಡಿದ ಇಬನ್ ಬಟೂಟನು ಬರೆದಿರುವದನ್ನು ನೋಡಿದರೆ, ಈ ಮಹಮ್ಮದ ತಘಲಖನಿಂದ ಪ್ರಜೆಗಳಿಗೆ ಯಾವ ತರದ ಸೌಖ್ಯವಾಗುತ್ತಿತ್ತೆಂಬುದು ಚೆನ್ನಾಗಿ ನಿದರ್ಶನಕ್ಕೆ ಬರುತ್ತದೆ! ಇಬನ್ ಬಟೂಟನು ಬರೆದಿರುವುದೇನಂದರೆ :

"ಸುಲತಾನನು ದಿಲ್ಲಿಯನ್ನು ಬಿಡುವದಕ್ಕೆ ಎಲ್ಲ ಜನರನ್ನು ಆಜ್ಞಾಪಿಸಿದನು. ಆಮೇಲೆ ಜನರು ಸ್ವಲ್ಪ ತಡ ಮಾಡುವದನ್ನು ಕಂಡು, ಯಾವನೊಬ್ಬ ಮನುಷ್ಯನು ದಿಲ್ಲಿಯೊಳಗಿನ ಮನೆಗಳಲ್ಲಾಗಲಿ, ಬೀದಿಯಲ್ಲಾಗಲಿ ಸಿಕ್ಕರೆ ಅವನಿಗೆ ತಕ್ಕ ಶಿಕ್ಷೆಯು ವಿಧಿಸಲ್ಪಡುವದೆಂದು ಪ್ರಕಟಿಸಿದನು. ಇದನ್ನು ಕೇಳಿ ಎಲ್ಲರೂ ಹೊರಟರು. ಅವನ ಸೇವಕರು ಒಂದು ಮನೆಯಲ್ಲಿ ಒಬ್ಬ ಕುರುಡನನ್ನೂ, ಮತ್ತೊಂದು ಮನೆಯಲ್ಲಿ ಒಬ್ಬ

ಬೇನೆಯುವನನ್ನೂ ಹಿಡಿದು ಕೊಟ್ಟರು. ಆಗ ಅರಸನು ಆ ಬೇನೆಯುವನನ್ನು ಒಂದು ಎತ್ತರದ ಸ್ಥಳದಿಂದ ಕೆಳಗೆ ಚಲ್ಲಿಬಿಡಬೇಕೆಂತಲೂ. ಕುರುಡನನ್ನು ದೌಲತಾಬಾದಿನ ವರೆಗೆ ಕಾಲುಹಿಡಿದು ಎಳೆದು ಒಯ್ಯಬೇಕೆಂತಲೂ ಅಪ್ಪಣೆ ಮಾಡಿದನು. ದೌಲತಾಬಾದ ಪಟ್ಟಣವು ಹತ್ತಿಪ್ಪತ್ತು ದಿವಸಗಳ ದಾರಿಯ ಅಂತರದಲ್ಲಿದ್ದರೂ ಪಾಪ! ಆ ಕುರುಡ ನನ್ನು ಅಲ್ಲಿಯವರೆಗೆ ಎಳೆದುಕೊಂಡು ಹೋದರು! ಅವನ ಅವಯವಗಳೆಲ್ಲ ದಾರಿಯಲ್ಲಿ ಒಂದೊಂದೇ ಚೂರು ಚೂರಾಗಿ ಬಿದ್ದವು!! ಆದರೂ ಆತನ ಒಂದು ಕಾಲನ್ನು ಮಾತ್ರ ದೌಲತಾಬಾದಿಗೆ ಒಯ್ದು ಅದನ್ನು ಅಲ್ಲಿ ಚಲ್ಲಿಕೊಟ್ಟರು." ಇಬನ್ ಬಟೂಟನೇ ಇನ್ನೊಂದೆಡೆಯಲ್ಲಿ ಹೀಗೆ ಬರೆದಿದ್ದಾನೆ. "ಮಹಮ್ಮದನು ಕೊಲ್ಲಿಸಿದವನ ಹೆಣವು ಅರಮನೆಯ ಬಾಗಿಲಲ್ಲಿ ತೂಗಾಡಲಿಕ್ಕೆ ಬೇಕು. ಜನರನ್ನು ಕೊಂದಮೇಲೆ ಅವರ ಹೆಣ ಗಳು ಅಲ್ಲೇ ಉಳಿದಿರುವದನ್ನು ನಾನು ಎಷ್ಟೋ ಸಾರೆ ನೋಡಿದ್ದೇನೆ. ಒಂದು ದಿನ ನಾನು ಅವನ ಅರಮನೆಗೆ ಹೋದಾಗ ನನ್ನ ಕುದುರೆಯು ಬೆದರಿತು; ಮುಂದೆ ನೋಡು ವಷ್ಟರಲ್ಲಿ ಅಲ್ಲಿ ಒಂದು ಬೆಳ್ಳನ್ನ ಗುಂಪು ಕೂಡಿತು. ಅದೇನೆಂದು ಕೇಳಲು, ಮೂರು ತುಂಡುಗಳಾಗಿ ಕಡಿದ ಒಬ್ಬ ಮನುಷ್ಯನ ಧಡವೆಂದು ನನ್ನ ಜೊತೆಗಾರನು ಹೇಳಿದನು. ಪ್ರತಿದಿವಸ ಸಭಾಮಂಟಪದಲ್ಲಿ ನೂರಾರು ಜನರನ್ನು ಸಂಕೋಲೆ ಹಾಕಿ, ಅವರ ಕೈ ಗಳನ್ನು ಕತ್ತಿನ ಮೇಲೆ ಕಟ್ಟಿ ತರುತ್ತಿದ್ದರು. ಅವರಲ್ಲಿ ಎಷ್ಟೋ ಜನರನ್ನು ಕೊಲ್ಲು ತ್ತಿದ್ದರು. ಉಳಿದವರನ್ನು ಮೈಮುರಿ ಹೊಡೆದು ಪೀಡಿಸುತ್ತಿದ್ದರು."

ಹೀಗೆ ಒಂದಲ್ಲ, ಎರಡಲ್ಲ ಹಲವು ಬಗೆಗಳಿಂದ ಹಿಂದೂ ಜನರಿಗೆ ಹಿಂಸೆಯಾಯಿತು. ಮುಸಲ್ಮಾನರು ದೇವಾಲಯಾದಿ ಪವಿತ್ರ ಸ್ಥಳಗಳನ್ನು ಧ್ವಂಸ ಮಾಡಿ, ಜನರ ಸಂಪ ತ್ತನ್ನೂ ಮಾನ ಮರ್ಯಾದೆಯನ್ನೂ ಉಚ್ಛೇದಗೊಳಿಸಿದರು. ತಮ್ಮ ಪ್ರಾಣವನ್ನೂ ಧರ್ಮವನ್ನೂ ಉಳಿಸಿಕೊಳ್ಳುವದು ಜನರಿಗೆ ಅಸಾಧ್ಯವಾಯಿತು! ಈ ಪ್ರಕಾರದ ದುರ್ಧರ ಸ್ಥಿತಿಯನ್ನು ತಡೆದು ಜನರಿಗೆ ಆಶ್ರಯ ಕೊಡತಕ್ಕವರೆಂದರೆ, ಚಿಕ್ಕ ಚಿಕ್ಕ ಹಿಂದೂ ಸಂಸ್ಥಾನಗಳ ರಾಜರು; ಇವರೊಳಗಿನ ವರಂಗಲ್ ಮತ್ತು ದ್ವಾರಸಮುದ್ರದ ರಾಜರು ಈ ಮೊದಲೇ ಮುಸಲ್ಮಾನರಿಗೆ ಸೋತುಹೋದ ಕಾರಣ, ಅವರ ಎದುರಿಗೆ ನಿಲ್ಲಲು ಈ ಸಂಸ್ಥಾನಿಕರಿಗೆ ಸಾಕಷ್ಟು ಧೈರ್ಯವಿದ್ದಿಲ್ಲ. ಇವುಗಳ ಹೊರತಾಗಿ ಇದ್ದ ಸಂಸ್ಥಾನವೆಂದರೆ ಆನೆಗೊಂದಿಯು. ಹಿಂದುಸ್ತಾನ ನಕಾಶದ ಮೇಲೆ ಮುಂಬಯಿಯಿಂದ ಮದ್ರಾಸದ ವರೆಗೆ ಒಂದು ಸರಳ ರೇಷೆಯನ್ನೆಳೆದೆವೆಂದು ಕಲ್ಪಿಸುವಾ. ಅಂದರೆ ಸುಮಾರು ಅರ್ಧದಾರಿಯಲ್ಲಿ ಮೈಸೂರಿನಿಂದ ಉತ್ತರ ದಿಕ್ಕಿಗೆ ಹರಿದುಬರುವ ತುಂಗಾ ಮತ್ತು ಭದ್ರಾ ಎಂಬ ಎರಡು ನದಿಗಳ ಸಂಯೋಗದಿಂದುಂಟಾದ ತುಂಗಭದ್ರಾ ಎಂಬ ನದಿಯು ಹತ್ತುತ್ತದೆ. ಅದು ಬಳ್ಳಾರಿಯ ವಾಯುವ್ಯಕ್ಕೂ ಅಲ್ಲಿಂದ ಧಾರವಾಡದ ವರೆಗೂ ಬರುವ ಹೊಗೆಬಂಡಿಯ ಮಾರ್ಗದ ಉತ್ತರಕ್ಕೆ ಸುಮಾರು ೪೦ ಮೈಲುಗಳ ದೂರದಲ್ಲಿರುವ ಗುಡ್ಡಗಾಡ ಪ್ರದೇಶದೊಳಗಿಂದ ಹಾದು ಕರ್ನೂಲದ ಹತ್ತಿರ ಕೃಷ್ಣಾ ನದಿಗೆ ಕೂಡುತ್ತದೆ. ಈ ಗುಡ್ಡಗಾಡ ಪ್ರದೇಶದಲ್ಲಿ ನದಿಯ ಉತ್ತರ ದಂಡೆಯ ಮೇಲೆ ಕ್ರಿ. ಶ. ೧೩೩೦ ರ

ಸಂಸ್ಥಾನಕ್ಕೆ ಆನೆಗೊಂದಿಯೆಂಬ ಕೋಟೆಯು ಇತ್ತು. ನೆರೆಹೊರೆಯ ಸ್ವಲ್ಪ ಪ್ರದೇಶವು ಮಾತ್ರ ಈ ಆನೆಗೊಂದಿಯ ನಾಯಕರ ಕೈಯಲ್ಲಿತ್ತು. ಪೂರ್ವ ಕಾಲದಲ್ಲಿ ಇವರು ಈ ಪಟ್ಟಣದ ಉತ್ತರ ದಿಕ್ಕಿನಲ್ಲಿ ಅಲ್ಲಿಯ ದೊಡ್ಡ ದೊಡ್ಡ ಕರಿಯಕಲ್ಲಿನ ಬಂಡೆಗಳಿಂದ ಕೋಟೆಯನ್ನು ಕಟ್ಟಿ ಅದನ್ನು ಚೆನ್ನಾಗಿ ಭದ್ರಪಡಿಸಿದ್ದರು. ದಕ್ಷಿಣದಲ್ಲಂತೂ ಎಷ್ಟೋ ಮೈಲುಗಳ ವರೆಗೆ ನದಿಯು ದಾಟಲಿಕ್ಕೆ ಬರುವಂತಿದ್ದಿಲ್ಲ. ಈ ನಾಯಕರ ವಿಷಯವಾಗಿ ನಮಗೆ ಏನೂ ಗೊತ್ತಿಲ್ಲೆಂದರೂ ಸಲ್ಲುವದು. ಇವರು ಹೊಯಿಸಲ ಬಲ್ಲಾಳರ ಮಾಂಡಲಿಕರಿದ್ದಂತೆ ತೋರುತ್ತದೆ. ಇವರು ಕ್ರಿ.ಶ. ೧೩೫೦ ಕ್ಕೆ ಮುಂಚೆ ೭೦೦ ವರ್ಷಗಳ ವರೆಗೆ ಆನೆಗೊಂದಿಯಲ್ಲಿ ಆಳುತ್ತಿದ್ದರೆಂದು ಫೆರಿಸ್ತನೆಂಬ ಇತಿಹಾಸಕಾರನು ಬರೆದಿದ್ದಾನೆ. ಈ ನಾಯಕರ ವಿಷಯವಾಗಿ ತಿಳಿದ ಕೆಲವು ಅಂಶಗಳನ್ನು ಮುಂದಿನ ಪ್ರಕರಣದಲ್ಲಿ ಕೊಡುವೆವು.

ಈ ಆನೆಗೊಂದಿಯ ಸಂಸ್ಥಾನವು ಆಗ ಹೇಗಾದರೂ ಜೀವವನ್ನು ಹಿಡಿದಿತ್ತು. "ಬುಡತ್ಯಾಲಾ ಕಾಡಿಚಾ ಆಧಾರ" ಎಂಬಂತೆ ನಿರಾಶ್ರಿತರಿಗೆ ಇದಿಷ್ಟೇ ತಕ್ಕಮಟ್ಟಿಗೆ ಆಧಾರವಾಗಿತ್ತು. ಆದರೆ ದುರ್ದೈವದಿಂದ ಇದರ ಉತ್ಪಾಟನದ ಸಮಯವೂ ಸಮೀಪಿಸಿತು. ಆಗಿನ ಕಾಲಕ್ಕೆ ಆನೆಗೊಂದಿಯ ರಾಜನಾದ ಜಂಬುಕೇಶ್ವರನು ಗುಡ್ಡದೊಳಗಿನ ತನ್ನ ಭದ್ರವಾದ ಕಿಲ್ಲೆಯಲ್ಲಿ ವಾಸವಾಗಿದ್ದನು. ಮಹಮ್ಮದ ತಘಲಖನ ಅಣ್ಣನ ಮಗನಾದ ಬಹವುದ್ದೀನನೆಂಬವನು, ಸುಲತಾನನ ವಿರುದ್ಧವಾಗಿ ಬಂಡೆಬ್ಬಿಸಿ ದಕ್ಷಿಣಕ್ಕೆ ಬಂದು ಜಂಬುಕೇಶ್ವರನನ್ನು ಆಶ್ರಯಿಸಿದ್ದನೆಂದು ಕೆಲವರು ಹೇಳುತ್ತಾರೆ. ಅದು ಹೇಗೇ ಇರಲಿ. ಹಿಂದೆ ಹೇಳಿದಂತೆ ಮಹಮ್ಮದ ತಘಲಖನ ಒಬ್ಬ ಸೈನಿಕನು ಸೈನ್ಯಸಹಿತನಾಗಿ ಆನೆಗೊಂದಿ ಅಥವಾ ವಿಜಯನಗರಕ್ಕೆ ಬಂದು ಅದನ್ನು ಮುತ್ತಿದನು. ಮುಸಲ್ಮಾನರ ದೊಡ್ಡ ಸೈನ್ಯದ ಮುಂದೆ ಜಂಬುಕೇಶ್ವರನ ಆಟವೇನೂ ಸಾಗಲಿಲ್ಲ. ಆದರೆ ಅವನು ಶೂರನೂ ಪರಾಕ್ರಮಿಯೂ ಆಗಿದ್ದುದರಿಂದ ಮುಸಲ್ಮಾನರಿಗೆ ಶರಣಾಗತನಾಗಿ ಕೋಟೆಯನ್ನು ಅವರ ಕೈವಶ ಮಾಡುವದಕ್ಕೆ ಅವನ ಮನಸ್ಸು ಎಳೆಯಲಿಲ್ಲ. ಹಿಂದೂ ಅರಸರಲ್ಲಿ ಆಗಿನ ಕಾಲಕ್ಕೆ ಒಕ್ಕಟ್ಟು ಇಲ್ಲದ್ದರಿಂದ ಅವನ ಸಹಾಯಕ್ಕೆ ಯಾರೂ ಬರಲಿಲ್ಲ. ಕೊನೆಗೆ ಜಂಬುಕೇಶ್ವರನು ದೊಡ್ಡದೊಂದು ಅಗ್ನಿಯನ್ನು ಪ್ರಜ್ವಲಿಸಿ ತನ್ನ ಮತ್ತು ತನ್ನ ಸರದಾರರ ಹೆಂಡರು ಮಕ್ಕಳನ್ನು ಅಗ್ನಿನಾರಾಯಣನಿಗೆ ಆಹುತಿಯಾಗಿ ಅರ್ಪಿಸಿ ಖಡ್ಗಪಾಣಿಯಾಗಿ ಕೋಟೆಯಿಂದ ಹೊರಬಿದ್ದು ಶತ್ರುಗಳೊಡನೆ ಕಲಿತನದಿಂದ ಕಾದಿ ವೀರಸ್ವರ್ಗವನ್ನು ಪಡೆದನು. ಮುಸಲ್ಮಾನರು ಒಳಹೊಕ್ಕು, ತೋಳವು ಕುರಿಗಳ ಹಿಂಡನ್ನು ಕತ್ತರಿಸುವಂತೆ ಪ್ರತಿಯೊಬ್ಬನನ್ನು ತುಂಡರಿಸಿ ಚಲ್ಲಿದರು. ಆರೇ ಆರು ಜನರು ಮಾತ್ರ ಪಾರಾದರೆಂತಲೂ, ಅವರಲ್ಲಿ ಮುಂದೆ ಅರಸನಾದ ಹರಿಹರನೊಬ್ಬನಿದ್ದನೆಂತಲೂ ಕೆಲವರು ಹೇಳುತ್ತಾರೆ. ಜಂಬುಕೇಶ್ವರನ ಹನ್ನೆರಡು ಮಕ್ಕಳನ್ನು ಸುಲತಾನನು ಮುಸಲ್ಮಾನರನ್ನಾಗಿ ಮಾಡಿದನೆಂದು ಮತ್ತೆ ಕೆಲವರು ಹೇಳುತ್ತಾರೆ. ಈ ಪ್ರಕಾರ ಮನೆಯೊಳಗಿನ ಒಡಕು ಮನೆಯನ್ನು ಹಾಳು ಮಾಡಿತು. ಹಿಂದೂ ಅರಸರ ಸ್ವಾರ್ಥ

ಬುದ್ಧಿಯ ದುಷ್ಟಪರಿಣಾಮವನ್ನು ಆ ಶೂರನಾದ ಜಂಬುಕೇಶ್ವರನು ಅನುಭವಿಸಬೇಕಾಯಿತು. ಈ ಪ್ರಕಾರ ಕೋಟೆಯು ಕೈವಶವಾದ ಬಳಿಕ ಸುಲತಾನನು ಅಲ್ಲಿ ಒಬ್ಬ ಪ್ರತಿನಿಧಿಯನ್ನು ನಿಯಮಿಸಿದನು. ಆ ಪ್ರತಿನಿಧಿಯು ಸುಲತಾನನಂತೆಯೇ ದುರಾಗ್ರಹಿಯೂ ಹಿಂದೂ ಜನರನ್ನು ಪೀಡಿಸುವವನೂ ಆಗಿದ್ದನು. ಆದುದರಿಂದ ದೇಶದಲ್ಲುಂಟಾದ ಕ್ಷುಬ್ಧತೆಯನ್ನೂ, ಅರಾಜಕತೆಯನ್ನೂ ಬಣ್ಣಿಸಲಸದಳವಾಗಿದೆ. ಮೇಲಾಗಿ, ಆಗಿನ ಜನರು ಪಾರತಂತ್ರ್ಯದಲ್ಲಿ ಸುಖ ಹಚ್ಚಿಕೊಳ್ಳುವದಕ್ಕೆ ಇನ್ನೂ ಅಭ್ಯಸ್ತರಾಗಿದ್ದಿಲ್ಲ. ಆದುದರಿಂದ ಅವರು ಪುನಃ ಒಂದೆರಡು ವರುಷಗಳಲ್ಲಿ ಬಂಡು ಎಬ್ಬಿಸಿ ಸುಲತಾನನ ಪ್ರತಿನಿಧಿಯನ್ನು ಓಡಿಸಿದರು. ಆದರೆ ವಿಜಯನಗರದಲ್ಲಿ ಅರಸನಿಲ್ಲದ್ದರಿಂದ ಅರಾಜಕತೆಯು ಮಾತ್ರ ಹಾಗೆಯೇ ಉಳಿಯಿತು.

ಈ ಪ್ರಕಾರ ಶ್ರೀ ವಿದ್ಯಾರಣ್ಯಸ್ವಾಮಿಗಳ ಉದಯಕಾಲದಲ್ಲಿ ವಿಂಧ್ಯಪರ್ವತದ ವರೆಗಿನ ಎಲ್ಲ ಉತ್ತರ ಹಿಂದುಸ್ಥಾನವು ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಳಕೊಂಡು ಮುಸಲ್ಮಾನರಿಗೆ ಅಂಕಿತವಾಗಿತ್ತು. ದಕ್ಷಿಣದಲ್ಲಿ ಸಹ ಕೃಷ್ಣಾತೀರದ ತನಕ ಮುಸಲ್ಮಾನರು ತುಂಬಿದ್ದರು. ದೇವಗಿರಿ, ವರಂಗಲ್ಲ ಮುಂತಾದ ರಾಜ್ಯಗಳನ್ನು ಗೆದ್ದು ಅವುಗಳನ್ನು ತಮ್ಮ ರಾಜ್ಯಕ್ಕೆ ಜೋಡಿಸಿಕೊಂಡಿದ್ದರು. ಈ ರೀತಿಯಾಗಿ ಎರಡು ಮೂರು ಶತಮಾನಗಳಿಂದ ಮುಸಲ್ಮಾನರು ಅವ್ಯಾಹತವಾಗಿ ಒಂದರ ಮೇಲೊಂದು ಹೆಜ್ಜೆಯನ್ನಿಕ್ಕುತ್ತ ಉತ್ತರ ಹಿಂದುಸ್ಥಾನವನ್ನೆಲ್ಲ ಪಾದಾಕ್ರಾಂತಮಾಡಿ ಲಕ್ಷಾವಧಿ ಹಿಂದೂ ಜನರನ್ನು ಬಲಾತ್ಕಾರದಿಂದ ಮುಸಲ್ಮಾನರನ್ನು ಮಾಡಿ, ದಕ್ಷಿಣವನ್ನು ಸಹ ಅದೇ ರೀತಿಯಾಗಿ ಮಾಡುವದಕ್ಕೆ ಉದ್ಯುಕ್ತರಾಗಿದ್ದರು. ಅಲ್ಲಿಯ ವರೆಗೆ ಅವರ ಮಾರ್ಗವನ್ನು ನಿರೋಧಿಸುವ ಗಟ್ಟಿಗರು ಯಾರೂ ಇದ್ದಿಲ್ಲ. ಇದು ಮುಸಲ್ಮಾನರ ಸ್ಥಿತಿಯಾಯಿತು.

ಕೃಷ್ಣೆಯ ದಕ್ಷಿಣದ ಪ್ರದೇಶವೆಲ್ಲ ಹಿಂದೂ ರಾಜರ ಕೈಯಲ್ಲಿಯೇ ಇತ್ತು. ಅವರ ಸ್ಥಿತಿಯು ಇದಕ್ಕೆ ವಿಪರೀತವಾಗಿತ್ತು. ಉತ್ತರದಿಂದ ಬರುವ ಆಘಾತಗಳಿಂದ ದಕ್ಷಿಣದ ನೆಲಗಟ್ಟು ಅದಿರಲಾರಂಭಿಸಿತು. ಚೋಳ, ಚೇರ, ಪಾಂಡ್ಯ, ಕದಂಬ, ಬಲ್ಲಾಳ ಮೊದಲಾದ ವೈಭವಶಾಲಿಗಳಾದ ರಾಜ್ಯಗಳೆಲ್ಲ ನಷ್ಟವಾಗಿದ್ದುವು. ಉಳಿದವು ಮರಿಕಳಿಗೆ ಬಂದಿದ್ದವು. ಮತ್ತು ತಮ್ಮ ತಮ್ಮೊಳಗೆ ಹೊಡೆದಾಡುತ್ತಿದ್ದವು. ಎಲ್ಲಿಯ ವರೆಗೆ ಪರ ಶತ್ರುಗಳ ಭೀತಿಯು ಇದ್ದಿಲ್ಲವೋ ಅಲ್ಲಿಯವರೆಗೆ ಈ ಒಳಜಗಳಗಳಿಂದ ವಿಶೇಷ ಹಾನಿಯು ತಟ್ಟಲಿಲ್ಲ. ಮುಸಲ್ಮಾನರು ದಕ್ಷಿಣವನ್ನು ಹೊಕ್ಕ ಕೂಡಲೇ ಹಿಂದೂ ಜನರು ತಮ್ಮೊಳಗಿನ ಅಂತಃಕಲಹಗಳನ್ನು ಮರೆತುಬಿಟ್ಟು ಐಕಮತ್ಯದಿಂದ ಶತ್ರುಗಳೊಡನೆ ಹೋರಾಡಬೇಕಾಗಿತ್ತು. ಆದರೆ ಪರಶತ್ರುವಿನ ಮುಂದೆ ತಮ್ಮ ಒಳಭೇದಗಳನ್ನೆಲ್ಲವನ್ನೂ ಮರೆತು ಬಿಡಬೇಕೆಂಬ ತತ್ವವು ಅವರಿಗೆ ಮನವರಿಕೆಯಾಗಿದ್ದಿಲ್ಲ. ಆದುದರಿಂದ ದೇವಗಿರಿ ವರಂಗಲ್ಲ ರಾಜ್ಯಗಳು ಮುಸಲ್ಮಾನರ ಪಾಲಾದವು. ದ್ವಾರಸಮುದ್ರ ವಿಜಯನಗರಗಳಿಗೆ ಮುಸಲ್ಮಾನರ ಪೆಟ್ಟು ಚೆನ್ನಾಗಿಯೇ ತಗಲಿತ್ತು. ಮುಸಲ್ಮಾನರ ಶೂರತನವನ್ನೂ ಕ್ರೂರ

ತನವನ್ನೂ ಕೇಳಿ ಹಿಂದೂ ಜನರು ಗಾಬರಿಯಾಗಿದ್ದರು. ಮುಹಮ್ಮದ ತಘಲಖನ ಅಘೋರಕೃತಿಗಳಿಂದ ಅವರ ಹೃದಯವು ತಲ್ಲಣಿಸಿತು.

ಈ ಪ್ರಕಾರ ದಕ್ಷಿಣಹಿಂದುಸ್ಥಾನದ ಜನರೆಲ್ಲ ಕಣ್ಣು ಕತ್ತಲೆಗಟ್ಟಿದವರಾಗಿ ಮುಂದು ಗಾಣದೆ ಇದ್ದರು. ಹಿಂದೂಧರ್ಮವೆಲ್ಲ ಹಾಳಾಗಿ ದೇಶವು ಯವನಮಯವಾಗುತ್ತದೆಂಬ ಭೀತಿಯು ಹಗಲಿರುಳು ಅವರ ಮನದಲ್ಲಿ ಕಟೆಯುತ್ತಿತ್ತು. ಹಿಂದೂ ದೇವಾಲಯಗಳನ್ನು ನೆಲಸಮ ಮಾಡಿ ಮಸೀದೆಗಳನ್ನು ಕಟ್ಟುವದೂ ಹಿಂದೂ ಜನರ ಪವಿತ್ರ ಮೂರ್ತಿಗಳಿಗೆ ರಕ್ತಮಾಂಸಗಳನ್ನು ತೊಡೆದು ಭ್ರಷ್ಟಗೊಳಿಸುವದೂ, ಗೋಮಾತೆಯನ್ನು ಕಂಡಕಂಡಲ್ಲಿ ಕೊಲ್ಲುವದೂ ಹಿಂದೂ ಪತಿವ್ರತೆಯರ ಮಾನಭಂಗ ಮಾಡುವದೂ ಇವೇ ಮೊದಲಾದ ಅಘೋರಕೃತ್ಯಗಳು ಎಡೆಬಿಡದೆ ನಡೆದಿದ್ದುವು. ಈ ಮೇರೆಗೆ ಇಡೀ ಹಿಂದುಸ್ಥಾನಕ್ಕೆ ಅತ್ಯಂತ ಭಯಂಕರ ಸ್ಥಿತಿಯು ಪ್ರಾಪ್ತವಾಗಿತ್ತು. ಈ ಪಾಪಕೃತ್ಯಗಳ ಹೊರೆಯ ಕೆಳಗೆ ಭಾರತ ಭೂಮಾತೆಯು ವಿಲಿವಿಲಿ ಒದ್ದಾಡುತ್ತಿದ್ದಳು. ಹಿಂದೂ ಜನರು ಹತ ವೀರ್ಯರೂ ನೀತಿಭ್ರಷ್ಟರೂ ಆಗಿದ್ದರು. ಆದರೆ ಅತ್ಯಂತನಾಗಿ ಸಂತ್ರಸ್ತರಾದ ದೀನ ಜನರು ಒಂದುಗೂಡಿ ದೇವರನ್ನು ಪ್ರಾರ್ಥಿಸಹತ್ತಿದರು. ಮತ್ತು ಈಶಪ್ರೇರಣೆಯಿಂದಲೇ ದೇಶೋದ್ಧಾರದ ಉಪಾಯವನ್ನು ಹುಡುಕಹತ್ತಿದರು. ಪುಣ್ಯವು ಪ್ರಬಲವಾಗಿದ್ದರೆ ಇಂತಹ ಕಾಲದಲ್ಲಿಯೇ ಲೋಕಕಲ್ಯಾಣಕಾರಿಗಳಾದ ಮಹಾತ್ಮರು ಉದಯಹೊಂದು ತ್ತಾರೆ. ಮೇಲೆ ಹೇಳಿದಂತೆ ಸರ್ವತ್ರ ಧರ್ಮಗ್ಲಾನಿಯಾದುದನ್ನು ಶ್ರೀಪರಮಾತ್ಮನು ಎಷ್ಟು ದಿವಸ ನೋಡಿಯಾನು ?

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಮ್ ||
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ |
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ||

ಎಂಬ ಭಗವಂತನ ಉಕ್ತಿಯು ಎಂದಾದರೂ ಸಟೆಯಾದೀತೇ ? ಭರತಭೂಮಾತೆಯು ಪರಕೀಯರ ಆಳುಕಿನಲ್ಲಿ ಸಿಕ್ಕಿದ್ದನ್ನೂ, ಭಾರತಪುತ್ರರ ಪರಮಪವಿತ್ರ ಸ್ವಾತಂತ್ರ್ಯವೂ ಧರ್ಮವೂ ಹಾಳಾಗಿ ಹೋಗಹತ್ತಿದ್ದನ್ನೂ ನೋಡಿ ಪರಮಾತ್ಮನು ಶ್ರೀ ವಿದ್ಯಾರಣ್ಯ ಸ್ವಾಮಿಗಳ ಮುಖಾಂತರವಾಗಿ ಜಗದುದ್ಧಾರವನ್ನು ಮಾಡಿದನು.

ಶ್ರೀ ವಿದ್ಯಾರಣ್ಯಸ್ವಾಮಿಗಳೇ ವಿಜಯನಗರದ ರಾಜ್ಯಸ್ಥಾಪನೆಗೆ ಮೂಲಕಾರಣ ರೆಂಬಲ್ಲಿ ಎಳ್ಳಷ್ಟಾದರೂ ಸಂದೇಹವಿಲ್ಲ. ಇನ್ನು ಇವರು ಹರಿಹರರಾಯನನ್ನು ಎಲ್ಲಿ ಕಂಡರು ? ಹರಿಹರರಾಯನ ಪೂರ್ವೇತಿಹಾಸವೇನು ? ಈ ಮೊದಲಾದ ಪ್ರಶ್ನೆಗಳ ವಿಷಯಕ್ಕೆ ಜನರಲ್ಲಿ ಮತಭೇದವುಂಟು. ಇಬನ್ ಬಟೂಟನೆಂಬ ಪ್ರವಾಸಿಯು ಕ್ರಿ. ಶ. ೧೩೩೩ ರಿಂದ ೧೩೪೨ರ ವರೆಗೆ ಈ ದೇಶದಲ್ಲಿದ್ದನು. ವಿಜಯನಗರದಲ್ಲಿ ಜಂಬುಕೇಶ್ವರ ನೆಂಬ ಅರಸನು ಇದ್ದನೆಂತಲೂ ಅವನ ಬಳಿಗೆ ಬಹವುದ್ದೀನನು ಬಂದು ಅಡಗಿ ನಿಂತಿದ್ದ

ರಿಂದ ಮುಸಲ್ಮಾನರಿಗೂ ಅವನಿಗೂ ಯುದ್ಧವಾಯಿತೆಂತಲೂ, ಆ ಕಾಳಗದಲ್ಲಿ ಜಂಬುಕೇಶ್ವರನು ಸೋತನೆಂತಲೂ ಅವನು ಬರೆದಿದ್ದಾನೆ. ನ್ಯುನಿಝುನೆಂಬ ಪೋರ್ತುಗೀಸ ಪ್ರವಾಸಿಯು ಕೂಡ ಸ್ವಲ್ಪ ಹೆಚ್ಚುಕಡಿಮೆಯಾಗಿ ಇದೇ ಕಥೆಯನ್ನೇ ಹೇಳಿದ್ದಾನೆ. ಹರಿಹರರಾಯನು ಜಂಬುಕೇಶ್ವರನ ಮಂತ್ರಿಯಾಗಿದ್ದನೆಂತಲೂ, ಜಂಬುಕೇಶ್ವರನ ಮರಣದ ಅನಂತರ ಸುಲತಾನನು ಹರಿಹರನನ್ನು ಪಟ್ಟಕ್ಕೆ ಕೂಡ್ರಿಸಿದನೆಂತಲೂ, ಅವನು ಒಂದು ದಿನ ಬೇಟೆಯಾಡಲಿಕ್ಕೆ ಹೋದಾಗ ನಾಯಿಯು ಮೊಲದ ಬೆನ್ನುಹತ್ತುವ ಬದಲು, ಮೊಲವು ನಾಯಿಯ ಬೆನ್ನುಹತ್ತಿದ ಚಮತ್ಕಾರವನ್ನು ಕಂಡನೆಂತಲೂ, ಬೇಟೆಯಿಂದ ಮರಳಿ ಬರುವಾಗ ದಾರಿಯಲ್ಲಿ ತುಂಗಭದ್ರಾತೀರದ ಮೇಲೆ ಶ್ರೀ ವಿದ್ಯಾರಣ್ಯಸ್ವಾಮಿಗಳನ್ನು ನೋಡಿ ಅವರಿಗೆ ತಾನು ಕಂಡ ವಿಲಕ್ಷಣ ಸಂಗತಿಯನ್ನು ನಿವೇದಿಸಿದನೆಂತಲೂ, ಅವರು ಅವನಿಗೆ ಆ ಸಂಗತಿಯು ಸಂಭವಿಸಿದ ಸ್ಥಳದಲ್ಲಿಯೇ ಒಂದು ನಗರವನ್ನು ಸ್ಥಾಪಿಸಲಿಕ್ಕೆ ಹೇಳಿದರೆಂತಲೂ, ಅದರಂತೆ ಹರಿಹರರಾಯನು ಅಲ್ಲಿ ಒಂದು ಪಟ್ಟಣವನ್ನು ಕಟ್ಟಿ, ಅದಕ್ಕೆ ವಿದ್ಯಾನಗರ ಎಂಬ ಹೆಸರಿಟ್ಟನೆಂತಲೂ ಇಬನ್ ಬಟೂಟ, ನ್ಯುನಿಝು ಇವರು ಬರೆದಿದ್ದಾರೆ. ಮೇಲಿನ ನಾಯಿ ಮೊಲದ ಆಖ್ಯಾಯಿಕೆಯು ಎಷ್ಟು ಇತಿಹಾಸ ಗರ್ಭವಾಗಿದೆಯೆಂಬುದು ಸ್ವಲ್ಪ ವಿಚಾರದಿಂದ ತಿಳಿಯುವಂತಿದೆ. ಇಂತಹ ಆಖ್ಯಾಯಿಕೆಗಳ ಅರ್ಥವು ಎಷ್ಟೋ ಸಾರೆ ಬಹಳೇ ಗೂಢವಾಗಿರುತ್ತದೆ. ಬೇಗನೇ ಅರ್ಥಬೋಧವಾಗದ ಕಾರಣದಿಂದ ಅನೇಕರು ಇಂತಹ ಆಖ್ಯಾಯಿಕೆಗಳನ್ನು ಉಪಹಾಸ ಮಾಡುತ್ತಾರೆ. ಇದು ಸರಿಯಲ್ಲ. ಪೂರ್ವಕಾಲದ ಇಂತಹ ಅದ್ಭುತ ಕಥೆಗಳಲ್ಲಿ ಇತಿಹಾಸರತ್ನಗಳು ಸಂಗ್ರಹಿತವಾಗಿರುತ್ತವೆಂದು ನಮ್ಮ ಅಭಿಪ್ರಾಯವು. ಬಾಹ್ಯಸ್ವರೂಪದಿಂದಲೇ ನಾವು ಅವುಗಳನ್ನು ಅಲ್ಲಗಳೆದರೆ ಒಳಗಿರುವ ರತ್ನಗಳ ಲಾಭಕ್ಕೆ ಎರವಾಗುವೆವು.

"ಪೊರಗಣ ಸೊಬಗನೆ ನಿಟ್ಟಿಸಿ । ನೆರೆಸೋಲ್ವುದು ತಕ್ಕುದಲ್ತು ಪರಿಕಿಸು ಗುಣಮಂ ॥
ಪೊರಗೆಡ್ಡಮಾದೊಡಂ ಪೇಳ್ । ನರುಗಂಪಂ ಬೀರಿದಪುದೆ ವಳುಳ್ತಗದ ಮಲರ್ ॥"

ಎಂದು ಒಬ್ಬ ಕವಿಯು ಹೇಳುವಂತೆ ನಾವು ಯಾವಾಗಲೂ ಗುಣವನ್ನು ಪರೀಕ್ಷಿಸುತ್ತಿರಬೇಕು. ಮುಸಲ್ಮಾನರು ತಮ್ಮನ್ನು ಗೆದ್ದು ಓಡಿಸಿದರು; ಮತ್ತು ತಾವಾದರೂ ಅವರನ್ನು ಬೆನ್ನಟ್ಟಿದೆವು; ಎಂಬುದೇ ಮೇಲಿನ ಕಥೆಯಲ್ಲಿರುವ ಹರಿಹರನ ಆಶಯವು. ಹರಿಹರನು ತನಗೆ ಮೊಲದ ಉಪಮೆಯನ್ನು ಕೊಟ್ಟುಕೊಂಡದ್ದು ಬಹಳೇ ಮಾರ್ಮಿಕವಾಗಿದೆ. ಮೊಲವು ಕೇವಲ ನಿರುಪದ್ರವಿಯೂ, ಸಾತ್ವಿಕವೂ ಆದ ಪ್ರಾಣಿಯೆಂಬುದು ಎಲ್ಲರಿಗೂ ಗೊತ್ತೇ ಇದೆ; ಮತ್ತು ಮೊಲವು ಚಂದ್ರನ ಲಾಂಛನವಷ್ಟೇ ? ಆದುದರಿಂದ ತಾನು ಸದಾಚಾರಿಯೂ, ಸಾತ್ವಿಕನೂ, ನಿರುಪದ್ರವಿಯೂ, ಚಂದ್ರವಂಶದ ಯದುಕುಲದಲ್ಲಿ ಜನ್ಮತಾಳಿದವನೂ ಎಂದು ತೋರ್ಪಡಿಸುವದು ಅವನ ಉದ್ದೇಶವಾಗಿರಬಹುದು. ಇರಲಿ, ವರಂಗಲ್ಲದ ಅರಸನ ಹತ್ತರ ಹುಕ್ಕಬುಕ್ಕರೆಂಬ ಇಬ್ಬರು ಅಧಿಕಾರಿಗಳಿದ್ದರೆಂತಲೂ, ವರಂಗಲ್ಲವು ಮುಸಲ್ಮಾನರ ಹಸ್ತಗತವಾದ ಬಳಿಕ ಅವರು ಆನೆಗೊಂದಿಗೆ ಬಂದು ವಾಸ ಮಾಡಿ, ಅಲ್ಲಿ ಶ್ರೀ ವಿದ್ಯಾರಣ್ಯರ ಸಹಾಯದಿಂದ ಮುಸಲ್ಮಾನರನ್ನು ಗೆದ್ದು ಆ ಸ್ಥಳ

ದಲ್ಲೊಂದು ಪಟ್ಟಣವನ್ನು ಕಟ್ಟಿ ಅದಕ್ಕೆ ವಿಜಯನಗರವೆಂದು ಹೆಸರಿಟ್ಟರೆಂತಲೂ ಮತ್ತೆ ಕೆಲವರು ಹೇಳುತ್ತಾರೆ. ಶ್ರೀ ವಿದ್ಯಾರಣ್ಯರು ತಪಸ್ಸು ಮಾಡುತ್ತ ಕುಳಿತಾಗ ಅವರಿಗೆ ಬುಕ್ಕನೆಂಬ ಒಬ್ಬ ಕುರುಬನು ಪ್ರತಿದಿವಸ ಹಾಲು ತಂದುಕೊಡುತ್ತಿದ್ದನೆಂತಲೂ, ಮುಂದೆ ಶ್ರೀ ವಿದ್ಯಾರಣ್ಯರು ಅವನ ಭಕ್ತಿಗೆ ಮೆಚ್ಚಿ ಅವನನ್ನು ಪಟ್ಟಕ್ಕೆ ಕೂಡ್ರಿಸಿದ ರೆಂತಲೂ ಕೆಲವರು ನಂಬುತ್ತಾರೆ. ಹೀಗೆ ಬೇರೆ ಬೇರೆ ಕಥೆಗಳೂ, ಉಲ್ಲೇಖಗಳೂ ಪ್ರಚಾರದಲ್ಲಿದ್ದರೂ ಅವೆಲ್ಲವುಗಳಲ್ಲಿ ಶ್ರೀ ವಿದ್ಯಾರಣ್ಯ ಸ್ವಾಮಿಗಳ ಹೆಸರು ಪ್ರಾಮುಖ್ಯ ವಾಗಿ ಬಂದಿದೆಯೆಂಬುದನ್ನು ಲಕ್ಷ್ಯದಲ್ಲಿಡತಕ್ಕುದು. ಆದುದರಿಂದ ಹರಿಹರರಾಯನಿಗೆ ಪಟ್ಟಗಟ್ಟಿ ವಿಜಯನಗರ ಅಥವಾ ವಿದ್ಯಾನಗರವನ್ನು ಊರ್ಜಿತ ಸ್ಥಿತಿಗೆ ತಂದವರು ಶ್ರೀವಿದ್ಯಾರಣ್ಯರೇ ಎಂಬ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಈಶ್ವರೀಯ ಘಟನೆಯು ಅಚಿಂತನೀಯವೇ ಸರಿ. ಸ್ವರಾಜ್ಯೋದ್ಧಾರದ ಕಾರ್ಯ ಸಿದ್ಧಿಗೋಸ್ಕರವೇ ಹರಿಹರ ಅಥವಾ ಹುಕ್ಕಬುಕ್ಕರ ಪ್ರಾಣಗಳು ಮುಸಲ್ಮಾನರ ಉಪ ಟಳದಿಂದ ಪಾರಾದವು. ಫೀನಿಕ್ಸ ಎಂಬ ಪಕ್ಷಿಯನ್ನು ಅಗ್ನಿಕುಂಡದಲ್ಲಿ ಆಹುತಿಕೊಟ್ಟರೆ ಅದು ಪುನಃ ಜೀವಂತವಾಗುತ್ತದೆ! ಅದರಂತೆ ನಷ್ಟವಾದ ಈ ರಾಜ್ಯವು ಈ ಬಂಧು-ದ್ವಯರ ಮಂತ್ರದಿಂದ ಪುನಃ ಉದಯ ಹೊಂದಬೇಕಾಗಿತ್ತು. ದಕ್ಷಯಜ್ಞದಲ್ಲಿ ದಗ್ಧ ಳಾದ ದೇವಿಯು ಹಿಮಾಲಯದಲ್ಲಿ ಜನ್ಮಧಾರಣ ಮಾಡಿ ಶಂಕರನನ್ನು ವರಿಸಿದಂತೆ ಕರ್ಣಾಟಕಸಾಮ್ರಾಜ್ಯಲಕ್ಷ್ಮಿಯ ಕಥೆಯಾಯಿತು! ಜಂಬುಕೇಶ್ವರನ ಪರಾಭವದ ಲ್ಲಿಯೂ ತದನಂತರದ ಬಲಾತ್ಕಾರದಲ್ಲಿಯೂ ಸಿಕ್ಕು ದೆಸೆಗೆಟ್ಟ ಸೈನಿಕರನ್ನೂ, ಸರ ದಾರರನ್ನೂ, ಅಧಿಕಾರಿಗಳನ್ನೂ, ಈ ಬಂಧುಗಳು ಒಂದುಗೂಡಿಸಿದರು. ಮುಸಲ್ಮಾನರ ಉಪಟಳವನ್ನು ಸಹಿಸಲಾರದ ಸಂಸ್ಥಾನಿಕರೂ ಇತರ ಜನರೂ ಅವರನ್ನು ಸೇರಿದರು. ತುಂಗಭದ್ರೆಯ ದಕ್ಷಿಣ ತೀರದಲ್ಲಿ ಮುಸಲ್ಮಾನರಿಗೂ ಇವರಿಗೂ ಕಾದಾಟವಾಯಿತು. ಹರಿಹರರಾಯನ ಪಕ್ಷಕ್ಕೆ ಯಶಸ್ಸು ದೊರೆಯಿತು. ಆದರೆ ಹಿಂದೂ ರಾಜ್ಯಸತ್ತೆಯು ಪ್ರಚಂಡವಾದ ಮುಸಲ್ಮಾನರ ಸತ್ತೆಯ ಮುಂದೆ ಬಹು ದಿವಸ ತಡೆದು ನಿಲ್ಲಬಹುದೆಂಬ ನಂಬಿಗೆಯು ಅವರಲ್ಲಿ ಇಲ್ಲದಾಯಿತು. ಬಾದಶಾಹೀ ಸೇನಾಸಾಗರದ ಭಯಂಕರವಾದ ತೆರೆಯು ವೇಗವಾಗಿ ಬಂದು ಅಪ್ಪಳಿಸಿ ತಮ್ಮನ್ನು ಮುಳುಗಿಸಿ ಬಿಡಬಹುದೆಂಬ ಭಯವು ಅವರಲ್ಲಿ ಹೆಚ್ಚಾಯಿತು. ಈಶ್ವರೀಯ ಸಹಾಯದ ಹೊರತು ತಮ್ಮ ಹೇತುವು ಸಾಧ್ಯ ವಾಗುವಂತಿಲ್ಲ; ಇಷ್ಟೇ ಅಲ್ಲ; ಅದು ದೊರೆಯದಿದ್ದರೆ ಹಿಂದೂ ಧರ್ಮಕ್ಕೆ ಮೊದಲಿ ಗಿಂತಲೂ ಹೆಚ್ಚಾಗಿ ತೊಂದರೆಯಾಗಬಹುದು; ಎಂದು ಬಗೆದು ದೈವಿಕ ಸಹಾಯ ಕ್ಕಾಗಿಯೂ, ಸುಸಂಘಟಿತ ಪ್ರಯತ್ನದಿಂದ ರಾಜ್ಯಸತ್ತೆಯನ್ನು ಭದ್ರಪಡಿಸುವುದಕ್ಕಾ ಗಿಯೂ ಅವರು ಶ್ರೀವಿದ್ಯಾರಣ್ಯಸ್ವಾಮಿಗಳನ್ನು ಮರೆಹೊಕ್ಕರು.

ಶ್ರೀವಿದ್ಯಾರಣ್ಯಸ್ವಾಮಿಗಳು ಆಗಿನ ಕಾಲಕ್ಕೆ ಆದೇ ಸನ್ಯಾಸ ದೀಕ್ಷೆಯನ್ನು ತೆಗೆದುಕೊಂಡು ಶೃಂಗೇರಿಯಲ್ಲಿ ವೇದಾಂತ ವಿಷಯದಲ್ಲಿ ಮಗ್ನರಾಗಿದ್ದರು. ಸದಾ

ಪರೋಪಕಾರನಿರತರಾದ ಮತ್ತು ಭೂತದಯೆಯ ಸಾಕ್ಷಾತ್ಮೂರ್ತಿಗಳಾದ ಶ್ರೀವಿದ್ಯಾರಣ್ಯ ಸ್ವಾಮಿಗಳ ಹೃದಯವು, ಮುಸಲ್ಮಾನರ ಅನಿಷ್ಟ ಕೃತ್ಯಗಳನ್ನು ಕಣ್ಣಾರೆ ಕಂಡು ಕಿವಿಯಾರೆ ಕೇಳಿ ಕರಗದೆ ಇದ್ದೀತೇ? ದೇಶಬಾಂಧವರ ದುಃಖವನ್ನು ದೂರಮಾಡದೆ ಮನಸ್ಸು ವೇದಾಂತದ ಕಡೆಗೆ ಹೇಗೆ ಎಳೆದೀತು? ತಮ್ಮ ದೇಶಬಾಂಧವರು ಧರ್ಮ ಸಂಬಂಧವಾದ ಬಲಾತ್ಕಾರದ ಪಂಕದಲ್ಲಿ ತೊಳಲುವದನ್ನು ನೋಡಿ ಅವರನ್ನು ಎತ್ತಿ ಹಿಡಿಯದೆ ಮೋಕ್ಷವು ಸಿಕ್ಕೀತೆಂದು ಆ ಪುಣ್ಯಾತ್ಮರು ಹೇಗೆ ತಿಳಿದಾರು? ಹಿಂದೂ ಧರ್ಮದ ಮೇಲೊದಗಿದ ಈ ಭಯಂಕರ ಸಂಕಟವನ್ನು ಸ್ವಸ್ಥವಾಗಿ ನೋಡುವದೆಂದರೆ ಆತ್ಮಹತ್ಯಾ ಪಾತಕ ಮಾಡಿದಂತೆಯೇ ಸರಿ. ಧರ್ಮವೆಂದರೆ ಮನುಷ್ಯ ಮಾತ್ರರನ್ನು ಧಾರಣ ಮಾಡುವದಲ್ಲವೇ? ಮನುಷ್ಯಮಾತ್ರರು ಹೀನ ಸ್ಥಿತಿಯಲ್ಲಿ ಅಥವಾ ಅನೀತಿಯಲ್ಲಿ ಅಥವಾ ಅಧರ್ಮದಲ್ಲಿ ಮುಳುಗಿರಲು, ತಾವು ಮಾತ್ರ ಮೋಕ್ಷದ ಪದವಿಯನ್ನು ಹೊಂದುವೆವೆಂಬ ತಿಳಿವಳಿಕೆಯು ದಂಭಾಚಾರದ್ದೇ ಅಲ್ಲವೇ? ಮುಕ್ತಿಗೆ ಭೂತದಯೆಯೇ ಮುಖ್ಯ ಮಾರ್ಗವು. ಆದುದರಿಂದ ನಿಜವಾಗಿ ವಿದ್ವಾಂಸರಾದ ಕರುಣಾಲುಗಳು ಪ್ರವೃತ್ತಿನಿವೃತ್ತಿ ಮಾರ್ಗಗಳು ಪರಸ್ಪರ ವಿರೋಧಿಗಳೆಂಬ ತತ್ವವನ್ನು ಎಂದೂ ಸಮ್ಮತಿಸುವದಿಲ್ಲ. ಸ್ವರ್ಗ ಮತ್ತು ಪೃಥ್ವಿಗಳಲ್ಲಿ ದ್ವೇಷವಿಲ್ಲ. ಪೃಥ್ವಿಯು ಸ್ವರ್ಗದ ಸೋಪಾನವು. ಮಾನವೀ ಬಂಧುಗಳನ್ನು ಅಧರ್ಮದಲ್ಲಿ ಇರಗೊಡುವದೆಂದರೆ ಪರಮೇಶ್ವರನ ದ್ರೋಹ ಮಾಡಿದಂತಾಗುತ್ತದೆ. ಆದುದರಿಂದ ಐಹಿಕ ಮೋಕ್ಷವು ಸಿಗದೆ ಪಾರಲೌಕಿಕ ಮೋಕ್ಷವು ಎಂದೂ ಸಿಗಲಾರದು. ಇವೇ ಮೊದಲಾದ ವಿಚಾರಗಳು ಶ್ರೀ ವಿದ್ಯಾರಣ್ಯ ಸ್ವಾಮಿಗಳ ಮನಸ್ಸಿನಲ್ಲಿ ಬಂದು ಇಂತಹ ದುರ್ಧರ ಸಮಯದಲ್ಲಿ ಸ್ವರಾಜ್ಯವನ್ನು ದೃಢೀಕರಿಸುವದೇ ತಕ್ಕುದೆಂತಲೂ, ಅದಕ್ಕಾಗಿ ತಮ್ಮ ದೇಶಬಾಂಧವರ ಅಜ್ಞಾನವನ್ನು ದೂರ ಮಾಡುವದೇ ಉತ್ತಮವಾದ ಮಾರ್ಗವೆಂತಲೂ ಭಾವಿಸಿ, ವೇದಾಂತ ಪುಸ್ತಕಗಳನ್ನು ಕ್ಷಣಹೊತ್ತು ಬದಿಗಿಟ್ಟು, ಚದರಿಹೋದ ಹಿಂದೂ ಅರಸರಿಗೆ ಉಪದೇಶವನ್ನು ಮಾಡಿ, ಅವರೊಳಗೆ ಒಕ್ಕಟ್ಟನ್ನು ಬೆಳೆಯಿಸಿ ಸ್ವರಾಜ್ಯವನ್ನು ಸ್ಥಾಪಿಸುವದಕ್ಕಾಗಿ ಇವರು ಶೃಂಗೇರಿಯಿಂದ ವಿಜಯನಗರಕ್ಕೆ ಧಾವಿಸಿದರು. ಮತ್ತು ಹರಿಹರರಾಯನನ್ನು ಪ್ರೋತ್ಸಾಹಿಸಿ, ಅಭಯದಾನ ಮಾಡಿ, ಆತನಿಗೆ ವಿಜಯವು ಪ್ರಾಪ್ತವಾದ ಈ ಸ್ಥಳದಲ್ಲಿ ಹೊಸ ಪಟ್ಟಣವನ್ನು ಕಟ್ಟಿಸಿ, ಸ್ವರಾಜ್ಯವನ್ನು ಸ್ಥಾಪಿಸಿ ಹರಿಹರನನ್ನೇ ಪಟ್ಟಗಟ್ಟಿದರು!

ಈ ಹೊಸ ಪಟ್ಟಣಕ್ಕೆ ಸ್ವಾಮಿಗಳವರು ವಿಜಯನಗರವೆಂದು ಹೆಸರಿನ್ನಿಟ್ಟರು. ಪತ್ತನಾದಿಗಳಿಗೆ ವಿಜಯಸ್ಮಾರಕವಾದ ಹೆಸರುಗಳನ್ನು ಕೊಡುವ ಪದ್ಧತಿಯು ಪ್ರಾಚೀನ ಕಾಲದಿಂದ ನಡೆದು ಬಂದಿದೆ. ಸಾಕೇತಪುರಿಗೆ ಅಯೋಧ್ಯೆಯೆಂದೂ, ಅವಂತಿಗೆ ಉಜ್ಜಯಿನಿಯೆಂದೂ ಪ್ರಾಚೀನ ಇತಿಹಾಸದಲ್ಲಿ ಹೆಸರುಗಳು ಸಿಕ್ಕುವಂತೆಯೇ, ಅರ್ವಾಚೀನ ಕಾಲದಲ್ಲಾದರೂ ಫತೇಹಾಬಾದ, ಫತೇಪುರ, ವಿಜಯದುರ್ಗ ಮೊದಲಾದ ಹೆಸರುಗಳಿದ್ದೇ ಇವೆ. ಶ್ರೀಗುರುವಿನ ಆಶೀರ್ವಾದ ಬಲದಿಂದಲೂ ಪುಣ್ಯಪ್ರಭಾವದಿಂದಲೂ ವಿಜಯನಗರದ ಹಿಂದೂ ರಾಜ್ಯವು ಧನಕನಕಸಂಪನ್ನವಾಗಿ ವೈಭವ ಶಿಖರವನ್ನೇರಿತು.

ಈ ರಾಜ್ಯವು ಸುಮಾರು ಎರಡುನೂರೈವತ್ತು ವರ್ಷಗಳವರೆಗೆ, ಬೆಳೆಯುತ್ತಲಿರುವ ಮುಸಲ್ಮಾನರ ಆಧಿಪತ್ಯದೊಡನೆ ಹೋರಾಡಿದ್ದಲ್ಲದೇ ಅದರ ಅಸ್ತಿತ್ವದ ಬಗ್ಗೆ ಕೂಡ ಭಯವನ್ನುತ್ಪನ್ನ ಮಾಡಿತು. ಮುಸಲ್ಮಾನರ ಅಧೀನವಾದ ಪ್ರದೇಶವನ್ನೆಲ್ಲ ತಿರುಗಿ ವಶಮಾಡಿಕೊಂಡು ವಿಜಯನಗರದ ರಾಜ್ಯಸತ್ತೆಯು ಕೃಷ್ಣಾ ನದಿಯಿಂದ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೂ, ಉತ್ತರಕ್ಕೆ ಪೂರ್ವದುಡೆಯಗುಂಟ ಬಂಗಾಲದವರೆಗೆ ಬೆಳೆಯಿತು. ಈ ಸಾಮ್ರಾಜ್ಯದ ಅಭಿವೃದ್ಧಿಯ ಇತಿಹಾಸವು ಅತ್ಯಂತ ಮಹತ್ವದ್ದಾಗಿಯೂ ಮನೋರಮವಾಗಿಯೂ ಇದೆ. ಅದನ್ನೆಲ್ಲ ಸವಿಸ್ತರವಾಗಿ ವರ್ಣಿಸುವದಕ್ಕೆ ಸ್ಥಲಕಾಲಗಳಿಲ್ಲದೆ ಹೋದರೂ ಮುಂದಿನ ಪ್ರಕರಣದಲ್ಲಿ ಅದರ ಸಂಕ್ಷಿಪ್ತ ವೃತ್ತಾಂತವನ್ನು ಸ್ವಲ್ಪದರಲ್ಲಿ ಕೊಡುವ ಯತ್ನ ಮಾಡುತ್ತೇವೆ. ಇರಲಿ; ಈ ನೂತನವಾದ ರಾಜಧಾನಿಗೆ ವಿಜಯನಗರ, ವಿಜಯಾನಗರ, ವಿದ್ಯಾನಗರ ಎಂಬ ಮೂರು ಬೇರೆ ಬೇರೆ ಹೆಸರುಗಳಿವೆ. ವಿಜಯಪ್ರಾಪ್ತಿಯಿಂದ ವಿಜಯನಗರವೆಂಬ ಹೆಸರು ಬಿತ್ತು. ವಿಜಯಾ ಎಂದರೆ ಭುವನೇಶ್ವರಿಯು ಪ್ರಸಾದವೇ ಇದರ ಜನ್ಮಕ್ಕೆ ಕಾರಣವಾದುದರಿಂದ ವಿಜಯಾನಗರ ಎಂಬ ಹೆಸರು ಬಂತು. ಶ್ರೀ ವಿದ್ಯಾರಣ್ಯ ಸ್ವಾಮಿಗಳ ಕೃತಜ್ಞರೂ ಭಕ್ತಿವಂತರೂ ಆದ ಶಿಷ್ಯರು ಇದನ್ನು ವಿದ್ಯಾನಗರವೆಂದು ಕರೆದರು. ತುಂಗಭದ್ರೆಯ ಆಚೆಯಲ್ಲಿರುವ ಆನೆಗೊಂದಿಯೆಂಬ ಚಿಕ್ಕ ಊರೇ ಮೊದಲು ರಾಜಧಾನಿಯ ಸ್ಥಳವಾಗಿತ್ತು. ಮುಂದೆ ವಿಜಯನಗರವನ್ನೂ ಆನೆಗೊಂದಿಯೆಂದೇ ಕರೆಯಹತ್ತಿದರು. ರಾಮಾಯಣ ಪ್ರಸಿದ್ಧವಾದ ಪಂಪಾಸರೋವರವು ಸಮೀಪದಲ್ಲಿಯೇ ಇರುವದರಿಂದ ಈ ಸ್ಥಳವನ್ನು ಹಂಪೆಯೆಂದೂ ಕರೆಯುವ ಪರಿಪಾಠವಿದೆ. ಆನೆಗೊಂದಿಯೆಂದರೆ ಹಸ್ತಿನಾವತಿಯೆಂದರ್ಥವು. ವಿಜಯನಗರವನ್ನು "ಹಸ್ತಿನಾವತಿ"ಯೆಂದು ಎಷ್ಟೋ ತಾಮ್ರಪಟಗಳಲ್ಲಿ ಉಲ್ಲೇಖಿಸಿದ್ದಾರೆ. ಪಾಂಡವರ ಹಸ್ತಿನಾವತಿಯು ದಕ್ಷಿಣದಲ್ಲಿ ಹೀಗೆ ಅವತಾರ ತಾಳಿತೆಂದು ಹೇಳಬಹುದು. ರಾಮಾಯಣದಲ್ಲಿ ಕಿಷ್ಕಿಂಧೆಯೆಂದು ಪ್ರಸಿದ್ಧವಾದ ಪ್ರದೇಶವು ಇದೆ. ಇಲ್ಲಿಯೇ ಶ್ರೀರಾಮಚಂದ್ರನು ತನ್ನ ಪರಮಭಕ್ತನಾದ ಆಂಜನೇಯನೊಡನೆ ಸಖ್ಯವನ್ನು ಬೆಳೆಯಿಸಿದನು. ಈ ಪ್ರದೇಶದ ಸೃಷ್ಟಿಸೌಂದರ್ಯವಾದರೂ ಅವರ್ಣನೀಯವಾಗಿರುತ್ತದೆ. ಹೇಮಕೂಟ ಮಾಲ್ಯವಂತ ಋಷ್ಯಮೂಕ ಮುಂತಾದ ಪುರಾಣಪ್ರಸಿದ್ಧವಾದ ಪರ್ವತಗಳಿಂದಲೂ, ವಸಿಷ್ಠಾಶ್ರಮ ಶಬರಿಸ್ಥಾನ ಮುಂತಾದ ಪವಿತ್ರಸ್ಥಳಗಳಿಂದಲೂ, ಪಂಪಾಸರೋವರ, ಜಾನಕಿಸರೋವರ ಮೊದಲಾದ ಸರೋವರಗಳಿಂದಲೂ ಈ ಪ್ರದೇಶವು ಕಂಗೊಳಿಸುತ್ತದೆ. ಇದು ದಕ್ಷಿಣ ಹಿಂದುಸ್ಥಾನದ ನಟ್ಟನಡುವೆ ಇರುವದರಿಂದ ಸಾಮ್ರಾಜ್ಯದ ರಾಜಧಾನಿಯಾಗುವದಕ್ಕೆ ಒಪ್ಪುತ್ತದೆ. ಇದಕ್ಕೆ ದಕ್ಷಿಣ ಹಿಂದುಸ್ಥಾನದ ಹೃದಯಸ್ಥಾನವೆನ್ನಬಹುದು. ಈ ಪ್ರಕಾರ ಭೂಗೋಲದ ದೃಷ್ಟಿಯಿಂದಲೂ ಈ ಪ್ರದೇಶವು ಅತಿ ಮಹತ್ವದ್ದಾಗಿದೆ. ಈ ನಗರವು ಸ್ಥಾಪಿತವಾದ ಕೆಲವು ದಿವಸಗಳಲ್ಲಿಯೇ ಸರಸ್ವತಿಯ ತೌರುಮನೆಯೆನಿಸಿಕೊಂಡದರಿಂದ ವಿದ್ಯಾನಗರವೆಂಬ ಹೆಸರು ಅದಕ್ಕೆ ಅನ್ವರ್ಥಕವಾಯಿತು. ಕೆಲವು ದಿವಸಗಳವರೆಗಾದರೂ ಏಕಾಗಲ್ಲೋದು; ಈ ಪಟ್ಟಣದಲ್ಲಿ

ಶ್ರೀ ಮತ್ತು ಸರಸ್ವತಿಯರು ಏಕತ್ರ ವಾಸ ಮಾಡಿದ್ದರು. ಅವರಿಬ್ಬರ ಸಂಬಂಧವು ಸ್ಥಿರ ವಾಗಿರುವವರೆಗೆ ಮಾತ್ರ ದೇಶದ ವೈಭವವು ಅಚಲವಾಗಿರುತ್ತದೆ. ಸಾರಾಂಶ, ಮಹಾಕಾಲಿ, ಮಹಾಲಕ್ಷ್ಮಿ, ಮಹಾಸರಸ್ವತಿ ಈ ಮೂರು ಶಕ್ತಿಗಳನ್ನು ಯಥಾ ಯೋಗ್ಯವಾಗಿ ಆರಾಧಿಸಿದ ಹೊರತು ಯಾವ ಮಾನವೀ ಸಂಸ್ಥೆಯೂ ಭದ್ರತೆಯನ್ನೂ, ಚಿರಸ್ಥಾಯಿತ್ವವನ್ನೂ, ಸಮೃದ್ಧಿಯನ್ನೂ ಪಡೆಯುವದಿಲ್ಲ. ಶ್ರೀವಿದ್ಯಾರಣ್ಯರು ಈ ಹೊಸ ರಾಜ್ಯದಲ್ಲಿ ಮಾಡಿದ ವ್ಯವಸ್ಥೆಯಿಂದ ಅಲ್ಲಿ ಸರ್ವಸಂಪತ್ತಿಯು ಸಮೃದ್ಧಿಯನ್ನು ಹೊಂದಿ ಲಕ್ಷ್ಮೀಸರಸ್ವತಿಯರು ಅಲ್ಲಿ ದಾಸಾನುದಾಸಿಯರಾಗಿ ಇರಹತ್ತಿದರು! ಶ್ರೀವಿದ್ಯಾರಣ್ಯಸ್ವಾಮಿಗಳವರ ಕೃಪಾಪ್ರಸಾದದಿಂದ "ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾನೀತಿರ್ಮತಿರ್ಮಮ |" ಎಂಬಂತಾಯಿತು!

ಸ್ವರಾಜ್ಯೋದ್ಧಾರಕಾರ್ಯಕ್ಕೋಸ್ಕರ ಶ್ರೀ ವಿದ್ಯಾರಣ್ಯ ಸ್ವಾಮಿಗಳು ಶೃಂಗೇರೀ ಮಠದಿಂದ ವಿಜಯನಗರಕ್ಕೆ ಬಂದಕೂಡಲೆ ಮೊಟ್ಟಮೊದಲು ತಮ್ಮ ಕುಲದೇವತೆಯಾದ ಶ್ರೀ ಭುವನೇಶ್ವರಿಯನ್ನು ಆರಾಧಿಸಿದರು. ಶ್ರೀ ಭುವನೇಶ್ವರಿಯು ಪ್ರತ್ಯಕ್ಷಳಾಗಿ ಹೇಳಿದ ಳೇನಂದರೆ— "ಚತುರ್ಥಾಶ್ರಮದಿಂದ ನಿನಗೆ ಜನ್ಮಾಂತರವು ಪ್ರಾಪ್ತವಾದಂತಾಗಿದೆ. ಈಗ ನೀನು ಬೇಕಾದ ವರವನ್ನು ಬೇಡು ಕೊಡುತ್ತೇನೆ. ನೀನು ಬೇಕಾದಷ್ಟು ದ್ರವ್ಯ ವನ್ನು ಅಪೇಕ್ಷಿಸಿದರೂ ಅದು ನಿನಗೆ ಸಿಕ್ಕುವದು." ಶ್ರೀ ವಿದ್ಯಾರಣ್ಯರು ತಮ್ಮ ಮೂಲ ಮಹತ್ವಾಕಾಂಕ್ಷೆಯನ್ನು ಮರೆತಿದ್ದಿಲ್ಲ. ಇವರ ಮನಸ್ಸು ಮೊದಲಿಗಿಂತಲೂ ಶುದ್ಧ ವಾಗಿತ್ತು. ಇವರು ವಿರಕ್ತರಾಗಿದ್ದುದರಿಂದ ಸ್ವೋಪಯೋಗಕ್ಕಾಗಿ ಇವರಿಗೆ ಧನವು ಬೇಕಾ ಗಿದ್ದಿಲ್ಲ. ಆದರೆ ವಿಜಯನಗರದಲ್ಲಿದ್ದ ಗೊಂದಲವನ್ನು ಮುರಿಯುವದಕ್ಕೂ, ಮುಸಲ್ಮಾನ ರನ್ನು ಹಿಂದಕ್ಕೆ ದಬ್ಬಿ ಸ್ವರಾಜ್ಯವನ್ನು ದೃಢೀಕರಿಸುವದಕ್ಕೂ ಇವರಿಗೆ ಧನದ ಕೊರ ತೆಯು ಇದ್ದೇ ಇತ್ತು. ಶ್ರೀ ಭುವನೇಶ್ವರಿಯಾದರೂ ಧನವನ್ನು ಕೊಡಲಿಕ್ಕೆ ಸಿದ್ಧಳೇ ಇದ್ದಳು. ಮೇಲೆ ಹೇಳಿದ ಅವಳ ಪ್ರಸನ್ನ ಭಾಷಣವನ್ನು ಕೇಳಿ ಶ್ರೀ ವಿದ್ಯಾರಣ್ಯರು "ತಾಯೀ, ನಾನು ದುಡ್ಡನ್ನು ತೆಗೆದುಕೊಂಡು ಏನು ಮಾಡಲಿ? ಆದರೆ ದೀನವೂ, ದುರ್ಬಲವೂ, ನಿಷ್ಕಾಂಚನವೂ ಆದ ಈ ನನ್ನ ರಾಷ್ಟ್ರದ ಮೇಲೆ ನಿನ್ನ ಕೃಪಾಕಟಾಕ್ಷ ವನ್ನು ಕೆಡಹು. ಅರ್ಧಪ್ರಹರದ ವರೆಗೆ ವಿಜಯನಗರದ ಸುತ್ತಲು ಹತ್ತು ಮೈಲುಗಳ ವರೆಗೆ ಸುವರ್ಣವೃಷ್ಟಿಯನ್ನು ಸುರಿಸು." ಎಂದು ಪ್ರಾರ್ಥಿಸಿದರು. ಅದರಂತೆಯೇ ಅಲ್ಲಿ ಚಿನ್ನದ ಮಳೆಗರೆಯಿತು. ಪ್ರಜೆಗಳು ತಮ್ಮ ಭೂಮಿಯಲ್ಲಿ ಬಿದ್ದ ಚಿನ್ನವನ್ನು ತಾವೇ ತೆಗೆದುಕೊಳ್ಳಬೇಕೆಂತಲೂ ಉಳಿದದ್ದನ್ನೆಲ್ಲ ರಾಜಬೊಕ್ಕಸಕ್ಕೆ ಸೇರಿಸಬೇಕೆಂತಲೂ ಶ್ರೀ ವಿದ್ಯಾರಣ್ಯರು ಅಪ್ಪಣೆ ಕೊಟ್ಟರು. ಇದೇ ಸಂಧಿಯಲ್ಲಿ ಶ್ರೀ ಭುವನೇಶ್ವರೀದೇವಿಯು ಸುಡುತ್ತಲಿರುವ ಏಳು ಗುಡ್ಡಗಳನ್ನು ಶ್ರೀ ವಿದ್ಯಾರಣ್ಯರಿಗೆ ತೋರಿಸಿ "ಇಗೋ! ನೋಡು ನಿನ್ನ ಪ್ರಾಕ್ತನ ಪಾತಕವು ಸುಟ್ಟು ಭಸ್ಮವಾಗುತ್ತಲಿದೆ. ನಿನ್ನ ಮನೋರಥಕ್ಕೆ ಅದೇ ಅಡ್ಡ ಬರುತ್ತಿತ್ತು. ಆದರೆ ಈಗ ನೀನು ಪಾಪನಿರ್ಮುಕ್ತನಾದೆ. ಧರ್ಮೋದ್ಧಾರವನ್ನೂ ತನ್ಮೂಲಕ ದೇಶೋದ್ಧಾರವನ್ನೂ ಮಾಡುವ ಅತ್ಯಂತ ಪವಿತ್ರವಾದ ಕೆಲಸವನ್ನು

ಕೊನೆಗಾಣಿಸುವದಕ್ಕೆ ಬದ್ಧಪರಿಕರನಾದುದು ಬಹಳ ಒಳಿತಾಯಿತು. ನಡೆ. ನಿನ್ನ ಪ್ರಯತ್ನಗಳೆಲ್ಲವೂ ಫಲಿಸುವವು, ಮನೋರಥವು ಪೂರ್ಣವಾಗುವದು; ನಿನ್ನ ರಾಜ್ಯದಲ್ಲಿ ಋದ್ಧಿಸಿದ್ಧಿಗಳು ನೆಲೆಗೊಳ್ಳುವವು" ಎಂದು ಹೇಳಿದಳು. "ಶ್ರೀ ವಿದ್ಯಾರಣ್ಯಸ್ವಾಮಿಗಳು ಮಠಸಂಪ್ರದಾಯದಂತೆ ನಿತ್ಯದಲ್ಲಿಯೂ ಚಂದ್ರಮೌಳೀಶ್ವರನ ಪೂಜೆಯನ್ನು ಮಾಡುತ್ತಿದ್ದರು. ಆ ಶಿವಲಿಂಗವು ಪರಿಸದಿಂದ ಮಾಡಿದ್ದಾಗಿತ್ತು. ಅದಕ್ಕೆ ತಿಕ್ಕಿದ ಪದಾರ್ಥಗಳೆಲ್ಲವೂ ಸುವರ್ಣಮಯವಾಗುತ್ತಿದ್ದವು. ಆದುದರಿಂದ ಇವರಿಗೆ ದ್ರವ್ಯದ ನ್ಯೂನತೆಯೇ ಉಂಟಾಗಲಿಲ್ಲ." ಎಂದು ಕೆಲವರು ಹೇಳುತ್ತಾರೆ. ಇವರಿಗೆ "ಕಿಮಿಯಾ"ದಂತಹ ಬಂಗಾರವನ್ನು ಹುಟ್ಟಿಸುವದೊಂದು ವಿದ್ಯೆಯು ಅವಗತವಾಗಿತ್ತೆಂದು ಈಗಲೂ ಎಷ್ಟೋ ಜನರು ನಂಬುತ್ತಾರೆ. ಈ ಆಖ್ಯಾಯಿಕೆಗಳು ಸಟೆಯೇ ಇರಲಿ; ದಿಟವೇ ಇರಲಿ; ಶ್ರೀ ವಿದ್ಯಾರಣ್ಯರು ವಿಜಯನಗರದಲ್ಲಿ ಹೊಸ ರಾಜ್ಯವನ್ನು ಸ್ಥಾಪಿಸಿದಂದಿನಿಂದ ದಿನದಿನಕ್ಕೆ ಆ ಪಟ್ಟಣವು ಐಶ್ವರ್ಯದಲ್ಲಿ ಅಭಿವೃದ್ಧಿಯನ್ನು ಹೊಂದಿ ಪೃಥ್ವಿಯಲ್ಲಿ ಇಂದಿನ ವರೆಗೆ ಆಗಿಹೋದ ಎಲ್ಲ ರಾಜಧಾನಿಗಳಲ್ಲಿ ಮಿಗಿಲಾಯಿತೆಂದು ಹೇಳಲಿಕ್ಕೆ ಎಳ್ಳಷ್ಟಾದರೂ ಸಂದೇಹವಿಲ್ಲ. ಈ ಮಹನೀಯರ ಪ್ರಭಾವದಿಂದಲೇ ಭರತಭೂಮಿಯು ಸುವರ್ಣಭೂಮಿಯೆಂದು ಹೆಸರುವಾಸಿಯಾಯಿತೆಂದು ಹೇಳಬಹುದು.

ವಿಜಯನಗರದ ಸುತ್ತುಮುತ್ತಲಿನ ಭೂಮಿಯಲ್ಲಿ ರತ್ನ ಮೊದಲಾದ ಬೆಲೆಯುಳ್ಳ ಪದಾರ್ಥಗಳು ಸಿಗುತ್ತಿದ್ದುದೂ ಮೇಲಿನ ಪ್ರಸಿದ್ಧಿಗೆ ಕಾರಣವಾಗಿರಬಹುದೆಂದು ಹೇಳಬಹುದಾಗಿದೆ. ವಿಜಯನಗರದ ರಾಜ್ಯವು ಹಾಳಾದ ಮೇಲೆ ೧೬೧೪ ನೆಯ ಇಸ್ವಿಯಲ್ಲಿ ರಾಯನು ಚಂದ್ರಗಿರಿಯಲ್ಲಿದ್ದಾಗ ವಜ್ರದ ಹರಳುಗಳಿಂದ ತುಂಬಿದ ಮೂರು ದೊಡ್ಡ ಪೆಟ್ಟಿಗೆಗಳು ಅವನ ಹತ್ತರ ಇದ್ದವು. ಕೃಷ್ಣೆಯ ಉತ್ತರ ಪ್ರದೇಶದಲ್ಲಿಯೂ ಕರ್ನೂಲ ಮತ್ತು ಅನಂತಪುರ ಜಿಲ್ಲೆಗಳಲ್ಲಿಯೂ ವಜ್ರಕರೂರ ಎಂಬ ಸ್ಥಳದಲ್ಲಿಯೂ ವಜ್ರದ ದೊಡ್ಡ ದೊಡ್ಡ ಖನಿಗಳಿದ್ದವು. ಇವೇ ಹೆಸರಾದ ಗೋವಳಕೊಂಡದ ಖನಿಗಳು. ಆರು ಗುಂಜಿಗಳಿಗಿಂತ ಹೆಚ್ಚು ತೂಕವುಳ್ಳ ಹರಳುಗಳನ್ನು ತಮಗೆ ಕೊಟ್ಟು ಉಳಿದವುಗಳನ್ನು ಗುತ್ತಿಗೆದಾರರು ತಕ್ಕೊಳ್ಳಬೇಕೆಂಬ ಕರಾರಿನಿಂದ ವಿಜಯನಗರದ ರಾಜರು ಗುತ್ತಿಗೆಗೆ ಕೊಡುತ್ತಿದ್ದರು. ತಾಳೀಕೋಟೆಯ ಕಾಳಗದ ತರುವಾಯ ನಡೆದ ಲೂಟಿಯಲ್ಲಿ ಕೋಳಿಯ ತತ್ತಿಯಷ್ಟು ದೊಡ್ಡದಾದ ಒಂದು ವಜ್ರವು ಆದಿಲಶಹನಿಗೆ ಸಿಕ್ಕಿತು. ಇದನ್ನು ರಾಯನು ತನ್ನ ಕುದುರೆಯ ತಲೆಯ ಮೇಲಿನ ತುರಾಯಿಯ ಬುಡದಲ್ಲಿ ಹಚ್ಚಿಸಿದ್ದನು. ೧೬೬೪ ನೆಯ ಇಸ್ವಿಯಲ್ಲಿ ಹಿಂದುಸ್ತಾನದಲ್ಲಿದ್ದ ಇನ್ನೊಬ್ಬ ಪಾಂಥಸ್ಥನು ಈ ಹರಳನ್ನೂ, ೨೫೦, ೨೯೨, ಮತ್ತು ೫೨೧ ಗುಂಜಿ ತೂಕವುಳ್ಳ ಬೇರೆ ಮೂರು ಹರಳುಗಳನ್ನೂ ತಾನು ನೋಡಿದ್ದೆನೆಂದು ಬರೆದಿದ್ದಾನೆ. ಈ ದೊಡ್ಡ ಹರಳುಗಳ ಗತಿಯು ಮುಂದೆ ಏನಾಯಿತೆಂಬುದು ತಿಳಿದಿಲ್ಲ. ಕೊಹಿನೂರ ಎಂಬ ಹರಳು ಕೃಷ್ಣಾ ನದಿಯ ದಂಡೆಯ ಮೇಲಿರುವ ಕೋಳೂರೆಂಬಲ್ಲಿ ಮೀರಜುಮ್ಲಾ ಎಂಬ ಸರದಾರನಿಗೆ ಕ್ರಿ. ಶ.

೧೬೫೬ ರಲ್ಲಿ ಸಿಕ್ಕಿತು. ಅದರ ತೂಕವು ೧೫೬೦ ಗುಂಜಿ ಇತ್ತು. ಇದನ್ನೆಲ್ಲ ನೋಡಿದರೆ ಮೇಲಿನ ಪ್ರಸಿದ್ಧಿಯೂ ಆಖ್ಯಾಯಿಕೆಗಳೂ ಕೇವಲ ಕಟ್ಟುಕಥೆಗಳಲ್ಲವೆಂದು ಕಂಡು ಬರುವದು.

ಈಗಿನ ಕಾಲದಲ್ಲಿ ಯುರೋಪ ಖಂಡದಲ್ಲಿ ಮುತ್ಸದ್ದಿಗಳು ಚಿಕ್ಕ ಚಿಕ್ಕ ರಾಷ್ಟ್ರಗಳಲ್ಲಿ ಐಕಮತ್ಯವನ್ನುಂಟುಮಾಡಿ ಪ್ರಬಲ ಸಾಮ್ರಾಜ್ಯ ಸತ್ತೆಯನ್ನು ಸ್ಥಾಪಿಸಹತ್ತಿದ್ದಾರೆ. ಅದರಂತೆ ಶ್ರೀ ವಿದ್ಯಾರಣ್ಯರು ಆ ಕಾಲದಲ್ಲಿ ಮುರಿದುಹೋದ ಮತ್ತು ಮುರಕಳಿಗೆ ಬಂದಂತಹ ಅನೇಕ ರಾಜ್ಯಗಳನ್ನು ಭಯಪ್ರೀತಿಗಳೆಂಬ ರಜ್ಜುಗಳಿಂದ ಕಟ್ಟಿ ಒಂದು ಬಲಾಢ್ಯವಾದ ಹಿಂದೂ ಸಮ್ರಾಟ್ಸತ್ತಾಮಂದಿರವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಿದರು. ಇದರ ಮುಂದೆ ೧೦೦ ವರ್ಷಗಳಾದ ಬಳಿಕ ಶಿವಾಜಿಯು ಹೊಸ ಹಿಂದೂ ರಾಜ್ಯವನ್ನು ಸ್ಥಾಪಿಸಿದನು. ವಿಜಯನಗರದ ರಾಜರು "ಹಿಂದುರಾಯ ಸುರತ್ರಾಣ"ರೆಂದು (ಹಿಂದೂಗಳ ಸುಲತಾನರೆಂದು) ತಮ್ಮನ್ನು ಕರೆಯಿಸಿಕೊಳ್ಳುತ್ತಿದ್ದರು. ಹೀಗೆ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೂಲಕ ಶ್ರೀವಿದ್ಯಾರಣ್ಯಸ್ವಾಮಿಗಳಿಗೆ "ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯ"ರೆಂಬ ಬಿರುದು ಪ್ರಾಪ್ತವಾಯಿತು. ಅದು ಶೃಂಗೇರೀ ಮಠದ ಆಚಾರ್ಯರ ಬಿರುದಾವಳಿಯಲ್ಲಿ ಇನ್ನೂವರೆಗೆ ನಿವಿಷ್ಟವಾಗಿದೆ.

ಈ ವರೆಗೆ ಮಾಡಿದ ವಿವೇಚನೆಯಿಂದ ಶ್ರೀವಿದ್ಯಾರಣ್ಯಸ್ವಾಮಿಗಳವರ ರಾಜಕೀಯ ಕಾರ್ಯದ ಮಹತ್ವವೂ, ಅವರ ಸಾಮರ್ಥ್ಯವೂ ಚೆನ್ನಾಗಿ ವಾಚಕರ ನಿದರ್ಶನಕ್ಕೆ ಬಂದಿರಲಿಕ್ಕೆಬೇಕು. ಶ್ರೀವಿದ್ಯಾರಣ್ಯರಲ್ಲಿದ್ದ ಇನ್ನೂ ಕೆಲವು ಉಜ್ವಲವಾದ ಗುಣಗಳ ಉಲ್ಲೇಖವು ಅಲ್ಲಲ್ಲಿ ದೊರೆಯುತ್ತದೆ. ಅದನ್ನಷ್ಟು ಇದರಡಿಯಲ್ಲಿ ಕೊಟ್ಟು ಬಹಳ ಉದ್ದವಾಗಿ ಬೆಳೆದಿರುವ ಈ ಪ್ರಕರಣವನ್ನು ಮುಗಿಸುತ್ತೇವೆ.

ಶ್ರೀವಿದ್ಯಾರಣ್ಯರು ಮಾಧವಪುರವನ್ನು ಅಗ್ರಹಾರ ಹಾಕಿಕೊಟ್ಟು ದಾನಪತ್ರವನ್ನು ಬರೆದ ಸಂಗತಿಯನ್ನು ಈ ಮೊದಲೇ ಉಲ್ಲೇಖಿಸಿದ್ದೇವೆ. ತತ್ಸಂಬಂಧದ ತಾಮ್ರಶಾಸನದಲ್ಲಿದ್ದ ಮುಖ್ಯ ಶ್ಲೋಕಗಳನ್ನಿಲ್ಲಿ ಉದ್ಧರಿಸುತ್ತೇವೆ—

ವಂಶೇ ಯದೋರಭಿನವಾಂಶ ಇವ ಚ್ಯುತಸ್ಯ |
ಶ್ರೀಸಂಗಮಾದಜನಿ ಸಂಗರರಂಗಭೀಮಃ ||
ಶ್ರೀಬುಕ್ಕರಾಜ ಇತಿ ಧಿಕ್ಕೃತಶತ್ರುರೇಷ- |
ಸ್ತಾಮಧ್ಯತಿಷ್ಠದಥ ಮಧ್ಯಮಲೋಕಪಾಲಃ || ೩ ||
ಯಸ್ಯಾಜ್ಞಯಾ ಮಾಧವಮಂತ್ರಿವರ್ಯಃ |
ಪ್ರಾಶಾಜ್ಜಯಂತೀಪುರರಾಜ್ಯಮೃದ್ಧಮ್ ||
ಯನ್ಮಂತ್ರಶಕ್ತ್ಯಾ ವಪುರುತ್ಸೃಜಂತೋऽ |
ಪ್ಯರಾತಯಃ ಸ್ವಾಥ್ಯಮಹೋ ಭಜಂತೇ || ೪ ||

ಆಶಾತವಿಶ್ರಾಂತಯಶಾಃ ಸ ಮಂತ್ರೀ ।
ದಿಶೋ ಜಿಗೀಷುರ್ಮಹತಾ ಬಲೇನ ॥
ಗೋವಾಮಿಧಾಂ ಕೊಂಕಣರಾಜಧಾನೀ- ।
ಮನ್ಯೇನ ಮನ್ಯೇಽರುಣದರ್ಣವೇನ ॥ ೫ ॥
ಪ್ರತಿಷ್ಠಿತಾಸ್ತತ್ರ ತುರುಷ್ಕಸಂಘಾ- ।
ನುತ್ಸಾದ್ಯ ದೋಷ್ಣಾ ಭುವನೈಕವೀರಃ ॥
ಉನ್ಮೂಲಿತಾನಾಮಕರೋತ್ಪ್ರತಿಷ್ಠಾಮ್ ।
ಶ್ರೀಸಪ್ತನಾಥಾದಿಸುಧಾಭುಜಾಂ ಯಃ ॥ ೬ ॥

ಇದರ ಮುಂದಿನ ಶ್ಲೋಕಗಳು ಉಪಲಬ್ಧವಾಗಿಲ್ಲ. ಈ ನಾಲ್ಕೇ ಶ್ಲೋಕಗಳ ಅರ್ಥವೇನಂದರೆ—

ಯದುವಂಶದಲ್ಲಿ ಸಂಗಮನೆಂಬವನ ಮಗನಾದ ರಣರಂಗಧೀರನಾದ ಶ್ರೀ ಬುಕ್ಕ ನೆಂಬ ರಾಜನು ಇದ್ದನು. ಆತನು ಶತ್ರುಗಳನ್ನು ಗೆದ್ದು ವಿಜಯನಗರದಲ್ಲಿ ಸಾರ್ವ ಭೌಮನಾಗಿ ಆಳಿದನು. ಗೋಮಾಂತಕದಲ್ಲಿ ಜಯಂತೀಪುರವೆಂಬ ದೊಡ್ಡದೂ ಸಮೃದ್ಧವೂ ಆದ ಒಂದು ಪ್ರಾಂತವಿತ್ತು. ಅದರ ಕಾರಭಾರವನ್ನು ಮಂತ್ರಿವರ್ಯನಾದ ಮಾಧವಾಚಾರ್ಯನು ರಾಜಾಜ್ಞೆಯಿಂದ ನಡೆಯಿಸುತ್ತಿದ್ದನು. ಆತನ ಮಂತ್ರಶಕ್ತಿಯಿಂದ ಶತ್ರುಗಳೆಲ್ಲರೂ ನಾಶವಾಗಿ ಹೋದರು. ಆತನ ಕೀರ್ತಿಯು ದಶದಿಕ್ಕುಗಳಲ್ಲಿಯೂ ಹರಡಿತು. ಆ ಮಂತ್ರಿವರ್ಯನು ದೇಶಗಳನ್ನು ಗೆಲ್ಲುವದಕ್ಕಾಗಿ ಯುದ್ಧ ಮಾಡುತ್ತಿದ್ದನು. ಆತನು ಒಮ್ಮೆ ಸಸೈನ್ಯನಾಗಿ ಹೊರಟು ಕೊಂಕಣದಲ್ಲಿರುವ ಗೋವಾ ರಾಜಧಾನಿಯ ಮೇಲೆ ಅಭಿಯೋಗ ಮಾಡಿದನು. ಆಗಿನ ಕಾಲಕ್ಕೆ ಇವನ ಸೈನ್ಯವನ್ನು ನೋಡಿ, ಗೋವೆಯ ಪಶ್ಚಿಮಕ್ಕೆ ಮಹಾಸಾಗರವಿರುವಂತೆ ಪೂರ್ವಕ್ಕೆ ಈ ಅಪಾರವಾದ ಸೇನಾಸಾಗರವು ಬಂದಿದೆಯೋ ಎಂಬಂತೆ ಕಾಣುತ್ತಿತ್ತು ! ಅಲ್ಲಿ ಬಹು ದಿವಸಗಳಿಂದ ಮುಸಲ್ಮಾನರು ನೆಲೆಗೊಂಡಿದ್ದರು. ಅವರನ್ನು ನಾಶಗೊಳಿಸಿ, ಈ ಮಂತ್ರಿಯು ಮುಸಲ್ಮಾನರಿಂದ ಹಾಳಾಗಿ ಹೋದ ಶ್ರೀಸಪ್ತನಾಥ ಮೊದಲಾದ ದೇವರುಗಳನ್ನು ಪುನಃ ಸ್ಥಾಪಿಸಿದನು. (ಸಪ್ತನಾಥ ಎಂಬುದು ಸತ್ಯನಾಥ ಎಂದಿದ್ದರೂ ಇರಬಹುದು.)

ಇದರಿಂದ ಶ್ರೀವಿದ್ಯಾರಣ್ಯರು ವಿದ್ಯಾವೀರರಾಗಿದ್ದುದಲ್ಲದೆ ರಣವೀರರೂ ಆಗಿದ್ದರೆಂದು ಕಂಡುಬರುತ್ತದೆ. ಅಗ್ರಹಾರ ಮೊದಲಾದ ದಾನಗಳನ್ನು ಮಾಡುತ್ತಿದ್ದದರಿಂದ ಅವರಿಗೆ ಭೋಜರಾಜನಂತೆ ತ್ರಿವಿಧವೀರಮಾಲಾಮಣಿ ಎಂದು ಕರೆಯಲಿಕ್ಕೆ ಏನೂ ಅಡ್ಡಿಯಿಲ್ಲ. ಈ ದಾನಪತ್ರವು ಶಕೆ ೧೩೧೩ ನೆಯ ಪ್ರಜಾಪತಿ ಸಂವತ್ಸರದ ವೈಶಾಖ ಕೃಷ್ಣ ಅಮಾವಾಸ್ಯೆಯ ಸೋಮವಾರದಲ್ಲಿ ಸೂರ್ಯಗ್ರಹಣದ ಪರ್ವಣಿಯಲ್ಲಿ ಕೊಡಲ್ಪಟ್ಟಿತೆಂದು ದಿವಾಣಬಹಾದ್ದೂರ ಸ್ವಾಮಿಕನ್ನುಪಿಲೆ ಇವರ ಜಂತ್ರಿಯಿಂದ ಸಿದ್ಧವಾಗಿದೆ. ಈ ಕಾಲದಲ್ಲಿ ಶ್ರೀ ವಿದ್ಯಾರಣ್ಯರು ಮಂತ್ರಿತ್ವವನ್ನು ವಹಿಸಿದ್ದರು. ಶ್ರೀ

ವಿದ್ಯಾರಣ್ಯರ ಮಂತ್ರಿತ್ವವೂ, ಅವರ ಯಶಸ್ವಿಯಾದ ರಾಜನೀತಿಯೂ ಪರಾಶರ ಮಾಧವೀಯದಲ್ಲಿಯೂ ಒಳ್ಳೇ ಮನೋಹರವು ರೀತಿಯಿಂದ ಹೀಗೆ ವರ್ಣಿತವಾಗಿದೆ.

ಇಂದ್ರಸ್ಯಾಂಗಿರಸೋ ಬಲಸ್ಯ ಸುಮತಿಃ ಶೈಬ್ಯಸ್ಯಮೇಧಾತಿಥಿಃ |
ಧೌಮ್ಯೋ ಧರ್ಮಸುತಸ್ಯ ವೈನ್ಯನೃಪತೇಃ ಸ್ವೌಜಾ ನಿಮೇರ್ಗೌತಮಿಃ ||
ಪ್ರತ್ಯಗ್ದೃಷ್ಟಿರರುಂಧತೀಸಹಚರೋ ರಾಮಸ್ಯ ಪುಣ್ಯಾತ್ಮನೋ |
ಯದ್ವತ್ತಸ್ಯ ವಿಭೋರಭೂತ್ ಕುಲಗುರುರ್ಮಂತ್ರೀ ತಥಾ ಮಾಧವಃ ||

ಇಂತಹ ಪ್ರಶಂಸೆಯು ಜೈಮಿನೀಯ ನ್ಯಾಯಮಾಲಾ ವಿಸ್ತರದ ಪ್ರಸ್ತಾವನೆಯಲ್ಲಿಯೂ ಇದೆ.

ಪ್ರಜ್ಞಾಮೂಲಮಹೀ ವಿವೇಕಸಲಿಲೈಃ ಸಿಕ್ತಾ ಬಲೋಪಘ್ನಿಕಾ |
ಮಂತ್ರೈಃ ಪಲ್ಲವಿತಾ ವಿಶಾಲವಿಟಪಾ ಸಂಧ್ಯಾದಿಭಿಃ ಷಡ್ಗುಣೈಃ ||
ಶಕ್ತ್ಯಾ ಕೋರಕಿತಾ ಯಶಃಸುರಭಿತಾ ಸಿಧ್ಯಾ ಸಮುದ್ಯತ್ಫಲಾ |
ಸಂಪ್ರಾಪ್ತಾ ಭುವಿ ಭಾತಿ ನೀತಿಲತಿಕಾ ಸರ್ವೋತ್ತರಂ ಮಾಧವಮ್ ||

ಮೊದಲನೆಯ ಶ್ಲೋಕದಲ್ಲಿ ಪ್ರಾಚೀನ ಕಾಲದಲ್ಲಿ ಜ್ಞಾನಿಗಳಾದ ಗುರುಗಳೂ ಮಂತ್ರಿಗಳೂ ಆದ ಬೃಹಸ್ಪತಿ, ಸುಮತಿ, ಮೇಧಾತಿಥಿ, ಧೌಮ್ಯ, ಸ್ವೌಜಾ, ಶತಾನಂದ ಮತ್ತು ವಸಿಷ್ಠರು ಅನುಕ್ರಮವಾಗಿ ಇಂದ್ರ, ನಲ, ಶೈಬ್ಯ, ಯುಧಿಷ್ಠಿರ, ಪೃಥು, ನಿಮಿ ಮತ್ತು ರಾಮಚಂದ್ರರಲ್ಲಿ ಹೇಗೆ ಇದ್ದರೋ ಹಾಗೆಯೇ ಪ್ರಸ್ತುತಕ್ಕೆ ಮಹಾ ಪರಾಕ್ರಮಿಯಾದ ಬುಕ್ಕ ಭೂಪತಿಯ ಕುಲಗುರುವೂ ಮಂತ್ರಿಗಳೂ ಆಗಿ ಮಾಧವಾಚಾರ್ಯರು ಇದ್ದರೆಂದು ಹೇಳಿದೆ.

ಎರಡನೆಯ ಶ್ಲೋಕದಲ್ಲಿ ರಾಜನೀತಿಯನ್ನು ಸುಂದರವಾದ ರೂಪಕದಿಂದ ವರ್ಣಿಸಿ, ಆ ರಾಜನೀತಿಯು ಮಂತ್ರಿವರ್ಯ ಮಾಧವಾಚಾರ್ಯರನ್ನು ವರಿಸಿತೆಂದು ಹೇಳಿದೆ. ಅದು ಹೇಗೆಂದರೆ ರಾಜನೀತಿಯೇ ಬಳ್ಳಿಯು; ಅದಕ್ಕೆ ಬುದ್ಧಿಯೆಂಬುದೇ ಭೂಮಿಯು; ವಿವೇಕವೆಂಬುದೇ ನೀರು; ಬಲವು ಅದಕ್ಕೆ ಆಧಾರವು; ಮಂತ್ರವು ಅದರ ಪಲ್ಲವಗಳು; ಸಂಧಿವಿಗ್ರಹಾದಿ ಷಡುಪಾಯಗಳೇ ಅದರ ಕೊಂಬೆಗಳು; ಪ್ರಭುಮಂತ್ರ ಉತ್ಸಾಹಗಳೆಂಬ ಶಕ್ತಿಗಳೇ ಅದರ ಮೊಗ್ಗುಗಳು; ಯಶಸ್ಸೇ ಸುಗಂಧವು; ಮತ್ತು ಸಿದ್ಧಿಯೇ ಅದರ ಫಲವು.

ಈ ಶ್ಲೋಕಗಳು ಸಾಯಣಾಚಾರ್ಯರವಾಗಿರಬಹುದು. ಯಾಕಂದರೆ ಕಾಲಿದಾಸನಂತೆ ಸ್ವಭಾವಶಾಲೀನರಾದ ಶ್ರೀ ವಿದ್ಯಾರಣ್ಯರು ಆತ್ಮಸ್ತುತಿಯನ್ನು ಮಾಡಿಕೊಂಡಿರಲಿಕ್ಕಿಲ್ಲ.

# ೬. ರಾಜವೃತ್ತವು

ಶ್ರೀವಿದ್ಯಾರಣ್ಯರು ಕ್ರಿ. ಶ. ೧೩೩೬ನೆಯ ವರ್ಷದಲ್ಲಿ ವಿಜಯನಗರದ ರಾಜ್ಯವನ್ನು ಸ್ಥಾಪಿಸಿದರೆಂದು ಎಲ್ಲ ಇತಿಹಾಸಕಾರರು ಒಪ್ಪುವರು; ಮತ್ತು ಹಂಪಿಯಲ್ಲಿರುವ ಅವರದೇ ಒಂದು ಶಿಲಾಲೇಖದಿಂದಲೂ ಈ ಮಾತು ಸ್ಪಷ್ಟವಾಗುತ್ತದೆ. ಇಲ್ಲಿ ಆಳಿದ ರಾಜರನ್ನೂ ಅವರ ಕಾಲದಲ್ಲಿ ನಡೆದ ಸಂಗತಿಗಳನ್ನೂ ವಿಚಾರಿಸುವ ಮೊದಲು, ನೂತನ ರಾಜ್ಯಸ್ಥಾಪನೆಯ ಪೂರ್ವದಲ್ಲಿ ಆ ಪ್ರದೇಶದ ಸ್ಥಿತಿಯು ಹೇಗಿತ್ತೆಂಬುದನ್ನು ತಿಳಿದುಕೊಳ್ಳುವದು ಅವಶ್ಯವಿದೆ.

ಹೊಸ ರಾಜ್ಯಸ್ಥಾಪನೆಗಿಂತ ಮೊದಲು ಏಳುನೂರು ವರ್ಷಗಳವರೆಗೆ ಒಂದು ರಾಜವಂಶದವರು ಆನೆಗೊಂದಿಯಲ್ಲಿ ಆಳುತ್ತಿದ್ದರು. ಆಗಿನ ರಾಯನ ಹೆಸರು ಶ್ರೀರಂಗದೇವರಾಯನು. ಇಲ್ಲಿಯ ರಾಜರು ಒಳ್ಳೇ ಜಾಗರೂಕತೆಯಿಂದ ಕಾಯ್ದಿಟ್ಟ ರಾಯವಂಶಾವಳಿಯೆಂಬ ಪುರಾತನ ಗ್ರಂಥವಿರುವದು. ಇದರಿಂದ ಗೊತ್ತಾಗುವದೇನಂದರೆ— ನಂದ ಮಹಾರಾಜನೆಂಬವನು ಆನೆಗೊಂದಿಯಲ್ಲಿ ಕ್ರಿ. ಶ. ೧೦೧೪ ರಿಂದ ಕ್ರಿ. ಶ. ೧೦೭೬ ರ ವರೆಗೆ ಆಳಿದನು. ಇವನ ರಾಜ್ಯವು ಬಹು ವಿಸ್ತೃತವಾದದ್ದಿತ್ತೆಂದು ಕಂಡುಬರುತ್ತದೆ. ಇವನ ಮಗನಾದ ಚಾಲುಕ್ಯನು ಕ್ರಿ. ಶ. ೧೦೭೬ ರಿಂದ ಕ್ರಿ. ಶ. ೧೧೧೭ ರ ವರೆಗ ಆಳಿದನು. ಇವನಿಗೆ ಮೂರು ಜನ ಮಕ್ಕಳಿದ್ದರು. ಮೊದಲನೆಯವನಾದ ಬಿಜ್ಜಳನು ಕಲ್ಯಾಣಕ್ಕೆ ಹೋಗಿ ಅಲ್ಲಿ ಹೊಸ ರಾಜ್ಯವನ್ನು ಸ್ಥಾಪಿಸಿದನು. ಮೂರನೆಯ ಮಗನ ಹೆಸರು ವಿಷ್ಣುವರ್ಧನನು. ಎರಡನೆಯ ಮಗನಾದ ವಿಜಯಧ್ವಜನು ತನ್ನ ತಂದೆಯ ತರುವಾಯ ಆನೆಗೊಂದಿಯಲ್ಲಿ ಕ್ರಿ. ಶ. ೧೧೧೭ ರಿಂದ ಕ್ರಿ. ಸ. ೧೧೫೬ ರ ವರೆಗೆ ಆಳಿದನು. ಇವನು ತನ್ನ ಆಳಿಕೆಯ ಕಾಲದಲ್ಲಿ ಅಂದರೆ ಕ್ರಿ. ಶ. ೧೧೫೦ ನೆಯ ವರ್ಷದ ಸುಮಾರಕ್ಕೆ ತುಂಗಭದ್ರೆಯ ದಕ್ಷಿಣ ತೀರದ ಮೇಲೆ ವಿಜಯನಗರವೆಂಬ ಹೊಸ ಪಟ್ಟಣವನ್ನು ಕಟ್ಟಿ ಅದನ್ನು ಕೋಟೆಗಳಿಂದ ಭದ್ರಪಡಿಸಿದನು. ಇದರ ಐತಿಹ್ಯವೂ, ಐಶ್ವರ್ಯವೂ ಬರಬರುತ್ತ ಬೆಳೆಯುತ್ತ ನಡೆದವು. ಆನೆಗೊಂದಿಯು ಆ ರಾಜ್ಯದ ಉತ್ತರ ಮೇರೆಯಲ್ಲಿ ಮುಸಲ್ಮಾನರ ಸೀಮೆಗೆ ಹತ್ತಿರುವದರಿಂದ ಅವರ ದಾಳಿಗಳಿಂದ ತನ್ನನ್ನು ರಕ್ಷಿಸಿಕೊಳ್ಳುವದಕ್ಕೆ ಹೆಚ್ಚು ಅನುಕೂಲವಾಗುವದೆಂದು ಬಗೆದು ವಿಜಯಧ್ವಜನು ಈ ಹೊಸ ಪಟ್ಟಣವನ್ನು ನದಿಯ ದಕ್ಷಿಣ ಮಗ್ಗಲಿಗೆ ಕಟ್ಟಿದಂತೆ ತೋರುತ್ತದೆ. ಇದನ್ನು ಕಟ್ಟಿದ ಕಾಲದಿಂದ ವಿಜಯನಗರವೇ ಆನೆಗೊಂದಿಯ ರಾಜ್ಯದ ರಾಜಧಾನಿಯಾಯಿತು. ಮುಂದೆ ಎರಡುನೂರು ವರ್ಷಗಳ ತರುವಾಯ ಶ್ರೀ ವಿದ್ಯಾರಣ್ಯರು ವಿದ್ಯಾನಗರವೆಂಬ ಹೆಸರಿನಿಂದ ಈ ಪಟ್ಟಣದ ಪುನರುಜ್ಜೀವನ ಮಾಡಿ ಇದನ್ನು ಹೆಚ್ಚು ಭವ್ಯವಾಗಿ ಮಾಡಿದರು. ವಿಜಯಧ್ವಜನ ತರುವಾಯ ಅವನ ಮಗನಾದ ಅನುಮೇಯನು ಈ ಹೊಸ

ರಾಜಧಾನಿಯಲ್ಲಿ ಕ್ರಿ. ಶ. ೧೧೫೬ ರಿಂದ ಕ್ರಿ. ಶ. ೧೧೭೯ ರ ವರೆಗೂ, ಇವನ ಮಗನಾದ ನರಸಿಂಹದೇವರಾಯನು ಕ್ರಿ. ಶ. ೧೧೭೯ ರಿಂದ ಕ್ರಿ. ಶ. ೧೨೪೬ ರ ವರೆಗೂ ಆಳಿದರು. ಇವನ ದೀರ್ಘಕಾಲದ ಆಳಿಕೆಯಲ್ಲಿ ಮುಸಲ್ಮಾನರು ದಕ್ಷಿಣದಲ್ಲಿ ದಾಡುಗಳನ್ನು ಮಾಡಹತ್ತಿದರು. ಇವರು ಇವನ ಹೆಸರಿನ ಮೇಲಿಂದ ವಿಜಯನಗರದ ರಾಜ್ಯಕ್ಕೆ ನರಸಿಂಗನ ರಾಜ್ಯವೆಂದು ಕರೆದಿರಬಹುದೆನ್ನುವದು ಸಹಜ. ಇವನ ಕಾಲದಲ್ಲಿ ರಾಜಧಾನಿಯ ವಿಸ್ತಾರವೂ ಸೌಂದರ್ಯವೂ ಹೆಚ್ಚಿ ಇದು ಮುಸಲ್ಮಾನರ ಮನಸ್ಸನ್ನು ಆಕರ್ಷಣ ಮಾಡಿತು. ಇವನ ತರುವಾಯ ಇವನ ಮಗನಾದ ರಾಮದೇವರಾಯನು ಕ್ರಿ. ಶ. ೧೨೪೬ ರಿಂದ ಕ್ರಿ. ಶ. ೧೨೭೧ ರ ವರೆಗೂ, ಆ ಮೇಲೆ ರಾಮದೇವರಾಯನ ಮಗನಾದ ಪ್ರತಾಪರಾಯನ ಕ್ರಿ. ಶ. ೧೨೯೧ ರ ವರೆಗೂ, ಪ್ರತಾಪರಾಯನ ತರುವಾಯ ಅವನ ಮಗನಾದ ಜಂಬುಕೇಶ್ವರರಾಯನು ೧೩೩೪ ನೆಯ ಇಸ್ವಿಯವರೆಗೂ ಆಳಿದರು. ಇವನೇ ಈ ವಂಶದ ಕಡೆಯ ಅರಸನು.

ಇರಲಿ; ಶ್ರೀವಿದ್ಯಾರಣ್ಯರ ಅನುಗ್ರಹದಿಂದ ಹರಿಹರರಾಯನು ಪಟ್ಟಾಧಿಷ್ಠಿತನಾದ ಬಳಿಕ ಎಲ್ಲ ಹಿಂದೂ ಅರಸರನ್ನು ತನ್ನ ಕಡೆಗೆ ಎಳಕೊಳ್ಳಹತ್ತಿದನು. ಕ್ರಿ. ಶ. ೧೩೪೪ ನೆಯ ವರ್ಷದಲ್ಲಿ ದ್ವಾರಸಮುದ್ರ, ವರಂಗಲ, ತೆಲಂಗಣ, ಮಲಬಾರ ಮೊದಲಾದ ರಾಜ್ಯಗಳ ಅರಸರನ್ನು ಕೂಡಿಕೊಂಡು ದಿಲ್ಲಿಯ ಸುಲತಾನನ ಸಂಗಡ ಕಾಳಗವನ್ನು ಮಾಡಿ ಅವನನ್ನು ಸೋಲಿಸಿ ಮುಸಲ್ಮಾನರನ್ನು ದಕ್ಷಿಣದಿಂದ ತಳ್ಳಿದನು. ಆದುದರಿಂದ ೧೩೪೪ ನೆಯ ಇಸ್ವಿಯು ಕರ್ನಾಟಕದ ಇತಿಹಾಸದಲ್ಲಿ ಒಳ್ಳೇ ಮಹತ್ವದ್ದಾಗಿದೆ. ಯಾಕಂದರೆ, ಹಿಂದೂ ಜನರಿಗೊದಗಿದ ಭಯಂಕರ ಪ್ರಸಂಗವು ಆ ವರ್ಷವೇ ದೂರಾಯಿತು. ಈ ಮೇರೆಗೆ ತೀರ ಮುರಿಕಳಿಗೆ ಬಂದಿದ್ದ ಚಿಕ್ಕ ಚಿಕ್ಕ ರಾಷ್ಟ್ರಗಳಿಗೆ ಬುದ್ಧೀ ಹೇಳಿ, ಅವರಲ್ಲಿ ಒಕ್ಕಟ್ಟಿನ ಕಲ್ಪನೆಗಳನ್ನು ಹಬ್ಬಿಸಿ, ಪರಕೀಯರು, ಬಂದಾಗ ಒಳಜಗಳಗಳನ್ನು ಮರೆಯಹೇಳಿ, ಅವರೆಲ್ಲರನ್ನು ಯುದ್ಧಕ್ಕೆ ನಿಲ್ಲಿಸಿ, ಆಗಿನ ಕಾಲದ ಸಾಮಾನ್ಯ ಶತ್ರುಗಳಾದ ಮುಸಲ್ಮಾನರನ್ನು ಹೊಡೆದೋಡಿಸಿದ ಮೊಟ್ಟಮೊದಲಿನ ಶ್ರೇಯಸ್ಸು ನಮ್ಮ ಚರಿತ್ರನಾಯಕರದೇ ಆಗಿದೆ. ಆದರೆ ಅವರ ಯೋಗ್ಯತೆಯನ್ನು ನಾವು ಚೆನ್ನಾಗಿ ತಿಳಿದಿಲ್ಲವೆಂಬುದು ನಮ್ಮ ಮೂರ್ಖತನದ ದ್ಯೋತಕವು! ಶ್ರೀವಿದ್ಯಾರಣ್ಯಸ್ವಾಮಿಗಳು ಅವತರಿಸದಿದ್ದರೆ ದಕ್ಷಿಣವೆಲ್ಲ ಯವನಮಯವಾಗುತ್ತಿತ್ತು! ಪರಶತ್ರುಗಳನ್ನು ಒಕ್ಕಟ್ಟಿನಿಂದ ಅಡ್ಡಗಟ್ಟಿದ ಉದಾಹರಣೆಯು ಹಿಂದುಸ್ಥಾನದ ಇತಿಹಾಸದಲ್ಲಿ ಇದೇ ಮೊದಲನೆಯದು. ಮುಂದೆ ಸುಮಾರು ಮುನ್ನೂರು ವರ್ಷಗಳಾದ ಬಳಿಕ ಶ್ರೀರಾಮದಾಸರು ಶಿವಾಜಿಯಿಂದ ಇದೇ ತರದ ಕಾರ್ಯವನ್ನು ಮಾಡಿಸಿದರು.

ಈ ಪ್ರಕಾರ ಶ್ರೀವಿದ್ಯಾರಣ್ಯರು ಬಿತ್ತಿದ ಸಾಮ್ರಾಜ್ಯವು ವೃಕ್ಷವಾಗಿ ಬೆಳೆದು ಅದರ ಸವಿಯಾದ ಫಲಗಳನ್ನು ಹಿಂದೂ ಜನರು ಆನಂದದಿಂದ ಸೇವಿಸುತ್ತಿರುವುದನ್ನು ಇವರು ಕಣ್ಣಾರೆ ಕಂಡರು. ವಿಜಯನಗರದ ರಾಜ್ಯವು ದಕ್ಷಿಣ ಹಿಂದುಸ್ಥಾನವನ್ನೆಲ್ಲ

ವ್ಯಾಪಿಸಿ ಪೂರ್ವಸಮುದ್ರದ ದಂಡೆಯಗುಂಟ ಉತ್ತರಕ್ಕೆ ಓಡಿಸಾ ಪ್ರಾಂತದವರೆಗೆ ಹಬ್ಬಿತ್ತು. ಶ್ರೀವಿದ್ಯಾರಣ್ಯರ ಕಾಲಕ್ಕೆ ಹಿಂದೂ ಜನರಲ್ಲಿ ಉದಾತ್ತವಿಚಾರಗಳು ಹುಟ್ಟಿದ್ದ ವೆನ್ನಲಿಕ್ಕೆ ಅನೇಕ ಆಧಾರಗಳು ಸಿಕ್ಕುತ್ತವೆ. ಹಿಂದೂ ಅರಸರು ಮುಸಲ್ಮಾನರನ್ನು ಸೋಲಿಸಿದುದೇನೋ ನಿಜ; ಆದರೆ ಸುಮ್ಮಸುಮ್ಮನೆ ಅವರೊಡನೆ ಎಂದೂ ದ್ವೇಷ ಮಾಡಲಿಲ್ಲ. ಇಷ್ಟೇ ಅಲ್ಲ; ಹಿಂದೂ ರಾಜ್ಯದಲ್ಲಿ ಮುಸಲ್ಮಾನರ ಸಲುವಾಗಿ ಮಸೀದೆಗಳು ಕೂಡ ಕಟ್ಟಲ್ಪಟ್ಟವು. ಆಂಧ್ರಭೋಜನೆಂದೆನಿಸಿಕೊಂಡ ಕೃಷ್ಣರಾಯನು, ಮುಸಲ್ಮಾನರು ತನಗೆ ನಮಸ್ಕಾರ ಮಾಡುವದಕ್ಕೆ ಹಿಂದುಮುಂದು ನೋಡಬಹುದೆಂದು ತಿಳಿದು, ತನ್ನ ಸಿಂಹಾಸನದೆದುರಿಗೆ ಒಂದು ಉಚ್ಚ ಪೀಠದ ಮೇಲೆ ಕುರಾಣವನ್ನಿಡಿಸಿ ಅದಕ್ಕೆ ನಮಸ್ಕಾರ ಮಾಡುವದಕ್ಕೆ ಹೇಳುತ್ತಿದ್ದನು. ಪರಿಪರಿಯಿಂದ ತಮ್ಮನ್ನು ಕಾಡಿದ ಶತ್ರುಗಳ ವಿಷಯದಲ್ಲಿ ಇಷ್ಟೊಂದು ಸಹಾನುಭೂತಿಯು! ಇದಕ್ಕಿಂತ ಹೆಚ್ಚಿನ ಪರಧರ್ಮಸಹಿಷ್ಣುತೆಯು ಎಲ್ಲಿಯಾದರೂ ಕಂಡುಬರುವದೇ? ಹಿಂದೂ ಜನರ ಈ ಬಗೆಯ ಉದಾತ್ತವಾದ ಆಚರಣೆಯ ಮೂಲಕವಾಗಿಯೇ, ಇವೆರಡು ಜಾತಿಗಳೊಳಗಿನ ವೈಮನಸ್ಯವು ನಷ್ಟವಾಗಿ ಹೋಗಿದೆಯಲ್ಲದೆ ಈಗ ನಾವಿಬ್ಬರೂ ಒಂದೇ ರಾಷ್ಟ್ರದವರೆನಿಸಿಕೊಳ್ಳುತ್ತೇವೆ. ಶ್ರೀವಿದ್ಯಾರಣ್ಯಸ್ವಾಮಿಗಳು ಈ ಬಗೆಯಾಗಿ ಸುಮಾರು ಅರ್ಧ ಶತಮಾನದ ವರೆಗೆ ರಾಜ್ಯಸೂತ್ರಚಾಲಕತ್ವವನ್ನು ವಹಿಸಿದ್ದರು. ಇವರ ಕಾಲಕ್ಕೆ ಮಾಧವ ಮಂತ್ರಿಯೆಂಬವನೊಬ್ಬ ಘನವಿದ್ವಾಂಸನೂ, ರಾಜಕಾರ್ಯಧುರಂಧರನೂ ಆಗಿ ಹೋದನು. ಅವನೇ ಶ್ರೀವಿದ್ಯಾರಣ್ಯರೆಂದು ಕೆಲವರು ತಿಳಿಯುತ್ತಾರೆ. ಆದರೆ ಅದು ತಪ್ಪೆಂಬುದು ಮಾಧವ ಮಂತ್ರಿಯ ಗ್ರಂಥಗಳಿಂದ ತಿಳಿದುಬರುತ್ತದೆ.

ಇನ್ನು ತಾಮ್ರಶಾಸನ ಮೊದಲಾದ ಕೆಲವು ಆಧಾರಗಳಿಂದ ಆಗಿನ ಕಾಲದ ಒಬ್ಬಿಬ್ಬರು ರಾಜರ ವೃತ್ತಾಂತವನ್ನು ತಿಳಿದಮಟ್ಟಿಗೆ ಇಲ್ಲಿ ಕೊಡುತ್ತೇವೆ. ಯಾಕಂದರೆ ಈ ಪುಣ್ಯವಂತರೂ, ಪ್ರತಾಪಶಾಲಿಗಳೂ ಆದ ಅರಸರ ಕಾಲದಲ್ಲಿ ಸಿರಿಸರಸತಿಯರು ಎಲ್ಲೆಡೆಯಲ್ಲಿಯೂ ಬೆಳೆವಣಿಗೆಯನ್ನು ಪಡೆದು ಸಂತಸದಿಂದ ಕೂಡಿಕೊಂಡು ಕುಣಿದಾಡುತ್ತಿದ್ದರು; ಮತ್ತು ಅವರ ಆಶ್ರಯದ ಹೊರತು ಸಾಯಣ ಮಾಧವರ ಇಷ್ಟ ಸಿದ್ಧಿಯು ಕೈಗೂಡುವ ಸಂಭವವಿದ್ದಿಲ್ಲ. ದ್ರವ್ಯ, ಕ್ರಿಯೆ ಮತ್ತು ಜ್ಞಾನ ಈ ಶಕ್ತಿತ್ರಯಗಳ ಐಕ್ಯವೇ ವಿಜಯನಗರದ ಉತ್ಕರ್ಷದ ಬೀಜವಾಗಿತ್ತು. ಡಾ. ಕಿಲ್‌ಹಾರ್ನ ಎಂಬವರು ದಕ್ಷಿಣೋತ್ತರಭಾರತದಲ್ಲಿ ಪ್ರಸಿದ್ಧವಾದ ಪ್ರಾಚೀನ ಲೇಖನಗಳ ಒಂದು ಪಟ್ಟಿಯನ್ನು ಸಿದ್ಧಗೊಳಿಸಿದ್ದಾರೆ. ಅದರಲ್ಲಿ ಈ ರಾಜ್ಯದ ಸಂಬಂಧವಾದ ೩೦ ಲೇಖಗಳಿದ್ದು ಅವುಗಳಿಂದ ಅನೇಕ ಸಂಗತಿಗಳು ಅವಗತವಾಗುತ್ತವೆ. ಈ ಸದ್ವಂಶದ ಮೂಲಪುರುಷನು ಸಂಗಮರಾಜನೆಂಬವನು. ಆತನು ಮಾಂಡಲಿಕನಾಗಿದ್ದನು. ಪಂಡುರಾಜನಂತೆ ಇವನಾದರೂ ಈಶ್ವರ ಭಕ್ತರಾದ ಐವರು ಸತ್ಪುತ್ರರನ್ನು ಪಡೆದನು. ಆವರೆಲ್ಲರೂ ಪರಾಕ್ರಮಿಗಳೂ, ರಾಜಕಾರಣಪಟುಗಳೂ ಆಗಿದ್ದರು. ಆದುದರಿಂದ ವಿಜಯನಗರವು ಅಲ್ಪಾವಧಿಯಲ್ಲಿಯೇ ಹೆಸರಿಗೆ ಬಂತು. ಆ ಅಯ್ವರು ಯಾರೆಂದರೆ: ೧. ಹರಿಹರ,

೨. ಕಂಪ, ೩. ಬುಕ್ಕ, ೪. ಮಾರಪ ಮತ್ತು ೫. ಮುದ್ದಪ. ಹರಿಹರನು ಸುರತ್ರಾಣನನ್ನು ಅಂದರೆ ದಿಲ್ಲಿಯ ಸುಲತಾನನನ್ನು ಪರಾಭವಿಸಿ ಕೆಲವು ದಿವಸಗಳ ವರೆಗೆ ರಾಜ್ಯಕಾರಭಾರವನ್ನು ಮಾಡಿದನೆಂದು ಉಲ್ಲೇಖವಿದೆ. ಪಂಚಪಾಂಡವರಲ್ಲಿ ನಡುವಿನವನಾದ ಅರ್ಜುನನಂತೆ ಈ ಅಯ್ವರು ಅಣ್ಣ ತಮ್ಮಂದಿರಲ್ಲಿ ನಡುವಿನವನಾದ ಬುಕ್ಕದೇವನು ಶೌರ್ಯೌದಾರ್ಯಾದಿ ಗುಣಗಳಲ್ಲಿ ಅತಿ ವಿಖ್ಯಾತನಾಗಿದ್ದನು. ಅವನು ಹರಿಹರನ ತರುವಾಯ ಬಹುಕಾಲದವರೆಗೆ ವಿಜಯನಗರದ ಸಿಂಹಾಸನವನ್ನು ಅಲಂಕರಿಸಿ ಮಂತ್ರಿವರ್ಯ ಮಾಧವಾಚಾರ್ಯನ ಸಲಹೆಯಿಂದ ತನ್ನ ರಾಜ್ಯವನ್ನು ಬೆಳೆಯಿಸಿ ಅದನ್ನು ಸುಸಮೃದ್ಧವಾಗಿ ಮಾಡಿದನು. ತನ್ನ ಕುಲಗುರುವೂ ಮಂತ್ರಿಯೂ ಆದ ಮಾಧವಾಚಾರ್ಯರಿಂದ ಪ್ರಚಂಡವಾದ ವೇದಭಾಷ್ಯಾದಿ ಗ್ರಂಥಗಳನ್ನು ಬರೆಯಿಸಿ, ವಿಕ್ರಮಾದಿತ್ಯನಂತೆ ತನ್ನ ಕೀರ್ತಿಯನ್ನು ಅಜರಾಮರವಾಗಿ ಮಾಡಿಕೊಂಡನು. ಬುಕ್ಕ ಮಹೀಪತಿಯ ಸಭೆಯಲ್ಲಿ ಅನೇಕ ರತ್ನಗಳಿದ್ದವು. ಅವುಗಳಲ್ಲಿ ಸಾಯಣ–ಮಾಧವ ಎಂಬ ಎರಡು ರತ್ನಗಳಿಗೆ ಸಮಾನವಾದುವು ಮೂರು ಲೋಕಗಳಲ್ಲಿಯೂ ಇದ್ದಿಲ್ಲವೆಂದರೆ ಅತಿಶಯೋಕ್ತಿಯಾಗದು. ವೀರಬುಕ್ಕನ ತರುವಾಯ ಅವನ ಮಗನಾದ ಹರಿಹರನು ಕ್ರಿ.ಶ. ೧೩೦೧ ರ ಸುಮಾರಕ್ಕೆ ಸಿಂಹಾಸನಾರೂಢನಾದನು. ಆತನ ಒಂದು ದಾನಪತ್ರವು ಕ್ರಿ.ಶ. ೧೩೧೬–೧೩೯೫ ರ ವರೆಗಿನ ಲೇಖನಮಾಲೆಯ ೨೫ ನೆಯ ಲೇಖನದಲ್ಲಿ ವರ್ಣಿತವಾಗಿದೆ. ಅದರಲ್ಲಿದ್ದ ಬುಕ್ಕರಾಜನ ವರ್ಣನೆಯು ಬಹು ಸುಂದರವಾಗಿದೆ. ಅದು ಹೇಗಂದರೆ :

ಪಂಚಾನಾಂ ದೃಪ್ತಗಾತ್ರಾಣಾಂ ಪ್ರಖ್ಯಾತೋ ಬುಕ್ಕಭೂಪತಿಃ ।
ಪ್ರಸಿದ್ಧವಿಕ್ರಮೋ ಮಧ್ಯಃ ಪಾಂಡವಾನಾಮಿವಾರ್ಜುನಃ ॥
ಯಸ್ಯೋದ್ಯದ್ಯುದ್ಧರಂಗೇ ವಿತರತಿ ಪರಿತಸ್ತಾಂಡವಂ ಮಂಡಲಾಗ್ರೇ ।
ವಕ್ತ್ರೇ ಶುಷ್ಕಾಸ್ತುರುಷ್ಕಾ ಭರಭರಭರಿತಃ ಕೊಂಕಣಃ ಶಂಕಿಂತಾಯುಃ ॥
ಆಂಧ್ರಾ ರಂಧ್ರಾಣಿ ಧಾವಂತ್ಯಥಮನತಮಯಾ ಗುರ್ಜರಾಜರ್ಜರಾಂಗಾಃ ।
ಕಾಂಬೋಜಾಃ ಖಿನ್ನಧೈರ್ಯಾಃ ಸಪದಿಸಮಭವನ್ ಪ್ರಾಪ್ತಭಂಗಾಃ
ಕಲಿಂಗಾಃ ॥

ರಾಜಾಧಿರಾಜಸ್ತೇಜಸ್ವೀ ಯೋ ರಾಜಪರಮೇಶ್ವರಃ ।
ಭಾಷಾತಿರಿ(ಲಿ)ಂಗಿಭೂಪಾಲಭುಜಂಗಮಬಿಹಂಗರಾಟ್ ॥
ಹಿಂದುರಾಯ ಸುರತ್ರಾಣಃ ಶಾಸ್ತ್ರೇತ್ಯಾದಿಭಿರನ್ವಿತಃ ।
ಶ್ರೀವಿದ್ಯಾನಗರೀ ವಿಶ್ವವಿಜಯೋದಯಶಾಲಿನೀ ॥
ರಾಜಾ ವಿಜಯಿನಾ ಯೇನ ರಾಜಧಾನೀ ಕೃತಾ ಸ್ಥಿರಾ ।

ಅರ್ಥ : ಪಂಚಪಾಂಡವರಲ್ಲಿ ಅರ್ಜುನನು ಹೇಗೋ ಹಾಗೆಯೇ ಈ ಅಯ್ವರು ಬಂಧುಗಳಲ್ಲಿ ಬುಕ್ಕರಾಯನು ಶ್ರೇಷ್ಠನಾಗಿದ್ದನು. ಆತನು ಶೌರ್ಯದಿಂದ ಯುದ್ಧದಲ್ಲಿ

ಮುಸಲ್ಮಾನರ ಮೋರೆಯು ನೀರನ್ನಿಳಿಸಿದನು; ಕೊಂಕಣವನ್ನು ಹಿಡಿದುಕೊಂಡ ಯವನರು ಗಲಿತಧೈರ್ಯರಾದರು; ಜೀವವನ್ನು ಉಳಿಸಿಕೊಳ್ಳುವದೇ ಅವರಿಗೆ ಕಷ್ಟವಾಯಿತು; ಆಂಧ್ರರು ಸಂಕಟಕ್ಕೊಳಗಾದರು; ಅಧಮನೀತಿಮಂತರಾದ ಗುರ್ಜರು ಜರ್ಜರಿತರಾದರು; ಕಾಂಬೋಜರು ಗರ್ಭಗಲಿತರಾದರು; ಮತ್ತು ಕಲಿಂಗರು ಸಂಪೂರ್ಣವಾಗಿ ಸೋತು ಹೋದರು. ಅವರ ಬಿರುದಾವಲಿಯಲ್ಲಿ "ಹಿಂದುರಾಯ ಸುರತ್ರಾಣ" ಎಂಬ ವೈಭವ ಶಾಲಿಯಾದುದೊಂದು ಬಿರುದು ವಿರಾಜಮಾನವಾಗಿತ್ತು. ವಿಜಯಶೀಲನಾದ ಈ ರಾಜನು ವಿಶ್ವವಿಜಯೋದಯಶಾಲಿನಿಯಾದ ವಿದ್ಯಾನಗರಿಯನ್ನು ತನ್ನ ರಾಜಧಾನಿ ಯನ್ನಾಗಿ ಮಾಡಿಕೊಂಡನು.

ಜೈಮಿನೀಯನ್ಯಾಯಮಾಲಾವಿಸ್ತರದ ಪ್ರಸ್ತಾವನೆಯಲ್ಲಿ ಬುಕ್ಕರಾಜನ ಪ್ರಶಂಸೆಯು ಹೀಗೆ ಇದೆ.

> ಸತ್ಯೈಕವ್ರತಪಾಲಕೋ ದ್ವಿಗುಣಧೀಸ್ತ್ರ್ಯರ್ಥೀ ಚತುರ್ವೇದಿತಾ |
> ಚಸ್ಕಂಪಂಥಕೃತೀ ಷಡನ್ವಯದೃಢಃ ಸಪ್ತಾಂಗಸರ್ವಂಸಹಃ ||
> ಅಷ್ಟವ್ಯಕ್ತಿಕಲಾಧರೋ ನವನಿಧಿಃ ಪುಷ್ಯನ್ದಶಪ್ರತ್ಯಯಃ |
> ಸ್ಮಾರ್ತೋಚ್ಛ್ರಾಯಧುರಂಧರೋ ವಿಜಯತಾಂ ಶ್ರೀಬುಕ್ಕಣಕ್ಷ್ಮಾಪತಿಃ||

ಅರ್ಥ : ಸತ್ಯವೇ ಮುಖ್ಯವಾದ ವ್ರತವೆಂದು ಅದನ್ನು ಪಾಲಿಸುವವನೂ, ವಾರ್ತೆ ಮತ್ತು ದಂಡನೀತಿ ಇವೆರಡರಲ್ಲಿಯೂ ಉತ್ತಮ ಬುದ್ಧಿಯುಳ್ಳವನೂ, ಧರ್ಮ ಅರ್ಥ ಕಾಮಗಳೆಂಬ ಮೂರು ಪುರುಷಾರ್ಥಗಳನ್ನು ಬಯಸುವವನೂ, ನಾಲ್ಕು ಪ್ರಕಾರದ ರಾಜವೃತ್ತವನ್ನು ಬಲ್ಲವನೂ, ಸಹಾಯವೇ ಮೊದಲಾದ ರಾಜನೀತಿಯ ಐದು ಅಂಗ ಗಳಲ್ಲಿ ಕುಶಲನೂ, ಸಂಧಿವಿಗ್ರಹಾದಿ ಷಡ್ಗುಣಗಳ ಪ್ರಾಪ್ತಿಯಿಂದ ದಾರ್ಢ್ಯವನ್ನು ಪಡೆ ದವನೂ, ಸಪ್ತಾಂಗಗಳು ಅವಿಕಲವಾಗಿರುವದರಿಂದ ಬೇಕಾದಂತಹ ಪ್ರಸಂಗಕ್ಕೆ ಎದುರಾ ಗಲು ಸಮರ್ಥನೂ, ಅಷ್ಟಲೋಕಪಾಲಕರ ಕಲೆಗಳನ್ನು ಧರಿಸಿದವನೂ, ನವನಿಧಿಗಳಿಂದ ಕೂಡಿದವನೂ, ದಶಪ್ರತ್ಯಯಗಳನ್ನು ಪೋಷಿಸಿದವನೂ, ಸ್ಮೃತಿವಿಹಿತವಾದ ಧರ್ಮ ವನ್ನು ಉನ್ನತಗೊಳಿಸುವ ಧುರಂಧರನೂ ಆದ ಬುಕ್ಕಣ ಭೂಪನಿಗೆ ವಿಜಯವಾಗಲಿ !

ಈ ಬುಕ್ಕರಾಯನ ತರುವಾಯ ಅವನ ಮಗನಾದ ಎರಡನೆಯ ಹರಿಹರನು ಸಿಂಹಾಸನವನ್ನೇರಿದನು. ಆತನ ದಾನಪತ್ರದೊಳಗಿನ ೧೪೬ ನೆಯ ಪತ್ರದಲ್ಲಿ (ಶಕೆ ೧೩೨೧) ಅವನ ವರ್ಣನೆಯು ವಿಸ್ತೃತವಾಗಿ ಮಾಡಲ್ಪಟ್ಟಿದೆ. ಆ ವರ್ಣನೆಯು ಕೆಲ ವಂಶದಿಂದ ವೀರ ಬುಕ್ಕನಿಗೂ, ಬಹ್ವಂಶದಿಂದ ಮಾಧವ ಮಂತ್ರಿಗೂ ಸಂಬಂಧಿಸುವ ದರಿಂದ ಇದರಡಿಯಲ್ಲಿ ಅದನ್ನು ಉದ್ಧರಿಸುತ್ತೇವೆ :

> ಸರ್ವವರ್ಣಾಶ್ರಮಾಚಾರಪ್ರತಿಪಾಲನತತ್ಪರೇ |
> ತಸ್ಮಿಂಶ್ಚತುಃಸಮುಂದ್ರಾಂತಾ ಭೂಮಿಃ ಕಾಮದುಹಾಽಭವತ್ ||

ಶ್ರೀಮದ್ರಾಜಾಧಿರಾಜಪರಮೇಶ್ವರಃ, ಪೂರ್ವದಕ್ಷಿಣಪಶ್ಚಿಮೋತ್ತರ ಸಮುದ್ರಾಧೀಶ್ವರಃ, ಅರಿ–ವಾರಿತಃ, ಸುಷ್ಟುರಾಜರಾಜನ್ಯಭುಜಂಗವೈನತೇಯಃ, ಶರಣಾಗತ ವಜ್ರಪಂಜರಃ, ಕಲಿಕಾಲಧರ್ಮಃ, ಕರ್ಣಾಟಕಲಕ್ಷ್ಮೀಕರ್ಣಾವತಂಸಃ, ಚತುರ್ವರ್ಣಾಶ್ರಮಪಾಲಕಃ, ಕುಲಗಿರಿತಟಲಿಖಿತಘೋಷಣಃ, ರಣರಂಗಭೀಷಣಃ, ಪರರಾಜರಾಜೀವ ಸುಧಾಕರಃ, ಪರನಾರೀಸಹೋದರಃ, ಪುಣ್ಯಶ್ಲೋಕಪ್ರಹರ್ಷಃ, ಚೇರಚೋಲಪಾಂಡ್ಯ ಸ್ಥಾಪನಾಚಾರ್ಯಃ, ವೇದಭಾಷ್ಯಪ್ರಕಾಶಕಃ, ವೈದಿಕಮಾರ್ಗಸ್ಥಾಪನಾಚಾರ್ಯಃ, ಕರ್ಮೋಪೇತಾಧ್ವರ್ಯುಃ, ರಾಜಕಲ್ಯಾಣಶೇಖರಃ, ಸಿದ್ಧಸ್ವತೇತ್ಯಾದಿ ಬಿರುದಾವಲಿ ಭೂಷಿತಃ....||

ಈ ವರ್ಣನೆಯು ಸಂಸ್ಕೃತದಲ್ಲಿದ್ದರೂ, ಸುಲಭವಾಗಿ ತಿಳಿಯುವಂತಿರುವದರಿಂದ ಇದರ ಕನ್ನಡ ಅರ್ಥವನ್ನು ಬೇರೆಯಾಗಿ ಕೊಡುವ ಅವಶ್ಯಕತೆಯಿಲ್ಲ. ರಾಜ್ಯಸಂಘಟನೆಯೂ, ವೇದಭಾಷ್ಯ ಮತ್ತು ವೈದಿಕ ಧರ್ಮದ ಪುನರುಜ್ಜೀವನವೂ ಬುಕ್ಕರಾಯನ ಕಾಲದಲ್ಲಿ ಆರಂಭವಾಗಿ ಎರಡನೆಯ ಹರಿಹರನ ಕಾಲದಲ್ಲಿ ಪೂರ್ಣವಾದುವು. ಆದುದರಿಂದ ಈ ವರ್ಣನೆಯು ಇಬ್ಬರಿಗೂ ಸಂಬಂಧಿಸುತ್ತದೆ.

ವೀರಬುಕ್ಕದೇವನು ವಿದ್ವಾಂಸನೂ ವಿದ್ವತ್ಪಕ್ಷಪಾತಿಯೂ ಆಗಿದ್ದನು. ಶ್ರೀವಿದ್ಯಾತೀರ್ಥ ಹಾಗು ಶ್ರೀ ಶಂಕರಾನಂದ ಮುನಿಗಳ ಶಿಷ್ಯಮಾಲಿಕೆಯಲ್ಲಿ ಅವನ ಹೆಸರು ಸಾಯಣಮಾಧವರೊಡನೆಯೇ ಉಕ್ತವಾಗಿದೆ. ಆತನ ರಾಜ್ಯರಕ್ಷಣಚಾತುರ್ಯವನ್ನೂ, ನೀತಿಮತ್ತೆಯನ್ನೂ ಕುರಿತು ತಮ್ಮ ಗೌರವಯುಕ್ತವಾದ ಅಭಿಪ್ರಾಯವನ್ನು ಮಾಧವಾಚಾರ್ಯರು ಅನೇಕ ಸಂದರ್ಭಗಳಲ್ಲಿ ಹೊರಗೆಡಹಿದ್ದಾರೆ. ಜೈಮಿನಿಯ ನ್ಯಾಯಮಾಲಾವಿಸ್ತರದ ಪ್ರಸ್ತಾವನೆಯಲ್ಲಿ ಆತನ ಪ್ರಶಂಸಾಪರವಾದ ಎರಡು ಶ್ಲೋಕಗಳಿವೆ. ಅವುಗಳಲ್ಲಿ ಆತನ ಸದ್ಗುಣಗಳ ಸಾರಾಂಶವೆಲ್ಲ ಬಂದುಹೋಗಿದೆ. ಆ ಶ್ಲೋಕಗಳು ಯಾವವೆಂದರೆ—

ಯುಕ್ತಿಂ ಮಾನವತೀಂ ವಿದನ್ಸ್ಫುರದಧೃತಿರ್ಭೇದೇ ವಿಶೇಶಾರ್ಥಭಾ- |
ಗಾಪ್ನೋಹಃಕ್ರಮಕೃತ್ಪ್ರಯುಕ್ತಿನಿಪುಣಃ ಶ್ಲಾಘ್ಯಾತಿದೇಶೋನ್ನತಿಃ ||
ನಿತ್ಯಸ್ಫೂರ್ತ್ಯಧಿಕಾರವಾಂಗತಸದಾಬಾಧಃ ಸ್ವತಂತ್ರೇಶ್ವರಃ |
ಜಾಗರ್ತಿ ಶ್ರುತಿಮತ್ಪ್ರಸಂಗಚರಿತಃ ಶ್ರೀಬುಕ್ಕಣಕ್ಷ್ಮಾಪತಿಃ ||

ಯದ್‌ಬ್ರಹ್ಮಪ್ರತಿಪಾದ್ಯತೇ ಪ್ರಗುಣಯತ್ತತ್ಪಂಚಮೂರ್ತಿಪ್ರಥಾಮ್ |
ತತ್ರಾಯಂ ಸ್ಥಿತಿಮೂರ್ತಿಮಾಕಲಯತಿ ಶ್ರೀಬುಕ್ಕಣಕ್ಷ್ಮಾಪತಿಃ ||
ವಿದ್ಯಾತೀರ್ಥಮುನಿಸ್ತದಾತ್ಮನಿ ಲಸನ್ಮೂರ್ತಿಸ್ಸ್ವನುಗ್ರಾಹಿಕಾ |
ತೇನಾಸ್ಯ ಸ್ವಗುಣೈರಖಂಡಿತಪದಂ ಸಾರ್ವಜ್ಞ್ಯಮುದ್ದ್ಯೋತತೇ ||

ಅರ್ಥ : ಶ್ರೀ ಬುಕ್ಕದೇವನು ರಾಜ್ಯರಕ್ಷಣ ಮತ್ತು ಪ್ರಜಾಪಾಲನಗಳ ಯುಕ್ತಿಯನ್ನು ಚೆನ್ನಾಗಿ ಅರಿತಿದ್ದನು. ಪ್ರತಿಕೂಲ ಪ್ರಸಂಗದಲ್ಲಿ ಕೂಡ ಆತನು ಅತ್ಯಂತ

ಧೈರ್ಯದಿಂದ ಇರುತ್ತಿದ್ದನು. ಆದುದರಿಂದ ಆತನ ರಾಜ್ಯವು ಸಮೃದ್ಧಿಯನ್ನು ಪಡೆಯಿತು. ತನ್ನ ಅಧಿಕಾರಿಗಳಲ್ಲಿ ಯೋಗ್ಯನಾವನು, ಅಯೋಗ್ಯನಾವನು? ಎಂಬುದನ್ನು ತಿಳಿದು ಅವರವರ ಯೋಗ್ಯತಾನುಗುಣವಾದ ಕೆಲಸಗಳಲ್ಲಿ ಅವರನ್ನು ನಿಯೋಜಿಸುತ್ತಿದ್ದನು. ಅವನು ಎಲ್ಲ ತರದ ಯುಕ್ತಿ ಪ್ರಯುಕ್ತಿಗಳನ್ನು ಬಲ್ಲವನಾಗಿದ್ದನು. ಎಲ್ಲರ ಸ್ತುತಿಗೆ ಪಾತ್ರನಾಗಿ ದೇಶೋನ್ನತಿಯನ್ನುಂಟುಮಾಡಿದನು. ಯಾವ ಕಾಲಕ್ಕೆ ಏನು ಮಾಡಬೇಕೆಂಬವನ್ನು ಆತನು ಕೂಡಲೇ ತಿಳಿಯುತ್ತಿದ್ದನು. ಆತನ ಅಧಿಕಾರವು ಅಬಾಧಿತವಾಗಿದ್ದ ಮೂಲಕ ಯಾರಿಗೂ ಯಾವ ತರದ ಉಪದ್ರವವೂ ಉಂಟಾಗದಂತೆ ನೋಡಿಕೊಳ್ಳುತ್ತಿದ್ದನು. ಶ್ರುತ್ಯುಕ್ತವಾದ ಧರ್ಮದ ಚರ್ಚೆಯು ಅವನ ಸಭೆಯಲ್ಲಿ ನಡೆಯುತ್ತಿತ್ತು. ಈ ಪ್ರಕಾರ ಶ್ರೀ ಬುಕ್ಕಣದೇವನು ಸಾರ್ವಭೌಮ ರಾಜನಾಗಿದ್ದನು. ಈತನು ಭೂಪತಿ ಸರ್ವಜ್ಞನಾಗಿದ್ದನು. ಸೃಷ್ಟಿ, ಸ್ಥಿತಿ, ಸಂಹಾರ, ನಿರೋಧ, ಅನುಗ್ರಹ ಈ ಅಯ್ದು ಮಹೇಶ್ವರನ ಮೂರ್ತಿಗಳಷ್ಟೇ; ಶ್ರೀ ಬುಕ್ಕಣನು ಸ್ಥಿತಿಮೂರ್ತಿಯನ್ನು ಧಾರಣಮಾಡಿ ಪ್ರಜೆಗಳನ್ನು ಕಾಪಾಡುತ್ತಾನೆ. ಅವನ ಅಂತಃಕರಣದಲ್ಲಿ ಶ್ರೀ ವಿದ್ಯಾತೀರ್ಥರೂಪಿಯಾದ ಮಹೇಶ್ವರನ ಅನುಗ್ರಾಹಿಕಾಮೂರ್ತಿಯು ಯಾವಾಗಲೂ ವಿರಾಜಮಾನವಾಗಿರುತ್ತದೆ. ಆದುದರಿಂದ ಸದ್ಗುಣಗಳಿಂದ ಅಖಂಡಿತವಾಗಿರುವ ಆತನ ಸರ್ವಜ್ಞತ್ವವು ನಿರಂತರವೂ ಪ್ರಕಾಶಿತವಾಗಿರುತ್ತದೆ. ಅಂದರೆ ವಿದ್ಯೆಯ ಪ್ರಕಾಶದಿಂದ ಎಲ್ಲರ ವೃತ್ತವನ್ನೂ ಅವನು ತಿಳಿಯುತ್ತಾನೆ.

ಇರಲಿ, ಇನ್ನು ಸಿಂಹಾವಲೋಕನ ಕ್ರಮದಿಂದ ವಿಜಯನಗರದ ಇತಿಹಾಸವನ್ನು ಸಂಕ್ಷೇಪವಾಗಿ ಬರೆದು ಈ ಪ್ರಕರಣವನ್ನು ಮುಗಿಸುವೆವು.

ವಿಜಯನಗರದಲ್ಲಿ ಮೂರು ಮನೆತನಗಳ ಅರಸರು ರಾಜ್ಯವನ್ನು ಆಳಿದರು. ಅವರು ಯಾರೆಂದರೆ —

## ೧. ಸಂಗಮ ಮನೆತನ (ಕ್ರಿ. ಶ. ೧೩೩೬–೧೪೭೮)

ಈ ವಂಶದಲ್ಲಿ ೯ ಜನ ಅರಸರು ಆಗಿಹೋದರು. ಇವರು ಯಾದವರು. ಇವರ ಕುಲದೇವತೆ ವಿರೂಪಾಕ್ಷನು ಬುಕ್ಕರಾಯನೇ ಈ ವಂಶದಲ್ಲಿ ಪ್ರಬಲವಾದ ಮೊದಲನೆಯ ರಾಜನು. ಇವನು ಕ್ರಿ. ಶ. ೧೩೫೪ ರಿಂದ ಕ್ರಿ. ಶ. ೧೩೭೭ ರ ವರೆಗೆ ಆಳಿದನು. ವಿಜಯನಗರದಲ್ಲಿಯ ಕೋಟೆಕೊತ್ತಲಗಳನ್ನು ಕಟ್ಟಿಸಿದವನು ಇವನೇ. ಇವನಿಗೆ "ಭಾಷೆಗೆ ತಪ್ಪುವ ರಾಯರ ಗಂಡ", "ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಾಧೀಶ್ವರ" ಎಂಬ ಬಿರುದುಗಳಿದ್ದುವು. ಕ್ರಿ. ಶ. ೧೩೬೮ ರಲ್ಲಿ ಜೈನರು ವೈಷ್ಣವರಿಂದ ತಮ್ಮ ಧರ್ಮಾಚರಣಕ್ಕೆ ವ್ಯತ್ಯಯವುಂಟಾಗುವದೆಂದು ಇವನಿಗೆ ದೂರು ಹೇಳಿಕೊಂಡರು. ಆಗ ಬುಕ್ಕರಾಯನು ಎರಡೂ ಪಂಥಗಳ ಮುಖಂಡರನ್ನು ಕರೆಯಿಸಿ "ಪ್ರತಿಯೊಬ್ಬರು ತಮ್ಮ ತಮ್ಮ ಧರ್ಮದಂತೆ ನಡೆಯಬೇಕು; ಒಬ್ಬರು ಮತ್ತೊಬ್ಬರ ಧರ್ಮಾಚರಣೆಗೆ ಅಡ್ಡಬರಬಾರದು." ಎಂದು ವಿಧಿಸಿದನು, ಮತ್ತು ಅವನು ಸ್ವತಃ ಜೈನರ ಕೈಯನ್ನು ವೈಷ್ಣವರ ಕೈಯಲ್ಲಿ ಕೂಡಿಸಿ, ಉಭಯರಿಗೂ ತಮ್ಮ ತಮ್ಮ ಧರ್ಮಕ್ಕನುಸಾರ

ನಾಗಿಯೇ ನಡೆಯುವಂತೆ ಬೋಧಿಸಿದನು. ಇದಕ್ಕಿಂತ ಹೆಚ್ಚಿನ ಪರಧರ್ಮ ಸಹಿಷ್ಣುತೆಯು ಸಿಕ್ಕುವುದೇ ? ಈ ಸದ್ಗುಣವು ಹಿಂದಿನ ಕಾಲದ ನಮ್ಮ ಅರಸರಿಗೆ ಪೂರ್ಣವಾಗಿ ಗೊತ್ತಿತ್ತು. ಜಾತಿ ಜಾತಿಗಳಲ್ಲಿ ಅವರು ಎಂದೂ ದ್ವೇಷವನ್ನು ಬೆಳೆಸಲಿಲ್ಲ. ಬುದ್ಧಿವಂತರು ಕೇವಲ ತಮ್ಮ ಬುದ್ಧಿಬಲದಿಂದಲೇ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬೇಕೆಂಬ ತತ್ವವನ್ನು ಅವರು ಅರಿತವರಾಗಿದ್ದರು.

ಈ ಬುಕ್ಕರಾಯನ ಸೊಸೆಯಾದ ಗಂಗಾದೇವಿಯೆಂಬವಳು "ವೀರಕಂಪಣರಾಯ ಚರಿತೆ"ವೆಂಬ ಅತ್ಯಂತ ಸರಸವಾದ ಸಂಸ್ಕೃತ ಕಾವ್ಯವೊಂದನ್ನು ರಚಿಸಿದ್ದಾಳೆ. ಅದು ಪ್ರಸಿದ್ಧವಾಗಿ ಸ್ವಲ್ಪ ದಿನಗಳಾದವು. ಬುಕ್ಕರಾಯಪಟ್ಟಣ ಮೊದಲಾದ ಇವನ ಹೆಸರಿನ ಊರುಗಳು ಈಗಲೂ ಪ್ರಸಿದ್ಧವಾಗಿವೆ. ಇವನ ಮಗನಾದ ಹರಿಹರನು ವಿದ್ವಾಂಸರಿಗೆ ಬಹಳ ಆಶ್ರಯ ಕೊಡುತ್ತಿದ್ದನು. ಈ ಎರಡನೆಯ ಹರಿಹರರಾಯನನ್ನು "ಕರ್ನಾಟಕ ವಿದ್ಯಾವಿಲಾಸ" ಎಂದು ಕರೆಯುತ್ತಿದ್ದರು. ಇವನ ಕಾಲದಲ್ಲಿ ಗುಂಡನೆಂಬ ಸೇನಾನಾಯಕನು ಅನೇಕ ಶೂರ ಕೃತ್ಯಗಳನ್ನು ಮಾಡಿದನು. ಇವನು ೩೦–೮–೧೪೦೪ ನೆಯ ಇಸ್ವಿಯಲ್ಲಿ ಮರಣ ಹೊಂದಿದನು.

ಈ ವಂಶದ ಕೊನೆಯ ಪ್ರಸಿದ್ಧ ಅರಸನು ಎರಡನೆಯ ದೇವರಾಯನು. ಇವನಿಗೆ ಪ್ರೌಢದೇವರಾಯನೆಂದೂ ಹೆಸರುಂಟು. ಈತನು ಧೂರ್ತ ವಿಚಾರ ಮಾಡಿ ಸೈನ್ಯದಲ್ಲಿ ಮುಸಲ್ಮಾನರನ್ನಿಟ್ಟುಕೊಂಡು ತನ್ನ ಸೈನಿಕರಿಗೆ ಯುದ್ಧಕಲೆಯನ್ನು ಕಲಿಸಿದನು. ಈತನು ೨೪–೫–೧೪೪೬ ನೆಯ ಇಸ್ವಿಯಲ್ಲಿ ಸತ್ತನು. ಇವನ ತರುವಾಯ ಈ ವಂಶವು ಕುಗ್ಗಿತು.

### ೨. ಸಾಳ್ವ ಮನೆತನ (ಕ್ರಿ. ಶ. ೧೪೭೯–೧೪೯೬)

ಸಂಗಮ ಮನೆತನದ ಕೊನೆಯ ಅರಸನಾದ ವಿರೂಪಾಕ್ಷನ ಮುಖ್ಯ ಸರದಾರನಾದ ಸಾಳ್ವ ನರಸಿಂಹನು ವಿಜಯನಗರವನ್ನು ಸೆಳೆದುಕೊಂಡು ಅರಸನಾದನು. ಮುಸಲ್ಮಾನರಿಗೂ ವಿಜಯನಗರದ ಅರಸರಿಗೂ ಕೃಷ್ಣಾ ತುಂಗಭದ್ರಾ ನದಿಗಳ ನಡುವಿನ ಸೀಮೆಗಾಗಿ ಆಗಾಗ ಯುದ್ಧಗಳಾಗುತ್ತಿದ್ದವು. ಈ ಯುದ್ಧಗಳಲ್ಲಿ ಸಾಳ್ವ ನರಸಿಂಹನು ಪರಾಕ್ರಮವನ್ನು ತೋರಿಸಿ ಅತ್ಯಂತ ಪ್ರಬಲನಾಗಿದ್ದನು. ಆದುದರಿಂದಲೇ ಸಿಂಹಾಸನವನ್ನು ಎತ್ತಿ ಹಾಕುವದು ಇವನಿಗೆ ಸಾಧ್ಯವಾಯಿತು. ಆದರೆ ಈತನ ವಂಶಜರು ಬಹು ದಿವಸ ಆಳಲಿಲ್ಲ. ಈತನ ಮಗನಾದ ಇಮ್ಮಡಿ ನರಸಿಂಹನನ್ನು ನರಸ ಅಥವಾ ನರಸಿಂಗನೆಂಬ ಅವನ ಸೇನಾಧಿಪತಿಯು ಕ್ರಿ. ಶ. ೧೪೯೬ ನೆಯ ವರ್ಷದಲ್ಲಿ ಕೊಂದು ಹಾಕಿದಂತೆ ತೋರುತ್ತದೆ.

### ೩. ನರಸ ಮನೆತನ (ಕ್ರಿ. ಶ. ೧೪೯೬–೧೫೬೭)

ಈ ನರಸನು ತುಳವನು. ಬಲು ಶೂರನು; ಈತನು ಚೇರ, ಚೋಳ, ಪಾಂಡ್ಯ ದೇಶಗಳನ್ನು ಗೆದ್ದನು. ಈತನ ತರುವಾಯ ಇವನ ಮೂವರು ಮಕ್ಕಳು ಒಬ್ಬರ

ಹಿಂದೊಬ್ಬರು ಪಟ್ಟವೇರಿದರು. ಆದರೆ ಅವರಲ್ಲಿ ಎರಡನೆಯವನಾದ ಕೃಷ್ಣದೇವ ರಾಯನೇ ಪ್ರತಾಪಶಾಲಿ. ಈತನು ಪಟ್ಟವೇರಿದ ಕೂಡಲೇ ಮುಸಲ್ಮಾನರು ಇವ ರೊಡನೆ ಅನೇಕ ಯುದ್ಧಗಳನ್ನು ಮಾಡಿದರು. ಆದರೆ ಒಂದರಲ್ಲಿಯೂ ಅವರಿಗೆ ಗೆಲುವು ಸಿಕ್ಕಲಿಲ್ಲ. ಕೃಷ್ಣರಾಯನು ಒಳ್ಳೆಯ ಪರಾಕ್ರಮಶಾಲಿಯಾಗಿದ್ದದಲ್ಲದೆ ವಿದ್ಯೆ, ಕಲಾಕೌಶಲ್ಯ, ಔದಾರ್ಯಗಳಲ್ಲಿ ಬಹು ವಿಖ್ಯಾತನಾದನು. ಈತನು ಸ್ವತಃ ತೆಲಗು ಭಾಷೆಯಲ್ಲಿ "ಅಮುಕ್ತಮಾಲ್ಯದ" ಅಥವಾ "ವಿಷ್ಣು ಚಿತ್ತೀಯ" ಎಂಬ ಗ್ರಂಥ ಬರೆ ದಿದ್ದಾನೆ. ಇವನಿಗೆ ಆಂಧ್ರಭೋಜನೆಂದು ಕರೆಯುತ್ತಿದ್ದರು. ಇವನು ತೆಲಗು ಮನುಷ್ಯ ನೆಂದು ಕೆಲವರು ಊಹಿಸುತ್ತಾರೆ. ಅವರ ಊಹೆಗೆ ಮೇಲೆ ಹೇಳಿದ ತೆಲಗು ಭಾಷೆಯ ಪುಸ್ತಕವನ್ನು ಇವನು ರಚಿಸಿದುದೇ ಕಾರಣವು. ಆದರೆ ಆ ಪುಸ್ತಕವನ್ನು ಇವನು ಏಕೆ ಬರೆದನೆಂಬುವದಕ್ಕೆ ಅದೇ ಪುಸ್ತಕದ ಆರಂಭದಲ್ಲಿ ಕೊಟ್ಟ ಕಥೆಯನ್ನು ಓದಿದರೆ ಅವನು ನಿಜವಾಗಿಯೇ ಕನ್ನಡ ಮನುಷ್ಯನೆಂದು ಹೇಳಲಿಕ್ಕೆ ಆಸ್ಪದವಿದೆ.

ಕೃಷ್ಣರಾಯನು ಶ್ರೀಕುಲವೆಂಬ ಗ್ರಾಮಕ್ಕೆ ಹೋದಾಗ ಅಲ್ಲಿಯ ಆಂಧ್ರವಿಷ್ಣು ದೇವರು ಏಕಾದಶಿಯ ದಿವಸ ಆ ರಾಜನ ಕನಸಿನಲ್ಲಿ ಬಂದು, ತೆಲಗು ಭಾಷೆಯಲ್ಲಿ ಒಂದು ಕಾವ್ಯವನು ಬರೆದು ಅದನ್ನು ತಿರುಪತಿಯ ಶ್ರೀವೆಂಕಟರಮಣ ದೇವರಿಗೆ ಸಮರ್ಪಿಸಲಿಕ್ಕೆ ಹೇಳಿದನಂತೆ. ಈ 'ಕನ್ನಡರಾಯ'ನು ತೆಲಗು ಭಾಷೆಯಲ್ಲಿಯೇ ಏಕೆ ಗ್ರಂಥವನ್ನು ಬರೆಯಬೇಕೆಂಬುದಕ್ಕೆ ದೇವರು ಕೆಲವು ಕಾರಣಗಳನ್ನು ಹೇಳಿದನು. ಅವು ಯಾವು ವೆಂದರೆ— ೧) ಇದು ತೆಲಗು ದೇಶ, ೨) ನಾನು ತೆಲಗು ದೇವರು, ೩) ತೆಲಗು ಭಾಷೆ ಸಾಮಾನ್ಯವಾದುದಲ್ಲ, ೪) ಅನೇಕ ದೇಶ ಭಾಷೆಗಳನ್ನು ಬಲ್ಲವನಾದ ನಿನಗೆ ತೆಲಗು ಭಾಷೆಯು ಲೇಸಾದ ಭಾಷೆಯೆಂಬುದು ಗೊತ್ತುಂಟು. ಆದರೆ ಇಷ್ಟರಿಂದ ಆ ರಾಯನ ಮಾತೃಭಾಷೆಯು ತೆಲಗು ಆಗಿತ್ತೆಂದು ಮಾತ್ರ ಊಹಿಸಲಾಗದು. ಯಾಕಂದರೆ,— ೧) ಆ ತೆಲಗು ದೇವರು ಆತನಿಗೆ ಕನ್ನಡರಾಯನೆಂದು ಕರೆದಿರುವನು. ೨) ಕೃಷ್ಣ ರಾಯನು ತೆಲಗು ಭಾಷೆಯವನೇ ಆಗಿದ್ದರೆ, ಆತನಿಗೆ ತೆಲಗು ಭಾಷೆಯಲ್ಲಿಯೇ ಗ್ರಂಥ ವನ್ನು ಬರೆಯಬೇಕೆಂದು ಬೇರೆ ಹೇಳುವ ಕಾರಣವಿದ್ದಿಲ್ಲ. ೩) ವಿಜಯನಗರದ ರಾಜ್ಯವು ಬಹುತರವಾಗಿ ಕನ್ನಡ ರಾಜ್ಯವು. ೪) ರಾಜಧಾನಿಯಾದ ವಿಜಯನಗರ ಪಟ್ಟಣದ ಮುಖ್ಯ ಭಾಷೆ ಕನ್ನಡವು. ೫) ಕೃಷ್ಣರಾಯನಿಗೆ "ಕನ್ನಡ ರಾಜ್ಯರಮಾರಮಣ" ಎಂಬ ಬಿರುದಿತ್ತು. ಇವೇ ಮೊದಲಾದ ಕಾರಣಗಳಿಂದ ಆ ರಾಯನ ಮಾತೃಭಾಷೆಯು ಕನ್ನಡವೇ ಆಗಿತ್ತೆಂದು ಊಹಿಸಲಿಕ್ಕೆ ಬಲವಾದ ಆಸ್ಪದವುಂಟಾಗಿದೆ. ಇರಲಿ.

ಇವನ ಕಾಲಕ್ಕೆ ವಿಜಯನಗರದ ಸಾಮ್ರಾಜ್ಯವು ಪರಮಾವಧಿಯ ಘನತೆಗೇರಿತು. ಆದರೆ ನಮ್ಮ ಮಿಕ್ಕ ರಾಜ್ಯಗಳಂತೆ ಇದಕ್ಕೂ ಮುಂದೆ ಬಲಾಢ್ಯರಾದ ರಾಜರು ದೊರೆಯ ದುದರಿಂದ ಇದು ಒಮ್ಮೆಲೆ ನೆಲಕ್ಕೆ ಕುಕ್ಕರಿಸಿತು! ಈ ಕೃಷ್ಣರಾಯನು ಅತ್ಯಂತ ಉದಾತ್ತಗುಣಗಳುಳ್ಳವನು. ತನ್ನ ದೇಶದಲ್ಲಿಯ ಮುಸಲ್ಮಾನ ಪ್ರಜೆಗಳು ತನಗೆ ಸಲಾಂ ಮಾಡಲಿಕ್ಕೆ ಹಿಂದು ಮುಂದು ನೋಡಿಯಾರೆಂದು ಬಗೆದು, ತನ್ನೆದುರಿಗೆ ಒಂದು ಕುರಾನ

ವನ್ನು ಇಡಿಸಿ ಅದಕ್ಕೆ ಪೂಜ್ಯಭಾವವನ್ನು ತೋರಿಸಿದರೆ ಸಾಕೆಂದು ಹೇಳಿದನು. ಈತನ ದರಬಾರದಲ್ಲಿ ಅಷ್ಟದಿಗ್ಗಜಗಳೆಂಬ ಮಹಾಪಂಡಿತರಿದ್ದರು. ತೆನ್ನಾಲ ರಾಮಕೃಷ್ಣನೂ ಅಪ್ಪಯ್ಯ ದೀಕ್ಷಿತರೂ ಅವರೊಳಗಿನವರೇ. ಈತನ ಕಾಲಕ್ಕೆ ಇರಾಣದ ರಾಯಭಾರಿಗಳೂ, ಯುರೋಪದ ಪ್ರವಾಸಿಗಳೂ ವಿಜಯನಗರ ರಾಜ್ಯಕ್ಕೆ ಬಂದು ಆ ಪಟ್ಟಣವನ್ನು ನೋಡಿ ಬೆರಗಾಗಿ ಬೆರಳು ಕಚ್ಚಿರುವರು.

ನಿಕೊಲಿಸಕೊಂಟಿ ಎಂಬೊಬ್ಬ ಇಟಲೀ ದೇಶದ ಪ್ರವಾಸಿಯು ೧೪೨೦ ನೆಯ ಇಸ್ವಿಯಲ್ಲಿ ಈ ಪಟ್ಟಣಕ್ಕೆ ಬಂದಿದ್ದನು. ಅವನು ಹೇಳಿದ ವರ್ಣನೆಯ ಸಾರಾಂಶವನ್ನು ಇದರಡಿಯಲ್ಲಿ ಕೊಡುತ್ತೇವೆ:

“ಈ ಪಟ್ಟಣದ ಸುತ್ತಳತೆಯು ೬೦ ಮೈಲು ಇರುತ್ತದೆ. ಈ ಒಂದೇ ಪಟ್ಟಣದಲ್ಲಿ ೯೦,೦೦೦ ಸೈನಿಕರಿರುವರು. ಈ ಪಟ್ಟಣಕ್ಕೆ ಪ್ರಚಂಡವಾದ ಅಗಸೇ ಬಾಗಿಲಗಳುಳ್ಳ ಏಳು ಸುತ್ತಿನ ಭದ್ರವಾದ ಕೋಟೆಯಿರುವದು. ನೀರಿನ ವಿಪುಲತೆಯಿರುವುದರಿಂದ ಎಲ್ಲಿ ನೋಡಿದರೂ ಸುಂದರವಾದ ಬನಗಳೂ, ಬತ್ತದ ಗದ್ದೆಗಳೂ ಕಬ್ಬಿನ ತೋಟಗಳೂ ಕಂಗೊಳಿಸುವವು. ಅವಕ್ಕೆ ಹೊಂದಿ ಮಹಾಪಾಠಶಾಲೆಗಳೂ, ವಿದ್ಯಾಲಯಗಳೂ ತುಂಬಿವೆ.”

ಅಬ್ದುಲ್ ರಜಕನೆಂಬ ಇರಾಣದ ರಾಯಭಾರಿಯು ಕ್ರಿ. ಶ. ೧೪೪೨ ರಲ್ಲಿ ಇಲ್ಲಿಗೆ ಬಂದಿದ್ದನು. ಆತನು ಈ ಪಟ್ಟಣವನ್ನು ಬಲು ಸುಂದರವಾಗಿ ಬಣ್ಣಿಸಿದ್ದಾನೆ. ಅದು ಹೇಗೆಂದರೆ —

ಈ ವಿಜಯನಗರದ ರಾಯನ ವಶದಲ್ಲಿ ೩೦೦ ಬಂದರಗಳುಂಟು. ಎಡೆಬಿಡದೆ ಮೂರು ತಿಂಗಳು ಪ್ರವಾಸ ಮಾಡುವಷ್ಟು ಈ ರಾಜ್ಯದ ವಿಸ್ತಾರವಿದೆ. ಈ ರಾಜನ ಹತ್ತಿರ ಹತ್ತು ಹನ್ನೊಂದು ಲಕ್ಷ ಸೈನ್ಯವಿರುತ್ತದೆ. ಇಂತಹ ವೈಭವಸಂಪನ್ನನಾದ ಬೇರೆ ಅರಸನನ್ನು ಕಾಣುವದು ದುರ್ಲಭ. ಈ ವಿಜಯನಗರವನ್ನು ಸರಿಗಟ್ಟುವ ಪಟ್ಟಣವನ್ನು ಕಣ್ಣುಗಳು ನೋಡಿಲ್ಲ. ಕಿವಿಗಳು ಕೇಳಿಲ್ಲ. ಅರಮನೆಯ ಮಗ್ಗಲಿಗೆ ಪಗಡಿಯ ಪಟದಂತೆ ಇದಿರುಬದಿರಾಗಿ ನಾಲ್ಕು ಪೇಟೆಗಳ ಸಾಲುಗಳಿರುತ್ತವೆ. ಉತ್ತರಕ್ಕೆ ರಾಯನ ಅರಮನೆಯ ಮುಖಮಂಟಪವಿರುತ್ತದೆ. ಪೇಟೆಗಳ ಎರಡು ಮಗ್ಗಲಿಗೂ ಭವ್ಯವೂ ಎತ್ತರವೂ ಆದ ಉಪ್ಪರಿಗೆಯ ಸಾಲುಗಳು ಕಂಗೊಳಿಸುತ್ತವೆ. ಅರಮನೆಯ ಸಭಾಮಂಟಪವು ಇವೆಲ್ಲಕ್ಕೂ ಎತ್ತರವಾಗಿ ಭವ್ಯವಾಗಿರುತ್ತದೆ. ಪೇಟೆಯ ಬೀದಿಗಳು ಅತ್ಯಂತ ವಿಶಾಲವಾದವೂ ಉದ್ದವಾದವೂ ಇರುತ್ತವೆ. ಈ ಪಟ್ಟಣದಲ್ಲಿ ಎಲ್ಲಿ ನೋಡಿದರೂ ಗುಲಾಬೀ ಹೂಗಳ ಸುಗ್ಗಿ. ಇಲ್ಲಿಯ ಜನರಿಗೆ ಅವುಗಳ ಮೇಲೆ ಬಲು ಪ್ರೀತಿ. ಅವರಿಗೆ ಊಟವಿಲ್ಲದಿದ್ದರೂ ಸಾಗೀತು; ಆದರೆ ಈ ಹೂಗಳಿಲ್ಲದಿದ್ದರೆ ನಡೆಯುವಂತಿಲ್ಲ. ಇಲ್ಲಿ ಮುತ್ತು, ರತ್ನ ಮತ್ತು ವಜ್ರಗಳ ವ್ಯಾಪಾರವು ಪ್ರತಿನಿತ್ಯವೂ ನಡೆಯುತ್ತದೆ. ಎಲ್ಲಿ ನೋಡಿದರೂ ಅಂದವಾದ ಕಲ್ಲುಗಳಿಂದ ಕಟ್ಟಲ್ಪಟ್ಟ ನೀರು ಕಾಲುವೆಗಳು ಜುಳು ಜುಳು

ಹರಿಯುತ್ತವೆ. ಅರಮನೆಯಲ್ಲಿ ಹಲವು ನೆಲಮನೆಗಳುಂಟು. ಅವೆಲ್ಲವುಗಳಲ್ಲಿ ನಾಣ್ಯದ ಬೊಕ್ಕಸಗಳು ತುಂಬಿವೆ. ದಿವಾಣಖಾನೆಯ ಎದುರಿಗೆ ಆನೆಯ ಸಾಲುಗಳುಂಟು. ಪ್ರತಿಯೊಂದು ಆನೆಯೂ ನಿಲ್ಲಲಿಕ್ಕೆ ಒಂದು ದೊಡ್ಡ ಕಟ್ಟಡವಿರುತ್ತದೆ. ಟಂಕಸಾಲೆಯ ಮುಂದೆ ಪಟ್ಟಣದ ಮುಖ್ಯಾಧಿಕಾರಸ್ಥನ ಮನೆಯುಂಟು. ಅಲ್ಲಿ ೧೨೦೦೦ ಕಾವಲುಗಾರರಿದ್ದಾರೆ.

ಇದೇ ಅಬ್ದುಲ್ ರಜಕನು ಪಟ್ಟಣದಲ್ಲಿ ಒಮ್ಮೆ ಉತ್ಸವ ನಡೆದುದನ್ನು ನೋಡಿ ಈ ರೀತಿಯಾಗಿ ವರ್ಣಿಸಿದ್ದಾನೆ:

"ರಾಯನ ಅಪ್ಪಣೆಯ ಮೇರೆಗೆ ರಾಜ್ಯದೊಳಗಿನ ಮುಖ್ಯ ಮುಖ್ಯ ಸರದಾರರೂ ರಾಜಪುತ್ರರೂ, ಚಕಚಕಿಸುವ ಅಂಬಾರೆಗಳನ್ನೊಡಗೂಡಿದ ಸಾವಿರಾರು ಆನೆಗಳನ್ನೇರಿ ಅರಮನೆಗೆ ಬಂದಿರುವರು. ಕೆಳಗಿನಿಂದ ಮೇಲ್ದುದಿಯವರೆಗೆ ಸುಂದರವಾದ ಚಿತ್ರಗಳಿಂದ ಮುಚ್ಚಿದ ೩-೪-೫ ಅಂತಸ್ತುಗಳುಳ್ಳ ಡೇರೆಗಳಲ್ಲಿ ಇವರು ಇಳಿದುಕೊಂಡಿರುವರು. ಈ ಡೇರೆಗಳಲ್ಲಿ ಹಲವು ಡೇರೆಗಳು ತಿರುಗಿಸಿದತ್ತ ತಿರುಗುತ್ತವೆ. ಆ ಡೇರೆಯಲ್ಲಿ ಪ್ರತಿಯೊಂದು ಕ್ಷಣಕ್ಕೂ ಹೊಸ ಸಭಾಮಂಡಪಗಳು ದೃಷ್ಟಿಗೆ ಬೀಳುತ್ತಿದ್ದುವು. ಇವೆಲ್ಲವುಗಳ ಮುಂದೆ ೯ ಅಂತಸ್ತುಗಳುಳ್ಳ ಸುಂದರವಾದ ಒಂದು ದೊಡ್ಡ ಡೇರೆಯುಂಟು. ಈ ಡೇರೆಯಲ್ಲಿ ೯ನೆಯ ಉಪ್ಪರಿಗೆಯಲ್ಲಿ ರಾಯನ ರತ್ನಖಚಿತವಾದ ಬಂಗಾರದ ಸಿಂಹಾಸನವು ಕಂಗೊಳಿಸುತ್ತದೆ. ಹತ್ತು ಗಜ ಉದ್ದವುಳ್ಳ ನಡುವಿನ ಸಭಾಮಂಡಪಕ್ಕೆ ನನ್ನನ್ನು ಕರೆದೊಯ್ದರು. ಅದರ ಗೋಡೆಗಳೂ ಮೇಲ್ಬದಿಯೂ ಬೆಲೆಯುಳ್ಳ ಮುತ್ತು ರತ್ನಗಳಿಂದ ಕೆತ್ತಲ್ಪಟ್ಟ ಚಿನ್ನದ ನಕ್ಷತ್ರಗಳಿಂದ ತುಂಬಾ ಮುಚ್ಚಲ್ಪಟ್ಟಿದ್ದುವು. ಅದರ ತಗಡುಗಳು ಕತ್ತಿಯ ಅಲಗಿನಷ್ಟು ದಪ್ಪವಾಗಿ ಬಂಗಾರದ ಮೊಳೆಗಳಿಂದ ಗಟ್ಟಿಯಾಗಿ ಕೂಡಿಸಲ್ಪಟ್ಟಿದ್ದವು."

ಡುಯಾರ್ಟೆ ಬಾರ್ಬೊಸಾ ಎಂಬ ಪೋರ್ಚುಗೀಸ್ ಪ್ರವಾಸಿಯು ಕ್ರಿ.ಶ. ೧೫೧೪ರಲ್ಲಿ ಇಲ್ಲಿಗೆ ಬಂದಿದ್ದನು. ಅವನು ಹೀಗೆ ಬಣ್ಣಿಸಿದ್ದಾನೆ :

"ಈ ಪಟ್ಟಣದಲ್ಲಿ ಅಸಂಖ್ಯಾತ ಜನರುಂಟು. ಅರಮನೆಗಳೂ ಅಸಂಖ್ಯಾತವಾಗಿವೆ. ಇಲ್ಲಿ ಎಲ್ಲ ತರದ ಜನಾಂಗಗಳ ಮತ್ತು ಜಾತಿಗಳ ಜನರ ಮುಖಗಳನ್ನು ನೋಡಬಹುದು. ಇಲ್ಲಿಗೆ ಪೇಗೂ ಮತ್ತು ಸಿಂಹಲದ್ವೀಪದಿಂದ ವಜ್ರಗಳು ಬರುತ್ತವೆ."

ನ್ಯೂನಿಝುನೆಂಬ ಮತ್ತೊಬ್ಬ ಪೋರ್ಚುಗೀಸ್ ಪ್ರವಾಸಿಯಾದರೂ ಹೀಗೆಯೇ ವರ್ಣನೆ ಮಾಡಿದ್ದಾನೆ.

ಪೇಯಸನೆಂಬ ಇನ್ನೊಬ್ಬ ಪೋರ್ಚುಗೀಸ್ ಪ್ರವಾಸಿಯು ಕ್ರಿ. ಶ. ೧೫೨೦ ರಲ್ಲಿ ಅಂದರೆ ಈ ವೈಭವದ ಪರಮಾವಧಿಯ ಕಾಲದಲ್ಲಿ ಇಲ್ಲಿಗೆ ಬಂದಿದ್ದನು. ಅವನು ವಿಜಯನಗರದ ಪಟ್ಟಣವನ್ನು ಅತಿ ವಿಸ್ತಾರವಾಗಿ ವರ್ಣಿಸಿದ್ದಾನೆ. ಅದರಿಂದ ಇಂತಹ ಪೇಟೆಯು ಇಂತಹ ಸ್ಥಳದಲ್ಲಿಯೇ ಇತ್ತೆಂದೂ ಇಂತಹ ಗುಡಿಯು ಇಲ್ಲಿಯೇ ಇತ್ತೆಂದೂ ಈಗಲೂ

ಗೊತ್ತು ಹಿಡಿಯಬಹುದು. ಆದರೆ ಆ ವರ್ಣನೆಯನ್ನೆಲ್ಲ ಸಂಪೂರ್ಣವಾಗಿ ಇಲ್ಲಿ ಕೊಡಲು ಸ್ಥಳವೂ, ಕಾಲವೂ ಸಾಕಸ್ಟಿಲ್ಲ; ಮೇಲಾಗಿ ಈಗಲೇ ಎಷ್ಟೋ ವಿಷಯಾಂತರವಾದಂತೆ ಆಗಿದೆ. ವಿಜಯನಗರಕ್ಕೂ ಶ್ರೀವಿದ್ಯಾರಣ್ಯಸ್ವಾಮಿಗಳಿಗೂ ನಿಕಟಸಂಬಂಧವಿದ್ದುದರಿಂದಲೂ, ವಿಜಯನಗರವು ಕರ್ಣಾಟಕಸ್ಥರ ಸರ್ವಸ್ವವಾದುದರಿಂದಲೂ ಅವರ ವಿಷಯವನ್ನು ಬರೆಯತೊಡಗಿದರೆ, ಲೆಕ್ಕಣಿಕೆಯನ್ನು ಎಷ್ಟು ಬಿಗಿಹಿಡಿದರೂ ಎರಡು ಅಕ್ಷರಗಳು ಹೆಚ್ಚೇ ಮೂಡುತ್ತವೆ. ಆದುದರಿಂದ ವಾಚಕರು ಅಪ್ರಾಸಂಗಿಕತೆಯ ದೋಷಕ್ಕೆ ನಮ್ಮನ್ನು ಗುರಿಮಾಡದೆ ಶಾಂತಚಿತ್ತದಿಂದ ಕೇಳುವರೆಂದು ನಂಬಿದ್ದೇವೆ. ಈಗ ಮೇಲೆ ಹೇಳಿದ ಪ್ರವಾಸಿಯ ವರ್ಣನೆಯ ಕೆಲಭಾಗವನ್ನು ತೀರ ಸಂಕ್ಷೇಪದಿಂದ ಇಲ್ಲಿ ಕೊಡುತ್ತೇವೆ. ಆ ಮೇಲೆ ಕೃಷ್ಣರಾಯನ ತರುವಾಯದ ಇತಿಹಾಸವನ್ನು ಸ್ವಲ್ಪದರಲ್ಲಿ ಬರೆಯುವೆವು; ಮತ್ತು ಈ ಪ್ರಕರಣದ ಕಟ್ಟಕಡೆಗೆ, ಕಾಲಕ್ರಮವಾದ ಇತಿಹಾಸವು ಸ್ವಲ್ಪದರಲ್ಲಿಯೇ ತಿಳಿಯುವಂತೆ ವಿಜಯನಗರದ ಅರಸರ ಮುಖ್ಯ ವಂಶವೃಕ್ಷವನ್ನು ಕೊಡುವೆವು:

"ಈ ಪಟ್ಟಣದ ವಿಸ್ತಾರವನ್ನು ನಾನು ಏನೆಂದು ಬಣ್ಣಿಸಲಿ! ಒಮ್ಮೆಯೇ ಇಡೀ ಪಟ್ಟಣವನ್ನು ಕಂಡರಷ್ಟೇ ಇದನ್ನು ನಾನು ಚೆನ್ನಾಗಿ ಬಣ್ಣಿಸಲಾದೀತು! ಆದರೂ ನಾನು ಒಂದು ಗುಡ್ಡವನ್ನೇರಿ ನೋಡಿದೆನು. ಆಗ ನನ್ನ ಕಣ್ಣಿಗೆ ಬಿದ್ದ ಭಾಗವೇ ರೋಮ್ ಪಟ್ಟಣದಷ್ಟು ವಿಶಾಲವೂ ಅತ್ಯಂತ ಮನೋಹರವೂ ಆಗಿದೆ. ಅಲ್ಲಿ ನಿಬಿಡವಾದ ಗಿಡಗಳ ಸಾಲುಗಳು ಅಂದವಾಗಿ ಕಂಡವು. ಅಲ್ಲಲ್ಲಿಗೆ ಅನೇಕ ಸರೋವರಗಳು ಕಂಗೊಳಿಸುತ್ತವೆ. ಅರಮನೆಯ ಸಮೀಪದಲ್ಲಿಯೇ ತೆಂಗಿನ ಬನಗಳೂ ಫಲಭರಿತವಾದ ತೋಟಗಳೂ ತುಂಬಿವೆ. ಅಲ್ಲಲ್ಲಿಗೆ ನಿರ್ಮಲವಾಗಿ ಹರಿಯುವ ಝರಿಗಳಿಂದಲೂ, ಹಸರು ಬಳ್ಳಿಗಳಿಂದಲೂ, ಲಿಂಬಿ, ದ್ರಾಕ್ಷೆ, ಕಿತ್ತಳಿ, ಅಂಜೀರು ಮುಂತಾದ ಫಲವೃಕ್ಷಗಳಿಂದಲೂ ಈ ಪಟ್ಟಣವು ಬಹು ಶೋಭಾಯಮಾನವಾಗಿದೆ. ಈ ಪಟ್ಟಣದ ಜನಸಂಖ್ಯೆಯು ಅಪರಿಮಿತವಾಗಿದೆ. ವರ್ತಕರು ಮುತ್ತು, ರತ್ನ, ಹವಳ, ಮಾಣಿಕ ಮತ್ತು ವಜ್ರಗಳ ವ್ಯಾಪಾರವನ್ನು ಮಿತಿಮೀರಿ ಮಾಡುತ್ತಾರೆ. ಪ್ರತಿ ಶುಕ್ರವಾರಕ್ಕೊಮ್ಮೆ ದೊಡ್ಡ ಸಂತೆಯಾಗುತ್ತದೆ. ಆದರೆ ಪ್ರತಿಯೊಂದು ದಿನವೂ ಬೇರೆ ಬೇರೆ ಬೀದಿಗಳಲ್ಲಿ ಸಂತೆಗಳು ಕೂಡಿಯೇ ಕೂಡುತ್ತವೆ. ಈ ಪಟ್ಟಣದಲ್ಲಿ ಇಂತಹ ಪದಾರ್ಥವು ಸಿಕ್ಕುವದಿಲ್ಲೆಂದಿಲ್ಲ. ಹಣ್ಣು ಹಂಪಲ ಕಾಯಿಪಲ್ಲೆಗಳ ರಾಶಿಯನ್ನು ನೋಡಿದರೆ ಕಣ್ಣು ತಿರುಗುತ್ತವೆ. ಅಂಗಡಿ ಮುಂತಾದವುಗಳಲ್ಲದೆ ಜನರು ವಾಸಿಸುವ ಮನೆಗಳೇ ಈ ಪಟ್ಟಣದಲ್ಲಿ ಒಂದು ಲಕ್ಷವಿರುತ್ತವೆ. ಈ ರಾಯನು ೨೦ ಲಕ್ಷ ಸೈನ್ಯವನ್ನು ಕೂಡಿಸಬಲ್ಲನು. ಇವನ ಸೈನಿಕರನ್ನು ನಾನು ನೋಡಿದೆನು. ಆ ಸೈನಿಕರಲ್ಲಿ ಹೇಡಿಯೊಬ್ಬನೂ ನನಗೆ ಕಾಣಲಿಲ್ಲ."

ವಾಚಕರೇ, ದಕ್ಷಿಣೋತ್ತರ ೧೪ ಮೈಲು, ಪೂರ್ವ ಪಶ್ಚಿಮ ೧೦ ಮೈಲು ವಿಸ್ತಾರವುಳ್ಳ ಈ ಪಟ್ಟಣದ ವೈಭವವನ್ನು ಸರಿಯಾಗಿ ಬಣ್ಣಿಸುವದೆಂತು? ಅಲ್ಲಿಯ ಪ್ರತಿಯೊಂದು ಬೀದಿಯು ಮುಂಬಯಿಯಲ್ಲಿರುವ ಎಲ್ಲಕ್ಕೂ ದೊಡ್ಡ ಬೀದಿಗಿಂತ ಅಗಲವೂ

ಸರಳವೂ ಚಂದವೂ ಆಗಿದೆ. ಪ್ರತಿಯೊಂದರ ಮಗ್ಗುಲಿಗೆ ಸುಂದರವಾದ ಒಂದು ಸರೋವರವಿತ್ತು. ಈಗಲೂ ಈ ಹಾಳು ಪಟ್ಟಣದ ಕುರುಹುಗಳನ್ನು ಕಾಣಬಹುದು. ಆದುದರಿಂದ ಅವನ್ನು ಪ್ರತಿಯೊಬ್ಬ ಕನ್ನಡಿಗನೂ ಸ್ವತಃ ನೋಡಿಯೇ ತೃಪ್ತಿಗೊಂಡು ಸ್ಫೂರ್ತಿಗೊಳ್ಳಬೇಕು; ಆ ಪಟ್ಟಣವನ್ನು ನೋಡದವನು ಕನ್ನಡಿಗನೇ ಅಲ್ಲವೆಂದು ಇಲ್ಲಿ ಮತ್ತೊಮ್ಮೆ ಸೂಚಿಸದೆ ಇರಲಾರೆವು.

ಇರಲಿ, ಕೃಷ್ಣರಾಯನ ತರುವಾಯ ಅಚ್ಯುತರಾಯನೆಂಬ ಅರಸನು ೧೫೩೯ನೆಯ ಇಸ್ವಿಯಲ್ಲಿ "ಆನಂದನಿಧಿ" ಯೆಂಬ ದೊಡ್ಡ ದಾನವನ್ನು ಮಾಡಿದನು.

ಆದರೆ ಅವನ ತರುವಾಯ ವಿಜಯನಗರದ ರಾಜ್ಯವು ಬಹಳ ದಿನಸ ಬಾಳಲಿಲ್ಲ. ಕಡೆಯಲ್ಲಿ. ಸದಾಶಿವರಾಯನ ಆಳಿಕೆಯಲ್ಲಿ ಕೃಷ್ಣದೇವರಾಯನ ಅಳಿಯನಾದ ರಾಮರಾಯನೆಂಬವನ ಕೈಯಲ್ಲಿ ರಾಜ್ಯಸೂತ್ರಗಳಿದ್ದುವು. ವಿಜಾಪುರ, ಗೋವಳಕೊಂಡ, ಅಹಮ್ಮದನಗರ, ಬೀದರ ಈ ನಾಲ್ಕು ರಾಜ್ಯಗಳ ಬಾದಶಹರೂ ಒಕ್ಕಟ್ಟಿನಿಂದ ಒಳಸಂಚುಮಾಡಿ ಅವನೊಡನೆ ಯುದ್ಧಕ್ಕೆ ಅನುವಾದರು. ರಾಮರಾಜನು ಅತ್ಯಂತ ಶೂರನಾಗಿದ್ದನು. ಅವನ ವಯಸ್ಸು ಆ ಕಾಲಕ್ಕೆ ೯೬ ವರುಷಗಳದಿತ್ತು. ಇಂತು ಮುಪ್ಪಿನ ಮುದುಕನಾದರೂ ಅವನು ೩೦ ವರ್ಷದ ತರುಣನಂತೆ ಉತ್ಸಾಹವುಳ್ಳವನಾಗಿದ್ದನಂತೆ! ಅವನು ತನ್ನ ದೊಡ್ಡ ಸೈನ್ಯದೊಂದಿಗೆ ತಾಳೀಕೋಟೆಯಲ್ಲಿ ಮುಸಲ್ಮಾನರ ಒಕ್ಕಟ್ಟಾದ ಮಹಾ ಸೈನ್ಯಕ್ಕೆ ಎದುರಾದನು. ಕ್ರಿ. ಶ. ೧೫೬೫ ನೆಯ ಜನವರಿ ೨೩ರಲ್ಲಿ ಆ ಸ್ಥಳದಲ್ಲಿ ತುಮುಲ ಕಾಳಗವೆಸಗಿತು. ರಾಮರಾಜನ ಪಕ್ಷದ ವೆಂಕಟಾದ್ರಿಯೂ, ಇಳೋತ್ತಮರಾಜನೂ ಬಹು ಪರಾಕ್ರಮದಿಂದ ಹೋರಾಡಿ ಹಗೆಗಳನ್ನು ಓಡಿಸುವ ಸಂಧಿಯಲ್ಲಿ, ರಾಮರಾಜನು ತಾನು ಮೇಣೆಯಲ್ಲಿ ಕುಳಿತು ತನ್ನ ಸೈನ್ಯದವರಿಗೆ ಧೈರ್ಯ ಕೊಡುವದಕ್ಕಾಗಿ ತಿರುಗಾಡುತ್ತಿದ್ದನು. ಅಷ್ಟರೊಳಗೆ ಶತ್ರುಗಳ ಮದ್ದಾನೆ ಮೈಮೇಲೆ ಬಿದ್ದುದನ್ನು ನೋಡಿ, ಭೋಯಿಗಳು ಅಂಜಿ ತಮ್ಮ ಜೀವದಾಸೆಯಿಂದ ಮೇಣೆಯನ್ನು ಚೆಲ್ಲಿ ಓಡಿಹೋದರು. ಆಗ ನಿಜಾಮಶಹನು ರಾಮರಾಜನನ್ನು ಸೆರೆಹಿಡಿದು, ಅವನ ತಲೆಯನ್ನು ಕೊಯ್ದು ಭಲ್ಯಕ್ಕೆ ಚುಚ್ಚಿ ಸೈನ್ಯದೊಳಗೆ ಮೆರೆಯಿಸಿದನು. ಅದನ್ನು ನೋಡಿ ವಿಜಯನಗರದ ದಂಡಿನವರು ಧೈರ್ಯಗುಂದಿ ಬೆನ್ನು ತೋರಿಸಿದರು. ಆಗ ಮುಸಲ್ಮಾನರು ಮಾಡಿದ ಕೊಲೆಗೆ ಅಳವಿಲ್ಲ. ನೆತ್ತರದ ಕಾಲುವೆಗಳು ಹರಿದವು. ಈ ಮೇರೆಗೆ ಜಯವಾದ ಕೂಡಲೆ ಮುಸಲ್ಮಾನರು ನೆಟ್ಟಗೆ ವಿಜಯನಗರಕ್ಕೆ ಸಾಗಿ, ತಮಗೆ ಜಯವು ಸಿಕ್ಕೇಸಿಗುವುದೆಂಬ ಭರವಸದಿಂದ ಮೈಮರೆತಿದ್ದ ಪಟ್ಟಣದ ನಿವಾಸಿಗಳನ್ನೆಲ್ಲ ಕೈಗೆ ಸಿಕ್ಕಿದಂತೆ ಕೊಂದು ಪಟ್ಟಣವನ್ನು ಯಥೇಚ್ಛವಾಗಿ ಸುಲಿಗೆ ಮಾಡಿದರು !!

ಈ ಮೇರೆಗೆ ಸುಮಾರು ೨೩೦ ವರ್ಷಗಳ ವರೆಗೆ ಘನತೆಯಿಂದ ಮೆರೆದ ವೈಭವಸಂಪನ್ನ ರಾಷ್ಟ್ರವು ಆಕಸ್ಮಿಕ ಕಾರಣದಿಂದ ಅರ್ಧನಿಮಿಷದಲ್ಲಿ ಮಾಯವಾಯಿತು. ತೀರಿತು. ಅಂದಿಗೆ ಕರ್ನಾಟಕದ ವೈಭವಕ್ಕೆ ಕೊನೆಯಾಯಿತು! ಕರ್ನಾಟಕ ದೇವಿಯು

ಕುಂಕುಮವು ಅಳಿಸಿತು! ಕೊರಳ ಮಂಗಳ ಸೂತ್ರವು ಹೆಚ್ಚಿತು ! ಕರ್ನಾಟಕದ ಸಂಪತ್ತಿಯು ಸಮಾಧಿಹೊಂದಿತು! ಕರ್ನಾಟಕ ವಿದ್ಯಾನಿಧಿಯು ಅಡಿಗಿಹೋಯಿತು! ಕರ್ನಾಟಕ ಪ್ರತಾಪಸೂರ್ಯನು ಅಸ್ತನಾದನು! ಶ್ರೀ ವಿದ್ಯಾರಣ್ಯರು ಬಿತ್ತಿ ಬೆಳೆದ ಸಾಮ್ರಾಜ್ಯ ವೃಕ್ಷವು ಸೀರಿಲ್ಲದೆ ಬೇರೊಣಗಿ ಬತ್ತಿ ಮೋಟಮರವಾಗಿ ಕಡಕೊಂಡು ಬಿತ್ತು! ಸಾರಾಂಶವೇನಂದರೆ— ಕರ್ನಾಟಕರಾದ ನಾವು ಅಂದಿನಿಂದ ಇಂದಿನ ವರೆಗೆ ಇತಿಹಾಸದಲ್ಲಿ ನಾಮಮಾತ್ರಶೇಷರಾಗಿ ಹೋಗಿರುವೆವು ! ಕರ್ನಾಟಕರೇ, ನಾವು ಪೂರ್ವವೈಭವವನ್ನು ಪಡೆಯುವ ಕಾಲವು ಇನ್ನೂ ಪ್ರಾಪ್ತನಾಗಿಲ್ಲವೊ ? ವಿಚಾರ ಮಾಡಿರಿ.

---

## ವಿಜಯನಗರದ ಅರಸರ ವಂಶಾವಳಿ

### ಸಂಗಮ ಮನೆತನ

ಸಂಗಮ + ಕಾಮಾಂಬಿಕೆ

- (೧) ಹರಿಹರ I ೧೩೩೬–೧೩೫೩
- ಕಂಪಣ್ಣ
  - ಸಂಗಮ
- (೨) ಬುಕ್ಕರಾಯ I + ಗೌರಾಂಬಿಕೆ ೧೩೫೩–೧೩೭೭
  - (೩) ಹರಿಹರ II ೧೩೭೭–೧೪೦೪
    - (೪) ಬುಕ್ಕರಾಯ II ೧೪೦೫–೧೪೦೬
    - (೫) ದೇವರಾಯ, ಪ್ರತಾಪದೇವರಾಯ ೧೪೦೬–೧೪೧೬
      - (೬) ವಿಜಯರಾಯ ೧೪೧೬–೧೪೧೭
        - (೭) ದೇವರಾಯ II ೧೪೧೯–೧೪೪೬
          - (೮) ಮಲ್ಲಿಕಾರ್ಜುನ ೧೪೪೬–೧೪೬೭
          - (೯) ವಿರುಪಾಕ್ಷ ೧೪೬೭–೧೪೭೮
  - ವಿರುಪಣ್ಣ
  - ಮಲ್ಲಿನಾಥ
  - ಕಂಪಣ್ಣ
- ಮಾರಪ್ಪ
- ಮುದ್ದಪ್ಪ

---

## ನರಸ ಮನೆತನ

(೧೨) **ನರಸ, ನರಸಿಂಹ** (೧೪೯೬–೧೫೦೩)

- (೧೩) ವೀರನರಸಿಂಹ **ಭುಜಬಲರಾಯ ೧೫೦೪–೧೫೦೯**
- (೧೪) ಕೃಷ್ಣರಾಯ ೧೫೦೯–೧೫೨೯
- (೧೫) ಅಚ್ಯುತರಾಯ ೧೫೩೦–೧೫೪೨
  - (೧೬) ವೆಂಕಟದೇವರಾಯ ೧೫೪೨
- ರಂಗ
  - ಸದಾಶಿವರಾಯ ೧೫೪೩–೧೫೬೭

## ೭. ಧಾರ್ಮಿಕ ವಿಚಾರಗಳು

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ ।
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ॥
ಅರ್ಹಶ್ಚೇತಿ ಹ ಜೈನ ಶಾಸನಪರಾಃ ಕರ್ಮೇತಿ ಮೀಮಾಂಸಕಾಃ ।
ಸೋಽಯಂ ವೋ ವಿದಧಾತು ವಾಂಛಿತ ಫಲಂ ಶ್ರೀಕೇಶವಃ ಸರ್ವದಾ ॥

ಅರ್ಥ : ಶೈವರಿಂದ ಶಿವನೆಂದೂ, ವೇದಾಂತಿಗಳಿಂದ ಬ್ರಹ್ಮನೆಂದೂ, ಬೌದ್ಧರಿಂದ ಬುದ್ಧನೆಂದೂ, ಪ್ರಮಾಣಪಟುಗಳಾದ ನೈಯಾಯಿಕರಿಂದ ಕರ್ತೃವೆಂದೂ, ಜೈನರಿಂದ ಅರ್ಹನೆಂದೂ, ಮೀಮಾಂಸಕರಿಂದ ಕರ್ಮವೆಂದೂ — ಹೀಗೆ ನಾನಾ ಜನರಿಂದ ನಾನಾ ವಿಧವಾಗಿ ಉಪಾಸನೆ ಮಾಡಿಸಿಕೊಳ್ಳುವ ಶ್ರೀಕೇಶವನು ನಮಗೆ ಯಾವಾಗಲೂ ವಾಂಛಿತವನ್ನು ಕೊಡಲಿ.

ಹಿಂದಿನ ಪ್ರಕರಣದಲ್ಲಿ ನಮ್ಮ ಅರಸರ ಪರಧರ್ಮಸಹಿಷ್ಣುತೆಯ ಒಂದು ಉದಾಹರಣೆಯನ್ನು ಕೊಟ್ಟಿದ್ದೇವಷ್ಟೇ ? ಆದರಂತೆಯೇ ನಮ್ಮ ಧರ್ಮಗುರುಗಳಾದವರೂ ತಮ್ಮ ಬುದ್ಧಿಸಾಮರ್ಥ್ಯದಿಂದ ಮಾತ್ರವೇ ಜನರ ಮೇಲೆ ವರ್ಚಸ್ಸನ್ನು ಕೂಡಿಸುತ್ತಿದ್ದರೇ ಹೊರತು ಮಿಕ್ಕ ಯಾವ ಉಪಾಯಗಳನ್ನೂ ಅವಲಂಬಿಸುತ್ತಿದ್ದಿಲ್ಲ. ಪ್ರಜೆಗಳು ತಮಗೆ ಇಷ್ಟ ತೋರಿದ ಧರ್ಮವನ್ನೇ ಅನುಸರಿಸಬೇಕೆಂದು ನಮ್ಮ ಅರಸರು ಕಟ್ಟು ಮಾಡಿದ್ದರು. ಹೀಗಿದ್ದುದರಿಂದ, ಆಯಾ ಕಾಲದ ರಾಜರು ಜೈನರೇ ಆಗಿರಲಿ, ಬೌದ್ಧರೇ ಆಗಿರಲಿ, ಶೈವರೇ ಆಗಿರಲಿ, ಅಥವಾ ವೈಷ್ಣವರೇ ಆಗಿರಲಿ ಪ್ರತಿಯೊಂದು ಧರ್ಮದವರನ್ನು ಸಮಾನವಾಗಿಯೇ ಭಾವಿಸುತ್ತಿದ್ದರು. ಅವರ ಈ ಧರ್ಮೌದಾರ್ಯದ ಮೂಲಕ ಇಂತಿಂತಹ ರಾಜರು ಇಂತಿಂತಹ ಧರ್ಮದವರಾಗಿದ್ದರೆಂಬುದನ್ನು ನಿಷ್ಕರ್ಷಿಸುವದೇ ಕಷ್ಟವಾಗಿರುತ್ತದೆ. ಆದರೂ ಕದಂಬಗಂಗರು ಜೈನರೆಂದೂ ಬಾದಾಮಿಯ ಚಾಲುಕ್ಯರು ವೈಷ್ಣವರೆಂದೂ, ರಾಷ್ಟ್ರಕೂಟರಲ್ಲಿ ಕೆಲವರು ಜೈನರು ಕೆಲವರು ಶೈವರೆಂದೂ, ಕಲ್ಯಾಣದ ಚಾಲುಕ್ಯರಲ್ಲಿ ಕೆಲವರು ಶೈವರು ಕೆಲವರು ವೈಷ್ಣವರೆಂದೂ, ವಿಜಯನಗರದ ಅರಸರಲ್ಲಿಯೂ ಕೆಲವರು ವೈಷ್ಣವರೆಂದೂ ಸ್ಥೂಲಮಾನದಿಂದ ಹೇಳಬಹುದು. ಅದು ಹೇಗೇ ಇರಲಿ; ಎಲ್ಲರೂ ಅತ್ಯಂತ ಪರಧರ್ಮಸಹಿಷ್ಣುಗಳಾಗಿದ್ದರೆಂಬದಂತೂ ನಿರ್ವಿವಾದವೇ ! ಜಿನ,ವಿಷ್ಣು, ಶಿವ ಈ ಮೂರ್ತಿಗಳು ಒಂದೆಡೆಯಲ್ಲಿ ಸ್ಥಾಪಿತವಾದ ಉದಾಹರಣೆಗಳುಂಟು. ಅದೇ ಮೇರೆಗೆ ಬ್ರಹ್ಮ ವಿಷ್ಣು ಮಹೇಶ್ವರ ಮೂರ್ತಿಗಳನ್ನೂ ಒಂದೆಡೆಯಲ್ಲಿ ಕಾಣಬಹುದು. ಮೇಲಿನ ಶ್ಲೋಕವು ನಮ್ಮ ಧಾರ್ಮಿಕ ಸಹಿಷ್ಣುತೆಯನ್ನು ಚೆನ್ನಾಗಿ ಹೊರಪಡಿಸುತ್ತದೆ.

ಮೇಲೆ ಹೇಳಿದ ದೊಡ್ಡ ಗುಣವು ಅರಸರಲ್ಲಿ ಬರಬೇಕಾದರೆ, ಅವರ ಮನೋವಿಕಾಸವೂ, ನಡುವಳಿಕೆಗಳೂ, ಸುಶಿಕ್ಷಣವೂ ಇವೇ ಮೊದಲಾದವುಗಳು ಕಾರಣವೆಂಬುದೇನೋ ನಿಜ; ಆದರೆ ಅವತಾರಿಗಳೆನಿಸಿಕೊಂಡ ಧಾರ್ಮಿಕ ಪುರುಷರ ಬೆಂಬಲವೂ ಸದುಪದೇಶವೂ ಇದಕ್ಕೆ ಒಂದು ಮುಖ್ಯ ಕಾರಣವಾಗಿರಬೇಕೆಂಬುದು ಕೆಳಗಿನ ವಿವೇಚನೆಯಿಂದ ಸ್ಪಷ್ಟವಾಗುವದು.

ಸಾಮಾನ್ಯವಾಗಿ ಸಮಾಲೋಚಿಸಿದರೆ, ಹಿಂದುಸ್ಥಾನದೊಳಗಿನ ರಾಜ್ಯಗಳೆಲ್ಲವೂ ಧಾರ್ಮಿಕ ಪುರುಷರಿಂದಲೇ ಉದಯ ಹೊಂದಿರುವವು; ಅಥವಾ ಪೋಷಿಸಲ್ಪಟ್ಟಿರುವವು; ಎಂದು ಕಂಡು ಬರುವದು. ಶ್ರೀರಾಮಚಂದ್ರನಿಗೆ ವಿಶ್ವಾಮಿತ್ರರೇ ರಾಜಕೀಯ ಗುರುಗಳು; ಅರ್ಜುನನಿಗೆ ಶ್ರೀಕೃಷ್ಣನೂ; ಯುಧಿಷ್ಠಿರನಿಗೆ ಭೀಷ್ಮಾಚಾರ್ಯರೂ ರಾಜನೀತಿಯ ಉದ್ಬೋಧಕರಾಗಿದ್ದರು. ಇಹಲೋಕದ ಸುಖಕ್ಕೆ ಮೆಚ್ಚಿ ಮರುಳಾಗದ ಪಂಡಿತರೇ ರಾಜವೈಭವವನ್ನು ಬೆಳೆಯಿಸಲಿಕ್ಕೆ ರಾಜರ ಸಹಾಯಕರೂ ಉಪದೇಶಕರೂ ಆದರು. ಇವರು ತಮ್ಮ ಸುತ್ತಲೂ ಸಂಪತ್ತಿಯ ರಾಶಿಯು ಒಟ್ಟಿದ್ದರೂ, ಮತ್ತು ಆ ರಾಶಿಯನ್ನು ಹುಟ್ಟಿಸುವದಕ್ಕೆ ತಾವೇ ಕಾರಣರಾಗಿದ್ದರೂ ಅದರೊಳಗೆ ತಮ್ಮ ಮನಸ್ಸನ್ನು ತೊಡಕಿಸಿ ಅಂಧರಾಗಲಿಲ್ಲ. ಆದುದರಿಂದ, ಅವರು ಮಾಡಿದ ಉಪದೇಶವು ಸ್ವಾರ್ಥಬುದ್ಧಿಯಿಂದ ಅಲಿಪ್ತವಾಗಿ ಉಳಿಯುತ್ತಿತ್ತು. ಇದೊಂದು ಹಿಂದೂದೇಶದ ವೈಲಕ್ಷಣ್ಯವೆಂದೇ ಹೇಳಬೇಕು. ಬ್ರಾಹ್ಮಣರಾಗಲಿ ಬೇರೆ ಧಾರ್ಮಿಕ ಗುರುಗಳಾಗಲಿ ರಾಜಕೀಯ ಅವನತಿಯ ಕಾಲಕ್ಕೆ ಸಹಾಯವನ್ನೀಯಲಿಕ್ಕೂ, ಸಮಯ ಬಂದರೆ "ಶಾಪದಾಪಿಶರಾದಪಿ" ಎಂಬಂತೆ ತಾವೇ ಖಡ್ಗವನ್ನು ಧರಿಸಲಿಕ್ಕೂ ಮುಂದಾಗಿರುವಂತಹ ಸಂಗತಿಗಳು ನಮ್ಮ ಭಾರತೀಯ ಇತಿಹಾಸದಲ್ಲೇನೂ ಒಂದೆರಡಿಲ್ಲ. ಕರ್ನಾಟಕದಲ್ಲಾದರೂ ಮೊದಲಿನಿಂದ ಆಳಿದ ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮೊದಲಾದ ಬೇರೆ ಬೇರೆ ವಂಶದ ಅರಸರಿಗೆ ಮೇಲೆ ಹೇಳಿದಂತಹ ಧಾರ್ಮಿಕ ಗುರುಗಳು ಕಾಲಕಾಲಕ್ಕೆ ಇದ್ದೇ ಇದ್ದರು.

ಶ್ರೀವಿದ್ಯಾರಣ್ಯಸ್ವಾಮಿಗಳು ತಮ್ಮ ಜಗದ್ಗುರು ಪೀಠವನ್ನು ಸಹ ತ್ಯಾಗ ಮಾಡಿ ಹುಕ್ಕಬುಕ್ಕರ ಸಹಾಯಾರ್ಥವಾಗಿ ಧಾವಿಸಿ, ವಿಜಯನಗರದ ಸಾಮ್ರಾಜ್ಯಕ್ಕೆ ತಳಹದಿಯನ್ನು ಹಾಕಿದ ಸಂಗತಿಯೂ ಈ ತತ್ವವನ್ನೇ ಬಲಪಡಿಸುತ್ತದೆ. ಈ ಕಾರಣದಿಂದಲೇ ಅವರಿಗೆ "ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯ"ರೆಂಬ ಬಿರುದು ಪ್ರಾಪ್ತವಾಯಿತೆಂದು ಹಿಂದೆಯೇ ಹೇಳಿದೆಯಷ್ಟೇ; ಶ್ರೀವಿದ್ಯಾರಣ್ಯಸ್ವಾಮಿಗಳು ಮೂರು ತಲೆಯವರೆಗೆ ರಾಜಕೀಯ ಗುರುಗಳಾಗಿ, ಎಡೆತಡೆಯಿಲ್ಲದೆ ರಾಜ್ಯಸೂತ್ರಗಳನ್ನು ನಡಿಯಿಸಿದರೂ, ತಾವು ಮಾತ್ರ ರಾಜವೈಭವದಿಂದ ಅಲಿಪ್ತರೇ ಇದ್ದರು. ಇದೇ ಮೇರೆಗೆ ವಿಜಯನಗರದ ಅರಸರಿಗೆ "ಕ್ರಿಯಾಶಕ್ತಿಪಂಡಿತ"ರೆಂಬವರೂ ಗುರುಗಳಾಗಿದ್ದರು. ಸಾರಾಂಶ: ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ನೆನಪಿಡತಕ್ಕ ಮುಖ್ಯ ಸಂಗತಿಯು ಯಾವದೆಂದರೆ— ದೇಶಕ್ಕೆ ಸಂಕಟವೊದಗಿದಾಗ, ಸಾಮಾನ್ಯವಾಗಿ ಐಹಿಕ ಸುಖದಿಂದ

ಅಲಿಪ್ತರಾಗಿರುವವರೇ, ಯೋಗ್ಯ ಜನರಿಗೆ ಕ್ಷಾತ್ರತೇಜವನ್ನು ಪ್ರಕಟಗೊಳಿಸುವಂತೆ ಪ್ರೇರಿಸಿ, ಅವರಿಂದ ರಾಜ್ಯಗಳನ್ನು ಸ್ಥಾಪಿಸಿ ತಾವು ಮಾತ್ರ ವಿಷಯಸುಖದಲ್ಲಿ ತೊಡಕಿಕೊಳ್ಳದೆ ವಿದ್ಯಾವ್ಯಾಸಂಗದಲ್ಲಿ ಜನ್ಮವನ್ನು ಕಳೆಯುತ್ತಿದ್ದರೆಂಬುದು. ರಾಜಕೀಯ ವಿಷಯಕ್ಕೂ ಧರ್ಮಕ್ಕೂ ಏನೂ ಸಂಬಂಧವಿಲ್ಲವೆಂದು ಕೊಚ್ಚುವವರು ಈ ನಮ್ಮ ಪೂರ್ವಪರಂಪರೆಯನ್ನು ಲಕ್ಷ್ಯದಲ್ಲಿಡಬೇಕು.

ಶ್ರೀವಿದ್ಯಾರಣ್ಯಸ್ವಾಮಿಗಳ ಧಾರ್ಮಿಕ ಕಾರ್ಯವನ್ನು ಎಷ್ಟು ವಿಸ್ತರಿಸಿದರೂ ಸ್ವಲ್ಪವೇ. ಯಾಕಂದರೆ, ಮೂರ್ತಿಯೇ ಬಂಗಾರದ್ದೆಂದು ಹೇಳಿದ ಮೇಲೆ ಕೈ ಬಂಗಾರದ್ದು, ಕಾಲು ಬಂಗಾರದ್ದು ಎಂದು ಬೇರೆ ಬೇರೆಯಾಗಿ ಹೇಳುತ್ತ ಹೋಗುವದು ಪುನರುಕ್ತಿಯಲ್ಲವೇ ? ತಾತ್ಪರ್ಯವೇನಂದರೆ— ಪ್ರತ್ಯಕ್ಷವಾಗಿಯಾಗಲಿ ಪರಂಪರೆಯಿಂದಾಗಲಿ ಅವರ ಪ್ರಯತ್ನಗಳೆಲ್ಲವೂ ಪರಮಾರ್ಥಪರವಾಗಿದ್ದುವೆಂದು ಹೇಳಿದರೆ ಅದರಲ್ಲಿ ಎಲ್ಲವೂ ಬಂದ ಹಾಗಾಯಿತು. ಸುಮಾರು ಆರುನೂರು ಏಳುನೂರು ವರ್ಷಗಳ ಹಿಂದೆ ಶ್ರೀಶಂಕರಾಚಾರ್ಯರು ಆರಂಭಿಸಿದ ಕಾರ್ಯವನ್ನು ಶ್ರೀವಿದ್ಯಾರಣ್ಯ ಸ್ವಾಮಿಗಳು ಪೂರ್ಣ ಮಾಡಿದರೆಂದು ಹೇಳಿದರೆ ಸಾಕು.

ಸಂಸ್ಕೃತ ವಿದ್ಯೆಯ ಸಂಬಂಧದಿಂದ ಶ್ರೀವಿದ್ಯಾರಣ್ಯರ ಕಾಲವು ಇತಿಹಾಸದಲ್ಲಿ ಅತ್ಯಂತ ಸಂಸ್ಮರಣೀಯವೂ, ದಕ್ಷಿಣ ಹಿಂದುಸ್ತಾನದ ಜನರಿಗೆ ಅಭಿಮಾನಾಸ್ಪದವೂ ಆಗಿದೆ. ಆ ಕಾಲದಲ್ಲಿ ಜ್ಯೋತಿಷ, ವೈದಿಕ, ಧರ್ಮಶಾಸ್ತ್ರ, ವ್ಯಾಕರಣ, ದರ್ಶನಗಳು ಮೊದಲಾದ ಅನೇಕ ವಿಷಯಗಳ ಮೇಲೆ ಗ್ರಂಥಗಳು ಹುಟ್ಟಿದುವು. ಹನ್ನೊಂದನೆಯ ಶತಮಾನದಲ್ಲಿದ್ದ ಭೋಜದೇವ, ಹನ್ನೆರಡನೆಯ ಶತಮಾನದಲ್ಲಿ ಭಾಸ್ಕರಾಚಾರ್ಯ, ಹದಿಮೂರನೆಯ ಶತಮಾನದಲ್ಲಿದ್ದ ಹೇಮಾದ್ರಿ ಮತ್ತು ಬೋಪದೇವ ಇವರ ಕೀರ್ತಿ ದುಂದುಭಿಯ ಧ್ವನಿಯು ಇನ್ನೂ ಎಲ್ಲೆಡೆಯಲ್ಲಿಯೂ ತುಂಬಿತ್ತು. ಮಹಾರಾಷ್ಟ್ರ ಸನ್ಮಣಿಮಾಲೆಯೊಳಗಿನ ಮುಖ್ಯ ಮೇರುಗಳಾದ ಶ್ರೀಜ್ಞಾನೇಶ್ವರರು ತಮ್ಮ ಜ್ಞಾನೇಶ್ವರಿಯನ್ನು ಕ್ರಿ. ಶ. ೧೨೯೦ ರಲ್ಲಿ (ಶಕೆ ೧೨೧೨) ದೇವಗಿರಿಯಲ್ಲಿ ಪೂರ್ಣ ಮಾಡಿ ಮುಂದೆ ಆರು ವರ್ಷಗಳಿಗೆ ತಮ್ಮ ಅವತಾರವನ್ನು ಮುಗಿಸಿದರು. ಇದೇ ಸಂಧಿಯಲ್ಲಿ ಶ್ರೀವಿದ್ಯಾರಣ್ಯಸ್ವಾಮಿಗಳು ಉದಯಹೊಂದಿದರು.

ಶ್ರೀವಿದ್ಯಾರಣ್ಯಸ್ವಾಮಿಗಳ ಕಾಲಕ್ಕೂ ಶ್ರೀಶಂಕರಾಚಾರ್ಯರ ಕಾಲಕ್ಕೂ ಸಾಮ್ಯವಿದೆ. ಇಬ್ಬರ ಪರಿಸ್ಥಿತಿಯೂ ಒಂದೇ ಪ್ರಕಾರದ್ದಿತ್ತು. ಅಂದರೆ ಸಾಂಖ್ಯ. ವೈಶೇಷಿಕ, ಪಾತಂಜಲಿ, ಆರ್ಹತ, ಚಾರ್ವಾಕ ಮೊದಲಾದ ಮತವಾದಿಗಳ ಖಂಡನವನ್ನು ಶಂಕರಾಚಾರ್ಯರು ಹೇಗೆ ಮಾಡಬೇಕಾಗಿತ್ತೋ ಹಾಗೆಯೇ ಶ್ರೀವಿದ್ಯಾರಣ್ಯಸ್ವಾಮಿಗಳಾದರೂ ಮಾಡಬೇಕಾಯಿತು. ಆಚಾರ್ಯರು ಬ್ರಹ್ಮಸೂತ್ರದ ಮೇಲಿನ ಭಾಷ್ಯಗಳಲ್ಲಿ ಇವೆಲ್ಲ ಮತಗಳ ವಿಚಾರವನ್ನು ಮಾಡಿದ್ದಾರೆ. ಶ್ರೀವಿದ್ಯಾರಣ್ಯಸ್ವಾಮಿಗಳವರು ಅಧಿಕರಣರತ್ನಮಾಲೆಯ ಆಧಾರದಿಂದ ಈ ಮತಗಳ ವಿಚಾರವನ್ನು ಮಾಡಿದ್ದಾರೆ. ಈ

ಸಮಯಕ್ಕೆ ದಕ್ಷಿಣದಲ್ಲಿ ವಿಶಿಷ್ಟಾದ್ವೈತ, ದ್ವೈತ ಎಂಬ ಎರಡು ಹೊಸ ಮತಗಳು ಉದಯಹೊಂದಿ ಪ್ರಬಲವಾಗಿದ್ದುವು. ಶ್ರೀವಿದ್ಯಾರಣ್ಯಸ್ವಾಮಿಗಳು ವೇದಾಂತವಿಷಯಕವಾದ ಅನೇಕ ಗ್ರಂಥಗಳನ್ನು ಬರೆದು, ಅದ್ವೈತಮತದ ಪುನರುಜ್ಜೀವನವನ್ನು ಮಾಡಲಿಕ್ಕೆ ಯತ್ನಿಸಿದರು.

ಇವರು ತಮ್ಮ ಪೂರ್ವಾಶ್ರಮದಲ್ಲಿಯೇ ಅನೇಕ ಉದಾತ್ತ ಗ್ರಂಥಗಳನ್ನು ರಚಿಸಿದರು. ಇವರು ವೇದಗಳಿಗೆ ಭಾಷ್ಯಗಳನ್ನು ಬರೆದು, ಷಡ್ದರ್ಶನಗಳಿಗೆ ಟೀಕೆಗಳನ್ನು ಬರೆದರು. ಶ್ರೀ ವಿದ್ಯಾರಣ್ಯ ಸ್ವಾಮಿಗಳ ಗ್ರಂಥಗಳಲ್ಲಿ ವಿಲಕ್ಷಣವಾದ ವಿಷಯವೈಚಿತ್ರ್ಯವು ಕಂಡುಬರುತ್ತದೆ. ಆಗಿನ ಕಾಲದ ಎಲ್ಲ ಶಾಸ್ತ್ರಗಳ ಮೇಲೆ ಇವರು ಗ್ರಂಥಗಳನ್ನು ಬರೆದಿರುವರು. ಅವು ಈಗ ಆಯಾ ಶಾಸ್ತ್ರಗಳಲ್ಲಿ ಪ್ರಮಾಣಭೂತವಾಗಿವೆ. ಇವರ ಪುಸ್ತಕರಚನೆಯ ಸಾಮರ್ಥ್ಯವನ್ನು ನೋಡಿ ಪ್ರತಿಯೊಬ್ಬನು ಬೆರಗಾಗದೆ ಇರಲಾರನು. ಇವರಂತೆಯೇ ವಿವಿಧ ವಿಷಯಗಳಲ್ಲಿ ನೈಪುಣ್ಯವನ್ನು ಹೊಂದಿ ಗ್ರಂಥಗಳನ್ನು ರಚಿಸಿದವನು, ಇಡೀ ಜಗತ್ತಿನಲ್ಲಿ ಗ್ರೀಸ ದೇಶದ ಅರಿಸ್ಟಾಟಲನೊಬ್ಬನೇ ಎಂದು ತೋರುತ್ತದೆ. ಶ್ರೀ ವಿದ್ಯಾರಣ್ಯರ ಕವಿತಾಶಕ್ತಿಯಾದರೂ ಅತ್ಯಗಾಧವಾದುದಿತ್ತೆಂಬುದಾಗಿ ಇವರು ರಚಿಸಿದ ಶಂಕರವಿಜಯವೆಂಬ ಗ್ರಂಥದಿಂದ ಗೊತ್ತಾಗುತ್ತದೆ. ಈ ಗ್ರಂಥವು ಮಧ್ವವಿಜಯವೆಂಬ ದ್ವೈತಮತದ ಗ್ರಂಥದ ಮಾದರಿಯದಿರುತ್ತದೆ. ಶ್ರೀ ವಿದ್ಯಾರಣ್ಯ ಸ್ವಾಮಿಗಳ ತಮ್ಮಂದಿರಾದ ಸಾಯಣಾಚಾರ್ಯರೂ ಘನವಿದ್ವಾಂಸರಾಗಿದ್ದರಷ್ಟೇ; ಅವರು ರಚಿಸಿದ ಗ್ರಂಥಗಳು ಯಾವವು? ಮತ್ತು ಶ್ರೀ ವಿದ್ಯಾರಣ್ಯ ಸ್ವಾಮಿಗಳು ರಚಿಸಿದ ಗ್ರಂಥಗಳು ಯಾವವು? ಎಂಬುದು ಸ್ಪಷ್ಟವಾಗಿ ತಿಳಿಯುವಂತಿಲ್ಲ. ಕೆಲವು ಗ್ರಂಥಗಳಲ್ಲಿ "ಸಾಯಣಾಚಾರ್ಯ ವಿರಚಿತೇ" ಎಂದೂ ಕೆಲವುಗಳಲ್ಲಿ "ವಿದ್ಯಾರಣ್ಯ ವಿರಚಿತೇ" ಎಂದೂ ಮತ್ತೆ ಕೆಲವುಗಳಲ್ಲಿ "ಸಾಯಣಮಾಧವೀಯೇ" ಎಂದೂ, ಇನ್ನೂ ಕೆಲವುಗಳಲ್ಲಿ "ಸಾಯಣಾಚಾರ್ಯ ವಿರಚಿತೇ, ಮಾಧವ ವಿದ್ಯಾರಣ್ಯಸಂಬಂಧೀ" ಎಂದೂ ನಾನಾ ವಿಧವಾಗಿ ಉಲ್ಲೇಖಗಳಿರುತ್ತವೆ. ಶ್ರೀ ವಿದ್ಯಾರಣ್ಯ ಸ್ವಾಮಿಗಳ ಸರ್ವದರ್ಶನಸಂಗ್ರಹವೆಂಬ ಗ್ರಂಥದಲ್ಲಿ ಪೂರ್ಣಪ್ರಜ್ಞರೆಂಬ ಹೆಸರಿನ ಕೆಳಗೆ ದ್ವೈತ ಮತದ ವಿಚಾರವನ್ನೂ, ವಿಶಿಷ್ಟಾದ್ವೈತ ಮತದ ವಿಚಾರವನ್ನೂ ಸ್ವತಂತ್ರವಾಗಿ ಮಾಡಿದ್ದಾರೆ. ಇರಲಿ. ವಿದ್ಯಾರಣ್ಯ ಸ್ವಾಮಿಗಳ ಗ್ರಂಥಗಳನ್ನು ಕುರಿತು ಮುಂದಿನ ಪ್ರಕರಣದಲ್ಲಿ ಸ್ವಲ್ಪ ವಿಸ್ತೃತವಾಗಿ ವಿವೇಚಿಸತಕ್ಕವರಿರುವುದರಿಂದ ಇಲ್ಲಿ ಆ ವಿಷಯಕ್ಕೆ ಇದಕ್ಕೂ ಹೆಚ್ಚಾಗಿ ಊಹಾಪೋಹ ಮಾಡುವ ಆವಶ್ಯಕತೆಯಿಲ್ಲ.

ಮೇಲೆ ಹೇಳಿದ ಅಪೂರ್ವವಾದ ಗ್ರಂಥಗಳ ಗೌರವವನ್ನು ವಿಜಯನಗರದ ಅರಸರು ಮಾಡುತ್ತಿದ್ದರೆಂಬ ವಿಷಯದಲ್ಲಿ ಸಂದೇಹವೇ ಇಲ್ಲ. ಆದರೂ ತಮ್ಮ ವೇದಭಾಷ್ಯಾದಿ ಗ್ರಂಥಗಳು ಎಲ್ಲ ಕಡೆಯಲ್ಲಿಯೂ ಪ್ರಸಿದ್ಧವಾಗಬೇಕೆಂದೂ, ಕ್ಷೇತ್ರಸ್ಥ ಪಂಡಿತರಿಂದ ಅವುಗಳಿಗೆ ಮಾನ್ಯತೆಯು ದೊರೆಯಬೇಕೆಂದೂ, ಇತರ ಮತಗಳು ಖಂಡಿತವಾಗಬೇಕೆಂದೂ ಶ್ರೀ ವಿದ್ಯಾರಣ್ಯ ಸ್ವಾಮಿಗಳು ಸಂಚಾರ ಮಾಡುತ್ತ ಮಾಡುತ್ತ

ಕಾಶೀ ಕ್ಷೇತ್ರಕ್ಕೆ ಹೋದರು. ಅಲ್ಲಿ ವೇದವ್ಯಾಸರ ಮುಂದೆ ತಮ್ಮ ವೇದಭಾಷ್ಯಗಳ ಪಾರಾಯಣವನ್ನು ಮಾಡಿದರಂತೆ! ಮತ್ತು ವ್ಯಾಸಮುನಿಯು ಇದನ್ನು ಕೇಳಿ ಸುಪ್ರಸನ್ನನಾಗಿ 'ವಿದ್ಯಾರಣ್ಯ' ಎಂಬ ಪದವಿಯನ್ನು ಇವರಿಗೆ ಕೊಟ್ಟನಂತೆ! ಈ ದಂತ ಕಥೆಯಿಂದ ತಿಳಿಯಬರುವದೇನಂದರೆ— ಕಾಶಿಯಲ್ಲಿದ್ದ ಪಂಡಿತರಿಂದ ಶ್ರೀ ವಿದ್ಯಾರಣ್ಯ ಸ್ವಾಮಿಗಳ ಗ್ರಂಥಗಳಿಗೆ ಬಹುಮಾನವು ದೊರೆತಿರಲಿಕ್ಕೆಬೇಕು. ಹೀಗೆ ಪಂಡಿತರಿಂದ ಪುರಸ್ಕೃತವಾದುದರಿಂದಲೇ ಅವು ಎಲ್ಲ ಕಡೆಯಲ್ಲಿಯೂ ಪ್ರಸಿದ್ಧಿಗೆ ಬಂದುವು. ಕಾಶೀಸ್ಥ ಪಂಡಿತರಿಂದ ಗ್ರಂಥಗಳಿಗೆ ಮಾನ್ಯತೆಯನ್ನು ಪಡೆದುಕೊಳ್ಳುವ ಪದ್ಧತಿಯು ಪೂರ್ವದಿಂದ ನಡೆದುಬಂದಿದೆ.

ಶ್ರೀ ವಿದ್ಯಾರಣ್ಯ ಸ್ವಾಮಿಗಳ ವಿಷಯದಲ್ಲಿ ಇನ್ನೊಂದು ಆಖ್ಯಾಯಿಕೆಯು ಪ್ರಸಿದ್ಧವಾಗಿದೆ. ನಮ್ಮ ದೇಶದಲ್ಲಿ ದ್ವೈತ, ಅದ್ವೈತ, ಮತ್ತು ವಿಶಿಷ್ಟಾದ್ವೈತ ಎಂಬ ಮೂರು ಮತಗಳು ಪ್ರಚಾರದಲ್ಲಿವೆಯಷ್ಟೇ; ಅವುಗಳ ಪ್ರವರ್ತಕರಾದ ಮುನಿಗಳು ಶ್ರೀ ಮಧ್ವಾಚಾರ್ಯ, ಶ್ರೀ ಶಂಕರಾಚಾರ್ಯ ಮತ್ತು ಶ್ರೀ ರಾಮಾನುಜಾಚಾರ್ಯರೆಂಬುದು ಎಲ್ಲರಿಗೂ ಗೊತ್ತಿದೆ. ಇವರ ಮುಖ್ಯ ಮಠಗಳು ದಕ್ಷಿಣ ದೇಶದಲ್ಲಿಯೇ ಇದ್ದು, ಅಲ್ಲಿರುವ ವಿದ್ವಾಂಸರುಗಳಲ್ಲಿ ಆಗಾಗ್ಗೆ ವಾದವಿವಾದಗಳೂ ಇನ್ನೂ ನಡೆಯುತ್ತಿರುತ್ತವೆ. ಆ ಕಾಲದಲ್ಲಿ ಈ ಮೂರು ಮಠಗಳ ವಿದ್ವಾಂಸರಾದ ಮುಂದಾಳುಗಳು ಅನುಕ್ರಮವಾಗಿ ಶ್ರೀ ಅಕ್ಷೋಭ್ಯತೀರ್ಥ, ಶ್ರೀ ವಿದ್ಯಾರಣ್ಯ, ಶ್ರೀ ವೇದಾಂತದೇಶಿಕಾಚಾರ್ಯರೆಂಬವರಾಗಿದ್ದರು. ಒಂದಾನೊಂದು ಸಂದರ್ಭದಲ್ಲಿ ಸ್ವಾಮಿಗಳಿಗೂ ಶ್ರೀ ಅಕ್ಷೋಭ್ಯತೀರ್ಥಾಚಾರ್ಯರಿಗೂ ಕೋಲಾರ ಜಿಲ್ಹೆಯೊಳಗಿನ ಮುಳಬಾಗಲವೆಂಬ ಊರಲ್ಲಿ ವಾದವಿವಾದವು ನಡೆಯಿತು. ಆಗ ಶ್ರೀ ವೇದಾಂತದೇಶಿಕಾಚಾರ್ಯರು ನಿರ್ಣಾಯಕರಾದ ಪಂಚರೆಂದು ಗೊತ್ತಾಗಿತ್ತು. ವಾದಾಂತದಲ್ಲಿ ಅವರು ಹೇಳಿದ ನಿರ್ಣಯದ ಶ್ಲೋಕವು ಮುಳಬಾಗಲದೊಳಗಿನ ಒಂದು ಸ್ತಂಭದ ಮೇಲೆ ಕೊರೆಯಲ್ಪಟ್ಟಿದೆ. ಅದು ಯಾವದೆಂದರೆ :

ಅಸಿನಾ ತತ್ವಮಸಿನಾ ಪರಜೀವಪಭೇದಿನಾ |
ವಿದ್ಯಾರಣ್ಯಂ ಮಹಾರಣ್ಯಮಕ್ಷೋಭ್ಯಮುನಿರಚ್ಛಿನತ್ ||

ಅರ್ಥ : ಪರ ಮತ್ತು ಜೀವ ಇವುಗಳನ್ನು ಭೇದಿಸುವ 'ತತ್ವಮಸಿ' ಎಂಬ ಕತ್ತಿಯಿಂದ ಅಕ್ಷೋಭ್ಯಮುನಿಯು ವಿದ್ಯಾರಣ್ಯನಾಮಕ ಮಹಾರಣ್ಯವನ್ನು ಕಡಿದರು.

ಈ ನಿರ್ಣಯವು ಅದ್ವೈತವಾದಿಗಳಿಗೆ ಸಹನವಾಗುವದಿಲ್ಲ; ಆದುದರಿಂದ ಅವರಲ್ಲಿ ಕೆಲವರು ಇದೇ ಶ್ಲೋಕದ ಕೊನೆಯ ಚರಣವನ್ನು ಹೀಗೆ ಹೇಳಿಕೊಳ್ಳುತ್ತಾರೆ :

" ಅಕ್ಷೋಭ್ಯಂ ಕ್ಷೋಭಯಾಮಾಸ ವಿದ್ಯಾರಣ್ಯೋ ಮಹಾಮತಿಃ || "

ನಿಜವಾದ ಸಂಗತಿಯು ಹೇಗಿದ್ದರೂ ಇರಲಿ. ಆಗಿನ ಕಾಲಕ್ಕೆ ಇಂತಹ ವಾದಗಳಾಗುತ್ತಿದ್ದವೆಂಬುದು ಮಾತ್ರ ಈ ಆಖ್ಯಾಯಿಕೆಯಿಂದ ಸ್ಪಷ್ಟವಾಗುತ್ತದೆ. ನಿರ್ಣ

ಯವು ತನ್ನಂತೆಯೇ ಆಯಿತೆಂದು ವಾದಿಪ್ರತಿವಾದಿಗಳಿಬ್ಬರೂ ಹೇಳಿಕೊಳ್ಳುವದು ಸಹಜವಾಗಿದೆ.

ಈ ತರದ ನಿರ್ಣಯಗಳಿಂದ ದ್ವೈತರಾಗಲಿ, ಅದ್ವೈತರಾಗಲಿ ಅಹಂಭಾವಕ್ಕೆ ಒಳಗಾಗಿ ಪರಸ್ಪರ ದ್ವೇಷಮಾಡುವದಾಗಲಿ, ಐಕಮತ್ಯವನ್ನು ತಪ್ಪಿಸಿಕೊಳ್ಳುವದಾಗಲಿ, ಸಹಾನುಭೂತಿಯಿಲ್ಲದೆ ಇರುವದಾಗಲಿ ತಿರಸ್ಕಾರಭಾವವನ್ನು ತಳೆಯುವದಾಗಲಿ ಸರಿಯಲ್ಲ. ಯಾಕಂದರೆ, ತತ್ವಬೋಧವೇ ಈ ತರದ ವಾದವಿವಾದಗಳ ಉದ್ದೇಶವೇ ಹೊರತು, ಹೆಚ್ಚಿನವರು ಕಡಿಮೆಯವರು ಎಂಬ ಮಾತಿಗಾಗಲಿ ಇನ್ನಾವ ಭಾವನೆಗಾಗಲಿ ಇಲ್ಲಿ ಆಸ್ಪದವಿಲ್ಲದಿರಬೇಕು. ದೇಶದಲ್ಲಿ ಧರ್ಮಗ್ಲಾನಿಯುಂಟಾಗಲು, ಧರ್ಮ ಸಂಸ್ಥಾಪನಾರ್ಥವಾಗಿ ಪರಮಾತ್ಮನೇ ಒಂದಿಲ್ಲೊಂದು ರೂಪದಿಂದ ಅವತರಿಸುತ್ತಾನೆ. ಆದುದರಿಂದ ಅವತಾರೀ ಪುರುಷರೆಲ್ಲರೂ ಒಂದೇ. ಅವರೆಲ್ಲರೂ ಮಹಾತ್ಮರೇ ! ಪಾಮರರಾದ ನಮ್ಮಲ್ಲಿಯೇ ಕ್ಷುಲ್ಲಕಭಾವನೆಗಳು ತುಂಬಿರುವವೇ ಹೊರತು ಆ ಮಹನೀಯರಲ್ಲಿ ಅಂತಹ ಸೋಂಕೇ ಇರುವದಿಲ್ಲ. ಕಾಲಕಾಲಕ್ಕೆ ಉದಯ ಹೊಂದುತ್ತಿರುವ ಈ ಮತಗಳ ಮೂಲವನ್ನು ನಿರೀಕ್ಷಿಸಿದರೆ, ನಾವು ಮೇಲೆ ಹೇಳಿದ ಒಂದೇ ಒಂದು ತತ್ವವೇ ಇದಕ್ಕೆ ಮುಖ್ಯವೆಂಬುದು ಕಂಡು ಬರುವದು. ಜನರ ತಿಳವಳಿಕೆಗಳಲ್ಲಿ ಹೆಚ್ಚು ಕಡಿಮೆಯಾಗದಂತೆ, ಅವುಗಳಿಗನುಸಾರವಾಗಿಯೇ ಸುನೀತಿಯನ್ನು ಬೋಧಿಸಿ ಸದ್ಗತಿಯ ಮಾರ್ಗವನ್ನು ತೋರ್ಪಡಿಸುವ ಪದ್ಧತಿಗಳುಂಟಾದವು. ಜಗತ್ತಿನ ಆರಂಭದಲ್ಲಿ ನಾಸ್ತಿಕ ಮತವೇ ಪ್ರಚಾರದಲ್ಲಿತ್ತು. ಕಾಲಾಂತರದಲ್ಲಿ ಜನರಲ್ಲಿ ಅನೀತಿಯ ಅತಿಶಯು ಬೆಳೆಯಿತು. ಸಮಾಜದ ಅಸ್ತಿತ್ವಕ್ಕೆ ಕೂಡ ಪೆಟ್ಟು ತಗಲಿತು. ಆಗ ಈ ತರದ ಆಚರಣೆಯು ಸರಿಯಲ್ಲವೆಂದೂ, ಮನುಷ್ಯನ ಮರಣಾನಂತರ ಇದನ್ನೆಲ್ಲ ಆಲೋಚಿಸುವ ಅಧಿಕಾರಿಯು ಇನ್ನೊಬ್ಬನಿದ್ದಾನೆಂದೂ ಜನರಲ್ಲಿ ತಿಳಿವಳಿಕೆಯನ್ನು ಹುಟ್ಟಿಸುವದು ಆವಶ್ಯಕವಾಯಿತು. ಆ ಮೇಲೆ ಆ ಅಧಿಕಾರಿಗೂ, ಮನುಷ್ಯನಿಗೂ ಇರುವ ಸಂಬಂಧವೇನು ? ಅವನಿಂದ ಇವನಿಗಾಗತಕ್ಕುದೇನು ? ಅವನಿಗೂ ಇವನಿಗೂ ಭೇದವೇನು ? ಇವೇ ಮೊದಲಾದ ಪ್ರಶ್ನೆಗಳು ಹುಟ್ಟಿದುವು. ಆಗ ಮನುಷ್ಯನಿಗೂ ಅವನಿಗೂ ಭೇದವಿಲ್ಲ; ಮೊದಲಾದ ಅದ್ವೈತ ತತ್ವಗಳು ಪ್ರಚಾರಕ್ಕೆ ಬಂದವು. ಇದರಂತೆಯೇ ಕೆಲವು ಕಾಲವು ಕಳೆಯಲು, ಮನುಷ್ಯನಲ್ಲಿ ಅಹಂಕಾರವು ಬೆಳೆಯಿತು. ಜೀವಾತ್ಮನೂ, ಪರಮಾತ್ಮನೂ ಒಂದೇ ಆದ ಮೇಲೆ ಅವನಿಗೆ ಅಧೀನನಾಗಿ ನಾವೇಕೆ ನಡೆಯಬೇಕು ? ಈ ಪ್ರಕಾರದ ಪ್ರಶ್ನೆಗಳು ಮುಂದೆ ಬರಹತ್ತಿದವು. ಹೀಗೆಯೇ ವಿಚಾರಕ್ರಾಂತಿಯಾದಂತೆ ವಿಶಿಷ್ಟಾದ್ವೈತ ಮತ್ತು ದ್ವೈತ ತತ್ವಗಳು ಪ್ರಚಾರಕ್ಕೆ ಬರುವುದು ಅಪರಿಹಾರ್ಯವಾಯಿತು. ಹೀಗೆ ಸುಧಾರಣೆಯಾಗುತ್ತ ಆಗುತ್ತ ಬಂದು ಅದರ ಓಘವು ಸದ್ಯಕ್ಕೆ ದ್ವೈತಮತದಿಂದ ತಡೆಯಲ್ಪಟ್ಟಿದೆ. ಇನ್ನು ಮುಂದೆ ವಿಚಾರವು ಬದಲಾದ ಮೇಲೆ ಯಾವ ವಿಚಾರಸರಣಿಯು ಮುಂದೆ ಬರುವದೋ ನೋಡಬೇಕು. ಸದ್ಯಕ್ಕೆ ಸುಪ್ರಸಿದ್ಧರಾಗಿರುವ ಎಲ್ಲ ವೇದಾಂತಿಗಳ ಅಭಿಪ್ರಾಯದ ಸಾರವನ್ನು ನೋಡಿದರೆ ಹೀಗೆ ಕಾಣುತ್ತದೆ. ಐಹಿಕ ವ್ಯವಹಾರದಲ್ಲಿ ದ್ವೈತ

ಮತವೇ ಶ್ರೇಷ್ಠವು; ಮೋಕ್ಷದ ಕಟ್ಟಕಡೆಯ ಸೋಪಾನದವರೆಗೂ ಅದೇ ಸ್ಥಿರವಾಗಿರತಕ್ಕದ್ದು; ಅದರ ತೀರ ಕಟ್ಟಕಡೆಯಲ್ಲಿ ಮಾತ್ರ ಅಂದರೆ ಮೋಕ್ಷದ ಪರಮಾವಧಿಯ ಸ್ಥಿತಿಯಲ್ಲಿ ಅದ್ವೈತತೆಯು ಉಂಟಾಗುವದು. ಆದುದರಿಂದ ನಾವು ಯಾರೂ ಯಾವ ತರದಿಂದಲೂ ಜಗಳಾಡುವ ಕಾರಣವಿಲ್ಲ. ಧರ್ಮಸ್ಥಾಪಕರ ಸದುದ್ದೇಶವನ್ನು ಲಕ್ಷ್ಯದಲ್ಲಿ ತಂದು ಸಮತೆಯಿಂದಲೂ ಸಹಾನುಭೂತಿಯಿಂದಲೂ ವರ್ತಿಸುವವನೇ ನಿಜವಾದ ಧಾರ್ಮಿಕನೇ ಹೊರತು, ಕೀಳುತರದ ಭಾವನೆಗಳಿಗೆ ಯಾವನ ಮನಸ್ಸಿನಲ್ಲಿ ಆಸ್ಪದವಿರುತ್ತದೆಯೋ ಅವನು ಮನುಷ್ಯನೆನಿಸಿಕೊಳ್ಳಲಿಕ್ಕೂ ಯೋಗ್ಯನಲ್ಲ. ಇರಲಿ. ಈ ಪ್ರಕಾರ ಮನುಷ್ಯನ ಉಚ್ಚತಮಾವಸ್ಥೆಯಲ್ಲಿ ಅಕ್ಷರಶಃ ನಿಜವೆನಿಸಿಕೊಳ್ಳುವ ಅದ್ವೈತವೇದಾಂತದ ಪುನರುಜ್ಜೀವಕರೇ ಶ್ರೀವಿದ್ಯಾರಣ್ಯಸ್ವಾಮಿಗಳು. ಅವರ ಗ್ರಂಥಮಹೋದಧಿಯಲ್ಲಿ ಮುಳುಗಿ ನೋಡಿದರೆ, ಆ ವೇದಾಂತದ ಅನೇಕ ಅಮೌಲ್ಯ ರತ್ನಗಳು ಪ್ರೇಕ್ಷಕರಿಗೆ ಕಾಣದೆ ಇರಲಾರವು !

ಶ್ರೀವಿದ್ಯಾರಣ್ಯಸ್ವಾಮಿಗಳ ಗ್ರಂಥಗಳಿಂದಲೂ, ಪರಮತಗಳ ಖಂಡನೆಯಿಂದಲೂ ಹಿಂದೂಧರ್ಮದ ಶೈಥಿಲ್ಯವೂ ಗ್ಲಾನಿಯೂ ದೂರಾದವು; ಮತ್ತು ಪರಮಾರ್ಥಮಾರ್ಗಕ್ಕೆ ಭವ್ಯತೆಯೂ ತೇಜಸ್ವಿತೆಯೂ ಪ್ರಾಪ್ತವಾದುವು; ಧರ್ಮ ಮತ್ತು ಪರಮಾರ್ಥ ಮಾರ್ಗಗಳನ್ನು ಕಾಪಾಡಿಕೊಳ್ಳುವ ಜಾಗ್ರತಿಯೂ ಅಭಿಮಾನವೂ ರಾಷ್ಟ್ರದಲ್ಲಿದ್ದ ಜನರಲ್ಲಿ ಉಂಟಾದವು. ಭಾರತೇತಿಹಾಸದಲ್ಲಿ ಧಾರ್ಮಿಕ ಇತಿಹಾಸದ ಕಾಲಭಾಗಗಳನ್ನು ಮಾಡಿದರೆ, ಆರಂಭದಿಂದ ಹರ್ಷವರ್ಧನನ ಕಾಲದವರೆಗೆ ಅಂದರೆ ಕ್ರಿ.ಶ. ೬೫೦ ರ ವರೆಗೆ ಪ್ರಾಚೀನ ಕಾಲವೆಂದೂ, ಅಲ್ಲಿಂದೀಚೆಗೆ ೧೩ ನೆಯ ಶತಕದ ವರೆಗೆ ಅರ್ವಾಚೀನ ಕಾಲವೆಂದೂ ಹೇಳಬೇಕಾಗುವದು. ಈ ಅರ್ವಾಚೀನ ಕಾಲದಲ್ಲಿ ಹಿಂದೂಧರ್ಮ ಮತ್ತು ಹಿಂದೂ ರಾಜ್ಯಗಳ ಪುನರುಜ್ಜೀವನದ ಕಾರ್ಯವು ದಕ್ಷಿಣ ಭಾರತದಲ್ಲಿಯೇ ಜರುಗಿತೆಂಬುದು ಇತಿಹಾಸಜ್ಞರಿಗೆ ಕೂಡಲೇ ಗೊತ್ತಾಗುವದು; ಮತ್ತು ಈ ಸ್ಥಿತಿಯು ದಾಕ್ಷಿಣಾತ್ಯರಿಗೆ ಅತ್ಯಂತ ಭೂಷಣಾಸ್ಪದವಾಗಿದೆಯೆಂದು ಬೇರೆ ಹೇಳುವ ಕಾರಣವಿಲ್ಲ.

---

# ೮. ಗ್ರಂಥಗಳು

ಈ ಪ್ರಕರಣದಲ್ಲಿ ಶ್ರೀವಿದ್ಯಾರಣ್ಯಸ್ವಾಮಿಗಳ ವಾಙ್ಮಯಾತ್ಮಕ ಕಾರ್ಯವನ್ನು ಕುರಿತು ವಿಚಾರ ಮಾಡುವ. ಅದರಿಂದ ಮಾಧವ, ಸಾಯಣ ಮತ್ತು ಸೋಮನಾಥ ಈ ಮೂವರು ಸರಸ್ವತೀ ಪುತ್ರರ ಕೃತಿಗಳಿಂದ ಸಂಸ್ಕೃತಸಾರಸ್ವತ ಭಾಂಡಾರವು ಎಷ್ಟರ ಮಟ್ಟಿಗೆ ಪೂರಿತವಾಯಿತೆಂಬುದು ಗೊತ್ತಾಗುವದು. ಕೇವಲ ಪರೋಪಕಾರಬುದ್ಧಿಯಿಂದ ಬರೆದ ಅವರ ಗ್ರಂಥಗಳ ಭಾಷೆಯು ಸರಲವೂ ಬಾಲಬೋಧವೂ ಆಗಿದೆ. ಇವರಲ್ಲಿ ಮೂರನೆಯವರಾದ ಸೋಮನಾಥರು ಸಾಯಣ ಮಾಧವರಷ್ಟು ಪ್ರಸಿದ್ಧರಾಗಿಲ್ಲವೆಂದೂ, ಚಿಕ್ಕಂದಿನಲ್ಲಿಯೇ ಅವರು ಸನ್ಯಾಸವನ್ನು ಗ್ರಹಣಮಾಡಿ, ಭಾರತೀತೀರ್ಥರೆಂಬ ಹೆಸರಿನಿಂದ ಪೀಠಾಧಿಷ್ಠಿತರಾಗಿ ಶೇಷಾಯುಷ್ಯವನ್ನೆಲ್ಲ ಶೃಂಗೇರಿಮಠದಲ್ಲಿ ಶ್ರೀಚಂದ್ರಮೌಳೀಶ್ವರನ ಸೇವೆಯಲ್ಲಿಯೂ ಶ್ರೀಶಾರದಾಂಬೆಯ ಪೂಜೆಯಲ್ಲಿಯೂ ಕಳೆದರೆಂದೂ ಹಿಂದೆ ಹೇಳಿದ್ದೇವಷ್ಟೇ! ಇನ್ನು ಮುಂದೆ ಶ್ರೀವಿದ್ಯಾರಣ್ಯಸ್ವಾಮಿಗಳ ಹೆಸರಿನಿಂದ ರೂಢವಾಗಿರುವ ಗ್ರಂಥಗಳನ್ನು ತೋರಿಸುವೆವಲ್ಲದೆ, ಅವುಗಳಲ್ಲಿ ಅವರ ತಮ್ಮಂದಿರ ಕೃತಿಗಳಾವವೆಂಬುದನ್ನು ತೋರಿಸುವ ಯತ್ನ ಮಾಡುವೆವು. ಒಂದೇ ಕುಟುಂಬದಲ್ಲಿ ಹುಟ್ಟಿದ ಹುಡುಗರ ರೂಪದಲ್ಲಿಯೂ, ಮೈಕಟ್ಟಿನಲ್ಲಿಯೂ, ಸ್ವರದಲ್ಲಿಯೂ ಸಾಮ್ಯವಿರುವಂತೆಯೇ ಈ ತ್ರಿವರ್ಗದ ಕೃತಿಗಳಲ್ಲಿಯೂ ಹೋಲಿಕೆಯು ಇದ್ದದ್ದು ಕಂಡುಬರುತ್ತದೆ. ಕೆಲಕೆಲವು ಗ್ರಂಥಗಳಲ್ಲಿ ಈ ಮೂವರು ಬಂಧುಗಳ ಹೆಸರುಗಳು ಕೂಡಿಯೇ ಉಲ್ಲೇಖಿತವಾಗಿವೆ.

ಗ್ರಂಥಗಳ ಸಂಖ್ಯೆಯ ಮಾನದಿಂದ ನೋಡಲು, ಶ್ರೀಶಂಕರಾಚಾರ್ಯರ ಗ್ರಂಥಗಳಿಗಿಂತ ಶ್ರೀವಿದ್ಯಾರಣ್ಯಸ್ವಾಮಿಗಳ ಗ್ರಂಥಗಳೇ ಅಧಿಕವಾಗಿವೆ. ಇದಲ್ಲದೆ, ಹಿಂದೆ ಹೇಳಿದಂತೆ ಶ್ರೀವಿದ್ಯಾರಣ್ಯಸ್ವಾಮಿಗಳ ಗ್ರಂಥಗಳಲ್ಲಿ ವಿಷಯವೈಚಿತ್ರ್ಯವು ಕಂಡುಬರುತ್ತದೆ.

ಈ ಬಂಧುಗಳ ಪ್ರಚಂಡ ಗ್ರಂಥರಚನೆಯ ಉಲ್ಲೇಖವು ಹಿಂದೆ ಒಂದೆರಡು ಕಡೆಗಳಲ್ಲಿ ಅಲ್ಪಸ್ವಲ್ಪ ಬಂದಿದೆ. ಇಂತಹ ಅಸಾಧ್ಯವಾದ ಕೆಲಸವು ಸಾಮಾನ್ಯರಾದ ಒಬ್ಬಿಬ್ಬರಿಂದಾಗುವದು ಶಕ್ಯವಲ್ಲ. ಆದರೆ "ದುಷ್ಕರಂ ಕಿಂ ಮಹಾತ್ಮನಾಮ್ |" ಎಂಬ ನುಡಿಯನ್ನು ಲಕ್ಷ್ಯಕ್ಕೆ ತಂದರೆ ಮನಸ್ಸಿನೊಳಗಿನ ಶಂಕೆಗಳೆಲ್ಲ ಪರಿಹೃತವಾಗುವವು. ಮತ್ತೊಂದೇನೆಂದರೆ— ಮಹದಾಶ್ರಯವು ಯಾರಿಂದ ಏನನ್ನು ತಾನೇ ಮಾಡಿಸುವದಿಲ್ಲ?

ಸಿಧ್ಯಂತಿ ಕರ್ಮಸು ಮಹತ್ಸ್ವಪಿ ಯನ್ನಿಯೋಜ್ಯಾ |
ಸಂಭಾವನಾ ಗುಣಮವೇಹಿ ತಮೀಶ್ವರಾಣಾಮ್ ||

ಎಂಬಂತೆ ಅಸಂಭವನೀಯವೆಂದು ತೋರುವ ಕಾರ್ಯಗಳು ಸೇವಕನಿಂದ ಪೂರ್ಣವಾಗುವದಕ್ಕೆ ಒಡೆಯನ ಗುಣವೇ ಕಾರಣವೆಂದು ತಿಳಿಯತಕ್ಕದ್ದು. ಸಾಧ್ಯವನ್ನು ಸಿದ್ಧ ಮಾಡಿಕೊಳ್ಳಬೇಕಾದರೆ ಯಾವ ಯಾವ ಸಾಧನಗಳ ಅನುಕೂಲತೆಯು ಇರಬೇಕಾಗುವದೋ, ಅವೆಲ್ಲ ಮಾಧವಾಚಾರ್ಯರಿಗೆ ಪ್ರಾಪ್ತವಾಗಿತ್ತೆಂದು ಹೇಳಬಹುದು. ನೈಸರ್ಗಿಕವಾದ, ವಿಶಾಲವಾದ ಮತ್ತು ಕುಶಾಗ್ರವಾದ ಬುದ್ಧಿಯು; ಸತ್ತೀರ್ಥರಾದ ಅನೇಕ ಗುರುಗಳಲ್ಲಿ ಅಧ್ಯಯನವು; ಸಾಯಣಾಚಾರ್ಯರಂತಹ ಸೋದರರೂ, ಸತೀರ್ಥ್ಯರೂ, ಸಮಾನವಿದ್ಯರೂ ಆದ ಸಬಂಧುಗಳ ಸಾಹಾಯ್ಯವು; ಸ್ವಾಭಾವಿಕವಾದ ಸಮ್ಯಗ್ವಿವೃತ್ತಪೌರುಷವು; ವಿದ್ಯಾಪ್ರಿಯನೂ, ವಿಕ್ರಮಾದಿತ್ಯತುಲ್ಯನೂ ಆದ ಬುಕ್ಕಣ ನೃಪತಿಯ ಆಶ್ರಯ ಪ್ರೋತ್ಸಾಹನಗಳು; ಮತ್ತು ಎಲ್ಲಕ್ಕೂ ಶ್ರೇಷ್ಠವಾದ "ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಮ್" ಎಂಬಂತಿರುವ ಪರಮಾತ್ಮನ ಕೃಪೆಯು; ಈ ಪ್ರಕಾರ ಸರ್ವಾನುಕೂಲ ಪರಿಸ್ಥಿತಿಯು ಒದಗಿದ ಮೇಲೆ ಆದಾವುದು ತಾನೆ ಅಸಾಧ್ಯವಾಗುವದು ?

ಭರತಖಂಡದ ಇತಿಹಾಸವನ್ನು ರಾಜಕೀಯ ಮತ್ತು ವಾಙ್ಮಯಾತ್ಮಕ ದೃಷ್ಟಿಯಿಂದ ನೋಡಿದರೆ, ವಿಕ್ರಮಾದಿತ್ಯ, ಶ್ರೀಹರ್ಷ, ಶಂಕರಾಚಾರ್ಯ, ಮತ್ತು ಭೋಜದೇವ ಇವರ ತರುವಾಯ ವೀರಬುಕ್ಕಣನ ಕಾಲವೇ ಮಹತ್ವದ್ದೆಂದು ಕಂಡುಬರುವದು. ಈ ದೃಷ್ಟಿಯಿಂದ ವೀರಬುಕ್ಕಣನನ್ನು ಎಷ್ಟು ಸ್ತುತಿಸಿದರೂ ಸ್ವಲ್ಪವೇ ಇದೆ.

"ಧರ್ಮೇಣ ಲಭತೇ ಸರ್ವಂ ಧರ್ಮೇ ಸರ್ವಂ ಪ್ರತಿಷ್ಠಿತಮ್ ।"

"ಶ್ರುತಿಸ್ಮೃತ್ಯುದಿತೋ ಧರ್ಮಃ ।"

ಇವೇ ಮೊದಲಾದ ವಚನಗಳ ಮೇಲೆ ದೃಢ ವಿಶ್ವಾಸವನ್ನಿಟ್ಟು, ವೇದಾರ್ಥವನ್ನೂ ಸ್ಮೃತ್ಯರ್ಥವನ್ನೂ ಪ್ರಕಾಶಪಡಿಸುವ ವಿಷಯದಲ್ಲಿ, ವೀರಬುಕ್ಕಣನು ತನ್ನ ಪರಮ ಪೂಜ್ಯನಾದ ಕುಲಗುರುವೂ ಮಂತ್ರಿಯೂ ಆದ ಶ್ರೀವಿದ್ಯಾರಣ್ಯಸ್ವಾಮಿಗಳಿಗೆ ಅರಿಕೆ ಮಾಡಿಕೊಂಡನು. ಈ ವೃತ್ತಾಂತವನ್ನು ಶ್ರೀವಿದ್ಯಾರಣ್ಯಸ್ವಾಮಿಗಳು ತಮ್ಮ ತೈತ್ತಿರೀಯ ಸಂಹಿತಾಭಾಷ್ಯದಲ್ಲಿಯೂ, ಬೇರೆ ಕೆಲವೆಡೆಗಳಲ್ಲಿಯೂ ಸಂಕ್ಷೇಪವಾಗಿಯೂ ಸ್ಪಷ್ಟವಾಗಿಯೂ ಉಲ್ಲೇಖಿಸಿದ್ದಾರೆ. ಅದು ಹೇಗೆಂದರೆ—

ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥ ಮಹೇಶ್ವರಮ್ ॥
ತತ್ಕಟಾಕ್ಷೇಣ ತದ್ರೂಪಂ ದಧದ್ಬುಕ್ಕಮಹೀಪತಿಃ ।
ಅನ್ವಶಾನ್ಮಾಧವಾಚಾರ್ಯಂ ವೇದಾರ್ಥಸ್ಯ ಪ್ರಕಾಶನೇ ॥
ಸ ಪ್ರಾಹ ನೃಪತಿಂ ರಾಜನ್ ಸಾಯಣಾರ್ಯೋ ಮಮಾನುಜಃ ।
ಸರ್ವಂ ವೇತ್ತ್ಯೇಷ ವೇದಾನಾಂ ವ್ಯಾಖ್ಯಾತೃತ್ವೇ ನಿಯುಜ್ಯತಾಮ್ ॥

ಇತ್ಯುಕ್ತೋ ಮಾಧವಾರ್ಯೇಣ ವೀರಬುಕ್ಕಮಹೀಪತಿಃ |
ಅನ್ವಶಾತ್ಸಾಯಣಾಚಾರ್ಯಂ ವೇದಾರ್ಥಸ್ಯ ಪ್ರಕಾಶನೇ ||
ಯೇ ಪೂರ್ವೋತ್ತರಮೀಮಾಂಸೇ ತೇ ವ್ಯಾಖ್ಯಾಯಾತಿ ಸಂಗ್ರಹಾತ್ |
ಕೃಪಾಲುರ್ಮಾಧವಾಚಾರ್ಯೋ ವೇದಾರ್ಥಂ ವಕ್ತುಮುದ್ಯತಃ ||
ಬ್ರಾಹ್ಮಣಂ ಕಲ್ಪಸೂತ್ರೇ ದ್ವೇ ಮೀಮಾಸಾಂ ವ್ಯಾಕೃತಿಂ ತಥಾ |
ಉದಾಹೃತ್ಯಾಥ ತೈಃ ಸರ್ವೈರ್ವೇದಾರ್ಥಃ ಸ್ಪಷ್ಟಮೀರ್ಯತೇ ||

ಇದರ ಮುಂದಿನ ವೃತ್ತಾಂತವು ಋಗ್ವೇದ ಭಾಷ್ಯದ ಪ್ರಸ್ತಾವನೆಯಲ್ಲಿ ಹೀಗೆ ಹೇಳಲ್ಪಟ್ಟಿದೆ —

ಅಧ್ವರ್ಯವಸ್ಯ ಯಜ್ಞೇಷು ಪ್ರಾಧಾನ್ಯಾದ್ವ್ಯಾಕೃತಂ ಪುರಾ |
ಯಜುರ್ವೇದೋಽಥ ಹೋತ್ರಾರ್ಥಮೃಗ್ವೇದೋವ್ಯಾಕರಿಷ್ಯತೇ ||
ಏತಸ್ಮಿನ್ಪ್ರಥಮೋಽಧ್ಯಾಯಃ ಶ್ರೋತವ್ಯಃ ಸಂಪ್ರದಾಯತಃ |
ವ್ಯುತ್ಪನ್ನಸ್ತಾವತಾ ಸರ್ವಂ ಬೋದ್ಧುಂ ಶಂಕ್ನೋತಿ ಬುದ್ಧಿಮಾನ್ ||

ಪ್ರಥಮಾಷ್ಟಕದ ಕೊನೆಯಲ್ಲಿ ಮತ್ತೆ ಗುರುಗಳನ್ನು ಪ್ರಾರ್ಥಿಸಿ, ಪುರಸ್ಕರ್ತೃವಾದ ಬುಕ್ಕರಾಜನನ್ನು ಈ ಪ್ರಕಾರ ಗೌರವಿಸಿದ್ದಾರೆ—

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ |
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥ ಮಹೇಶ್ವರಃ ||

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕಭೂಪಾಲಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣವಿರಚಿತ ಮಾಧವೀಯೇ ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಪ್ರಥಮಾಷ್ಟಕೇಽಷ್ಟಮೋಽಧ್ಯಾಯಃ |

ಮೇಲಿನ ಅವತರಣಗಳ ಒಟ್ಟು ಅರ್ಥವನ್ನು ಇದರಡಿಯಲ್ಲಿ ಕೊಡುತ್ತೇವೆ :

"ವೇದವು ಯಾರಿಗೆ ನಿಶ್ವಾಸವಾಗಿದೆಯೋ, ಯಾರು ವೇದಗಳಿಂದ ಎಲ್ಲ ಜಗತ್ತನ್ನು ನಿರ್ಮಾಣ ಮಾಡಿದರೋ ಅಂತಹ ವಿದ್ಯಾತೀರ್ಥರೂಪನಾದ ಮಹೇಶ್ವರನನ್ನು ವಂದಿಸುತ್ತೇನೆ. ಆ ಮಹೇಶ್ವರನ ಕೃಪಾಕಟಾಕ್ಷದಿಂದ ಆತನ ರೂಪವನ್ನು ಧಾರಣ ಮಾಡಿರುವ ಬುಕ್ಕಭೂಪತಿಯು ವೇದಾರ್ಥವನ್ನು ಪ್ರಕಾಶಗೊಳಿಸಬೇಕೆಂದು ಮಾಧವಾಚಾರ್ಯರಿಗೆ ಹೇಳಲು ಅವರು ಹೇಳಿದುದೇನೆಂದರೆ— 'ಎಲೈ ರಾಜನೆ, ನನ್ನ ತಮ್ಮನಾದ ಸಾಯಣಾಚಾರ್ಯನು ಸರ್ವಜ್ಞನಾಗಿದ್ದಾನೆ. ಆದುದರಿಂದ ವೇದಗಳನ್ನು ವ್ಯಾಖ್ಯಾನಿಸುವ ಕೆಲಸದಲ್ಲಿ ಆವನನ್ನು ನಿಯೋಜಿಸಿರಿ' ಹೀಗೆ ಮಾಧವಾಚಾರ್ಯರು ಹೇಳಲು ವೀರಬುಕ್ಕನು ವೇದಾರ್ಥವನ್ನು ಪ್ರಕಾಶಗೊಳಿಸಬೇಕೆಂದು ಸಾಯಣಾಚಾರ್ಯರಿಗೆ ಅಪ್ಪಣೆ ಮಾಡಿದನು. ಆದುದರಿಂದ ಪೂರ್ವಮೀಮಾಂಸೆಯನ್ನೂ, ಉತ್ತರ ಮೀಮಾಂಸೆಯನ್ನೂ

ಮೊದಲು ಸಂಕ್ಷೇಪದಿಂದ ವ್ಯಾಖ್ಯಾನಿಸಿ ಕೃಪಾಲುಗಳಾದ ಮಾಧವಾಚಾರ್ಯರು ವೇದಾರ್ಥಕಥನಕ್ಕೆ ಉದ್ಯುಕ್ತರಾದರು. ಅವರು ವೇದಗಳ ಬ್ರಾಹ್ಮಣಗಳನ್ನೂ, ಎರಡು ಕಲ್ಪಸೂತ್ರಗಳನ್ನೂ, ಮೀಮಾಂಸೆ ಮತ್ತು ವ್ಯಾಕರಣಗಳನ್ನೂ ಮೊದಲು ವ್ಯಾಖ್ಯಾನಿಸಿ ಅವೆಲ್ಲವುಗಳಿಂದ ವೇದಾರ್ಥವನ್ನು ಸ್ಪಷ್ಟಪಡಿಸಿದ್ದಾರೆ.

"ಯಜ್ಞದಲ್ಲಿ ಅಧ್ವರ್ಯುವಿನ ಕರ್ಮಗಳು ಮುಖ್ಯವಾದವುಗಳು. ಆದುದರಿಂದ ಅವರು ಮೊದಲು ಯಜುರ್ವೇದದ ವಿವರಣೆಯನ್ನು ಮಾಡಿ ಆ ಮೇಲೆ ಹೋತೃವಿನ ಉಪಯೋಗಕ್ಕಾಗಿ ಋಗ್ವೇದ ವ್ಯಾಖ್ಯಾನವನ್ನು ಬರೆಯಲು ಆರಂಭ ಮಾಡಿದರು. ಯಾವ ಬುದ್ಧಿವಂತನು ಸಂಪ್ರದಾಯಾನುಸಾರವಾಗಿ ಋಗ್ವೇದದ ಪ್ರಥಮಾಧ್ಯಾಯವನ್ನು ಅಧ್ಯಯನ ಮಾಡುವನೋ, ಅವನು ಅಷ್ಟೇ ಉತ್ಪತ್ತಿಯ ಬಲದಿಂದ ಸರ್ವ ವೇದಾರ್ಥವನ್ನು ತಿಳಿಯಲು ಸಮರ್ಥನಾಗುವನು. ಈ ವೇದಾರ್ಥದ ಪ್ರಕಾಶದಿಂದ ಮನುಷ್ಯನ ಅಂತಃಕರಣದೊಳಗಿನ ಅಜ್ಞಾನರೂಪವಾದ ಅಂಧಕಾರವು ಅಡಗಿಹೋಗಲಿ; ಮತ್ತು ಅದು ವಿದ್ಯಾತೀರ್ಥ ಮಹೇಶ್ವರರಿಗೆ ನಾಲ್ಕೂ ಪುರುಷಾರ್ಥಗಳ ಪ್ರಾಪ್ತಿಯನ್ನುಂಟು ಮಾಡಲಿ. ಈ ಪ್ರಕಾರ ಶ್ರೀಮಹಾರಾಜಾಧಿರಾಜ ಪರಮೇಶ್ವರನೂ, ವೈದಿಕ ಮಾರ್ಗಪ್ರವರ್ತಕನೂ ಆದ ಶ್ರೀಬುಕ್ಕಭೂಪಾಲದೇವನ ಸಾಮ್ರಾಜ್ಯಧುರವನ್ನು ವಹಿಸಿದ ಸಾಯಣಾಚಾರ್ಯರು ಈ ವೇದಾರ್ಥ ಪ್ರಕಾಶಾಂತರ್ಗತವಾದ ಋಕ್ಸಂಹಿತಾ ಭಾಷ್ಯವನ್ನು ರಚಿಸಿದರು. ಅದರ ಪ್ರಥಮಾಷ್ಟಕದೊಳಗಿನ ಎಂಟನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು."

ಶ್ರೀವಿದ್ಯಾರಣ್ಯಸ್ವಾಮಿಗಳ ಗ್ರಂಥರಾಶಿಯೊಳಗಿನ ಬಹಳ ಭಾಗವು ವ್ಯಾಖ್ಯಾನರೂಪವಾಗಿಯೂ ವಿವರಣರೂಪವಾಗಿಯೂ ಇರುವದರಿಂದ ಗದ್ಯಾತ್ಮಕವಾಗಿದೆ. ಆದರೆ ಇವರ ಕೆಲವು ಗ್ರಂಥಗಳು ಪದ್ಯಾತ್ಮಕವಾಗಿಯೂ ಇವೆ. ವೇದಾಂತಪರವಾದ ಪಂಚದಶಿಯು ಅನುಷ್ಟುಪ್ ಛಂದಸ್ಸಿನಲ್ಲಿ ರಚಿತವಾಗಿದೆ. ಆದರೆ ಪದ್ಯಮಯ ಗ್ರಂಥಗಳಲ್ಲಿ ಗಣನೀಯವಾದ ಕಾವ್ಯರೂಪವಾದ ಇವರ ಗ್ರಂಥವೆಂದರೆ "ಶಾಂಕರದಿಗ್ವಿಜಯವು." ಇದರಲ್ಲಿ ಹದಿನಾರು ಸರ್ಗಗಳುಂಟು. ಇದರಲ್ಲಿ ಜಗದ್ಗುರುಗಳಾದ ಶ್ರೀಶಂಕರಾಚಾರ್ಯರ ಜನ್ಮವೃತ್ತವೂ ದಿಗ್ವಿಜಯವೃತ್ತಾಂತವೂ ಒಳ್ಳೇ ಮನೋಹರವಾಗಿ ವರ್ಣಿತವಾಗಿದೆ. ಅದರಲ್ಲಿ ಕವಿಯು ಕಾಲಿದಾಸನ ಮಾದರಿಯನ್ನು ಮೊದಲಿನಿಂದಲೂ ಅನುಸರಿಸಿದ್ದು, ತನ್ನನ್ನು "ನವ ಕಾಲಿದಾಸ" ನೆಂದು ಹೇಳಿಕೊಂಡಿದ್ದಾನೆ. ಕಾಲಿದಾಸನ ಪ್ರತಿಯೊಂದು ಗ್ರಂಥದ ಆರಂಭದಲ್ಲಿ ಅವನ ಸ್ವಭಾವ ಶಾಲೀನತೆಯು ವ್ಯಕ್ತವಾಗುತ್ತದೆ. ಅವನ ಅನುಕರಣವನ್ನೇ ಶ್ರೀವಿದ್ಯಾರಣ್ಯಸ್ವಾಮಿಗಳು ಮಾಡಿದ್ದಾರೆ. ಶಾಸ್ತ್ರಾಧ್ಯಯನವು ಸಮಾಪ್ತವಾದೊಡನೆಯೇ ಶ್ರೀವಿದ್ಯಾರಣ್ಯಸ್ವಾಮಿಗಳ ಲೆಕ್ಕಣಿಕೆಯಿಂದ ಈ ಗ್ರಂಥವು ಉದ್ಭೂತವಾಗಿರಬಹುದು; ಅದರಿಂದ ಪಂಡಿತವರ್ಗದಲ್ಲಿಯೂ, ಕವಿಮಾಲಿಕೆಯಲ್ಲಿಯೂ ಇವರ ಗಣನೆಯು ಆರಂಭವಾಗಿರಲಿಕ್ಕೆಬೇಕು. ತರುಣಕವಿಯ ಪಾಂಡಿತ್ಯಪ್ರೌಢಿಯು

ಇವರಲ್ಲಿ ಅಲ್ಲಲ್ಲಿ ಗೋಚರವಾಗುತ್ತದೆ. ವೇದಭಾಷ್ಯಾದಿ ಗ್ರಂಥಗಳೊಳಗಿನ ಗಂಭೀರ ನಾದ ವಾಗ್ಗಂಗೌಘವು ಪ್ರವಹಿಸತೊಡಗಿದ ಬಳಿಕ ಕಾವ್ಯರಚನೆಯ ಸ್ಫೂರ್ತಿಯೂ ಅವಕಾಶವೂ ಅವರಲ್ಲಿ ಹುಟ್ಟಿರಕ್ಕಿಲ್ಲವೆಂಬುದು ಸ್ಪಷ್ಟವೇ ಇದೆ.

ಮೇಲೆ ಕೊಟ್ಟ ಅವತರಣಗಳ ಮೇಲಿಂದ ಸಾಯಣ ಮಾಧವರ ಗ್ರಂಥಗಳ ಅನುಕ್ರಮವು ಸ್ವಲ್ಪಮಟ್ಟಿಗೆ ಅನುಲಕ್ಷಿತವಾಗುತ್ತದೆ. ಕೆಲವು ದಿವಸಗಳ ವರೆಗೆ ಸಾಯಣಾಚಾರ್ಯರಾದರೂ ಸಾಮ್ರಾಜ್ಯಮಂತ್ರಿತ್ವದ ಭಾರವನ್ನು ತಮ್ಮ ತಲೆಯ ಮೇಲೆ ಹೊತ್ತಿದ್ದರು. ಗ್ರಂಥಕರ್ತೃತ್ವದಲ್ಲಿ ಹೇಗೋ ಹಾಗೆಯೇ ರಾಜ್ಯ ಕಾರಭಾರದಲ್ಲಾದರೂ ಈ ಉಭಯಬಂಧುಗಳ ಏಕಾತ್ಮತೆಯು ಇರಬಹುದು. ಎರಡನೆಯ ಹರಿಹರನ ಕಾಲದಲ್ಲಿ ಅಥರ್ವಣ ವೇದಭಾಷ್ಯವು ಸಮಾಪ್ತವಾಯಿತೆಂದು ಉಲ್ಲೇಖವುಂಟು. ಆ ಭಾಷ್ಯದ ಪ್ರಸ್ತಾವನೆಯಲ್ಲಿ ಇನ್ನೂ ಹೆಚ್ಚಿನ ಸಂಗತಿಯು ಗೊತ್ತಾಗಬಹುದು.

ಇನ್ನು ಸಾಯಣಮಾಧವೀಯ ಗ್ರಂಥರಚನೆಯ ಅನುಕ್ರಮವನ್ನು ಗೊತ್ತುಪಡಿಸುವ ಪ್ರಯತ್ನವನ್ನು ಮಾಡುವ ತತ್ಕೃತ ಗ್ರಂಥಗಳ ಪ್ರಸ್ತಾವನೆಯಲ್ಲಿ ಹೇಳಿದ ಅನುಕ್ರಮದಂತೆ ಸಾಯಣಮಾಧವೀಯ ಗ್ರಂಥಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಶ್ರೀ ವಿದ್ಯಾರಣ್ಯಸ್ವಾಮಿಗಳ ಎಲ್ಲ ಗ್ರಂಥಗಳು ಸದ್ಯಕ್ಕೆ ಉಪಲಬ್ಧವಿಲ್ಲವೆಂಬುದು ನಮ್ಮ ದುರ್ದೈವವೇ ! ಆದರೂ ನಮಗೆ ಸಿಕ್ಕ ಗ್ರಂಥಗಳ ವಿಷಯಕ್ಕೆ ತಿಳಿದ ಒಂದೆರಡು ಸಂಗತಿಗಳನ್ನು ಈ ಪುಸ್ತಕದಲ್ಲಿ ಕೊಡುತ್ತೇವೆ.

——

# ಮೊದಲನೆಯ ಭಾಗ

## ಮನಃಸಂಸ್ಕಾರ ಪ್ರಧಾನವಾದ ಗ್ರಂಥಗಳು

ಅಧ್ಯಯನವು ಪೂರ್ಣವಾದ ಮೇಲೆ ರಾಜ್ಯಕಾರಭಾರದಲ್ಲಿ ಶ್ರೀವಿದ್ಯಾರಣ್ಯರು ಪ್ರವಿಷ್ಟರಾಗುವ ಪೂರ್ವದಲ್ಲಿ ಬರೆದ ಗ್ರಂಥಗಳು ಈ ಭಾಗಕ್ಕೆ ಸೇರುತ್ತವೆ.

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯನ್ನತ್ವಾ ಕೃತಕೃತ್ಯಾಃ ಸ್ಯುಸ್ತನ್ನಮಾಮಿ ಗಜಾನನಮ್ ॥

ಈ ಶ್ಲೋಕಮುದ್ರೆಯಿಂದ ಅಂಕಿತವಾದ ಗ್ರಂಥಗಳೆಲ್ಲವೂ ಅವರ ಪೂರ್ವಾಶ್ರಮದ ಗ್ರಂಥಗಳೆಂದು ಸಾಮಾನ್ಯವಾಗಿ ಹೇಳುತ್ತಾರೆ. ೧) ಸರ್ವದರ್ಶನಸಂಗ್ರಹ, ೨) ಶಾಂಕರದಿಗ್ವಿಜಯ. ಇವೆರಡು ಗ್ರಂಥಗಳು ಈ ಮೊದಲನೆಯ ಭಾಗಕ್ಕೆ ಸೇರುತ್ತವೆ.

### ೧. ಸರ್ವದರ್ಶನ ಸಂಗ್ರಹ

ಈ ಗ್ರಂಥವು ವೇದಭಾಷ್ಯಾದಿ ಗ್ರಂಥಗಳಿಗಿಂತಲೂ ಮೊದಲೇ ಬರೆಯಲ್ಪಟ್ಟಿರಬೇಕೆಂದು ತೋರುತ್ತದೆ. ಯಾಕಂದರೆ, ಇದರಲ್ಲಿ ಶ್ರೀ ವಿದ್ಯಾರಣ್ಯಸ್ವಾಮಿಗಳು ತಮ್ಮ ಗುರುಗಳಾದ ವಿದ್ಯಾತೀರ್ಥರನ್ನು ಅವರ ಗೃಹಸ್ಥಾಶ್ರಮದ ಹೆಸರಿನಿಂದ ಅಂದರೆ 'ಸರ್ವಜ್ಞವಿಷ್ಣು' ಎಂಬ ಹೆಸರಿನಿಂದ ಸಂಬೋಧಿಸಿ ನಮಸ್ಕರಿಸಿದ್ದಾರೆ. ಸರ್ವಜ್ಞವಿಷ್ಣುಗಳು ತಮ್ಮ ಹೆಸರಿಗೆ ಅನುರೂಪವಾಗಿ ಸರ್ವದಾರ್ಶನಿಕಜ್ಞಾನದ ಸಾಗರ ರೂಪರಾಗಿದ್ದರು. "ಪಾರಂಗತಂ ಸಕಲದರ್ಶನಸಾಗರಾಣಾಮ್" ಎಂಬುದಾಗಿ ಸರ್ವದರ್ಶನಸಂಗ್ರಹದಲ್ಲಿಯೇ ಅವರ ವರ್ಣನೆಯಿರುತ್ತದೆ. ಈ ಪಂಡಿತರು ಬಿಲ್ವಾರಣ್ಯದಲ್ಲಿ ಇರುತ್ತಿದ್ದಾಗ ಸಾಯಣಮಾಧವರು ಅಧ್ಯಯನಾರ್ಥವಾಗಿ ಇವರ ಕಡೆಗೆ ಹೋಗಿರಬಹುದು. ಅಧ್ಯಯನಕ್ಕಾಗಿ ಗುರುಗೃಹದಲ್ಲಿ ಹೋಗಿ ವಾಸ ಮಾಡುವ ಪದ್ಧತಿಯು ಸರ್ವಶ್ರುತವಾಗಿಯೇ ಇದೆ. ಈ ಗುರುಗಳಿಂದ ಸಾಯಣಮಾಧವರು ವಿವಿಧಮತಗಳ ಜ್ಞಾನವನ್ನು ಸಂಪಾದಿಸಿದರು. ಶ್ರೀ ವಿದ್ಯಾರಣ್ಯಸ್ವಾಮಿಗಳು ಚಾರ್ವಾಕ ಮತವನ್ನು ಮೊದಲ್ಗೊಂಡು ಸರ್ವದರ್ಶನ ಶಿರೋಮಣಿಯಾದ ಶಾಂಕರ ದರ್ಶನದ ವರೆಗಿನ ಹದಿನಾರು ದರ್ಶನಗಳಿಗೂ ಈ ಗ್ರಂಥದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ. ಆಯಾ ಮತವಾದಿಗಳ ಗ್ರಂಥಗಳೊಳಗಿನ ಅವತರಣಗಳೂ, ಅವುಗಳ ವಿವೇಚನೆಯೂ ಕೂಡಿಯೇ ಈ ಗ್ರಂಥದಲ್ಲಿರುವದರಿಂದ ಇದು ಗದ್ಯಪದ್ಯಾತ್ಮಕವಾಗಿದೆ. ಇದರ ಕೊನೆಯ ಪ್ರಕರಣವಾದ ಶಾಂಕರ ಮತವಿವರಣವು ಸಾಯಣಾಚಾರ್ಯಕೃತವೆಂದು ಅದರ ಕೊನೆಯಲ್ಲಿ ಉಲ್ಲೇಖವಿದೆ. ಇತರ ಪ್ರಕರಣಗಳಲ್ಲಿ ಹಾಗಿಲ್ಲ. ಆದುದರಿಂದ ಅವೆಲ್ಲವೂ ಶ್ರೀ ವಿದ್ಯಾರಣ್ಯ

ಸ್ವಾಮಿಗಳವರವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದೊಂದೇ ಗ್ರಂಥದಿಂದಲೇ ಅವರ ಅದ್ವಿತೀಯವಾದ ಪಾಂಡಿತ್ಯವು ಹೊರಬಿದ್ದು ಅವರ ಕೀರ್ತಿಯು ಎಲ್ಲ ಕಡೆಯಲ್ಲಿಯೂ ಹರಡಿತು.

ಶ್ರೀ ಮಹೇಶಚಂದ್ರನ್ಯಾಯರತ್ನ ಇವರು ತಾವು ಪ್ರಸಿದ್ಧಪಡಿಸಿದ ಕಾವ್ಯಪ್ರಕಾಶದ ಭೂಮಿಕೆಯಲ್ಲಿ (ಪು ೨೨) ಉಲ್ಲೇಖಿಸಿರುವದೇನಂದರೆ— ಮಾಧವಾಚಾರ್ಯರು ಸರ್ವದರ್ಶನ ಸಂಗ್ರಹವನ್ನು ಕ್ರಿ. ಶ. ೧೩೩೫ ನೆಯ ವರ್ಷದಲ್ಲಿ ಬರೆದರು. ಅವರು ತಮ್ಮ ಈ ಹೇಳಿಕೆಗೆ ಆಧಾರವನ್ನೇನೂ ಕೊಟ್ಟಿಲ್ಲ. ಆದರೂ ಇದು ಯುಕ್ತವಾಗಿದೆಯೆಂದು ಹೇಳಲು ಅವಕಾಶವಿದೆ ಯಾಕಂದರೆ, ಶ್ರೀ ವಿದ್ಯಾರಣ್ಯಸ್ವಾಮಿಗಳು ಈ ಗ್ರಂಥವನ್ನು ಬರೆದ ಬಳಿಕ, ವಿಜಯನಗರದ ರಾಜ್ಯವನ್ನು ಸ್ಥಾಪಿಸಿ ರಾಜ್ಯಾಧಿಕಾರದಲ್ಲಿ ಪ್ರವಿಷ್ಟರಾಗಿರಬಹುದು.

## ೨. ಶಾಂಕರದಿಗ್ವಿಜಯ

ಸರ್ವಜ್ಞವಿಷ್ಣುಗಳ ಬಳಿಯಲ್ಲಿ ಸಾಹಿತ್ಯದರ್ಶನಾದಿ ವಿಷಯಗಳ ವ್ಯಾಸಂಗವನ್ನು ಮಾಡುವಾಗ ಸಾಯಣಮಾಧವರು ಶ್ರೀ ಶಂಕರಾಚಾರ್ಯರ ವಿಷಯವಾಗಿ ಅನೇಕ ಸಂಗತಿಗಳನ್ನು ಕಲಿತರು; ಅವರ ದಿಗ್ವಿಜಯವನ್ನು ಕುರಿತು ರಚಿತವಾದ ಪ್ರಾಚೀನ ಪ್ರಬಂಧಗಳನ್ನು ಓದಿದರು. ಇದರಿಂದ ಶ್ರೀ ಶಂಕರಾಚಾರ್ಯರ ವಿಷಯದಲ್ಲಿ ಉಂಟಾದ ಪೂಜ್ಯಬುದ್ಧಿಯ ಫಲವೇ ಈ ಗ್ರಂಥವೆಂದು ಹೇಳಬಹುದು. ಶಾಂಕರದಿಗ್ವಿಜಯವನ್ನು ಕುರಿತು ಪೂರ್ವದಲ್ಲಿದ್ದ ದೊಡ್ಡದೊಡ್ಡ ಗ್ರಂಥಗಳ ಸಾರಾಂಶವು ಇದರಲ್ಲಿ ಹೇಳಲ್ಪಟ್ಟಿದೆ. ದೊಡ್ಡ ದೊಡ್ಡ ಆನೆಗಳ ಅಥವಾ ಪರ್ವತಗಳ ಪ್ರತಿಬಿಂಬವು ಚಿಕ್ಕ ಕನ್ನಡಿಯಲ್ಲಿ ಹೇಗೆ ತೋರುವದೋ, ಹಾಗೆಯೇ ಈ ನನ್ನ ಗ್ರಂಥದೊಳಗಿನ ಸಂಗ್ರಹವು ಅಲ್ಪವಾಗಿದೆಯೆಂದೂ, ಭಾಷ್ಯಕಾರರ ಯಶಸ್ಸು ಅಂತಃಕರಣವನ್ನು ಶುದ್ಧಗೊಳಿಸುವದೆಂದು ತಿಳಿದು ನಾನಿದನ್ನು ಹೇಳುತ್ತಿರುವೆನೆಂದೂ ಗ್ರಂಥಾರಂಭದಲ್ಲಿ ಶ್ರೀ ವಿದ್ಯಾರಣ್ಯಸ್ವಾಮಿಗಳೇ ಒಳ್ಳೇ ಚಾತುರ್ಯದಿಂದ ಉಲ್ಲೇಖಿಸಿದ್ದಾರೆ; ಮತ್ತು ಈ ನವಕಾಲಿದಾಸ ಕವಿಯ ಕವಿತಾರೂಪವಾದ ಕಲ್ಪಲತೆಯ ಈ ಹೂಗೊಂಚಲು ಗುರುಚರಣಕ್ಕೆ ಸಮರ್ಪಿತವಾಗಲೆಂದೂ ಇದರ ಆಮೋದವು ಸುಮನಸ್ಕ ಪಂಡಿತರಿಗೆ ಆನಂದವನ್ನುಂಟುಮಾಡಲೆಂದೂ ಹೇಳಿದ್ದಾರೆ. ಮತ್ತು ಈ ನವಕಾಲಿದಾಸನೆಂಬ ಬಡಬ್ರಾಹ್ಮಣನ ಈ ಪವಿತ್ರವಾದ ಆಕಳವನ್ನು ನಿಷ್ಕರುಣಿಗಳಾದ ದುಷ್ಕವಿತುರುಷ್ಕರು ಪೀಡಿಸಿದರೂ ಪೀಡಿಸಲಿ; ಅದರ ಫಲವನ್ನು ಅವರು ಅನುಭವಿಸಲೇಬೇಕಾಗುವದು; ಎಂಬ ಉದ್ಗಾರವನ್ನು ತೆಗೆದಿದ್ದಾರೆ.

ಕಾಲಿದಾಸನ ಎಲ್ಲ ಗ್ರಂಥಗಳ ಆರಂಭದಲ್ಲಿ ಬಹುತರವಾಗಿ ಅವನ ಶಾಲೀನತೆಯು ದೃಗ್ಗೋಚರವಾಗುತ್ತದೆ. ಮಾಧವಾಚಾರ್ಯರಾದರೂ ಕಾಲಿದಾಸನ ಅನುಕರಣವನ್ನೇ ಮಾಡಿದ್ದಾರೆ. ರಘುವಂಶದ ಆರಂಭದಲ್ಲಿ ಕಾಲಿದಾಸನು "ಕ್ವ ಸೂರ್ಯಪ್ರಭವೋ ವಂಶಃ ಕ್ವ ಚಾಲ್ಪವಿಷಯಾ ಮತಿಃ ॥ ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ

ಸಾಗರಮ್ ||" ಎಂದು ಹೇಳಿದ್ದಾನೆ. ಇದರಂತೆಯೇ ಶ್ರೀ ವಿದ್ಯಾರಣ್ಯಸ್ವಾಮಿಗಳವರು ಶಾಂಕರದಿಗ್ವಿಜಯದ ಆರಂಭದಲ್ಲಿ ವಿನಯವನ್ನು ಪ್ರಕಟಗೊಳಿಸಿದ್ದಾರೆ. ಹೇಗೆಂದರೆ– "ಶಂಕರ ಸದ್ಗುರುವಿನ ಸುಚರಿತ್ರವೆಲ್ಲಿ? ಅಲ್ಪಜ್ಞೆಯಾದ ಬಡವೆ ನಾನೆಲ್ಲಿ? ಹೀಗಿದ್ದು ಆ ಗುರುವಿನ ವರ್ಣನೆಯಂತಹ ಬಿಕ್ಕಟ್ಟಾದ ಕೆಲಸದಲ್ಲಿ ನನ್ನನ್ನೇಕೆ ತೊಡಗಿಸುತ್ತೀ? ಇಂದಿನವರೆಗೆ ನಾನು ಗಳಿಸಿದ ಯಶಸ್ಸೆಲ್ಲ ಅದರಿಂದ ಕಳೆದುಹೋಗಬಹುದು." ಹೀಗೆಂದು ಸರಸ್ವತಿಯು ಮಾಧವಾಚಾರ್ಯರಿಗೆ ಹೇಳಿ ಓಡಿಹೋಗಹತ್ತಿದಳು; ಆದರೆ ಕವಿಗಳೆಲ್ಲರೂ ಅವಳಿಗೆ ಹೇಳಿಕೊಂಡು, ಹಿಂದಕ್ಕೆ ತಿರುಗಿಸಿ ಗುರುಸ್ತುತಿಯಲ್ಲಿ ಪ್ರೇರಿಸಿದರು. ಹೀಗೆ ಗುರುಗಳ ಮಾಹಾತ್ಮ್ಯವು ಅಸದೃಶವಾಗಿದೆ. ಇದರ ಮೇಲಿಂದ ನೋಡಿದರೆ; ಮನಸ್ಸಿನಲ್ಲಿ ಕಾವ್ಯರಚನೆಯ ಅಪೇಕ್ಷೆಯೂ ಸಾಮರ್ಥ್ಯವೂ ಇಲ್ಲದೆ ಇದ್ದರೂ, ಪಂಡಿತರ ಆಗ್ರಹದ ಮೂಲಕ ಗುರುಮಹಿಮೆಯನ್ನು ಹೊಗಳಲು ಉದ್ಯುಕ್ತನಾದೆನೆಂಬುದು ಕವಿಯ ಅಭಿಪ್ರಾಯವಾಗಿದ್ದಂತೆ ತೋರುತ್ತದೆ.

ಈ ಭಾಗದಲ್ಲಿ ಇನ್ನೂ ಯಾವ ಯಾವ ಗ್ರಂಥಗಳು ಬರುತ್ತವೆಂಬುದನ್ನು ನಿಶ್ಚಯಿಸುವ ಸಾಧನಗಳು ಸದ್ಯಕ್ಕೆ ನಮಗೆ ಉಪಲಬ್ಧವಾಗಿಲ್ಲ. ಆದುದರಿಂದ ಮೇಲೆ ಹೇಳಿದ ಎರಡು ಮುಖ್ಯ ಗ್ರಂಥಗಳ ವಿಷಯವನ್ನು ಮಾತ್ರ ಇಲ್ಲಿ ಬರೆದಿದ್ದೇವೆ. ಇವುಗಳೊಳಗಿನ ಮೊದಲನೆಯ ಗ್ರಂಥದಲ್ಲಿ ಸರ್ವಜ್ಞವಿಷ್ಣು ಎಂಬ ಹೆಸರಿನಿಂದಲೂ, ಎರಡನೆಯ ಗ್ರಂಥದಲ್ಲಿ ವಿದ್ಯಾತೀರ್ಥ ಎಂಬ ಹೆಸರಿನಿಂದಲೂ ಗುರುಗಳನ್ನು ಅಭಿವಂದಿಸಿರುವದರಿಂದ, ಇವೆರಡೂ ಗ್ರಂಥಗಳ ರಚನೆಯ ನಡುವಿನ ಕಾಲದಲ್ಲಿ ಶ್ರೀ ವಿದ್ಯಾರಣ್ಯಸ್ವಾಮಿಗಳ ಗುರುಗಳು ಆಶ್ರಮಾಂತರ ಮಾಡಿರಬೇಕೆಂದು ತೋರುತ್ತದೆ. ಇವೆರಡೂ ಗ್ರಂಥಗಳಲ್ಲಿಯೂ ಶ್ರೀ ವೀರಬುಕ್ಕನ ಉಲ್ಲೇಖವಿಲ್ಲ. ಸರ್ವದರ್ಶನ ಸಂಗ್ರಹದಲ್ಲಿದ್ದಂತೆಯೇ ದಿಗ್ವಿಜಯದಲ್ಲಾದರೂ ಹದಿನಾರೇ ಪ್ರಕರಣಗಳಿವೆ. ದಿಗ್ವಿಜಯದೊಳಗಿನ ಮಂಗಲಶ್ಲೋಕವು ಜೈಮಿನೀಯನ್ಯಾಯಮಾಲೆ ಮತ್ತು ವೈಯಾಸಿಕನ್ಯಾಯಮಾಲೆಯೊಳಗಿನ ಮಂಗಲ ಶ್ಲೋಕದಂತೆಯೇ ಇದೆ. ಇದು ಈ ಮೂರು ಗ್ರಂಥಗಳ ಏಕಕರ್ತೃತ್ವದ ದರ್ಶಕವಲ್ಲವೆ?

---

# ಎರಡನೆಯ ಭಾಗ

## ವ್ಯವಹಾರಪ್ರಧಾನವಾದ ಗ್ರಂಥಗಳು

ರಾಜ್ಯಕಾರಭಾರವನ್ನು ನಡೆಯಿಸುತ್ತಿದ್ದಾಗ ಸ್ವತಃ ಪ್ರೇರಣೆಯಿಂದಲೂ, ರಾಜ ಪ್ರೇರಣೆಯಿಂದಲೂ, ರಚಿಸಿದಂತಹ ಧಾರ್ಮಿಕ ಮತ್ತು ತದಂಗಭೂತವಾದ ಗ್ರಂಥಗಳು ಈ ವರ್ಣದಲ್ಲಿ ಸೇರುತ್ತವೆ. ರಾಜ್ಯ ಕಾರಭಾರವನ್ನು ನೋಡಹತ್ತಿದ ಬಳಿಕ ಸಾಯಣ ಮಾಧವರು ನಾಲ್ಕೂ ವರ್ಣದವರ ಆಚಾರವಿಚಾರಗಳನ್ನು ಕುರಿತು ಆಲೋಚನೆ ಮಾಡ ಬೇಕಾಗಿರಬಹುದು. ಆದುದರಿಂದ ಸ್ಮಾರ್ತಧರ್ಮಪ್ರತಿಪಾದಕವಾದ ಗ್ರಂಥಗಳನ್ನು ಬರೆಯುವ ಕೆಲಸವನ್ನು ಅವರು ಮೊದಲು ಕೈಕೊಂಡರು. ಎರಡನೆಯ ವರ್ಗದಲ್ಲಿಯ ಗ್ರಂಥಗಳಲ್ಲಿ ಶ್ರೀ ಬುಕ್ಕದೇವನ ಕೃಪೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದ್ದಾರೆ. ಈ ಗ್ರಂಥಗಳು ಕೇವಲ ರಾಜನ ಪ್ರೋತ್ಸಾಹನದಿಂದಷ್ಟೆ ಅಲ್ಲದೆ, ಆತನ ಪ್ರತ್ಯಕ್ಷ ಆಜ್ಞೆಯಿಂದಲೂ, ಸಾಹಾಯ್ಯದಿಂದಲೂ ನಿರ್ಮಿತವಾದ ಮೂಲಕ ಶ್ರೀವಿದ್ಯಾರಣ್ಯ ಸ್ವಾಮಿಗಳು ಈ ಗ್ರಂಥಗಳ ಭೂಮಿಕೆಯಲ್ಲಿ ತಮ್ಮ ಆಶ್ರಯದಾತೃವಾದ ರಾಜನ ಸ್ತುತಿಯನ್ನೂ, ಅಭೀಷ್ಟ ಚಿಂತನೆಯನ್ನೂ ಮಾಡಿದ್ದಾರೆ. (೧) ಪರಾಶರಸ್ಮೃತಿ ವ್ಯಾಖ್ಯಾನ, (೨) ಮನುಸ್ಮೃತಿವ್ಯಾಖ್ಯಾನ, (೩) ನಾಲ್ಕೂ ವೇದಗಳ ಭಾಷ್ಯ ಗಳು, (೪) ಬ್ರಾಹ್ಮಣ ಭಾಷ್ಯಗಳು, (೫) ಜೈಮಿನೀಯನ್ಯಾಯಮಾಲಾವಿಸ್ತರ, (೬) ವೈಯಾಸಿಕನ್ಯಾಯಮಾಲಾ, (೭) ಕಾಲಮಾಧವ, (೮) ವ್ಯವಹಾರಮಾಧವ, (೯) ಮಾಧವೀಯ ಧಾತುವೃತ್ತಿ. (೧೦) ವಿವರಣಪ್ರಮೇಯ, (೧೧) ಬ್ರಹ್ಮ ವಿದಾಶೀರ್ವಾದಪದ್ಧತಿ, ಮತ್ತು (೧೨) ಸೂತಸಂಹಿತಾ ಅಥವಾ ಬ್ರಹ್ಮಗೀತಾ (ದೀಪಿಕಾ) ಈ ಹನ್ನೆರಡು ಗ್ರಂಥಗಳು ಎರಡನೆಯ ಭಾಗಕ್ಕೆ ಸೇರುತ್ತವೆ.

### ೧. ಪರಾಶರಮಾಧವೀಯ

ಇದಕ್ಕೆ ಪರಾಶರಸ್ಮೃತಿವ್ಯಾಖ್ಯಾನವೆಂದೂ ಹೆಸರು. ಮೇಲೆ ಹೇಳಿದ ಗ್ರಂಥ ರಾಶಿಯಲ್ಲಿ ಇದಕ್ಕೆ ಜ್ಯೇಷ್ಠತ್ವವು ಕೊಡಲ್ಪಟ್ಟಿದೆ. ರಾಜಮಂತ್ರಿಪದವು ಪ್ರಾಪ್ತವಾದ ಮೇಲೆ ಐಹಿಕ ಮತ್ತು ಪಾರಲೌಕಿಕ ಆಚಾರಗಳ ಪ್ರವರ್ತಕಗಳೂ ಪ್ರಕಾಶಕಗಳೂ ಆದ ಸ್ಮೃತಿಪುರಾಣಗಳ ಜ್ಞಾನವನ್ನು ಸಾಮಾನ್ಯ ಜನರಿಗೆ ಮಾಡಿಕೊಡಬೇಕೆಂದು ಕಲಿಧರ್ಮ ಪ್ರತಿಪಾದಕವಾದ ಪರಾಶರಸ್ಮೃತಿಯ ವ್ಯಾಖ್ಯಾನವನ್ನು ಮಾಧವಾಚಾರ್ಯರು ಮೊದಲು ಆರಂಭಿಸಿದರು. ಈ ವ್ಯಾಖ್ಯಾನದ ಭೂಮಿಕೆಯಲ್ಲಿ 'ವಾಗೀಶಾದ್ಯಾ' ಎಂಬ ಶ್ಲೋಕದಿಂದ ವಿಘ್ನೇಶನಾಂದಿಯನ್ನು ಮಾಡಿ, ಬಳಿಕ ಗುರುಗಳನ್ನು ಸ್ಮರಿಸಿದ್ದಾರೆ. ಅದರಲ್ಲಿ ಈ ಕೆಲಸವನ್ನು ಕೈಕೊಳ್ಳುವ ಯೋಗ್ಯತೆಯು ತಮ್ಮಲ್ಲಿ ಹೇಗೆ ಬಂತೆಂಬು ದನ್ನು ತೀರ್ಥಸಪ್ತಕದ ವರ್ಣನೆಯ ಮುಖಾಂತರವಾಗಿ ಹೀಗೆ ಹೇಳಿದ್ದಾರೆ—

ಸೋಽಹಂ ಪ್ರಾಪ್ಯ ವಿವೇಕತೀರ್ಥಪದವೀಮಾಮ್ನಾಯತೀರ್ಥೇ ಪರಮ್ ।
ಮಜ್ಜನ್ ಸಜ್ಜನತೀರ್ಥಸಂಗನಿಪುಣಃ ಸದ್ವೃತ್ತತೀರ್ಥಂ ಶ್ರಯನ್ ॥
ಲಬ್ಧ್ವಾಕಲಯನ್ ಪ್ರಭಾವಲಹರೀಂ ಶ್ರೀ ಭಾರತೀತೀರ್ಥತೋ ।
ವಿದ್ಯಾತೀರ್ಥಮುಪಾಶ್ರಯನ್ಹೃದಿ ಭಜೇ ಶ್ರೀಕಂಠಮವ್ಯಾಹತಮ್ ॥

ಅರ್ಥ:-- ವೇದವಾಕ್ಯಗಳ ವಿವೇಚನೆಯನ್ನು ಮಾಡಿ ನಿಶ್ಚಿತಾರ್ಥವನ್ನು ಗೊತ್ತು ಪಡಿಸುವ ಪೂರ್ವೋತ್ತರ ಮೀಮಾಂಸಾತೀರ್ಥಗಳ ಮಾರ್ಗವು ಗೊತ್ತಾದ ಬಳಿಕ ಅದನ್ನು ದಾಟಿ ಆಮ್ನಾಯವೆಂದರೆ ಶ್ರುತಿತೀರ್ಥದಲ್ಲಿ ಯಥೇಚ್ಛವಾಗಿ ಮುಳುಮುಳುಗಿ ಎದ್ದುದರಿಂದ ಅದರ ತಳದಲ್ಲಿದ್ದ ಶುದ್ಧವಾದ ಅನೇಕ ಅಮೂಲ್ಯ ರತ್ನಗಳು ನನ್ನ ಕೈಗೆ ಸಿಕ್ಕವು. ಮತ್ತು ಇದರಂತೆಯೇ ಆಮ್ನಾಯ ತೀರ್ಥವನ್ನು ಮಂಥನಮಾಡಿ ಅರ್ಥರತ್ನ ಗಳನ್ನು ಹೊರಗೆ ತೆಗೆಯುವಂತಹ ಸಜ್ಜನರ ಸಮಾಗಮರೂಪವಾದ ಎರಡನೆಯ ತೀರ್ಥ ದಲ್ಲಿ ಸ್ನಾನ ಮಾಡಿ ನಾನು ವೇದರಹಸ್ಯದಲ್ಲಿ ನಿಷ್ಣಾತನಾದೆನು. ಆದುದರಿಂದ ನನಗೆ ಸದ್ವೃತ್ತತೀರ್ಥವು ಲಭಿಸಿತು. ನನ್ನ ಸತೀರ್ಥ್ಯರೂ ಗುರುಗಳೂ ಆದ ಭಾರತೀತೀರ್ಥ ರಿಂದ ಶ್ರುತಿಗಳ ಗೂಢಾರ್ಥವನ್ನು ತಿಳಿದುಕೊಳ್ಳುವ ಸಾಮರ್ಥ್ಯವು ನನಗೆ ಪ್ರಾಪ್ತ ವಾಯಿತು. ಗುರುವರ್ಯ ವಿದ್ಯಾತೀರ್ಥರ ಚರಣಗಳ ಆಶ್ರಯದಿಂದಲೇ ನನಗೆ ಅದು ದೊರೆಯಿತು. ಇದೆಲ್ಲಕ್ಕೂ ಮಹೇಶ್ವರತೀರ್ಥನ ಕೃಪೆಯೇ ಕಾರಣವಾದುದರಿಂದ ನಾನು ಆ ಮಹೇಶ್ವರನ ಚರಣಗಳನ್ನು ಯಾವಾಗಲೂ ಭಜಿಸುತ್ತೇನೆ.

ಪರಾಶರಮಾಧವೀಯ ಗ್ರಂಥದ ಟೀಕಾಕಾರರು ಈ ಶ್ಲೋಕವನ್ನು ವ್ಯಾಖ್ಯಾನಿ ಸುವ ಸಂದರ್ಭದಲ್ಲಿ ತೀರ್ಥ ಶಬ್ದದ ಅರ್ಥಗಳನ್ನು ಸ್ಪಷ್ಟಪಡಿಸುವದಕ್ಕೆ 'ವಿಶ್ವಕೋಶ' ದೊಳಗಿರುವ ಕೆಳಗಿನ ಶ್ಲೋಕವನ್ನು ಆಧಾರವಾಗಿ ಕೊಟ್ಟಿದ್ದಾರೆ.

ತೀರ್ಥಂ ಶಾಸ್ತ್ರಾಧ್ವರಕ್ಷೇತ್ರಪಾತ್ರೋಪಾಧ್ಯಾಯಮಂತ್ರಿಷು ।
ಅವತಾರರ್ಷಿಜುಷ್ಟಾಂಭಃ ಸ್ತ್ರೀರಜಸ್ಸು ಚ ವಿಶ್ರುತಮ್ ॥

ಇದರ ಮುಂದಿನ ಶ್ಲೋಕದಲ್ಲಿ ಬುಕ್ಕರಾಜನ ಸ್ತುತಿಯಿದೆ. ಅದರೊಳಗಿನ "ಸ್ಮಾರ್ತೋಚ್ಛ್ರಾಯಧುರಂಧರೋ ವಿಜಯತಾಂ ಶ್ರೀಬುಕ್ಕಣಕ್ಷ್ಮಾಪತಿಃ" ಎಂಬ ಚರಣವು ಅತ್ಯಂತ ಮಹತ್ವದ್ದು. ಇದರಿಂದ ಬುಕ್ಕರಾಜನು ಸ್ಮಾರ್ತಧರ್ಮದ ಜೀರ್ಣೋ ದ್ಧಾರದ ವಿಷಯದಲ್ಲಿ ಬದ್ಧಪರಿಕರನಾಗಿದ್ದನೆಂದು ತಿಳಿದುಬರುತ್ತದೆ. ಸಾಯಣಮಾಧ ವೀಯ ಪ್ರಚಂಡ ಗ್ರಂಥರಾಶಿಯ ಜನನಕ್ಕೆ ಇದೇ ಕಾರಣವು. ಇದರ ಮುಂದಿನ ಶ್ಲೋಕ ದಲ್ಲಿ, ತಾವು ಕುಲಗುರುಗಳಾಗಿದ್ದು ನೀತಿನಿಪುಣನಾದ ಬುಕ್ಕರಾಜನ ಮಂತ್ರಿಯಾದೆ ವೆಂಬ ಸಂಗತಿಯನ್ನು ಸ್ವಲ್ಪದರಲ್ಲಿ ಹೇಳಿದ್ದಾರೆ. ಅನಂತರ ತಮ್ಮ ಕುಲವೃತ್ತವನ್ನು ಕಥನಮಾಡಿ, ಪರಾಶರಸ್ಮೃತಿಯ ವ್ಯಾಖ್ಯಾನವನ್ನೇ ಮೊದಲು ಬರೆದದ್ದರ ಕಾರಣ ವನ್ನು ಒಂದು ಶ್ಲೋಕದಲ್ಲಿ ಹೇಳಿದ್ದಾರೆ. ಅದಾವುದೆಂದರೆ—

ಸ ಮಾಧವಃ ಸಕಲಪುರಾಣಸಂಹಿತಾ- |
ಪ್ರವರ್ತಕಃ ಸ್ಮೃತಿಸುಷುಮಾಪರಾಶರಃ ||
ಪರಾವರಸ್ಮೃತಜಗದೀಹಿತಾಪ್ತಯೇ |
ಪರಾಶರಸ್ಮೃತಿ ವಿವೃತೌ ಪ್ರವರ್ತತೇ ||

ಅರ್ಥ :– ಪುರಾಣಸಂಹಿತೆಯ ಪ್ರವರ್ತಕನೂ, ಸ್ಮೃತಿವೈಭವದ ಪ್ರಕಾಶಕನೂ ಆದ ಮಾಧವನು ಜಗತ್ತಿನ ಸ್ಮೃತ್ಯುಕ್ತವಾದ ಐಹಿಕ ಪಾರಲೌಕಿಕ ಇಷ್ಟವನ್ನು ದೊರಕಿಸುವದಕ್ಕಾಗಿ ಪರಾಶರಸ್ಮೃತಿಯ ವಿವರಣವನ್ನು ಆರಂಭಿಸುತ್ತಾನೆ.

'ಸುಷಮಾಪರಾಶರ' ಎಂಬುದಕ್ಕೆ ಟೀಕೆಯನ್ನು ಹೀಗೆ ಬರೆದಿದ್ದಾರೆ :

'ಸುಷಮಾ ಪರಾ ಶೋಭಾ ತಸ್ಯಾ ವ್ಯಾಖ್ಯಾನಾದಿದ್ವಾರಾ ಪರಾಶರಃ ಸಂಶಯ ವಿಪರ್ಯಾಸಾದಿಪರಾಕರಣಪೂರ್ವಕಂ ಪ್ರಸಾರಕಃ |'

ಈ ಗ್ರಂಥವಲ್ಲಿ ಧರ್ಮದ ಸೋಪಪತ್ತಿಕ ವಿವರಣೆಯಿರುವದರಿಂದ ಇದು ಧರ್ಮಶಾಸ್ತ್ರದಲ್ಲಿ ಪ್ರಮಾಣಭೂತವೆಂದು ಎಣಿಸಲ್ಪಡುತ್ತದೆ. ಇದು ಧರ್ಮಶಾಸ್ತ್ರವಿಷಯಕವಾದ ಮೊದಲನೆಯ ಗ್ರಂಥವಾದುದರಿಂದ, ಗ್ರಂಥಕರ್ತೃವು ಇದರ ಆರಂಭದಲ್ಲಿ ತನ್ನ ಸಂಗತಿಯನ್ನು ಸ್ವಲ್ಪ ವಿಸ್ತಾರವಾಗಿ ಹೇಳಿದ್ದಾನೆ. ಇದರ ಮುಂದಿನ ಗ್ರಂಥಗಳಲ್ಲಿ ತನ್ನ ವೃತ್ತಾಂತವನ್ನು ಇಷ್ಟರಮಟ್ಟಿಗೆ ಕೊಟ್ಟಿಲ್ಲ. ಕೆಲವೆಡೆಗಳಲ್ಲಿ ಮಾತ್ರ ಈ ಗ್ರಂಥದಲ್ಲಿ ಹೇಳಿದ ಕೆಲವಂಶದ ಅನುವಾದವು ಕಂಡುಬರುತ್ತದೆ.

## ೨. ಮನುಸ್ಮೃತಿವ್ಯಾಖ್ಯಾನ

ಈ ಗ್ರಂಥವು ನಮಗೆ ದೊರೆಯಲಿಲ್ಲವಾದುದರಿಂದ ಸದ್ಯಕ್ಕೆ ಯಾವ ಸಂಗತಿಯನ್ನೂ ಇದರ ವಿಷಯವಾಗಿ ಬರೆಯಲಾಸ್ಪದವಿಲ್ಲ.

## ೩. ನಾಲ್ಕೂ ವೇದಗಳ ಭಾಷ್ಯಗಳು

ಇವುಗಳಲ್ಲಿ ಮೊದಲಿನ ಮೂರು ವೇದಗಳ ಭಾಷ್ಯಗಳನ್ನು ವೀರಬುಕ್ಕನ ಕಾಲದಲ್ಲಿಯೂ, ಅಥರ್ವಣವೇದದ ಭಾಷ್ಯವನ್ನು ಬುಕ್ಕನ ಮಗನಾದ ಎರಡನೆಯ ಹರಿಹರನ ಕಾಲದಲ್ಲಿಯೂ ರಚಿಸಿದರು. ಈ ಭಾಷ್ಯಗಳನ್ನು ಬರೆದು ಪ್ರಸಿದ್ಧಿಸಬೇಕೆಂದು ವೀರಬುಕ್ಕನು ಆಜ್ಞೆ ಮಾಡಿದ್ದನು. ಈ ಸಂಬಂಧದ ಉಲ್ಲೇಖವು ಹಿಂದೆ ಒಂದೆಡೆಯಲ್ಲಿ ಬಂದಿದೆ.

## ೪. ಬ್ರಾಹ್ಮಣಭಾಷ್ಯಗಳು

ನಾಲ್ಕು ವೇದಗಳ ಮೇಲಿನ ಮುಖ್ಯ ಬ್ರಾಹ್ಮಣಗಳ ಭಾಷ್ಯಗಳು; ಅಂದರೆ ಐತರೇಯ ತಾಂಡ್ಯಾದಿಗಳು ಇವುಗಳಲ್ಲಿ ಸೇರುತ್ತವೆ.

ವೇದಬ್ರಾಹ್ಮಣ ಭಾಷ್ಯಗಳನ್ನು ರಚಿಸುವ ವಿಷಯದಲ್ಲಿ ಸಾಯಣಾಚಾರ್ಯರೇ ಮುಖ್ಯ ಸಹಾಯಕರು. ಇವರಲ್ಲದೆ ಇಪ್ಪತ್ತುನಾಲ್ಕು ಜನ ಪಂಡಿತರೂ, ಶ್ರೋತ್ರಿಯರೂ, ಅನೇಕ ವಿದ್ವಾಂಸರೂ ಈ ಕೆಲಸದಲ್ಲಿ ನಿಯೋಜಿತರಾಗಿದ್ದರು. ಅವರೆಲ್ಲರ ಸಹಾಯದಿಂದ, ಶ್ರೀ ವಿದ್ಯಾರಣ್ಯರ ವ್ಯವಸ್ಥಾಪಕತ್ವ ಮತ್ತು ಆಧಿಪತ್ಯದ ಕೆಳಗೆ ಈ ಭಾಷ್ಯಗಳು ಸಿದ್ಧವಾದುವು. ಈ ಅಗಾಧವ್ಯವಾದ ಕೆಲಸವು ಅನೇಕ ವರ್ಷಗಳವರೆಗೆ ನಡೆಯಿತು. ಕಡೆಗೆ ಮಾಧವಾಚಾರ್ಯರ ಅಗಾಧವಾದ ವಿದ್ವತ್ತೆಯ ಮೂಲಕ ಅತ್ಯುತ್ತಮ ರೀತಿಯಿಂದ ಪರಿಸಮಾಪ್ತಿಯನ್ನು ಪಡೆಯಿತು.

ಇವುಗಳ ಅನುಕ್ರಮವನ್ನಾದರೂ ಅವರೇ ಹೇಳಿದ್ದಾರೆ. ಅದನ್ನು ಈ ಮೊದಲೇ ಉಲ್ಲೇಖಿಸಿದ್ದೇವೆ. ಆದರೂ ವಿಷಯ ಸಂಗತಿಯು ಸುಗಮವಾಗುವದಕ್ಕಾಗಿ ಅದನ್ನು ಇಲ್ಲಿ ಮತ್ತೆ ಹೇಳುವದು ಅವಶ್ಯವೆಂದು ತೋರುತ್ತದೆ.

ಅಧ್ವರ್ಯವಸ್ಯ ಯಜ್ಞೇಸು ಪ್ರಾಧಾನ್ಯಾದ್ವ್ಯಾಕೃತಂ ಪುರಾ ।
ಯಜುರ್ವೇದೋಽಥ ಹೋತ್ರಾರ್ಥಮೃಗ್ವೇದೋ ವ್ಯಾಕರಿಷ್ಯತೇ ॥

ತಾಂಡ್ಯಮಹಾಬ್ರಾಹ್ಮಣ ಭೂಮಿಕೆಯಲ್ಲಿ ಅನುಕ್ರಮದರ್ಶಕ ಶ್ಲೋಕವು ಹೀಗೆ ಇದೆ—

ವ್ಯಾಖ್ಯಾತಾವೃಗ್ಯಜುರ್ವೇದೌ ಸಾಮವೇದೋಽಪಿ ಸಂಹಿತಾ ।
ವ್ಯಾಖ್ಯಾತಾ ಬ್ರಾಹ್ಮಣವ್ಯಾಖ್ಯಾಂ ಕರೋಮ್ಯೃದ್ಯಾಗ್ನತ್ಯಬುದ್ಧಯೇ ॥

ತೈತ್ತಿರೀಯ ಬ್ರಾಹ್ಮಣಗಳ ವಿಷಯದಲ್ಲಿ, ತದ್ಭಾಷ್ಯಭೂಮಿಕೆಯಲ್ಲಿ ಅನುಕ್ರಮ ಶ್ಲೋಕವು ಹೀಗೆ ಇದೆ—

ವ್ಯಾಖ್ಯಾತಾ ಸುಖಬೋಧಾರ್ಥಂ ತೈತ್ತಿರೀಯಕಸಂಹಿತಾ ।
ತದ್ಬ್ರಾಹ್ಮಣಂ ವ್ಯಾಕರಿಷ್ಯೇ ಸುಖೇನಾರ್ಥವಿಬುದ್ಧಯೇ ॥

ತೈತ್ತಿರೀಯಾರಣ್ಯಕ ಭಾಷ್ಯಭೂಮಿಕೆಯಲ್ಲಿ ಅನುಕ್ರಮವು ಈ ಪ್ರಕಾರ ಹೇಳಲ್ಪಟ್ಟದೆ—

ವ್ಯಾಖ್ಯಾತಾ ಸುಖಬೋಧಾರ್ಥ ತೈತ್ತಿರೀಯಕಸಂಹಿತಾ ।
ತದ್ಬ್ರಾಹ್ಮಣಂ ಚ ವ್ಯಾಖ್ಯಾತಂ ಶಿಷ್ಟಮಾರಣ್ಯಕಂ ತದಾ ॥

ಈ ಶ್ಲೋಕಗಳ ಮೇಲಿಂದ ವೇದಾರ್ಥಪ್ರಕಾಶರೂಪವಾದ ಗ್ರಂಥಗಳ ಅನುಕ್ರಮವು ಗೊತ್ತಾಗುತ್ತದೆ. ಅದು ಹೇಗೆಂದರೆ :– (೧) ಯಜುರ್ವೇದ ಅರ್ಥಾತ್ ಶುಕ್ಲಯಜುರ್ವೇದ ಸಂಹಿತಾಭಾಷ್ಯ, (೨) ಋಗ್ವೇದ ಸಂಹಿತಾಭಾಷ್ಯ, (೩) ಸಾಮವೇದ ಸಂಹಿತಾಭಾಷ್ಯ, (೪) ತಾಂಡ್ಯಮಹಾಬ್ರಾಹ್ಮಣಭಾಷ್ಯ, (೫) ತೈತ್ತಿರೀಯಕ ಸಂಹಿತಾ, (೬) ತೈತ್ತಿರೀಯಕ ಬ್ರಾಹ್ಯಣಭಾಷ್ಯ, (೭) ತೈತ್ತಿರೀಯಕಾರಣ್ಯಕ ಭಾಷ್ಯ, (೮) ಅಥರ್ವವೇದ ಭಾಷ್ಯ.

ಅಥರ್ವವೇದಭಾಷ್ಯದ ಉಲ್ಲೇಖವು ಮೇಲಿನ ಶ್ಲೋಕಗಳಲ್ಲಿಲ್ಲ. ಆದರೂ ಈ ಭಾಷ್ಯವು ಬುಕ್ಕಸುತನಾದ ಎರಡನೆಯ ಹರಿಹರನ ಕಾಲದಲ್ಲಿ ರಚಿತವಾಯಿತೆಂದು ಪ್ರಸಿದ್ಧಿಯುಂಟು.

## ೫. ಜೈಮಿನೀಯ ನ್ಯಾಯಮಾಲಾ ವಿಸ್ತರ

ಪರಾಶರಸ್ಮೃತಿವ್ಯಾಖ್ಯಾನವನ್ನು ಬರೆದ ಬಳಿಕ ಈ ಗ್ರಂಥವನ್ನು ಬರೆದರೆಂಬುದು ಇದರ ಪ್ರಸ್ತಾವನೆಯೊಳಗಿರುವ ಕೆಳಗಿನ ಶ್ಲೋಕದಿಂದ ಸ್ಪಷ್ಟವಾಗುತ್ತದೆ :

ಶ್ರುತಿಸ್ಮೃತಿಸದಾಚಾರಪಾಲಕೋ ಮಾಧವೋ ಬುಧಃ |
ಸ್ಮಾರ್ತಂ ವ್ಯಾಖ್ಯಾಯ ಸರ್ವಾರ್ಥಂ ದ್ವಿಜಾರ್ಥಂ ಶ್ರೌತ ಉದ್ಯತಃ ||

ಎಲ್ಲ ವರ್ಣಾಶ್ರಮಧರ್ಮದವರ ಉಪಯೋಗಕ್ಕಾಗಿ ಪುರಾಣಸಾರವಾದ ಪಾರಾಶರಸ್ಮೃತಿಗೆ ವ್ಯಾಖ್ಯಾನವನ್ನು ಬರೆದು ಸ್ಮಾರ್ತಧರ್ಮದ ಪ್ರತಿಪಾದನವನ್ನು ಮಾಡಿ ಆಯಿತು. ಇನ್ನು ದ್ವಿಜರ ವಿಶೇಷ ಉಪಯೋಗಕ್ಕಾಗಿ ಶ್ರೌತಧರ್ಮವ್ಯಾಖ್ಯಾನವನ್ನು ಆರಂಭಿಸಿದ್ದೇವೆ. ಹೀಗೆಂದು ಹೇಳಿ —

ಪ್ರಣಮ್ಯ ಪರಮಾತ್ಮಾನಂ ಶ್ರೀವಿದ್ಯಾತೀರ್ಥರೂಪಿಣಮ್ |
ಜೈಮಿನೀಯನ್ಯಾಯಮಾಲಾ ಶ್ಲೋಕೈಃ ಸಂಗೃಹ್ಯತೇ ಸ್ಫುಟಮ್ ||

ಈ ಪ್ರಕಾರ ಗುರುಗಳನ್ನು ನಮಸ್ಕರಿಸಿದ್ದಾರೆ.

ಈ ಗ್ರಂಥಕ್ಕೆ ಮೊದಲು 'ಜೈಮಿನೀಯನ್ಯಾಯಮಾಲಾ' ಎಂಬ ಹೆಸರಿತ್ತು. ಇದು ಪೂರ್ಣವಾದ ಬಳಿಕ ಬುಕ್ಕರಾಜನಿಗೆ ಇದನ್ನು ಕಾಣಿಕೆಯಾಗಿ ಕೊಟ್ಟರು. ಆಗ ಅವನು ಪ್ರಸನ್ನನಾಗಿ ಹೇಳಿದನೇನೆಂದರೆ— ಇದರ ಅರ್ಥವು ಇನ್ನೂ ವಿಶದವಾಗುವಂತೆ ಇದನ್ನು ವಿಸ್ತರಿಸಿರಿ. ಈ ಪ್ರಕಾರ ವಿಸ್ತರರೂಪವಾದ ಭಾಷ್ಯವನ್ನು ಇದಕ್ಕೆ ಸೇರಿಸಿದ ಬಳಿಕ 'ಜೈಮಿನೀಯನ್ಯಾಯಮಾಲಾವಿಸ್ತರ'ವೆಂಬ ಹೆಸರಿನಿಂದ ಇದು ಪ್ರಸಿದ್ಧವಾಯ್ತು. ಈ ವಿವರಣದಲ್ಲಿ ಶ್ರೀ ಭಾರತೀತೀರ್ಥರ ಕೃಪೆಯನ್ನು ಸ್ಮರಿಸಿದ್ದಾರೆ. ಇದರಲ್ಲಿ ಪೂರ್ವ ಮೀಮಾಂಸೆಯ ವ್ಯಾಖ್ಯಾನವಿದೆ. ಉತ್ತರಮೀಮಾಂಸೆಯ ವ್ಯಾಖ್ಯಾನವು ವೈಯಾಸಿಕನ್ಯಾಯಮಾಲೆಯಲ್ಲಿದೆ.

## ೬. ವೈಯಾಸಿಕನ್ಯಾಯಮಾಲಾ

ಇದನ್ನು ವೇದಾಂತಾಧಿಕರಣಮಾಲೆಯೆಂದೂ ಕರೆಯುತ್ತಾರೆ. ಈ ಗ್ರಂಥವು ಭಾರತೀತೀರ್ಥರದೆಂದು ಅನೇಕರು ತಿಳಿಯುತ್ತಾರೆ. ಆದರೆ ಇದು ಸಾಯಣಮಾಧವರೀಯವೇ ಎಂದು ತಿಳಿಯಲವಕಾಶವಿದೆ. ಸಾಯಣಮಾಧವರು ಇದನ್ನು ರಚಿಸಿ, ಭಾರತೀತೀರ್ಥರ ಹೆಸರಿನಿಂದ ಪ್ರಸಿದ್ಧಮಾಡಿದರೆಂದು ಪಂಡಿತರು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ವಿದ್ಯಾತೀರ್ಥ ಗುರುಗಳನ್ನು ವಂದಿಸಿದ್ದಾರೆ. ವಿದ್ಯಾತೀರ್ಥರು ಸೋಮನಾಥಭಾರತೀತೀರ್ಥರಿಗೂ, - ಮಾಧವಾಚಾರ್ಯ ವಿದ್ಯಾರಣ್ಯರಿಗೂ ಗುರುಗಳಾಗಿದ್ದರು.

ಇದುದರಿಂದಲೇ ಗ್ರಂಥಾದಿಯಲ್ಲಿ ಅವರ ಸ್ತುತಿಯಿದೆ. ಆದರೂ ಕೇವಲ ಗುರುನಾಮೋಲ್ಲೇಖದಿಂದ ಶಿಷ್ಯರ ಹೆಸರು ಸ್ಪಷ್ಟವಾಗುವದಿಲ್ಲ. ಗ್ರಂಥದ ಕೊನೆಯಲ್ಲಿ "ಶ್ರೀಭಾರತೀತೀರ್ಥ ಮುನಿಪ್ರಣೀತಾಯಾಂ" ಎಂದಿದೆ. ಆದರೂ ಕೃಷ್ಣಯಜುರ್ವೇದಾದಿ ಭಾಷ್ಯದಲ್ಲಿ—

ಯೇ ಪೂರ್ವೋತ್ತರಮೀಮಾಂಸೇ ತೇ ವ್ಯಾಖ್ಯಾಯಾತಿ ಸಂಗ್ರಹಾತ್ ।
ಕೃಪಾಲುರ್ಮಾಧವಾಚಾರ್ಯೋ ವೇದಾರ್ಥಂ ವಕ್ತುಮುದ್ಯತಃ ॥

ಹೀಗೆಂದು ಸಾಯಣಮಾಧವರು ಘಂಟಾಘೋಷವಾಗಿ ಹೇಳಿದ್ದಾರೆ. ಆದುದರಿಂದ ಈ ಗ್ರಂಥವು ಸಾಯಣಮಾಧವೀಯವೇ ಎಂದು ಊಹಿಸುವದಕ್ಕೆ ಅವಕಾಶವಿದೆ; ಮತ್ತು ಈ ಎರಡೂ ಮೀಮಾಂಸೆಗಳ ಹಾಗು ಶಾಂಕರದಿಗ್ವಿಜಯದ ಮಂಗಲಶ್ಲೋಕಗಳು ಬಹುಮಟ್ಟಿಗೆ ಒಂದೇ ಆಗಿವೆ. ಆದುದರಿಂದ ಈ ಮೂರೂ ಗ್ರಂಥಗಳು ಏಕಕರ್ತೃಕವಾಗಿರಬಹುದೆಂದು ತೋರುತ್ತದೆ.

ಶ್ರುತ್ಯರ್ಥಸಾಧನೀಭೂತವಾದ ಈ ಗ್ರಂಥದ್ವಯದ ವರ್ಗದಲ್ಲಿ ಎಣಿಸಬಹುದಾದ ಇನ್ನೂ ಕೆಲವು ಗ್ರಂಥಗಳು ಸಾಯಣಮಾಧವರಿಂದ ರಚಿತವಾಗಿವೆ. ಅವುಗಳ ಹೆಸರುಗಳನ್ನು ಸಾಯಣಮಾಧವರೇ ಯಜುರ್ವೇದ ಭಾಷ್ಯಭೂಮಿಕೆಯಲ್ಲಿ ಹೀಗೆ ಹೇಳಿದ್ದಾರೆ—

ಬ್ರಾಹ್ಮಣಂ ಕಲ್ಪಸೂತ್ರೇ ದ್ವೇ ಮೀಮಾಂಸಾಂ ವ್ಯಾಕೃತಿಂ ತಥಾ ।
ಉದಾಹೃತ್ಯಾಥ ತೈಃ ಸರ್ವೈರ್ವೇದಾರ್ಥಃ ಸ್ಪಷ್ಟಮೀರ್ಯತೇ ॥

ಈ ಶ್ಲೋಕದಲ್ಲಿ ಮತ್ತೆ ಮೀಮಾಂಸೆಯನ್ನು ಹೇಳಿದ್ದಾರೆ. ವ್ಯಾಕೃತಿಯೆಂದರೆ ವ್ಯಾಕರಣವಿಷಯಕ ಗ್ರಂಥವು.

## ೭. ಕಾಲಮಾಧವ

## ೮. ವ್ಯವಹಾರಮಾಧವ

ಇವೆರಡೂ ಗ್ರಂಥಗಳ ವಿಷಯದಲ್ಲಿ ಯಾವ ಹೆಚ್ಚಿನ ಸಂಗತಿಯನ್ನು ಬರೆಯುವದೂ ಸದ್ಯಕ್ಕೆ ಸಾಧ್ಯವಿಲ್ಲ. ಕಾಲಮಾಧವವು ಧರ್ಮಶಾಸ್ತ್ರವಿಷಯಕವಾದ ಗ್ರಂಥವು.

## ೯. ಮಾಧವೀಯ ಧಾತುವೃತ್ತಿ

ಇದು ವ್ಯಾಕರಣವಿಷಯಕವಾದ ಗ್ರಂಥವು. ಇದರೊಳಗಿನ ಪ್ರತಿಯೊಂದು ಗಣದ ಸಮಾಪ್ತಿಯಲ್ಲಿ—

" ಇತಿ ಶ್ರೀಪೂರ್ವದಕ್ಷಿಣಪಶ್ಚಿಮಸಮುದ್ರಾಧೀಶ್ವರಶ್ರೀಕಂಪರಾಜಸುತಸಂಗಮಮಹಾರಾಜಮಹಾಮಂತ್ರಿಣಾ ಮಾಯಣಸುತೇನ ಮಾಧವಸಹೋದರೇಣ ಸಾಯಣಾಚಾರ್ಯೇಣ ವಿರಚಿತಾಯಾಂ ಮಾಧವೀಯಾಯಾಂ ಧಾತುವೃತ್ತೌ ।"

ಎಂದಿದೆ. ಮತ್ತು ಗ್ರಂಥಾರಂಭದಲ್ಲಿ ಈ ಶ್ಲೋಕಗಳಿವೆ.

ಸ್ವಸ್ತಿ ಶ್ರೀಸಂಗಮಕ್ಷ್ಮಾಪಾ ಪೃಥ್ವೀತಲಪುರಂದರಃ ।
ಯತ್ಕೀರ್ತಿಮೌಕ್ತಿಕಾದರ್ಶೇ ತ್ರಿಲೋಕ್ಯಾ ಪ್ರತಿಬಿಂಬ್ಯತೇ ॥
ತಸ್ಯ ಮಂತ್ರಿಶಿಖಾರತ್ನಮಸ್ತಿ ಮಾಯಣ ಸಾಯಣಃ ।
ತೇನ ಮಾಯಣಪುತ್ರೇಣ ಸಾಯಣೇನ ಮನೀಷಿಣಾ ॥
ಆಖ್ಯಯಾ ಮಾಧವೀಯೇಯಂ ಧಾತುವೃತ್ತಿರ್ವಿರಚ್ಯತೇ ॥

ಇದರ ಅರ್ಥವು ಸ್ಪಷ್ಟವಾಗಿಯೇ ಇದೆ. ಇದರ ಮೇಲಿಂದ ಕಂಪಣಸುತನಾದ ಸಂಗಮನು ವಿಜಯನಗರದ ಅಥವಾ ಅದರ ಕೆಲವೊಂದು ಭಾಗದ ರಾಜ್ಯಕಾರಭಾರವನ್ನು ನಡೆಯಿಸುತ್ತಿದ್ದನೆಂದೂ ಸಾಯಣಾಚಾರ್ಯರು ಆತನ ಮಂತ್ರಿಯಾಗಿದ್ದರೆಂದೂ ಗೊತ್ತಾಗುತ್ತದೆ. ಆದುದರಿಂದ ಸಾಯಣಾಚಾರ್ಯರು ಈ ಗ್ರಂಥವನ್ನು ತಾವೇ ಬರೆದು ಮಾಧವಾಚಾರ್ಯರ ಹೆಸರಿನಿಂದ ಪ್ರಸಿದ್ಧಪಡಿಸಿದಂತೆ ಕೆಲವರು ಹೇಳುತ್ತಾರೆ.

## ೧೦. ವಿವರಣಪ್ರಮೇಯ

## ೧೧. ಬ್ರಹ್ಮವಿದಾಶೀರ್ವಾದ ಪದ್ಧತಿ

ಈ ಗ್ರಂಥಗಳ ವಿಷಯದಲ್ಲಿಯೂ ಯಾವ ಸಂಗತಿಯನ್ನೂ ಬರೆಯಲು ಸದ್ಯಕ್ಕೆ ಸಾಧನಗಳಿಲ್ಲ.

## ೧೨. ಸೂತಸಂಹಿತಾ ಅಥವಾ ಬ್ರಹ್ಮಗೀತಾ (ದೀಪಿಕಾ)

ಇದರ ಮೇಲಿನ ತಾತ್ಪರ್ಯದೀಪಿಕೆಯಲ್ಲಿ ಹೀಗೆ ಉಲ್ಲೇಖವಿದೆ —

ಶ್ರೀಮತ್ಕಾಶೀವಿಲಾಸಾಖ್ಯಕ್ರಿಯಾಶಕ್ತೀಶಸೇವಿನಾ ।
ಶ್ರೀಮತ್ತ್ರ್ಯಂಬಕಪಾದಾಬ್ಜಸೇವಾನಿಷ್ಣಾತಚೇತಸಾ ॥
ವೇದಶಾಸ್ತ್ರಪ್ರತಿಷ್ಠಾತ್ರಾ ಶ್ರೀಮನ್ಮಾಧವಮಂತ್ರಿಣಾ ।
ತಾತ್ಪರ್ಯದೀಪಿಕಾ ಸೂತಸಂಹಿತಾಯಾ ವಿಧೀಯತೇ ॥

ಇದರಿಂದ ವೇದಶಾಸ್ತ್ರಪ್ರತಿಷ್ಠಾಪನೆಯನ್ನು ಮಾಡಿದ ಮಾಧವ ಮಂತ್ರಿಯು ಇದನ್ನು ರಚಿಸಿದನೆಂದು ಕಂಡುಬರುತ್ತದೆ. ಆದುದರಿಂದ ವೇದಭಾಷ್ಯಗಳನ್ನು ಬರೆದ ಮೇಲೆ ತಾವು ಆಶ್ರಮಾಂತರ ಮಾಡುವ ಪೂರ್ವದಲ್ಲಿಯೇ ಇದನ್ನು ರಚಿಸಿರಬೇಕೆಂದು ತೋರುತ್ತದೆ. ಆದರೆ ವಿದ್ಯಾರಣ್ಯಸಮಕಾಲೀನನೂ, ತತ್ತುಲ್ಯವಿದ್ವಾಂಸನೂ ಆದ ಮಾಧವ ಎಂಬ ಎರಡನೆಯ ಸಚಿವನು ಬುಕ್ಕರಾಜನ ಆಶ್ರಯದಲ್ಲಿದ್ದನು. ಅವನಾದರೂ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಇದೊಂದಾಗಿರಬಹುದೆಂದು ಬಹು ಜನ ವಿದ್ವಾಂಸರು ಊಹಿಸುತ್ತಾರೆ. ಪಂಡಿತ ವಾಮನಶಾಸ್ತ್ರಿ ಇಸಲಾಮಪುರಕರ ಇವರು ಇದು ಶ್ರೀ ವಿದ್ಯಾರಣ್ಯರದಲ್ಲವೆಂದೂ, ಬೇರೆ ಯಾವನೋ ಒಬ್ಬ ಮಾಧವನಾಮಾಂಕಿತ

ವೆಂದೂ ಪ್ರತಿಪಾದಿಸುತ್ತಾರೆ. ನಮನದ ಮೇಲಿಂದ ನೋಡಿದರೆ ಈ ಗ್ರಂಥವು ಕಾಶಿಯಲ್ಲಿ ರಚಿತವಾಗಿರಬೇಕೆಂದು ತೋರುತ್ತದೆ. ವಿದ್ವಾಂಸರು ಚಿಕಿತ್ಸಕ ಬುದ್ಧಿಯಿಂದ ಈ ಗ್ರಂಥಗಳನ್ನು ಪರಿಶೋಧಿಸಿ ನಿಶ್ಚಿತಾಭಿಪ್ರಾಯವನ್ನು ಪ್ರಕಟಿಸುವರೆಂದು ಆಶಿಸುತ್ತೇನೆ. ಮಾಧವಮಂತ್ರಿಯ ವೃತ್ತಾಂತವನ್ನು ಮುಂದೆ ಪೂರಕಪ್ರಕರಣದಲ್ಲಿ ಕೊಡುವೆವು.

---

# ಮೂರನೆಯ ಭಾಗ

## ವೈರಾಗ್ಯಜ್ಞಾನಪ್ರಧಾನವಾದ ಗ್ರಂಥಗಳು

ಈ ಭಾಗದಲ್ಲಿ ಸೇರುವ ಗ್ರಂಥಗಳೆಲ್ಲ ಜ್ಞಾನವೈರಾಗ್ಯಪರವಾಗಿದ್ದು ಬಹುತರವಾಗಿ ಎಲ್ಲವೂ 'ವಿದ್ಯಾರಣ್ಯ'ರೆಂಬ ಹೆಸರಿನಿಂದ ಅಂಕಿತವಾಗಿವೆ. ಇವು ಯಾವವೆಂದರೆ- (೧) ಜೀವನ್ಮುಕ್ತ-ವಿವೇಕ, (೨) ವೇದಾಂತಪಂಚದಶಿ, (೩) ಅನುಭೂತಿ ಪ್ರಕಾಶ, (೪) ದಶೋಪನಿಷದ್ದೀಪಿಕಾ, (೫) ಅಪರೋಕ್ಷಾನುಭೂತಿ, (೬) ಚಿಕ್ಕ ಚಿಕ್ಕ ಸ್ತೋತ್ರ ಮೊದಲಾದವುಗಳು.

### ೧. ಜೀವನ್ಮುಕ್ತಿವಿವೇಕ

ಶ್ರೀ ವಿದ್ಯಾರಣ್ಯರು ವೀರಬುಕ್ಕರಾಯನ ಹೇಳಿಕೆಯಂತೆ ಉಪನಿಷತ್ತುಗಳು, ಭಾಗವತ, ಗೀತೆ, ಯೋಗವಾಸಿಷ್ಠ ಮೊದಲಾದ ಗ್ರಂಥಗಳ ಆಧಾರದಿಂದ ಇದನ್ನು ರಚಿಸಿದರು. ಇದರ ಆರಂಭದಲ್ಲಿ ವಿದ್ಯಾತೀರ್ಥಮುನಿಗಳನ್ನು ನಮಸ್ಕರಿಸಿ ಕೂಡಲೇ ವಿಷಯವನ್ನು ಆರಂಭಿಸಿದ್ದಾರೆ.

### ೨. ವೇದಾಂತಪಂಚದಶಿ

ವೇದಾಂತಪರವಾದ ಈ ಬಹುಮಾನ್ಯ ಗ್ರಂಥವು ಶ್ರೀವಿದ್ಯಾರಣ್ಯರಿಂದಲೇ ರಚಿತವಾದುದೆಂದು ಪ್ರಾಚೀನ ಕಾಲದಿಂದಲೂ ಎಲ್ಲ ಜನರು ನಂಬುತ್ತ ಬಂದಿದ್ದಾರೆ. ಇದರಲ್ಲಿ ಹದಿನೈದು ಪ್ರಕರಣಗಳಿವೆ. ಅವುಗಳಲ್ಲಿ ಮೊದಲಿನ ಆರು ಪ್ರಕರಣಗಳನ್ನು ಶ್ರೀ ವಿದ್ಯಾರಣ್ಯರು ರಚಿಸಿದರೆಂದೂ, ಮುಂದಿನ ಒಂಬತ್ತು ಪ್ರಕರಣಗಳನ್ನು ಶ್ರೀಭಾರತೀತೀರ್ಥರು ಬರೆದು ಪೂರ್ಣಮಾಡಿದರೆಂದೂ ಶ್ರೀರಾಮಕೃಷ್ಣಯತಿ ಮತ್ತು ಅಚ್ಯುತರಾವ ಮೋಡಕ ಇವರು ತಮ್ಮ ಪಂಚದಶಿಯ ಟೀಕೆಯಲ್ಲಿ ಹೇಳಿದ್ದಾರೆ. ಈ ಭಾರತೀತೀರ್ಥರು ಯಾರೆಂಬ ವಿಷಯದಲ್ಲಿ ಪಂಡಿತರಲ್ಲಿ ಮತಭೇದಗಳಿವೆ. ಆದರೆ ಮಾಧವಾಚಾರ್ಯರ ಗೃಹಸ್ಥಾಶ್ರಮದ ಅನುಜರೂ ಚತುರ್ಥಾಶ್ರಮದ ಅಗ್ರಜಬಂಧುಗಳೂ ಆದ ಸೋಮನಾಥ ಭಾರತೀತೀರ್ಥರು ಈ ಗ್ರಂಥವನ್ನು ಪೂರ್ಣಮಾಡಿದರೆಂದು ತಿಳಿದರೆ, ವಾದವೇ ಉಳಿಯುವುದಿಲ್ಲವೆಂದು ನಮಗೆ ತೋರುತ್ತದೆ. ಶ್ರೀ ಬಾಪಟಶಾಸ್ತ್ರಿ ಇವರು ಬರೆದ ಪಂಚದಶಿಯ ಪ್ರಸ್ತಾವನೆಯಲ್ಲಿ ಈ ವಾದವನ್ನು ಉತ್ಸುಕತೆಯುಳ್ಳವರು ಓದಬಹುದು. ಮೊದಲಿನ ಆರು ಪ್ರಕರಣಗಳ ಆರಂಭದಲ್ಲಿ ಶ್ರೀಶಂಕರಾನಂದ ಗುರುಗಳನ್ನು ನಮಸ್ಕರಿಸಿದ್ದಾರೆ. ಆದುದರಿಂದ ಈ ಗ್ರಂಥವು ಶ್ರೀವಿದ್ಯಾತೀರ್ಥರ ಸಮಾಧಿಯ ನಂತರ ಅಂದರೆ ಶಕೆ ೧೩೦೬ ರ ಅನಂತರ ರಚಿತವಾಗಿರಬಹುದೆಂದು ತೋರಬಹುದು. ಆದರೆ ಹಾಗೆ

ನಿಶ್ಚಿತವಾಗಿ ಹೇಳಲಾಗುವದಿಲ್ಲ. ಸಾಯಣಮಾಧವೀಯ ಇತರ ಗ್ರಂಥಗಳಲ್ಲಿಯೂ ಶ್ರೀಶಂಕರಾನಂದರನ್ನು ನಮಸ್ಕರಿಸಿದ್ದು ಕಂಡುಬರುತ್ತದೆ. ಈ ಗ್ರಂಥದ ಮುಂದಿನ ಒಂಬತ್ತು ಪ್ರಕರಣಗಳನ್ನು ಶ್ರೀಭಾರತೀತೀರ್ಥರು ರಚಿಸಿದರೆಂಬ ತಿಳಿವಳಿಕೆಯನ್ನು ಪ್ರಾಚೀನ ಮತ್ತು ಅರ್ವಾಚೀನ ಟೀಕಾಕಾರರು ಸಮರ್ಥಿಸಿದ್ದಾರೆ. "ನತ್ವಾ ಶ್ರೀಭಾರತೀತೀರ್ಥ ವಿದ್ಯಾರಣ್ಯಮುನೀಶ್ವರೌ" ಎಂದು ನಮನ ಮಾಡುವದು ಈ ಟೀಕಾಕಾರರ ಸಾಂಪ್ರದಾಯವು. ಇದರಲ್ಲಿ ಶ್ರೀಭಾರತೀತೀರ್ಥರ ಹೆಸರು ಮೊದಲು ಬಂದಿರುವದು, ವಿದ್ಯಾಗೌರವದರ್ಶಕವೇ ಹೊರತು ರಚನಾಕಾಲಕ್ರಮದರ್ಶಕವಲ್ಲ. ಶ್ರೀಭಾರತೀತೀರ್ಥರು ವಯಸ್ಸಿನಿಂದ ಶ್ರೀವಿದ್ಯಾರಣ್ಯರಿಗಿಂತ ಹಿರಿಯರಾಗಿರುವದು ಸಂಭವನೀಯವಾಗಿದೆ.

## ೩. ಅನುಭೂತಿಪ್ರಕಾಶ

ಇದರ ವಿಷಯದಲ್ಲಿ ಸದ್ಯಕ್ಕೆ ನಮಗೆ ಏನೂ ಗೊತ್ತಾಗಿಲ್ಲ.

## ೪. ದಶೋಪನಿಷದ್ದೀಪಿಕಾ

ಹಿಂದೆ ಒಂದೆಡೆಯಲ್ಲಿ ಹೇಳಿದ

ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ||
ನಿರ್ಮಮೇ ತಮಹಂ ವನ್ದೇ ವಿದ್ಯಾತೀರ್ಥಮಹೇಶ್ವರಮ್ ||

ಎಂಬ ಶ್ಲೋಕವೇ ಈ ಗ್ರಂಥದ ಆರಂಭದಲ್ಲಿಯೂ, ಜೀವನ್ಮುಕ್ತಿವಿವೇಕ, ಶಾಂಕರದಿಗ್ವಿಜಯಗಳ ಮೊದಲಲ್ಲಿಯೂ ಇದೆ. ಈ ಶ್ಲೋಕದೊಳಗಿನ ವಿದ್ಯಾತೀರ್ಥ ಎಂಬ ಪದವು ಶ್ರೀಗುರುವಿಗೂ, ಶ್ರೀಮಹೇಶ್ವರನಿಗೂ ಸರಿಯಾಗಿಯೇ ಸಂಬಂಧಿಸುತ್ತದೆ. ತಿಳಿವಳಿಕೆಯುಳ್ಳವರು ಗುರುವಿನಲ್ಲಿಯೂ ಈಶ್ವರನಲ್ಲಿಯೂ ಭೇದವನ್ನು ಎಣಿಸುವದಿಲ್ಲ. ಈ ಪುಸ್ತಕದ ಆರಂಭದಲ್ಲಿ ಕೊಟ್ಟ "ಗುರುರ್ಬ್ರಹ್ಮಾ" ಎಂಬ ಶ್ಲೋಕವು ಇದೇ ಅರ್ಥವನ್ನೇ ಸ್ಪಷ್ಟಪಡಿಸುತ್ತದೆ. ಹತ್ತೂ ಉಪನಿಷತ್ತುಗಳ ಮೇಲಿನ ಟೀಕೆಯು ಈ ಗ್ರಂಥದಲ್ಲಿದೆ.

## ೫. ಅಪರೋಕ್ಷಾನುಭೂತಿ

ಮೂಲ ಗ್ರಂಥವು ಶ್ರೀ ಶಂಕರಾಚಾರ್ಯರದು. ಅದರ ಮೇಲೆ ಶ್ರೀ ವಿದ್ಯಾರಣ್ಯರು ಟೀಕೆಯನ್ನು ಬರೆದಿದ್ದಾರೆ.

## ೬. ಚಿಕ್ಕ ಚಿಕ್ಕ ಸ್ತೋತ್ರ ಮೊದಲಾದವುಗಳು

ದೇವ್ಯಪರಾಧಕ್ಷಮಾಪನಸ್ತೋತ್ರ, ಗುರುರತ್ನಮಾಲಾ, ಶಿವಾಪರಾಧಕ್ಷಮಾಪನ ಸ್ತೋತ್ರ ಮೊದಲಾದವುಗಳು ಇದರಲ್ಲಿ ಸೇರುತ್ತವೆ.

ಇಲ್ಲಿಯ ವರೆಗೆ ಸಾಯಣಮಾಧವೀಯವೆಂದು ಕರೆಯಿಸಿಕೊಳ್ಳುವ ಉಪಲಬ್ಧವಾದ ಹಾಗು ಅನುಪಲಬ್ಧವಾದ ಗ್ರಂಥಗಳ ವರ್ಗೀಕರಣವನ್ನು ಮಾಡಿದಂತಾಯಿತು. ಶೇಕ್ಸಪಿಯರನ ನಾಟಕಗಳಲ್ಲಾದರೂ ಇದೇ ಪ್ರಕಾರದ ಭಾಗಗಳನ್ನು ಮಾಡಲಿಕ್ಕೆ

ಬರುತ್ತದೆ. ಅವನ ಮೊದಲನೆಯ ಭಾಗದ ಗ್ರಂಥಗಳಲ್ಲಿ ಮನೋರಂಜನ ಮತ್ತು ಮನಃಸಂಸ್ಕಾರ ಪ್ರಧಾನವಾದವುಗಳೂ, ಎರಡನೆಯ ಭಾಗದಲ್ಲಿ ವ್ಯವಹಾರ ಪ್ರಧಾನವಾದವುಗಳೂ, ಮೂರನೆಯ ಭಾಗದಲ್ಲಿ ವೈರಾಗ್ಯ ಪ್ರಧಾನವಾದ ಗ್ರಂಥಗಳೂ ಸೇರುತ್ತವೆ. ಗ್ರಂಥಕರ್ತೃವಿನ ಅಂತಃಕರಣ ಮತ್ತು ಅನುಭವದ ಪ್ರತಿಬಿಂಬವು ಅವನ ಗ್ರಂಥಗಳಲ್ಲಿ ಮೂಡುತ್ತದೆ.

ಜರ್ಮನ್ ಪಂಡಿತನಾದ ಆಫ್ರೆಟ (Aufrecht) ಎಂಬವನು ಸಂಸ್ಕೃತ ಗ್ರಂಥಗಳ ಒಂದು ಪ್ರಚಂಡವಾದ ಪಟ್ಟಿಯನ್ನು ಪ್ರಸಿದ್ಧಪಡಿಸಿದ್ದಾನೆ. ಅದರಲ್ಲಿ ಸಾಯಣನ ಹೆಸರಿನಿಂದ ೧೧೩ ಗ್ರಂಥಗಳು ಉಲ್ಲೇಖಿತವಾಗಿವೆ. ಆದರೂ ಅದರಲ್ಲಿ ಸಾಯಣ ಮಾಧವೀಯ ಗ್ರಂಥಗಳೆಲ್ಲವೂ ಸಮಾವಿಷ್ಟವಾಗಿಲ್ಲ. ಇಷ್ಟೇ ಅಲ್ಲ; ಆ ಪಟ್ಟಿಯೊಳಗಿನ ಗ್ರಂಥಗಳಲ್ಲಿ ಮಾಧವ ಮಂತ್ರಿಯಂತಹ ಬೇರೆ ವಿದ್ವಾಂಸರ ಗ್ರಂಥಗಳೂ ಸೇರಿಲ್ಲವೆಂದು ಹೇಳಲಿಕ್ಕೆ ಬರುವಂತಿಲ್ಲ. ಅದಿರಲಿ. ವಾಚಕರ ಸಮಾಧಾನಕ್ಕಾಗಿ ಅವುಗಳೊಳಗಿನ ಕೆಲವು ಗ್ರಂಥಗಳ ಹೆಸರುಗಳನ್ನು ಇದರಡಿಯಲ್ಲಿ ಕೊಡುತ್ತೇವೆ :

(೧) ಅನುಭೂತಿಪ್ರಕಾಶ, (೨) ಸರ್ವೋಪನಿಷದರ್ಥಪ್ರಕಾಶ, (೩) ಆಚಾರ ಮಾಧವೀಯ, (೪) ಆತ್ಮಾನಾತ್ಮವಿವೇಕ, (೫) ಆಧಾನಯಜ್ಞತಂತ್ರ, (೬) ಆಶ್ವಲಾಯನದರ್ಶಪೂರ್ಣಮಾಸಸೂತ್ರಭಾಷ್ಯ, (೭) ಉಪಗ್ರಂಥಸೂತ್ರವೃತ್ತಿ, (೮) ಕಾಠಕ ಭಾಷ್ಯ, (೯) ಕೈವಲ್ಯೋಪನಿಷದ್ದೀಪಿಕಾ, (೧೦) ಐತರೇಯಬ್ರಾಹ್ಮಣಭಾಷ್ಯ, (೧೧) ಐತರೇಯೋಪನಿಷದ್ಭಾಷ್ಯ, (೧೨) ಐತರೇಯಾರಣ್ಯಕಭಾಷ್ಯ, (೧೩) ಕೌಶೀತಕ್ಯುಪನಿಷದ್ಭಾಷ್ಯ, (೧೪) ಗೋತ್ರಪ್ರವರನಿರ್ಣಯ, (೧೫) ಗೋಭಿಲಗೃಹ್ಯ ಸೂತ್ರಭಾಷ್ಯ, (೧೬) ಚರಣವ್ಯೂಹಭಾಷ್ಯ, (೧೭) ಜಾತಿವಿವೇಕಶತಪ್ರಶ್ನ, (೧೮)ಜ್ಞಾನಯೋಗಖಂಡಭಾಷ್ಯ, (೧೯)ದಕ್ಷಿಣಾಮೂರ್ತ್ಯಷ್ಟಕ ಟೀಕಾ, (೨೦)ದತ್ತಕ ಮೀಮಾಂಸಾ, (೨೧) ದರ್ಶಪೂರ್ಣಮಾಸಪ್ರಯೋಗ, (೨೨) ಪಂಚರುದ್ರೀಯ ಟೀಕಾ, (೨೩) ಪ್ರಮೇಯಸಾರಸಂಗ್ರಹ, (೨೪) ಪುರುಷಸೂಕ್ತಟೀಕಾ, (೨೫) ಪ್ರಮೇಯಸಾರಸಂಗ್ರಹ, (೨೬) ಬೌಧಾಯನಶ್ರೌತಸೂತ್ರವ್ಯಾಖ್ಯಾ, (೨೭) ಭಗವದ್ಗೀತಾ ಭಾಷ್ಯ, (೨೮) ಮಹಾವಾಕ್ಯನಿರ್ಣಯ, (೨೯) ಶತಪಥಬ್ರಾಹ್ಮಣಭಾಷ್ಯ, (೩೦) ಸಂಧ್ಯಾಭಾಷ್ಯ, (೩೧) ಸಾಮಬ್ರಾಹ್ಮಣಭಾಷ್ಯ, (೩೨) ಹರಿಸ್ತುತಿಟೀಕಾ.

ಮೇಲಿನ ಗ್ರಂಥಗಳನ್ನು ನೋಡಿದರೆ, ಹಿಂದೆ ಹೇಳಿದ ರೀತಿಗಿಂತ ಬೇರೆ ವಿಧವಾದ ವರ್ಗೀಕರಣವು ಮನಸ್ಸಿನಲ್ಲಿ ಬರುತ್ತದೆ. ಕರ್ಮ, ಉಪಾಸನೆ, ಜ್ಞಾನ ಎಂದು ಸನಾತನ ಧರ್ಮದಲ್ಲಿ ಮೂರು ವಿಭಾಗಗಳಿವೆ. ಅದರಂತೆಯೇ ಈ ಗ್ರಂಥಗಳಾದರೂ ತ್ರಿವಿಧವಾಗಿವೆ. ಅಂದರೆ ಕೆಲವು ಕರ್ಮ ಪ್ರಧಾನವಾಗಿಯೂ, ಕೆಲವು ಉಪಾಸನಾಪ್ರಧಾನವೂ, ಇನ್ನೂ ಕೆಲವು ಜ್ಞಾನಪ್ರಧಾನವಾಗಿಯೂ ಇವೆ.

———

# ೯. ಉಪಸಂಹಾರ

ಸ್ವಾಮಿಗಳಂತಹ ಚರಿತ್ರೆಯ ಉಪಸಂಹಾರವನ್ನು ಬರೆಯುವದು ಸಾಮಾನ್ಯವಾದ ಮಾತಲ್ಲ. ಅವರ ಚರಿತ್ರೆಯು ಇನ್ನೂ ಹೆಚ್ಚು ಹೆಚ್ಚು ವಿಶದವಾಗಿ ತಿಳಿದಂತೆ ಅದರ ಉಪಸಂಹಾರವನ್ನು ಬರೆಯುವದು ಕಠಿಣವಾಗುವದಲ್ಲದೆ, ಅದು ಹೆಚ್ಚು ಹೆಚ್ಚಾಗಿ ಮನನೀಯವೂ ಬೋಧಪ್ರದವೂ ಆಗುವದು. ತಿಳಿದಮಟ್ಟಿಗೆ ಚರಿತ್ರ ಲೇಖನ ಕಾರ್ಯವನ್ನೇನೋ ಮುಗಿಸಿಬಿಟ್ಟೆವು; ಇನ್ನು ಉಪಸಂಹಾರ ಲೇಖನವೂ ನಮ್ಮ ಮೇಲೆಯೇ ಬಿದ್ದುದಕ್ಕಾಗಿ ಹಳಹಳಿಸಬೇಕಾಗಿದೆ. ವಾಸ್ತವಿಕವಾಗಿ ವಿಚಾರ ಮಾಡಿದರೆ, ಈ ಚರಿತ್ರವನ್ನು ಬರೆಯುವ ಕೆಲಸವನ್ನು ಪರಿಶೋಧಕ ಬುದ್ಧಿಯುಳ್ಳ ವಿದ್ವಾಂಸರಾದ ಇತಿಹಾಸಾಭಿಮಾನಿಗಳು ಕೈಕೊಳ್ಳುವದು ಅವಶ್ಯವಿತ್ತು. ಆದರೆ ಅಂತಹ ಒಬ್ಬ ಮಹನೀಯರು ಕೂಡ ಇತ್ತಕಡೆಗೆ ಲಕ್ಷ್ಯಗೊಡಲಿಲ್ಲವೆಂದು ವಿಷಾದಿಸಬೇಕಾಗಿದೆ. ನಮ್ಮ ಕರ್ಣಾಟಕದ ವಿದ್ವಾಂಸರು ಇಷ್ಟರಮಟ್ಟಿಗೆ ಅಭಿಮಾನಶೂನ್ಯರಾಗಿರಬಹುದೆಂಬ ಕಲ್ಪನೆಯು ನಮ್ಮಲ್ಲಿದ್ದಿಲ್ಲ. ಯೋಗ್ಯತೆಯನ್ನೂ, ಪದವಿಗಳನ್ನೂ ಕಣ್ಣಾರೆ ಕಂಡು ಕಿವಿಯಾರೆ ಕೇಳಿ ಪತ್ರಮುಖದಿಂದ ಬಿನ್ನಹಮಾಡಿಕೊಂಡರೆ, ವಾಗ್ಭೂಷಣದ ಸಂಪಾದಕರಿಗೆ ಸಮಾಧಾನಕರವಾದ ಒಂದು ಉತ್ತರವು ಕೂಡ ಒಬ್ಬರಿಂದಲೂ ಬರಲಿಲ್ಲ. ಆದುದರಿಂದಲೇ, ಅಂದರೆ ಕನ್ನಡಿಗರಾದ ವಿದ್ವಾಂಸರ ಮೇಲೆ ವಿಶ್ವಾಸವನ್ನಿಟ್ಟದ್ದರಿಂದಲೇ ಈ ಸಂಚಿಕೆಯು ಹೊರಡಲು ಇಷ್ಟು ತಡವಾಯಿತು. ಮೊದಲೇ ಈ ಕೆಲಸವು ನಮ್ಮ ಮೇಲೆ ಬಿದ್ದಿದ್ದರೆ, ಸಂಪೂರ್ಣ ತೃಪ್ತಿಕರವಾಗಿಯಲ್ಲದಿದ್ದರೂ ಇದಕ್ಕಿಂತಲೂ ವ್ಯವಸ್ಥಿತ ರೀತಿಯಿಂದ ಇದೇ ಚರಿತ್ರೆಯನ್ನು ಬರೆಯಬಹುದಾಗಿತ್ತೆಂದು ನಮ್ಮಲ್ಲಿ ಆತ್ಮವಿಶ್ವಾಸವಿದೆ. ಬರೆಬರೆದಷ್ಟು ಪುಟಗಳನ್ನು ಮುದ್ರಣಕ್ಕೆ ಕೊಡುತ್ತ ಬಂದಿರುವದರಿಂದ ವಿಷಯ ಕ್ರಮ ವ್ಯತ್ಯಾಸವು ಕೆಲವೆಡೆಗಳಲ್ಲಿ ತೋರಬಹುದು; ಮತ್ತು ಅಲ್ಲಲ್ಲಿ ಅವ್ಯವಸ್ಥೆಯೂ ಗೋಚರವಾಗಬಹುದು. ಆದರೆ ಮಾಡತಕ್ಕುದೇನು ? ನಮ್ಮ ಕನ್ನಡ ಬಂಧುಗಳು ಈ ಅಲ್ಪಸೇವೆಯನ್ನೇ ಆನಂದದಿಂದ ಅಂಗೀಕರಿಸುವರೆಂದು ನಂಬಿದ್ದೇವೆ. ಕೇವಲ ಗುರುಗಳ ಮೇಲಿನ ಭಕ್ತಿಯಿಂದಲೇ ಈ ಕೆಲಸವನ್ನು ಕೈಕೊಂಡೆವು. ಇರಲಿ. ಈ ಪ್ರಕಾರ ಅನನುಕೂಲ ಪರಿಸ್ಥಿತಿಯು ಪ್ರಾಪ್ತವಾದ ಮೂಲಕ ಇನ್ನೂ ಕೆಲವು ಪುಸ್ತಕಗಳನ್ನು ನೋಡುವದಕ್ಕೆ ಅವಕಾಶವು ದೊರೆಯಲಿಲ್ಲ; ಉಪಾಯವಿಲ್ಲ ! ಆದರೆ ಉಪಸಂಹಾರ ಲೇಖನದ ವಿಷಯವಾಗಿ ಇಷ್ಟೊಂದು ಹೊಣೆಗಾರಿಕೆಯನ್ನು ನಾವು ಹೊರದಿದ್ದರೂ ನಡೆಯುತ್ತದೆ. ಯಾಕಂದರೆ, ವಿದ್ವಾಂಸರಾದ ವಾಚಕರು ಊಹೆಯಿಂದ ಅದನ್ನು ತಿಳಿಯಬಲ್ಲರು. ಎಷ್ಟೋ ಜನರು ಸ್ವತಂತ್ರ ರೀತಿಯಿಂದ ಚರ್ಚಿಸಬಲ್ಲರು. ಆದುದರಿಂದ ಅಂತಹರಿಗೆ ಆ ವಿಷಯದಲ್ಲಿ ವಿಜ್ಞಾಪನೆಯನ್ನು ಮಾಡಿಕೊಂಡರೆ ನಮ್ಮ ಕೆಲಸವು

ಅರ್ಥ ಮರ್ಥ ಪೂರ್ಣವಾದಂತಾಗುವದು. ಆದುದರಿಂದ ಈ ಪ್ರಕರಣದಲ್ಲಿ ನಾವೇನನ್ನೂ ಹೆಚ್ಚಾಗಿ ಹೇಳುವುದಿಲ್ಲ. ನಮಗೆ ತಿಳಿದಿರುವ ಒಂದೆರಡು ಮಾತುಗಳನ್ನು ಹೇಳಿ ವಿಚಾರಶೀಲರಾದ ವಾಚಕರಿಗೆ ವಿಜ್ಞಪ್ತಿಯನ್ನು ಮಾಡಿಕೊಳ್ಳುವೆವು.

ಒಂದು ದೇಶದ ಇತಿಹಾಸಕ್ಕೆ ಅಲ್ಲಿಯ ಪ್ರಸಿದ್ಧ ಪುರುಷರ ಜೀವನ ಚರಿತ್ರೆಯು ಮುಖ್ಯಾಂಗವೆನಿಸುವದು. ವ್ಯಷ್ಟಿದ್ವಾರದಿಂದ ಸಮಷ್ಟಿಯ ಸ್ವರೂಪವನ್ನು ಊಹಿಸುವದು ಐತಿಹಾಸಿಕ ಪದ್ಧತಿಯು. ಇಲ್ಲಿ ಸಮಷ್ಟಿಯೆಂದರೆ, ಬಹುಜನ ಕಾರ್ಯಗಳಾದ ರಾಜಕೀಯ ಅಥವಾ ಸಾಮಾಜಿಕ ಸಮಾರಂಭಗಳು. ವ್ಯಷ್ಟಿಯೆಂದರೆ ಅಂತಹ ಸಮಾರಂಭಗಳ ಮುಖ್ಯ ಪ್ರವರ್ತಕರಾದ ಹಲವು ಜನ ಗಣ್ಯಪುರುಷರು. ವಿಚಾರಮಾಡಿ ನೋಡಿದರೆ, ವಿಜಯನಗರದ ಪ್ರಾದುರ್ಭಾವವನ್ನು ಒಂದು ಬಹುಜನ ಸಮಾರಂಭವೆಂದೂ, ಶ್ರೀವಿದ್ಯಾರಣ್ಯಸ್ವಾಮಿಗಳವರನ್ನು ತತ್ಪ್ರವರ್ತಕರಾದ ಪ್ರಜಾಪ್ರಮುಖನೆಂದೂ ಭಾವಿಸಲು ಸಾಕಾದಷ್ಟು ಕಾರಣಗಳು ಕಾಣಬರುತ್ತವೆ. ಇಂದಿಗೆ ಆರು ಶತಾಬ್ದಗಳ ಹಿಂದೆ ಆರ್ಯಧರ್ಮವನ್ನು ಭೂಮುಖದಿಂದ ತೊಡೆದು ಹಾಕಲೆಂದು ಬಂದ ಮಹಮ್ಮದೀಯ ಮಹಾಪ್ರವಾಹಕ್ಕೆ ಅಡ್ಡಗಟ್ಟೆಯನ್ನು ಹಾಕಿ ಅದನ್ನು ತಡೆದು, ಸ್ವಸಾಮರ್ಥ್ಯದಿಂದ ನಿಲ್ಲುವ ಧೈರ್ಯ ಸ್ಥೈರ್ಯಗಳನ್ನು ಹಿಂದೂ ಸಮಾಜಕ್ಕುಂಟುಮಾಡಿಕೊಟ್ಟು, ವೇದಭಾಷ್ಯಾದ್ಯನೇಕ ಗ್ರಂಥನಿರ್ಮಾಪಕರಾಗಿ, ವೈದಿಕ ಲೌಕಿಕ ಧರ್ಮಗಳ ಸಮನ್ವಯವನ್ನು ತೋರಿಸಿಕೊಟ್ಟು, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೆಂದು ಹೆಸರ್ಗೊಂಡ ಆ ಮಹಾಮಹಿಮರ ಹೆಸರು, ಹಿಂದೂಗಳ ಮತಾಚಾರಚರಿತ್ರೆಯಲ್ಲಿ ಹೇಗೋ ಹಾಗೆಯೇ ಅವರ ರಾಜಕೀಯ ಚರಿತ್ರೆಯಲ್ಲಿಯೂ ಸರ್ವಸನ್ಮಾನ್ಯವಾಗಿ ಶಾಶ್ವತವಾಗಿ ಬೆಳಗುತ್ತಿರುವದು. ಅವರು ವೇದಶಾಸ್ತ್ರಜ್ಞರಾಗಿದ್ದಂತೆಯೇ ರಾಜ್ಯತಂತ್ರಜ್ಞರೂ ಆಗಿದ್ದರು; ಧರ್ಮಾಭಿಮಾನಿಗಳಾಗಿದ್ದಂತೆಯೇ ದೇಶಾಭಿಮಾನಿಗಳೂ ಆಗಿದ್ದರು. ಎರಡನೆಯವರಿಗೆ ಒಳ್ನಡೆಯನ್ನು ಉಪದೇಶ ಮಾಡುತ್ತಿದ್ದಂತೆಯೇ ತಾವೂ ನಡೆಯುತ್ತಿದ್ದರು; ಅಜ್ಞರಿಗೆ ಸಮ್ಮುಖದಲ್ಲಿಯೇ ಸುಜ್ಞಾನವನ್ನು ಬೋಧಿಸುತ್ತಿದ್ದಂತೆಯೇ ಸುಜ್ಞರಿಗಾಗಿ ಉತ್ತಮೋತ್ತಮ ಗ್ರಂಥಗಳನ್ನು ಬರೆದರು. ಇಂತಹರು ಆಗ ಹುಟ್ಟದೆ ಇದ್ದರೆ ಹಿಂದೂ ಸಮಾಜದ ಗತಿಯು ಏನಾಗುತ್ತಿತ್ತೆಂಬುದನ್ನು ಊಹಿಸುವದು ಕಷ್ಟವಾಗಿದೆ.

ಕೆಲವು ವರ್ಷಗಳಿಂದೀಚೆಗೆ ಭರತಖಂಡದ ನಾನಾಭಾಗಗಳಲ್ಲಿ 'ನ್ಯಾಶನಲಿಜಮ್' ಎಂಬ ಇಂಗ್ಲಿಷ ಶಬ್ದದಿಂದ ಸೂಚಿತವಾದ ಒಂದು ಭಾವನಾವಿಶೇಷವು ಜನರಲ್ಲಿ ತಲೆದೋರುತ್ತಲಿದೆ. ಅದನ್ನು ನಾವು ರಾಷ್ಟ್ರೀಯತ್ವವೆಂದು ಕರೆಯಬಹುದು; ಇದರಿಂದ ಜನರಲ್ಲಿ ಸ್ವದೇಶಭಕ್ತಿಯೂ ಐಕಮತ್ಯವೂ ವೃದ್ಧಿಹೊಂದುತ್ತಲಿವೆ; ಮತ್ತು ಜನರ ಮನೋವೃತ್ತಿಗಳು ಶ್ರೇಯೋದಾಯಕವಾದ ಬಗೆಬಗೆಯ ಮಹಾಕಾರ್ಯಗಳ ಕಡೆಗೆ ಒಲೆಯುತ್ತಲಿವೆ. ಈ ರಾಷ್ಟ್ರೀಯತೆಯು ಮಾತೃಭಕ್ತಿ ಪಿತೃಭಕ್ತಿಗಳಂತೆ ಎಲ್ಲರಲ್ಲಿಯೂ ಸ್ವಭಾವಸಿದ್ಧವಾಗಿರುತ್ತದೆ. ಆದರೂ ಸಾಮಾನ್ಯ ಕಾಲದಲ್ಲಿ ಅದು ಗೂಢವಾಗಿದ್ದು,

ಅನ್ಯದೇಶೀಯರಿಂದ ಉಪದ್ರವವು ಪ್ರಾಪ್ತವಾಗಲು ಅದು ಪ್ರಕಾಶಕ್ಕೆ ಬರುವದು. ಸಾಮಾನ್ಯವಾಗಿ ಒಂದು ಕುಟುಂಬದವರು ತಮಗೆ ಪರಸ್ಪರವಾಗಿರತಕ್ಕ ಪ್ರೀತಿಯನ್ನು ಕುರಿತು ಪ್ರತಿಕ್ಷಣವೂ ಉಪನ್ಯಾಸ ಮಾಡುತ್ತಿರುವದಿಲ್ಲ. ಅವರಲ್ಲಿ ಯಾರಿಗಾದರೂ ರೋಗಾದಿ ಕಷ್ಟಗಳೊದಗಿದಾಗ ಅದು ತನ್ನಿಂದ ತಾನೇ ವ್ಯಕ್ತವಾಗುವದು. ಅಣ್ಣ ತಮ್ಮಂದಿರು ಬಹುತರವಾಗಿ ದಿನಚರ್ಯೆಯಲ್ಲಿ ಒಬ್ಬರಲ್ಲೊಬ್ಬರು ಉದಾಸೀನರಾಗಿರು ವಂತೆ ಕಾಣಬಹುದು. ಆದರೆ ಬೇರೆಯವರು ಅವರಲ್ಲಾರಿಗಾದರೂ ಕೇಡು ಮಾಡ ಬಂದರೆ, ಆಗ ಅವರು ತಮ್ಮ ಸೋದರ ಪ್ರೀತಿಯನ್ನೂ ಒಕ್ಕಟ್ಟನ್ನೂ ತೋರದೆ ಇರುವ ದಿಲ್ಲ. ಅದರಂತೆಯೇ ಪ್ರತಿಯೊಂದು ದೇಶದವರು ಅನ್ಯರಿಂದ ತಮಗೆ ಬಾಧೆ ತಟ್ಟುವ ಸಂಭವವಿದ್ದಾಗಲ್ಲದೆ, ಇತರ ವೇಳೆಯಲ್ಲಿ ತಮ್ಮ ಜನ್ಮ ಭೂವಾತ್ಸಲ್ಯವನ್ನೂ ಸ್ವಸಮಾಜ ಪ್ರೀತಿಯನ್ನೂ ತಾವು ತಾವೇ ಹೇಳಿಕೊಳ್ಳುತ್ತಿರುವದಿಲ್ಲ. ಹಾಗೆಯೇ ಒಂದು ದೇಶ ದವರ ಐಕ್ಯಬುದ್ಧಿಯೂ, ಧೀರತೆಯೂ ಪರಕೀಯರು ದಿಗ್ವಿಜಯಾರ್ಥವಾಗಿ ಬಂದಾಗ ಸಹಜವಾಗಿ ಪ್ರಕಟವಾಗುವವು. ಅಂತಹ ಅವಕಾಶವು ಕರ್ಣಾಟಕ ದೇಶೀಯರಿಗೆ ಕ್ರಿ. ಶ. ೧೪ನೆಯ ಶತಮಾನದಲ್ಲಿಯೇ ಸಂಘಟಿಸಿತು. ಇಂಗ್ಲಂಡ, ಫ್ರಾನ್ಸ ಮೊದಲಾದ ದೇಶಗಳಲ್ಲಿ ಕೂಡ ಈ ರಾಷ್ಟ್ರೀಯತ್ವವು ಬೆಳೆದುದು ಹದಿನಾಲ್ಕನೆಯ ಶತಮಾನದಿಂದೀಚೆ ಯಲ್ಲಿಯೇ. ಅದು ಯುರೋಪಖಂಡದಲ್ಲೆಲ್ಲ ಪ್ರಬಲವಾದುದು ನೆಪೋಲಿಯನ್ನನಿಂದೀ ಚೆಗೆ; ಅಂದರೆ ಹತ್ತೊಂಬತ್ತನೆಯ ಶತಮಾನದಲ್ಲಿ. ಇರಲಿ. ತಮ್ಮಲ್ಲಿರುವ ತೇಜಸ್ಸನ್ನು ಬೈಲಿಗೆಳೆಯುವ ಅವಕಾಶವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವ ವಿಷಯದಲ್ಲಿ ಕನ್ನಡಿಗರಿಗೆ ಮಾರ್ಗದರ್ಶಕರಾದ ಪರಮಪೂಜ್ಯ ಮಹರ್ಷಿಯರೇ ಶ್ರೀ ವಿದ್ಯಾರಣ್ಯ ಸ್ವಾಮಿಗಳು.

ಜನಸಮಾಜದಲ್ಲಿ ಶ್ರೀವಿದ್ಯಾರಣ್ಯಸ್ವಾಮಿಗಳಂತಹರ ವಿಷಯದಲ್ಲಿ ಮುಖ್ಯವಾಗಿ ಎರಡು ಮತಗಳಿರುತ್ತವೆ. ಈ ಮತಗಳ ವಾದವು ದೈವಪ್ರಯತ್ನಗಳ ವಾದದಂತೆಯೇ ಇದೆಯೆಂದು ಹೇಳಬಹುದು. ದೈವವು ಹೆಚ್ಚಿನದೋ ? ಪ್ರಯತ್ನವು ಹೆಚ್ಚಿನದೋ ? ಈ ಎರಡು ಪ್ರಶ್ನೆಗಳಲ್ಲಿ ಪ್ರತಿಯೊಂದನ್ನೂ ಸಮರ್ಥಿಸುವ ಜನರು ಇದ್ದೇ ಇದ್ದಾರೆ. ಆದರೆ ಯಾವ ವಿಧದ ದುಷ್ಟಚಪಲವನ್ನೂ ಹಿಡಿಯದೆ ಎರಡೂ ಪಕ್ಷಗಳನ್ನು ಸಹಾನು ಭೂತಿಯಿಂದಲೂ ಸುವಿವೇಕದಿಂದಲೂ ವಿಮರ್ಶಿಸಿ ಯಾವದೊಂದು ಅಭಿಪ್ರಾಯವನ್ನು ನಿಶ್ಚಯಿಸಿ ಅದರಂತೆ ನಡೆಯುವವನೇ ಉತ್ತಮನು; ನಿಜವಾದ ಮನುಷ್ಯನು. ಕೇವಲ ದೈವವೇ ಹೆಚ್ಚಿನದೆಂದು ಹೇಳಿ ಕೈಕಾಲು ಸಹ ಅಲ್ಲಾಡಿಸದೆ ಕುಳಿತರೆ, ನಮ್ಮ ನಿತ್ಯ ಕೃತ್ಯಗಳನ್ನು ಕೂಡ ನೆರವೇರಿಸುವದು ಕಷ್ಟವಾಗುವದಿಲ್ಲವೇ ? ಇದು ಎಲ್ಲರ ಅನು ಭವದ ಸಂಗತಿ. ಆದುದರಿಂದ ದೈವದ ಶ್ರೇಷ್ಠತೆಯನ್ನು ಒಡಂಬಟ್ಟರೂ ಪ್ರಯತ್ನ ವನ್ನೇನೋ ಮಾಡಲೇಬೇಕೆಂದು ಎಲ್ಲರೂ ಒಪ್ಪಲೇಬೇಕು. ಇನ್ನು ದೈವವನ್ನಾದರೂ ಏಕೆ ನಂಬಬೇಕು ? ನಮ್ಮ ಪ್ರಯತ್ನಕ್ಕೆ ಸರಿಯಾಗಿ ಫಲವು ಸಿಕ್ಕೇ ಸಿಕ್ಕುವದು; ಒಂದು ವೇಳೆ ಸಿಕ್ಕದೆ ಹೋದರೆ ನಮ್ಮ ಪ್ರಯತ್ನದ ದಿಶೆಯು ತಪ್ಪಿರಲೇಬೇಕು; ಸರಿ

ಯಾದ ರೀತಿಯಿಂದ ಪ್ರಯತ್ನ ಮಾಡಿದರೆ ಫಲವು ದೊರೆಯಲಿಕ್ಕೇಬೇಕು; ದೈವ ವೆಂಬುದು ಬೇರೆ ಇಲ್ಲವೇ ಇಲ್ಲ; ಎಂದು ಕೆಲವರು ಹೇಳುವರು. ಸಕೃದ್ದರ್ಶನಕ್ಕೆ ಈ ಮಾತು ಸಯುಕ್ತಿಕವೆಂದು ತೋರಬಹುದು. ಆದರೆ ಸ್ವಲ್ಪ ವಿಚಾರ ಮಾಡಿದರೆ ದೈವದ ಅಸ್ತಿತ್ವವನ್ನು ನಾವು ಒಡಂಬಡಲೇ ಬೇಕಾಗುವದು. ಇದಕ್ಕೆ ಒಬ್ಬ ಒಕ್ಕಲಿಗನ ಉದಾಹರಣೆಯನ್ನು ತೆಗೆದುಕೊಳ್ಳುವ. ಅವನು ಸರಿಯಾದ ರೀತಿಯಲ್ಲಿಯೇ ಭೂಮಿಯನ್ನು ಉತ್ತು, ಹರಗಿ, ಹಸನು ಮಾಡುತ್ತಾನೆ. ಸಕಾಲದಲ್ಲಿ ಬಿತ್ತಿಯೂ ಬಿತ್ತುತ್ತಾನೆ. ಆದರೆ ಪೈರಿನ ಬೆಳೆವಣಿಗೆಗೆ ಅವಶ್ಯಕವಾದ ಮಳೆಯು ತಕ್ಕ ಕಾಲಕ್ಕೆ ಆಗದೆ ಹೋದರೆ ಅವನಿಗೆ ಫಲವು ಸಿಕ್ಕುವ ಸಂಭವವಿಲ್ಲ. ಮಳೆಯಾಗುವ ವಿಷಯದಲ್ಲಿ ಅವನ ಪ್ರಯತ್ನವು ಎಷ್ಟರ ಮಟ್ಟಿಗೆ ಕೈಗೂಡೀತು ? ಮಳೆಯು ಸಕಾಲಕ್ಕೆ ಆಗದೆ ಇರುವದಕ್ಕೆ ಅವನ ಪ್ರಯತ್ನದ ದಿಶೆಯು ತಪ್ಪಿರುವದು ಕಾರಣವಲ್ಲವೆಂಬುದಂತೂ ಸ್ಪಷ್ಟವೇ ಇದೆ. ಇಂತಹ ಅನೇಕ ಉದಾಹರಣೆಗಳನ್ನು ತೋರಿಸಬಹುದು. ಆದುದರಿಂದ ದೈವವನ್ನು ನಾವು ಒಡಂಬಡಲೇಬೇಕು. ಅದರಂತೆಯೇ ಪ್ರಯತ್ನವನ್ನಾದರೂ ನಾವು ಅಲ್ಲಗಳೆಯಕೂಡ ದೆಂಬುದನ್ನು ಮೇಲೆ ತೋರಿಸಿಯೇ ಇದ್ದೇವೆ. ಆದುದರಿಂದ ಈ ವಿಷಯದಲ್ಲಿ ನಿಶ್ಚಿತ ವಾದ ಅಭಿಪ್ರಾಯವನ್ನು ಹೀಗೆ ಹೇಳಬಹುದು. ಮನುಷ್ಯನು ಕರ್ಮಾಧಿಕಾರಿಯು; ಮತ್ತು ದೇವರು ಫಲಾಧಿಕಾರಿಯು. ಫಲಾಶೆಯನ್ನು ಮನದಲ್ಲಿ ಹಿಡಿಯದೆ, ನಿಷ್ಕಾಮ ಕರ್ಮವನ್ನು ಮಾಡುತ್ತಿರುವದು ಉತ್ತಮ ಮನುಷ್ಯನ ಲಕ್ಷಣವು. ಈ ತರದ ಸತ್ಕರ್ಮಕ್ಕೆ ಫಲವು ಬಹುತರ ದೊರೆತೇ ದೊರೆಯುವದು; ಒಂದು ವೇಳೆ ದೊರೆಯದಿದ್ದರೆ, ಅದಕ್ಕೆ ಪೂರ್ವಜನ್ಮದ ಪಾಪ ಮೊದಲಾದವುಗಳು ಕಾರಣವಾಗಿರಲಿಕ್ಕೆ ಬೇಕು.

ಇರಲಿ. ಮೇಲಿನ ವಾದವಿವಾದದಂತೆಯೇ ಮಹಾಪುರುಷರ ಚರಿತ್ರದ ವಿಷಯ ದಲ್ಲಿಯೂ ವಿವಾದವುಂಟು. ಈ ಮಹಾಪುರುಷರು ನಮ್ಮಂತೆಯೇ ಸಾಮಾನ್ಯರೋ? ಅಥವಾ ದೇವಾಂಶ ಸಂಭೂತರೋ ? ಸಾಮಾನ್ಯರಾಗಿದ್ದರೆ ಅಸಾಮಾನ್ಯವಾದ ಕೆಲಸ ಗಳನ್ನು ಹೇಗೆ ಮಾಡಿದರು ? ಕೇವಲ ಪೌರುಷಬಲದಿಂದಲೇ ಮಾಡಿದರೋ ಹೇಗೆ ? ದೇವಾಂಶಸಂಭೂತರೆಂದು ಹೇಳುವ ಪಕ್ಷಕ್ಕೆ ಅವರಿಗೆ ನಾವು ಮಹತ್ವವನ್ನೇಕೆ ಕೊಡ ಬೇಕು ? ದೈವೀಸಂಕೇತದಂತೆ ನಡೆದ ಕಾರ್ಯಕ್ಕೆ ವ್ಯಕ್ತಿಗೆ ಮಹತ್ವವನ್ನು ಕೊಡುವದು ಹೇಗೆ ಸರಿಯಾಗುವದು ? ಈ ಮೊದಲಾದ ಅನೇಕ ಪ್ರಶ್ನೆಗಳು ಮಹಾತ್ಮರ ವಿಷಯ ದಲ್ಲಿ ಹೊರಡುವವು. ಇಂತಹ ಪ್ರಶ್ನೆಗಳೇ ನಮ್ಮ ಚರಿತ್ರನಾಯಕರಾದ ಶ್ರೀವಿದ್ಯಾರಣ್ಯ ಸ್ವಾಮಿಗಳವರ ವಿಷಯದಲ್ಲಿಯೂ ಹೊರಡುವವು. ಅವುಗಳನ್ನು ಆಯಾ ಸಂದರ್ಭದಲ್ಲಿ ಹಿಂದೆ ಕೆಲಮಟ್ಟಿಗೆ ಉಲ್ಲೇಖಿಸಿಯೇ ಇದ್ದೇವೆ. ಇವರ ಹೆಸರಿನಿಂದ ಅಂಕಿತವಾದ ಗ್ರಂಥ ರಾಶಿಯನ್ನು ನಿರ್ಮಾಣ ಮಾಡುವದು ಇವರಿಗೆ ಹೇಗೆ ಸಾಧ್ಯವಾಯಿತು ? ಮುಪ್ಪಿನ ಕಾಲದಲ್ಲಿ ಕೂಡ ರಾಜಕಾರ್ಯವನ್ನು ಜರುಗಿಸುವಂತಹ ಮತ್ತು ಉತ್ತಮೋತ್ತಮ ಗ್ರಂಥಗಳನ್ನು ಗಹನ ವಿಷಯಗಳ ಮೇಲೆ ಬರೆಯುವಂತಹ ಶಾರೀರಿಕ ಮತ್ತು ಮಾನಸಿಕ ಸಾಮರ್ಥ್ಯವು ಇವರಲ್ಲಿ ಹೇಗೆ ಬಂತು ? ಬಡತನದಲ್ಲಿ ಕಾಲ ಕಳೆದವರಾದ ಇವರು

ಇಷ್ಟು ದಿವಸಗಳ ವರೆಗೆ ಹೇಗೆ ಬದುಕಿದರು ? ಇಷ್ಟೊಂದು ಅಗಾಧವಾದ ವಿದ್ವತ್ತೆಯು ಇವರಿಗೆ ಹೇಗೆ ಪ್ರಾಪ್ತವಾಯಿತು ? ಸಾಮಾನ್ಯ ಕುಲದಲ್ಲಿ ಜನಿಸಿದ ಇವರು ಇಷ್ಟೊಂದು ಪ್ರಸಿದ್ಧಿಗೆ ಬರುವದು ಹೇಗೆ ಸಂಭವಿಸಿತು ? ನೂತನ ರಾಜ್ಯಸ್ಥಾಪನೆಯನ್ನು ನೆರವೇರಿಸುವದು ಇವರಿಗೆ ಹೇಗೆ ಸಾಧ್ಯವಾಯಿತು ? ಈ ಪ್ರಕಾರ ಅನೇಕ ಪ್ರಶ್ನೆಗಳು ಇವರ ವಿಷಯದಲ್ಲಿ ಹುಟ್ಟುವವು. ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕಾದರೆ, ಈ ಮೊದಲೇ ಹೇಳಿದ ಮಹಾತ್ಮರ ವಿಷಯಕವಾದ ಸಾಮಾನ್ಯ ಪ್ರಶ್ನೆಗಳನ್ನೆಲ್ಲ ಪರ್ಯಾಲೋಚಿಸಬೇಕಾಗುವದು.

ದೈವ ಮತ್ತು ಪ್ರಯತ್ನದ ವಾದದಲ್ಲಿ ನಾವು ಹೇಗೆ ನಡುವಿನ ಮಾರ್ಗವನ್ನು ಹಿಡಿದೆವೋ, ಅದರಂತೆಯೇ ಇಲ್ಲಿಯೂ ಮಧ್ಯ ಮಾರ್ಗವನ್ನೇ ಹಿಡಿಯಬೇಕು. ಈ ವಿಷಯದಲ್ಲಿ ಎಲ್ಲಕ್ಕೂ ಮೊದಲು ನೆನಪಿನಲ್ಲಿಡತಕ್ಕ ಸಂಗತಿ ಯಾವುದೆಂದರೆ- ಮಹಾತ್ಮರಿಗೆ ತಮ್ಮಲ್ಲಿ ಮಾಹಾತ್ಮ್ಯವಿದೆಯೆಂಬ ತಿಳಿವಳಿಕೆಯು ಎಂದೂ ಇರುವುದಿಲ್ಲ; ಒಂದು ವೇಳೆ ಹಾಗೆ ಯಾರಾದರೂ ತಿಳಿದುಕೊಂಡಿದ್ದರೆ, ಅವರು ಮಹಾತ್ಮರ ಕೋಟಿಯೊಳಗಿನವರಲ್ಲವೇ ಅಲ್ಲ ! ಮಹಾತ್ಮರಿಗೆ ತಾವು ಮಾಡುವದೆಲ್ಲವೂ ಸರ್ವಸಾಮಾನ್ಯವಾಗಿಯೇ ಇರುತ್ತದೆ. ಪಾಮರರಾದ ಇತರರು ಮಾತ್ರ ಅವರ ಕೃತಿಗಳನ್ನು ನೋಡಿ ಆಶ್ಚರ್ಯಬಡುತ್ತಾರೆ; ಮತ್ತು ಅವರಿಗೆ ಮಹಾತ್ಮರೆಂಬ ಹೆಸರನ್ನು ಕೊಡುತ್ತಾರೆ. ಈ ಯೋಗ್ಯತೆಗೆ ಏರಬೇಕಾದರೆ ಮಹಾತ್ಮರು ಅನೇಕ ವಿಧದ ಸಂಕಟಗಳಿಗೆ ಎದೆಗೊಡಬೇಕಾಗುವದು; ಶಾರೀರಿಕ ಮಾನಸಿಕ ಕಷ್ಟಗಳನ್ನು ಸಹಿಸಬೇಕಾಗುವದು; ಸ್ತುತಿನಿಂದೆಗಳನ್ನು ಲೆಕ್ಕಿಸದೆ ಇರಬೇಕಾಗುವದು; ಈ ಪ್ರಕಾರ ಹಲವು ತರದ ತೊಂದರೆಗಳಿಗೆ ಎದೆಗೊಟ್ಟು ಪರಾರ್ಥವನ್ನು ಸಾಧಿಸುವದರಲ್ಲಿಯೇ ಪ್ರಾಣವನ್ನು ಕೂಡ ವಿಸರ್ಜಿಸಲು ಸಿದ್ಧರಾಗಿರಬೇಕಾಗುವದು; ಹೀಗೆ ಮಾಡುವದೇ ತನ್ನ ಕರ್ತವ್ಯವೆಂದು ತಿಳಿದು ಮನೋವಾಕ್ಕಾಯಗಳಿಂದ ಅವರು ಲೋಕೋಪಕಾರದ ಕೆಲಸಗಳಲ್ಲಿ ತೊಡಗಿರಬೇಕಾಗುವದು. ಆಗ ಇಂತಹರಲ್ಲಿರುವ ಅಸಾಧಾರಣವಾದ ಧೈರ್ಯ, ಸ್ವಾರ್ಥತ್ಯಾಗ, ಸತ್ಯಪ್ರಿಯತೆ, ನಿರಭಿಮಾನ, ವಿದ್ವತ್ತೆ, ಮನಃಸ್ಥೈರ್ಯ, ಬಂಧುಪ್ರೀತಿ, ಔದಾರ್ಯ, ಸಾತ್ವಿಕತೆ ಮೊದಲಾದ ಉತ್ತಮೋತ್ತಮವಾದ ಉಚ್ಚಗುಣಗಳು ಜಗತ್ತಿನ ನಿದರ್ಶನಕ್ಕೆ ಬರುವವು. ಆಗ ಜನರೆಲ್ಲರೂ ಮಹಾತ್ಮರೆಂದು ಅವರನ್ನು ಕರೆಯಹತ್ತುವರು. ಸ್ವಲ್ಪ ಕಾಲವು ಕಳೆಯಲು ಅವರನ್ನೇ ಅವತಾರೀ ಪುರುಷರೆಂದು ಹೇಳುವರು. ಅವರನ್ನು ತಮ್ಮ ನಿತ್ಯಪೂಜೆಯಲ್ಲಿ ಸೇರಿಸಿಕೊಳ್ಳುವರು. ಹೀಗಾಗಿ ಕೊನೆಗೆ ಅವರು ದೇವಾಂಶಸಂಭೂತರೆಂದು ಕರೆಯಿಸಿಕೊಳ್ಳುವರು.

ಆದುದರಿಂದ ಮನುಷ್ಯನು ಹಿಂದೆ ಹೇಳಿದಂತೆ ಸತ್ಕರ್ಮಗಳನ್ನು ಮನಃಪೂರ್ವಕವಾಗಿ ಮಾಡುತ್ತಿರಬೇಕು. ತಾನು ಮಹಾತ್ಮನೆನಿಸಿಕೊಳ್ಳಬೇಕೆಂಬ ಕಲ್ಪನೆಯು ಕೂಡ ಅವನಲ್ಲಿರಬಾರದು. ವಿವೇಕದಿಂದ ಯೋಗ್ಯಾಯೋಗ್ಯಗಳನ್ನು ತಿಳಿದು, ಯೋಗ್ಯವಾದುದನ್ನು ಮಾಡುವ ವಿಷಯದಲ್ಲಿ ಪ್ರಾಣವನ್ನು ಕೂಡ ಲೆಕ್ಕಿಸಬಾರದು.

ಇಲ್ಲಿಯ ವರೆಗೆ ಮಾಡಿದ ವಿವೇಚನೆಯಿಂದ ವಿದ್ಯಾರಣ್ಯರಂತಹ ಮಹಾತ್ಮರು ಸಾಮಾನ್ಯರೂ ಅಹುದು; ದೇವಾಂಶಸಂಭೂತರೂ ಅಹುದು; ಎಂದು ಹೇಳಿದ ಹಾಗಾಯಿತು. ಸಾಮಾನ್ಯರಲ್ಲಿಯೇ ಹುಟ್ಟಿ ಸಾಮಾನ್ಯರೀತಿಯಲ್ಲಿಯೇ ಬೆಳೆದು, ಸ್ವಪೌರುಷಬಲದಿಂದ ಅಗಾಧವಾದ ಕಾರ್ಯಗಳನ್ನು ನೆರವೇರಿಸಿದ ಮೂಲಕ ಅವರಿಗೆ ಎರಡೂ ವಿಶೇಷಣಗಳು ಒಪ್ಪುವವು. ಇನ್ನು ಇಂತಹರು ಸಾಮಾನ್ಯರೆಂದು ಒಪ್ಪಿದ ಮೇಲೆ, "ಯದಾ ಯದಾ ಹಿ ಧರ್ಮಸ್ಯ" ಎಂದು ಮುಂತಾಗಿ ಭಗವಂತನು ಹೇಳಿರುತ್ತಾನಲ್ಲವೇ? ಅದರ ಪಾಡೇನು? ಅದು ಸುಳ್ಳೋ? ಎಂಬ ಪ್ರಶ್ನೆಯು ಹೊರಡಬಹುದು. ಭಗವದುಕ್ತಿಯೇನೂ ಸುಳ್ಳಲ್ಲ. ಅದು ನಿಜವೇ. ಹಾಗೆ ದೇವರು ಅವತರಿಸುವದಕ್ಕೆ ಕಾರಣವನ್ನಾದರೂ ಭಗವಂತನೇ ಹೇಳಿದ್ದಾನೆ. ಹಾಗೆ ದೇಶದಲ್ಲಿ ಉಂಟಾದ ಧರ್ಮಗ್ಲಾನಿಯನ್ನು ಹೋಗಲಾಡಿಸಿ ಮನುಷ್ಯರಿಗೊಂದು ಮಾದರಿಯನ್ನು ಹಾಕಿಕೊಡುವದೇ ಅವನ ಉದ್ದೇಶವು. ಮನುಷ್ಯನಾಗಿ ಹುಟ್ಟಿದ ಮೇಲೆ ಯೋಗ್ಯರೀತಿಯಿಂದ ಇದ್ದರೆ ಇಷ್ಟು ದೊಡ್ಡ ಯೋಗ್ಯತೆಗೆ ಏರುವದು ಇಹಲೋಕದಲ್ಲಿಯೇ ಸಾಧ್ಯವಿದೆಯೆಂಬುದು ಇದರಿಂದ ತಿಳಿಯುವದಿಲ್ಲವೇ? ದೇವಾಂಶಸಂಭೂತರಲ್ಲೊಬ್ಬರಾದ ಕಬೀರದಾಸರು "ನರ್ ಜಬ್ ಕರನೀ ಕರೇ ತೋ ನರ್ ಕಾ ನಾರಾಯಣ್ ಹೋ ಜಾಯ್" ಎಂದು ಹೇಳಿಲ್ಲವೇ? ಅದರ ತಾತ್ಪರ್ಯವಾದರೂ ಇದೇ. ಆದುದರಿಂದ ಅವರು ದೇವಾಂಶಸಂಭೂತರಾದುದರಿಂದ ಅಂತಹ ಕೆಲಸಗಳನ್ನು ಮಾಡಿದರು, ಸಾಮಾನ್ಯರಾದ ನಮಗೆ ಅದೆಲ್ಲ ಹೇಗೆ ಸಾಧ್ಯ? ನಾವೂ ದೇವಾಂಶಸಂಭೂತರಾಗಿದ್ದರೆ ಹಾಗೆ ನಡೆಯಬಹುದಾಗಿತ್ತು! ಇಂತಹ ಚರಿತ್ರದಿಂದ ನಮಗೇನು ಉಪಯೋಗ? ಈ ಪ್ರಕಾರ ತಿಳಿದುಕೊಳ್ಳುವದು ದೊಡ್ಡ ತಪ್ಪು. ಪರಮಾತ್ಮನ ಮೇಲೆ ದೃಢ ವಿಶ್ವಾಸವನ್ನಿಟ್ಟು ಯೋಗ್ಯ ರೀತಿಯಿಂದ ಸನ್ಮಾರ್ಗದಲ್ಲಿ ವರ್ತಿಸಿದರೆ ಎಲ್ಲರಿಗೂ ಎಲ್ಲವೂ ಸಾಧ್ಯವಾಗುವದು. ನೆಪೋಲಿಯನ ಬೋನಾಪಾರ್ಟನು ಅಶಕ್ಯತಾನಿರಸನವನ್ನು ಮಾಡಿದುದು ಎಲ್ಲರಿಗೂ ಗೊತ್ತಿದ್ದ ಸಂಗತಿಯಲ್ಲವೇ? ಆದುದರಿಂದ ಮಹಾತ್ಮರ ಚರಿತ್ರೆಯೊಳಗಿನ ಪ್ರತಿಯೊಂದು ಮಾತೂ ಬಹಳ ಬೆಲೆಯುಳ್ಳದ್ದಿರುತ್ತದೆ. ಮನುಷ್ಯನ ಆಯುಷ್ಯ ಕ್ರಮಕ್ಕೆ ಅದು ಆದರ್ಶಭೂತವಾಗಿರುತ್ತದೆ.

ಈ ಅಭಿಪ್ರಾಯದಿಂದಲೇ ನಾವು ಶ್ರೀವಿದ್ಯಾರಣ್ಯಸ್ವಾಮಿಗಳ ವಿಷಯಕ್ಕೆ ಅಲ್ಲಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಬಂದಿದ್ದೇವೆ. ಅವರು ದೇವಾಂಶಸಂಭೂತರೆಂದು ಮೊದಲೇ ತಿಳಿದರೆ, ಅವರ ಕೃತಿಗಳ ವಿಷಯದಲ್ಲಿ ಯಾವ ಆಕ್ಷೇಪಣೆಯೂ ಹೊರಡುವದಿಲ್ಲ. ಆದರೆ ಇಷ್ಟರಿಂದ ಅವರಿಗೆ ಮಹತ್ವವಿಲ್ಲೆಂದಾಗಲಿ, ಇವರ ಚರಿತ್ರದಿಂದ ನಾವು ತಿಳಿಯಬೇಕಾದುದೇನೂ ಇಲ್ಲವೆಂದಾಗಲಿ ತಿಳಿಯುವದು ದಡ್ಡತನವೆಂದು ಮೇಲೆ ತೋರಿಸಿದ್ದೇವೆ. ಇನ್ನು ಅವರ ಚರಿತ್ರೆಯೊಳಗಿನ ಮುಖ್ಯ ಮುಖ್ಯ ಭಾಗಗಳಿಗೆ ಸಾಮಾನ್ಯರೆಂಬ ದೃಷ್ಟಿಯಿಂದಲೂ ಅಲ್ಲಲ್ಲಿ ನಾವು ಉತ್ತರವನ್ನು ಕೊಟ್ಟಿದ್ದೇವೆ. ಇಷ್ಟು ಗ್ರಂಥಗಳನ್ನು ಇವರು ಹೇಗೆ ಬರೆದರು? ಎಂಬುವದಕ್ಕೆ ಲೌಕಿಕ ದೃಷ್ಟಿಯಿಂದ ಸಾಹಾಯ್ಯ

ಸಂಪತ್ತಿಯನ್ನೆಲ್ಲ ತೋರ್ಪಡಿಸಿದ್ದೇವೆ. ಇಷ್ಟು ವಿದ್ವಾಂಸರಾದುದಕ್ಕೆ ಕಾರಣವೇನೆಂಬ ಪ್ರಶ್ನೆಗೆ ಅವರು ದೃಢನಿಶ್ಚಯಿಗಳಾದುದು ಹೇಗೆಂಬುದನ್ನೂ ಇವರ ಗುರುಗಳು ಎಂತಹ ಅದ್ವಿತೀಯರಾಗಿದ್ದರೆಂಬುದನ್ನೂ ತೋರಿಸಿದ್ದೇವೆ. ಅವರು ಬಹು ದಿವಸ ಹೇಗೆ ಬಾಳಿದರೆಂಬುದನ್ನೂ ಇದೇ ದೃಷ್ಟಿಯಿಂದ ಖಂಡಿಸಿದ್ದೇವೆ. ಸುವರ್ಣವೃಷ್ಟಿಯನ್ನು ಭುವನೇಶ್ವರಿಯಿಂದ ಸುರಿಸಿದುದು ನಿಜವೇ ಎಂಬುದಕ್ಕೂ ವಿಜಯನಗರದ ಸುತ್ತುಮುತ್ತಲಿನ ಪ್ರಾಕೃತಿಕ ಭೌಗೋಳಿಕ ಸ್ಥಿತಿಯನ್ನು ಕೊಟ್ಟು, ಇವರ ಕಾಲದಲ್ಲಿ ದೇಶವು ಧನಾಢ್ಯವಾಗಿರಬಹುದೆಂಬುದನ್ನು ಸ್ಪಷ್ಟಪಡಿಸಿದ್ದೇವೆ.

ಇನ್ನು ಇಂತಹ ಮಹಾತ್ಮರನ್ನು ಪೂಜೆ ಮಾಡಲಿಕ್ಕೇ ಬೇಕೇ ಹೇಗೆ? ಎಂಬುದೊಂದು ಪ್ರಶ್ನೆಯು ಬರಬಹುದು. ಈ ಪ್ರಶ್ನೆಗೆ ಉತ್ತರವು ದೊರೆಯಬೇಕಾದರೆ ಪೂಜೆಯನ್ನು ಅಥವಾ ಸೇವೆಯನ್ನು ಮಾಡುವ ಉದ್ದೇಶವೇನೆಂಬುದನ್ನು ಸ್ವಲ್ಪ ವಿಚಾರಿಸತಕ್ಕದ್ದು. ಅನ್ಯರಲ್ಲಿರುವ ಒಳ್ಳೆಯದು ನಮ್ಮಲ್ಲಿ ಬರಬೇಕೆಂಬುದೇ ಈ ತರದ ಸೇವೆಯ ಮುಖ್ಯೋದ್ದೇಶವು. ವ್ಯವಹಾರದಲ್ಲಿ ಅಜ್ಞರು ಇದಕ್ಕೆ ಯಾವದಾದರೊಂದು ಹೀನವಾದ ಉದ್ದೇಶವನ್ನಿಟ್ಟುಕೊಂಡಿದ್ದರೆ ಅದು ತಪ್ಪು. ಇನ್ನೊಬ್ಬರಲ್ಲಿದ್ದ ಒಳ್ಳೆಯ ಗುಣವನ್ನು ನಾವು ಅವಶ್ಯವಾಗಿ ಕಲಿಯಬೇಕೆಂಬ ವಿಷಯದಲ್ಲಂತೂ ಮತಭೇದಗಳಿಲ್ಲವೇ ಇಲ್ಲ. ಅಂತಹ ಸದಾಚಾರವನ್ನು ಕಲಿಯಬೇಕಾದರೆ, ಮಹಾತ್ಮರ ಚರಿತ್ರೆಯೊಳಗಿನ ಬೀಜಭೂತವಾದ ತತ್ವಗಳನ್ನು ಅರಿತುಕೊಂಡು ಅದರಂತೆ ನಡೆದರಾಯಿತು. ಇಷ್ಟು ಹೇಳಿದ ಮಾತ್ರಕ್ಕೆ ಬೇರೆ ಪೂಜೆಯನ್ನೇಕೆ ಮಾಡಬೇಕು? ಎಂದು ಮಾತ್ರ ಯಾರೂ ಕೇಳಬಾರದು. ಅವರ ಚರಿತ್ರೆಯನ್ನು ಮನನ ಮಾಡಿಕೊಂಡು ಅದರಂತೆ ನಡೆಯುವದಾದರೂ, ಮಾನಸಿಕ ಪೂಜೆಯಂತಹ ಒಂದು ವಿಧದ ಸೇವೆಯೇ ಎಂಬಲ್ಲಿ ಸಂದೇಹವಿಲ್ಲ. ನ್ಯಾಯವಾಗಿ ವಿಚಾರ ಮಾಡಿದರೆ ಇಂತಹ, ಮನೋವಿಕಾಸವನ್ನು ಹೊಂದಿದವರಿಗೆ ಈ ಬಾಹ್ಯಪೂಜೆಯ ಆವಶ್ಯಕತೆಯು ತತ್ವತಃ ಇಲ್ಲ. ಆದರೂ ಮೋಕ್ಷಸಾಧನೆಗಿರುವ ಜ್ಞಾನ ಮತ್ತು ಭಕ್ತಿಮಾರ್ಗಗಳಲ್ಲಿ ಭಕ್ತಿಮಾರ್ಗವೇ ಸುಲಭವೂ, ಸರ್ವಾನುಕರಣೀಯವೂ ಎಂಬುದು ಸುಪ್ರಸಿದ್ಧವಷ್ಟೇ? ಜ್ಞಾನಮಾರ್ಗವು ಕಠಿನವಾದುದು; ಮತ್ತು ಭಯಂಕರವಾದುದು. ಆದುದರಿಂದಲೇ ಅದು ಸರ್ವರಿಗೂ ಸಾಧ್ಯವಲ್ಲ. ಆದರಂತೆಯೇ ಮಹಾತ್ಮರ ವಿಷಯದಲ್ಲಿಯೂ ಬಾಹ್ಯಪೂಜೆಯ ಮಾರ್ಗಕ್ಕಿಂತಲೂ, ಅಂತಃಪೂಜಾಮಾರ್ಗವು ಕಠಿನವೂ ಭಯಂಕರವೂ ಆಗಿದೆ. ಆದುದರಿಂದ ಬಾಹ್ಯಪೂಜೆಯು ಆವಶ್ಯಕವಾದುದು. ಇನ್ನು ತಿಳಿವಳಿಕೆಯುಳ್ಳವರು ಬಾಹ್ಯಪೂಜೆಯನ್ನೇಕೆ ಮಾಡಬೇಕು? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವದು ಅವಶ್ಯವದೆ. ಜ್ಞಾನಿಗಳಿಗೆ ಇದರ ಆವಶ್ಯಕತೆಯು ತತ್ವತಃ ಇಲ್ಲವೆಂದು ಮೇಲೆ ಹೇಳಿದೆಯಷ್ಟೇ. ವ್ಯವಹಾರದಲ್ಲಿ ಮಾತ್ರ ಇದು ಅತ್ಯಾವಶ್ಯಕವು. ಇಲ್ಲಿಯೂ ವೇದಾಂತದ ಉದಾಹರಣೆಯನ್ನೇ ತೆಗೆದುಕೊಳ್ಳುವಾ. ಜ್ಞಾನಿಯಾದವನು ಕರ್ಮವನ್ನೇಕೆ ಮಾಡಬೇಕು? ಎಂಬ ಪ್ರಶ್ನೆಗೂ ಮೇಲಿನ ಪ್ರಶ್ನೆಗೂ ಏನೂ ಹೆಚ್ಚುಕಡಮೆಯಿಲ್ಲ. ಜ್ಞಾನಿಯಾದವನು ತತ್ವತಃ ಕರ್ಮವನ್ನು

ಮಾಡುವದು ಆವಶ್ಯಕವಿಲ್ಲ. ಆದರೂ ಲೋಕೋಪಕಾರಾರ್ಥವಾಗಿ ಅದನ್ನು ಮಾಡಲೇ ಬೇಕು. ಎಲ್ಲರಿಗೂ ಒಮ್ಮೆಲೇ ಜ್ಞಾನವುಂಟಾಗುವದು ಸಂಭವನೀಯವೇ ? ಇಲ್ಲ. ಜ್ಞಾನವುಂಟಾಗುವದಕ್ಕೆ ಕರ್ಮವು ಒಂದು ಸಾಧನವು. ಕರ್ಮದ ಚಿರಪರಿಚಯ ದಿಂದಲೂ ರೂಢಿಯಿಂದಲೂ ಮನಸ್ಸು ಜ್ಞಾನವಿಶಿಷ್ಟವಾಗುವದಕ್ಕೆ ಯೋಗ್ಯವಾಗುತ್ತದೆ. ಆದುದರಿಂದ ಕರ್ಮವು ಅವಶ್ಯವೆಂಬುದನ್ನು ಲೋಕಕ್ಕೆ ತಿಳಿಸುವದಕ್ಕಾಗಿ ಎಲ್ಲರೂ ಆದನ್ನು ಮಾಡಲೇಬೇಕು. ಅಜ್ಞರು ಕೇವಲ ಮೂಢಶ್ರದ್ಧೆಯಿಂದಲೇ ಅದನ್ನು ಅನು ಸರಿಸಲಿ. ಮುಂದೆ ಜ್ಞಾನವು ಅವರಲ್ಲಿ ಕಾಲಾಂತರದಲ್ಲಿ ಹುಟ್ಟುವುದು. ಮೊದಲು ಮೂಢಶ್ರದ್ಧೆಯೇ ಅಜ್ಞನ ವಿಷಯದಲ್ಲಿ ಹೆಚ್ಚು ಫಲಕಾರಿಯು. ಮೊದಲೇ ತತ್ವಗಳನ್ನು ತಿಳಿಸಿಕೊಡಹತ್ತಿದರೆ ಅವು ಅವರ ಮನಸ್ಸಿಗೆ ಅಂಟುವದಿಲ್ಲ. ಇಷ್ಟೆಲ್ಲ ವಿವೇಚನೆಯನ್ನು ಓದಿದ ಮೇಲೆ, ಮಹಾತ್ಮರ ಪೂಜೆಯನ್ನು ಎಲ್ಲರೂ ಏಕೆ ಮಾಡಬೇಕೆಂಬುದು ಸ್ಪಷ್ಟ ವಾಗದೆ ಇರದು.

ಈ ವಿವರಣೆಯಲ್ಲಿ ಇನ್ನೂ ಒಂದು ಅವಾಂತರ ಆಕ್ಷೇಪಣೆಯು ಹುಟ್ಟಬಹುದು. ಮನಸ್ಸಿನಲ್ಲಿ ಯಾವ ವಿಧದ ತಿಳಿವಳಿಕೆಯೂ ಇಲ್ಲದೆ ಕೇವಲ ಬಾಹ್ಯಪೂಜೆಯನ್ನು ಮಾಡುವದರಿಂದ ಪ್ರಯೋಜನವಿಲ್ಲ. ಆದರೆ ಇದರಿಂದ ಪೂಜೆಯನ್ನೇ ಬಿಡಬೇಕೆಂದು ಮಾತ್ರ ಅರ್ಥವಲ್ಲ. ನಮ್ಮ ಮುಖ್ಯ ಉದ್ದೇಶವು ಮಹಾತ್ಮರಲ್ಲಿರುವ ಉಚ್ಚಗುಣ ಗಳನ್ನು ಆಕಲನ ಮಾಡಿಕೊಂಡು ಅವನ್ನು ನಮ್ಮ ಆಚರಣೆಯಲ್ಲಿ ತರುವದು. ಇದು ಸಾಧ್ಯವಾಗಬೇಕಾದರೆ, ಅವರ ಸಂಬಂಧದ ತಿಳಿವಳಿಕೆಯು ಆವಶ್ಯಕ. ಆ ತಿಳಿವಳಿಕೆಯು ಬರಬೇಕಾದರೆ ಪೂಜೆ ಮೊದಲಾದವುಗಳು ಸಾಧಕವಾದವುಗಳು. ಆದುದರಿಂದ ಪ್ರತಿ ಯೊಬ್ಬರು ಮಹಾತ್ಮರನ್ನು ಮನ್ನಿಸಲಿಕ್ಕೆಬೇಕು. ಅವತಾರದ ಕಲ್ಪನೆಯು ಜಗತ್ತಿನಲ್ಲಿ ಹೀಗೆಯೇ ಉಂಟಾಗಿದೆಯೆಂದು ನಮಗಂತೂ ತೋರುತ್ತವೆ. ಈ ಪ್ರಕಾರ ಅಜ್ಞರೂ ಸುಜ್ಞರೂ ಎಲ್ಲರೂ ಅನುಸರಿಸಲು ಸುಲಭವಾಗಬೇಕೆಂದೇ ನಮ್ಮ ಪೂರ್ವಜರು ವ್ಯವ ಹಾರದೊಳಗಿನ ಅನೇಕ ಸಂಗತಿಗಳಿಗೆ ಧಾರ್ಮಿಕ ಸ್ವರೂಪವನ್ನು ಕೊಟ್ಟಿದ್ದಾರೆ. ಇರಲಿ.

ಇನ್ನು ಮಹಾತ್ಮರ ಚರಿತ್ರೆಯಲ್ಲಿ ಧರ್ಮ, ಜಾತಿ, ಮತ, ಪಂಥ ಮುಂತಾದ ಯಾವ ವಿಧದ ಕಲ್ಪನೆಯನ್ನೂ ವಾಚಕರು ಮನಸ್ಸಿನಲ್ಲಿ ತರಬಾರದೆಂಬುದನ್ನು ಲಕ್ಷ್ಯ ದಲ್ಲಿಡಬೇಕು. ಮಹಾತ್ಮರಾದವರು ಪ್ರತಿಯೊಬ್ಬರಿಗೂ ಅನುಕರಣೀಯರು. ಈ ಮಾತನ್ನು "ಧಾರ್ಮಿಕ ವಿಚಾರಗಳು" ಎಂಬ ಪ್ರಕರಣದಲ್ಲಿ ಸ್ವಲ್ಪಮಟ್ಟಿಗೆ ಚರ್ಚಿಸಿ ದ್ದೇವೆ. ಅವರ ಧರ್ಮ, ಜಾತಿ, ಮತ, ಪಂಥ ಮೊದಲಾದವುಗಳು ಅವರ ದೇಶ ಕಾಲ ಮಾನಕ್ಕನುಸರಿಸಿ ಉಂಟಾದವುಗಳು. ಅವರ ಉದ್ದೇಶವು ಯಾವಾಗಲೂ ಒಳ್ಳೆಯ ದಾಗಿರುತ್ತದೆ; ವಿಚಾರಗಳು ಪವಿತ್ರವಾಗಿರುತ್ತವೆ; ಆಚರಣೆಯು ಶುದ್ಧವಾಗಿರುತ್ತದೆ; ಮನಸ್ಸು ಉದಾತ್ತವಾಗಿರುತ್ತದೆ. ಸಾರಾಂಶ– ಯಾವ ವಿಧದ ಕಿಲ್ಬಿಷವೂ ಅವರಲ್ಲಿ ರುವದಿಲ್ಲ. ಅಂತೇ ಅವರು ಮಹಾತ್ಮ ಪದವಿಯನ್ನು ಪಡೆಯುತ್ತಾರೆ.

ಇಲ್ಲಿಯ ವರೆಗೆ ಮಹಾತ್ಮರ ಚರಿತ್ರೆಯ ಸಂಬಂಧವಾಗಿ ಸಾಮಾನ್ಯವಾದ ವಿವೇಚನೆಯನ್ನು ಶ್ರೀವಿದ್ಯಾರಣ್ಯರ ಉದಾಹರಣೆಯಿಂದ ಸ್ಪಷ್ಟಪಡಿಸಿದಂತಾಯಿತು. ಈ ಪುಸ್ತಕದ ಉಪೋದ್ಘಾತ ಪ್ರಕರಣದಲ್ಲಿ ಹೇಳಿದಂತೆ, ಇವರ ಚರಿತ್ರವು ರಾಜಕೀಯ ಧಾರ್ಮಿಕ ಮತ್ತು ವಾಙ್ಮಯಾತ್ಮಕ ಈ ಮೂರೂ ದೃಷ್ಟಿಯಿಂದಲೂ ಮನನೀಯವಾಗಿದೆ ಎಂಬ ಸಂಗತಿಯು ಈಗ ವಾಚಕರ ನಿದರ್ಶನಕ್ಕೆ ಬಾರದೆ ಇರಲಾರದು. ಇನ್ನು ಶ್ರೀವಿದ್ಯಾರಣ್ಯರ ಮತ್ತು ವಿಜಯನಗರದ ಚರಿತ್ರೆಯಿಂದ ನಮಗೆ ಪ್ರಕೃತೋಪಯುಕ್ತವಾಗಿ ತೋರಿಬರುವ ನೀತಿಯ ಮಾತುಗಳನ್ನು ಇಲ್ಲಿ ಸಂಗ್ರಹವಾಗಿ ಸೂಚಿಸುತ್ತೇವೆ. ಅದಕ್ಕೂ ಮೊದಲು ಶ್ರೀವಿದ್ಯಾರಣ್ಯರ ಅವಸಾನಕಾಲದ ಪರಿಸ್ಥಿತಿಯನ್ನು ಸ್ವಲ್ಪದರಲ್ಲಿಯೇ ಬರೆಯುವದು ಉಚಿತವಾಗಿ ತೋರುತ್ತದೆ.

ಬುಕ್ಕರಾಯನ ನಿರ್ಯಾಣದ ವೇಳೆಗೆ ಶ್ರೀವಿದ್ಯಾರಣ್ಯರು ವೃದ್ಧರಾಗಿದ್ದರು. ಆ ಮೇಲೆ ಅವರು ಇನ್ನೂ ಹತ್ತು ವರುಷಗಳ ವರೆಗೆ ದೇಹಧಾರಣೆ ಮಾಡಿದ್ದರೆಂದು ಶಾಸನದಿಂದ ನಿಷ್ಪನ್ನವಾಗಿ ಗೊತ್ತಾಗಿದೆ. ಆ ಕಾಲದಲ್ಲಿ ಬುಕ್ಕರಾಯನ ಹಿರಿಯ ಮಗನಾದ ಎರಡನೆಯ ಹರಿಹರರಾಯನು ಸಿಂಹಾಸನವನ್ನೇರಿದ್ದನು. ಅವನ ಕಾಲದಲ್ಲಿ ಯುದ್ಧಪ್ರಸಕ್ತಿಯೇನೂ ವಿಶೇಷವಾಗಿದ್ದಿಲ್ಲ. ಮೈಸೂರು, ಧಾರವಾಡ, ಕಂಚಿ, ತಿರುಚನಾಪಳ್ಳಿ, ಜಂಗಲ್ಪೇಟೆ ಈ ಪ್ರಾಂತಗಳಲ್ಲೆಲ್ಲ ಅವನ ಶಾಸನಗಳು ದೊರೆತಿವೆ. ಆದುದರಿಂದ ಅಲ್ಲೆಲ್ಲ ಅವನೇ ಪ್ರಭುವಾಗಿದ್ದನೆಂದು ಹೇಳಬಹುದು. ಮುದ್ದ, ಇರುಗ, ಗುಂಡ; ಬಾಚಣ್ಣ ಎಂಬವರು ಅವನ ಯೋಧಾಗ್ರೇಸರರಲ್ಲಿ ಮುಖ್ಯರಾಗಿದ್ದರು. ರಾಜ್ಯವು ನಿಷ್ಕಂಟಕವಾಗಿತ್ತು. ಹಿಂದಿನ ನಾಲ್ವತ್ತು ವರ್ಷಗಳಿಂದ ನಡೆದುಬಂದಿದ್ದ ಪದ್ಧತಿಗನುಸಾರವಾಗಿ ರಾಜ್ಯಯಂತ್ರವು ಸುಯಂತ್ರಿತವಾಗಿ ನಡೆದಿತ್ತು. ಮಠಗಳಿಗೂ, ದೇವಾಲಯಗಳಿಗೂ, ಧರ್ಮಕಾರ್ಯಗಳಿಗೂ ರಾಜಸಹಾಯವು ಯಥೇಷ್ಟವಾಗಿ ದೊರೆಯುತ್ತಿತ್ತು.

ಹರಿಹರಬುಕ್ಕರು ಶೃಂಗೇರಿಯ ಮಠಕ್ಕೆ ಕೊಟ್ಟಿದ್ದ ಭೂದಾನಗಳನ್ನು ಎರಡನೆಯ ಹರಿಹರನು ಅನುಪಾಲನೆ ಮಾಡಿಕೊಂಡು ಬಂದನಲ್ಲದೆ, ತಾನೂ ಹೊಸ ದಾನಗಳನ್ನು ಮಾಡಿದನು. ಯಾವ ಮಹಾಪುರುಷರು ವಿಜಯನಗರ ಸಾಮ್ರಾಜ್ಯಕ್ಕೆ ಮೂಲಸ್ತಂಭವಾಗಿದ್ದರೋ, ಯಾವ ಮಹನೀಯರ ಸಂನ್ಯಾಸವು ಲೋಕದ ದುಃಖದಲ್ಲಿ ಉಪೇಕ್ಷೆಯಾಗದೆ, ಲೋಕದ ಹಿತಸಾಧನೆಗೆ ದೀಕ್ಷೆಯಾಯಿತೋ, ಯಾವ ಮಹಾತ್ಮರ ಚರಿತ್ರವು ಆರ್ಯರ ದೇಶಾಭಿಮಾನ ಧರ್ಮಾಭಿಮಾನಗಳಿಗೆ ಆದರ್ಶಪ್ರಾಯವಾಗಿರುವದೋ ಆ ಪುಣ್ಯಶ್ಲೋಕರಾದ ಶ್ರೀ ವಿದ್ಯಾರಣ್ಯಸ್ವಾಮಿಗಳವರು ಎರಡನೆಯ ಹರಿಹರನ ಆಳಿಕೆಯಲ್ಲಿ ಪಂಪಾಕ್ಷೇತ್ರದಲ್ಲಿ ತಮ್ಮ ಜೀರ್ಣ ಕಲೇವರವನ್ನು ವಿಸರ್ಜಿಸಿ ಪರಮಾತ್ಮನ ಸನ್ನಿಧಾನಕ್ಕೆ ತೆರಳಿದರು. ಅವರ ಸಮಾಧಿಯನ್ನು ಹಂಪೆಯ ಶ್ರೀ ವಿರೂಪಾಕ್ಷ ದೇವಾಲಯದ ಹಿಂದುಗಡೆಯಲ್ಲಿ ಈಗಲೂ ನೋಡಬಹುದು. ಶ್ರೀವಿದ್ಯಾರಣ್ಯರು ದೇಹಧಾರಿಗಳಾಗಿಯೇ ಗುಹಾಪ್ರವೇಶ ಮಾಡಿದರೆಂದೂ; ಹಾಗೆ ಮಾಡಿದ ಸ್ಥಳವೇ ಆ ಗುಡಿಯೆಂದೂ

ಕೆಲವರು ಹೇಳುತ್ತಾರೆ. ಶ್ರೀ ವಿಷ್ಣು ಶಾಸ್ತ್ರಿ ಬಾಪಟ ಇವರು ಪಸಿಯಿಯ ಹತ್ತರದಲ್ಲಿ ರುವ ಶ್ರೀ ಶಂಕರಾಚಾರ್ಯರ ಸಮಾಧಿಯೇ ಶ್ರೀ ವಿದ್ಯಾರಣ್ಯರದೆಂದು ಹೇಳುತ್ತಾರೆ. ಇದು ಅಷ್ಟು ಸಯುಕ್ತಿಕವಾಗಿ ತೋರುವದಿಲ್ಲ. ಇರಲಿ. ಶ್ರೀ ವಿದ್ಯಾರಣ್ಯರ ಜ್ಞಾಪ ಕಾರ್ಥವಾಗಿ ಹರಿಹರನು ವಿದ್ಯಾರಣ್ಯಪುರವನ್ನು ಕಟ್ಟಿಸಿ ಅದರ ಒಂದು ನೂರು ವೃತ್ತಿ ಗಳನ್ನು ಶೃಂಗೇರಿಯ ಮಹಾಜನರಿಗೆ ದಾನ ಮಾಡಿದರು.

ಶ್ರೀವಿದ್ಯಾರಣ್ಯರ ಮಹಿಮೆಯನ್ನು ಅವರ ಕಾಲದ ಮತ್ತು ಈಚಿನ ಕವಿಗಳೂ ಪಂಡಿತರೂ ಬಗೆಬಗೆಯಿಂದ ಕೊಂಡಾಡಿರುವರು. ವಿಜಯನಗರದ ದೊರೆಗಳ ಶಾಸನ ಗಳಲ್ಲಿ ಅವರ ಪ್ರಶಂಸೆಯು ವಿಶೇಷವಾಗಿರುವದು. ಅವರ ಮೇಲೆ ಅಷ್ಟೋತ್ತರಶತನಾಮ ರೂಪವಾದ ಸ್ತೋತ್ರವನ್ನು ರಚಿಸಿ ಅವರನ್ನು ದೇವಾಂಶಪುರುಷರ ಪಙ್ಕ್ತಿಗೆ ಸೇರಿಸಿದ್ದಾರೆ. ಸಾಯಣಾಚಾರ್ಯರು ತಮ್ಮ "ಅಲಂಕಾರಸುಧಾನಿಧಿ" ಯಲ್ಲಿ ಅಣ್ಣಂದಿರನ್ನು ಹೀಗೆ ಹೊಗಳಿದ್ದಾರೆ—

ಅನಂತಭೋಗಸಂಸಕ್ತೋ ದ್ವಿಜಪುಂಗವ ಸೇವಿತಃ |
ಸಚಿವಃ ಸರ್ವಲೋಕಾನಾಂ ತ್ರಾತಾ ಜಯತಿ ಮಾಧವಃ ||

ಈ ಪದ್ಯಕ್ಕೆ ಅರ್ಥಗಳೆರಡು ಹೇಗೆಂದರೆ:–(೧) (ಅನಂತ) ಆದಿಶೇಷನ (ಭೋಗ) ಹೆಡೆಯಿಂದ ಅಲಂಕೃತನಾಗಿಯೂ, (ದ್ವಿಜ) ಪಕ್ಷಿರಾಜ (ಗರುಡ) ನಿಂದ ಸೇವಿಸಲ್ಪಡು ವವನಾಗಿಯೂ ಸಮಸ್ತಲೋಕಗಳಿಗೂ (ಸಚಿವ) ಮಿತ್ರನಾಗಿಯೂ ರಕ್ಷಕನಾಗಿಯೂ ಇರುವ (ಮಾಧವ) ಶ್ರೀಪತಿಯು ಸರ್ವೋತ್ಕರ್ಷವನ್ನು ಪಡೆದವನಾಗಿರುತ್ತಾನೆ. (೨) (ಅನಂತಭೋಗ) ಪಾರವಿಲ್ಲದ ಸುಖ (ಬ್ರಹ್ಮಾನಂದ) ದಲ್ಲಿ ಆಸಕ್ತನಾಗಿಯೂ (ದ್ವಿಜ) ಬ್ರಾಹ್ಮಣ ಶ್ರೇಷ್ಠರಿಂದ ಸೇವಿಸಲ್ಪಡುವವನಾಗಿಯೂ, ಸಮಸ್ತಲೋಕಕ್ಕೂ (ಸಚಿವ) ಮಂತ್ರಿಯಾಗಿಯೂ ಪಾಲಕನಾಗಿಯೂ ಇರುವ ಮಾಧವಾಚಾರ್ಯನು ಸರ್ವೋತ್ಕರ್ಷವನ್ನು ಪಡೆದವನಾಗಿರುತ್ತಾನೆ.

**ಇರಲಿ.** ಇನ್ನು ಹಿಂದೆ ಹೇಳಿದಂತೆ ಪ್ರಕೃತೋಪಯುಕ್ತವಾದ ನೀತಿಗಳನ್ನು ಸಂಕ್ಷೇಪದಿಂದ ಹೇಳುವೆವು :

(೧) ವಿಜಯನಗರವು ಇತರ ರಾಜ್ಯಗಳಂತೆ ರಾಜರ ರಾಜ್ಯಾಕಾಂಕ್ಷೆಯಿಂದಾ ಗಲಿ, ಸೈನಿಕರ ಯುದ್ಧೋತ್ಸಾಹದಿಂದಾಗಲಿ, ರಾಯಭಾರಿಗಳ ಕೃತ್ರಿಮ ವ್ಯಾಪಾರ ದಿಂದಾಗಲಿ ಹುಟ್ಟಿದುದಲ್ಲ; ಅದು ದೇಶೀಯವರ ಆಶೆಗನುಸಾರವಾಗಿ ಸಾರ್ವಜನಿಕ ಹಿತಾಕಾಂಕ್ಷೆಯಿಂದ ಹುಟ್ಟಿತು.

(೨) ಅದು ಮಹಮ್ಮದೀಯ ಮತದಲ್ಲಿ ದ್ವೇಷವನ್ನು ತೋರಿಸುವದಕ್ಕಾಗಿ ಹುಟ್ಟಲಿಲ್ಲ; ಸ್ವಮತವನ್ನು ರಕ್ಷಿಸುವದಕ್ಕೆ ಹುಟ್ಟಿತು. ಅನ್ಯಮತದವರ ಅತ್ಯಾಚಾರಗಳಿಗೆ ಸಿಕ್ಕುಬೀಳದಂತೆ ಹಿಂದೂ ಸಮಾಜವನ್ನು ಕಾಪಾಡುವದೇ ಅದರ ಉದ್ದೇಶವಾಗಿತ್ತು.

ಮುಸಲ್ಮಾನ ಅರಸರು ಇಲ್ಲಿ ಸ್ಥಿರವಾಗಿ ನಿಂತು, ದೇಶೀಯರಿಗಾಗಿ ಹಿಂದೂಗಳಲ್ಲಿ ಸ್ನೇಹವನ್ನು ತೋರಿಸಿದಾಗ ವಿಜಯನಗರದವರು ಅವರಲ್ಲಿ ತಾವೂ ಸ್ನೇಹವನ್ನು ತೋರಿಸಿದರು. ಇವರಲ್ಲಿ ಪರಧರ್ಮಸಹಿಷ್ಣುತೆಯು ಎಷ್ಟರ ಮಟ್ಟಿಗೆ ನೆಲೆಸಿತ್ತೆಂಬುದನ್ನು ಹಿಂದೆ ತೋರಿಸಿಯೇ ಇದ್ದೇವೆ. ಇದಕ್ಕೆ ಬಾಮನಿ ಸಂಸ್ಥಾನದ ಚರಿತ್ರೆಯೂ ಒಂದು ದೃಷ್ಟಾಂತವು. ಹಿಂದುಗಳ ಆಸೆಯು ಪರದೇಶದವರನ್ನೋಡಿಸಬೇಕೆಂಬುದೇ ಹೊರತು ಪರಮತವನ್ನು ನಾಶ ಮಾಡಬೇಕೆಂಬುದಲ್ಲ. ಅವರನ್ನು ಓಡಿಸುವದಾದರೂ ಅವರ ದೌಷ್ಟ್ಯಕ್ಕೋಸ್ಕರವೇ ಹೊರತು ಇನ್ನಾವ ದುರುದ್ದೇಶದಿಂದಲೂ ಅಲ್ಲ.

(೩) ಅದು ದೇಶೀಯರ ಒಳಪಂಗಡಗಳಲ್ಲಿದ್ದ ಪರಸ್ಪರ ದ್ವೇಷಾಸೂಯೆಗಳನ್ನು ಕಡಿಮೆ ಮಾಡಿ ರಾಷ್ಟ್ರವಿಷಯದಲ್ಲಿ ಹಿಂದೂಗಳೆಲ್ಲರೂ ಒಂದೇ ಎಂಬ ಭಾವನೆಯನ್ನು ಹುಟ್ಟಿಸಿತು. ಆಗ ದ್ವೈತಾದ್ವೈತ ವಿಶಿಷ್ಟಾದ್ವೈತಗಳೆಂಬ ಮೂರು ಮತಗಳಿಗೆ ಸೇರಿದ ಬ್ರಾಹ್ಮಣರೂ, ಕ್ಷತ್ರಿಯವೈಶ್ಯಶೂದ್ರರೂ ಮಾತ್ರವಲ್ಲದೆ, ವೇದಾಧಿಕಾರಕ್ಕೊಳಪಡದ ಜೈನರೂ ವೀರಶೈವರೂ ಹಿಂದೂ ಸಮಾಜಕ್ಕೆ ಸೇರಿದವರಾಗಿದ್ದರು. ಬುಕ್ಕರಾಜನ ದಳಪತಿಯಾದ ಇರುಗನು ಜೈನನು. ಬಸವಯ್ಯ ದಂಡನಾಯಕನು ಲಿಂಗವಂತನು. ಒಮ್ಮೆ ಆನೆಗುಂದಿ, ಹೊಸಪಟ್ಟಣ, ಪೆನುಗೊಂಡೆ ಈ ಪ್ರಾಂತಗಳಲ್ಲಿ ಜೈನರಿಗೂ ವೈಷ್ಣವರಿಗೂ ವಿವಾದ ಹುಟ್ಟಲು ಬುಕ್ಕರಾಯನು ಅವರೀರ್ವರಿಗೂ ಭ್ರಾತೃಧರ್ಮವನ್ನು ಬೋಧಿಸಿ ನಿಷ್ಪಕ್ಷಪಾತವಾಗಿ ಉಭಯರಿಗೂ ಸಮರ್ಪಕವಾದ ರೀತಿಯಲ್ಲಿ ನ್ಯಾಯವಿಮರ್ಶೆ ಮಾಡಿದನೆಂದು ಶಾಸನಗಳು* ತಿಳಿಸುತ್ತವೆ.

ಮಾಧವಾಮಾತ್ಯನು ಸೂತಸಂಹಿತಾವ್ಯಾಖ್ಯೆಯ ಯಜ್ಞವೈಭವಖಂಡದ ದ್ವಾದಶಾಧ್ಯಾಯದಲ್ಲಿ ಶಿವಪಾಷಂಡ, ವಿಷ್ಣುಪಾಷಂಡಗಳು ಅಜ್ಞಾನಜನಿತವಾದವುಗಳೆಂದೂ, ಭಗವಂತನೊಬ್ಬನೇ ಎಂದೂ ವಿವರಿಸಿದ್ದಾನೆ. ಇದರಿಂದ ಆ ಕಾಲದಲ್ಲಿ ಹಿಂದೂ ಜನ ಸಮುದಾಯದ ನಾನಾ ಜಾತ್ಯುಪಜಾತಿಗಳಲ್ಲಿಯೂ, ಮತಮತಾಂತರಗಳಲ್ಲಿಯೂ ಸಾಮರಸ್ಯವು ಉಂಟಾಗುತ್ತಿತ್ತೆಂದು ತಿಳಿದುಬರುತ್ತದೆ. ಹಿಂದೂ ಜನರು ದೇಶಹಿತವನ್ನು ಮುಖ್ಯವೆಂದೆಣಿಸದೆ, ತಮ್ಮ ಒಳಭೇದಗಳನ್ನು ಮರೆಯದೆ ತಮ್ಮ ತಮ್ಮೊಳಗೆ ಹೊಡೆದಾಡುತ್ತಿದ್ದರೆ, ಅಷ್ಟು ದೊಡ್ಡ ರಾಜ್ಯವು ಬೆಳೆದು ಅಷ್ಟು ಕಾಲ ಎಂದೂ ನಿಲ್ಲುತ್ತಿದ್ದಿಲ್ಲ.

(೪) ವಿಜಯನಗರದ ಚರಿತ್ರೆಯು ರಾಜ್ಯವ್ಯವಸ್ಥೆಗೂ, ಧರ್ಮಪರಿಸ್ಥಿತಿಗೂ ಇರುವ ಗಾಢವಾದ ಸಂಬಧವನ್ನು ತೋರಿಸುತ್ತದೆ. ಪ್ರಜೆಗಳ ಮತನೀತಿ ಸಾಂಪ್ರದಾಯಗಳು ಸುರಕ್ಷಿತವಾಗಿರಬೇಕಾದರೆ, ಅವರನ್ನು ಗೌರವಿಸುವಂತಹ ಪ್ರಭುವಿರಬೇಕು. ಬ್ರಾಹ್ಮಣಶಿಕ್ಷೆಯಿಲ್ಲದೆ ಕ್ಷತ್ರಿಯ ವೃತ್ತಿಯು ಹೇಗೆ ಶೋಭಿಸದೋ, ಹಾಗೆಯೇ ಕ್ಷತ್ರಿಯ ಸಹಾಯವಿಲ್ಲದೆ ಬ್ರಾಹ್ಮಣ್ಯವು ಅಭಿವರ್ಧಿಸಲಾರದು. ರಾಜಕೀಯ ವೃತ್ತಿಗೂ ವೈದಿಕ

* Epi. Karn; Magadi, 18; Sravanabelagola, 136

ವೃತ್ತಿಗೂ ದೂರವೇನೂ ಇಲ್ಲ. ಸುಜ್ಞಾನವನ್ನೂ ಸಾತ್ವಿಕತೆಯನ್ನೂ ಲೌಕಿಕ ವ್ಯಾಪಾರದಲ್ಲಿ ಉಪಯೋಗಿಸಿದರೆ, ಅವು ಸಾರ್ಥಕ್ಯವನ್ನು ಹೊಂದುವವು. ಆದುದ ರಿಂದಲೇ ಶ್ರೀವಿದ್ಯಾರಣ್ಯರು ಹೀಗೆ ಹೇಳಿದ್ದಾರೆ—

"ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಮ್ |"

(೫) ಜನಸಾಮಾನ್ಯದಲ್ಲಿ ಧರ್ಮಾಸಕ್ತಿಯೂ ಸತ್ಸಂಕಲ್ಪಗಳೂ ಹೆಚ್ಚಿದ ಹೊರತು ದೇಶವು ಉನ್ನತಿಯನ್ನು ಹೊಂದಲಾರದು. ವಿಜಯನಗರದ ಸ್ಥಾಪನೆಗೆ ಕಾರಣವಾದ ಮಹರ್ಷಿಯರು ಲೌಕಿಕ ವ್ಯವಹಾರದಲ್ಲಿ ಮಗ್ನರಾದ ತಂತ್ರಿಗಳಲ್ಲ. ಅವರು ಜ್ಞಾನಿಗಳು; ಭಕ್ತರು. ಶಂಕರರಾಮಾನುಜಮಧ್ವಾಚಾರ್ಯರಿಗೆ ಎರಡನೆಯವರಾದ ವಿದ್ಯಾರಣ್ಯ ವೇದಾಂತದೇಶಿಕ ಅಕ್ಷೋಭ್ಯತೀರ್ಥರೂ ಅವರ ಶಿಷ್ಯವರ್ಗದವರೂ ದೇಶ ಸಂಚಾರ ಮಾಡಿ ಜನರಲ್ಲಿ ಭಗವದ್ಭಕ್ತಿಯನ್ನೂ, ಕರ್ಮಶ್ರದ್ಧೆಯನ್ನೂ, ಸ್ವಧರ್ಮ ಪ್ರೀತಿಯನ್ನೂ ವೃದ್ಧಿಪಡಿಸಿದರು. ಆ ರೀತಿಯಾಗಿ ಉತ್ಪನ್ನವಾದ ಗುಣಭಾವನೆಗಳು ದೇಶಾಭಿವೃದ್ಧಿಗೆ ಸಾಧನವಾದವು.

(೬) ವಿಜಯನಗರವು ಪುರಾತನ ಹಿಂದೂರಾಜ್ಯ ಸಂಸ್ಥೆಗಳನ್ನನುಸರಿಸಿದ ಸಾಂಕುಶಪ್ರಭುತ್ವಕ್ಕೆ ಎಡೆಯಾಯಿತು. ಪಂಡಿತರು, ಮಂತ್ರಿಮಂಡಲ ಮತ್ತು ಪ್ರಜಾ ಕೋಟಿ ಇವರೆಲ್ಲರ ಅಭಿಮತವನ್ನನುಸರಿಸಿ ರಾಜನು ನಡೆಯಬೇಕೆಂಬ ಶಾಸ್ತ್ರವಚನವನ್ನು ವಿದ್ಯಾರಣ್ಯರು ಅಂಗೀಕರಿಸಿದ್ದರು.

(೭) ವಿಜಯನಗರದ ಕಾಲದಲ್ಲಿ ಸಮಾಜಸಂಸ್ಕರಣವೂ ಕೆಲವುಮಟ್ಟಿಗೆ ನಡೆ ದಿರಲಿಕ್ಕೆಬೇಕು. ಹರಿಹರ ಮೊದಲಾದವರು ಕುರುಬರು ಅಥವಾ ಒಕ್ಕಲಿಗರೆಂಬುದು ನಿಜವಾದರೆ, ಅವರಿಗೆ ಶ್ರೀವಿದ್ಯಾರಣ್ಯರಂತಹರು ಕ್ಷತ್ರಿಯಾಧಿಕಾರವನ್ನು ಕೊಟ್ಟದ್ದೇ ಸಮಯಕ್ಕನುಸಾರವಾದ ಆಚಾರಪರಿವರ್ತನೆಯನ್ನು ಸೂಚಿಸುತ್ತದೆ. ವಿಜಯನಗರ ದಲ್ಲಿ ಅನೇಕ ಪ್ರಾಂತ, ಅನೇಕ ಜಾತಿ, ಅನೇಕ ಮತ ಮತ್ತು ಅನೇಕ ಭಾಷೆಗಳ ಜನರು ವಾಸಿಸುತ್ತಿದ್ದರು. ಅದು ಜನಾಂಗದ ಏಕೀಕರಣ ಕಾಲವು. ಅದರಿಂದ ಹಲಕೆಲವು ಕಟ್ಟುಗಳು ಕಾಲಾನುಸಾರವಾಗಿ ಸಡಿಲಿಸಿರಬಹುದು.

(೮) ವಿಜಯನಗರವು ಬಹುಜನರ ವಾಸಸ್ಥಾನವಾದ ಮಹಾಪಟ್ಟಣವಷ್ಟೇ ಅಲ್ಲ; ಅದು ಪಂಡಿತರಿಗೂ, ಕಲಾಭಿಜ್ಞರಿಗೂ ಆಶ್ರಯವಾಗಿ ವಿದ್ಯಾಪ್ರಚಾರಕ್ಕೆ ಕೇಂದ್ರ ಸ್ಥಾನವಾಗಿತ್ತು. ಅನ್ವರ್ಥನಾಮಧೇಯರಾದ ಶ್ರೀವಿದ್ಯಾರಣ್ಯರೂ, ಅವರ ತಮ್ಮಂದಿರೂ ಮಾತ್ರವಲ್ಲದೆ, ಬಹುಜನ ಕವಿಗಳೂ, ವ್ಯಾಖ್ಯಾನಕಾರರೂ, ಇತರ ಗ್ರಂಥಲೇಖಕರೂ ಆ ಕಾಲದಲ್ಲಿ ಪ್ರಸಿದ್ಧರಾದರು. ಅವರು ಸಂಸ್ಕೃತ ಗ್ರಂಥರಾಶಿಯನ್ನಲ್ಲದೆ ದೇಶಭಾಷಾ ಸಂಪತ್ತನ್ನೂ ಬೆಳೆಯಿಸಿದರು. ಮಾಧವರಸನು ಸೂತಸಂಹಿತಾವ್ಯಾಖ್ಯೆಯಲ್ಲಿ ಹೇಳಿರುವ ದೇನೆಂದರೆ—

"ಯೇಷಾಂ ತು ಹೀನಜಾತೀನಾಂ ಪುರಾಣೇಷ್ಯನಧಿಕಾರಃ ತೇಷಾಮಪಿ ಸ್ವದೇಶ ಭಾಷಯೈವತತ್ತ್ವವಿದ್ಯಾಯಾಮಧಿಕಾರಃ|" ಇರಲಿ.

ಶೃಂಗೇರಿಯಲ್ಲಿ ವಿದ್ಯಾತೀರ್ಥರ ಸಮಾಧಿಯ ಮೇಲೆ ವಿದ್ಯಾರಣ್ಯರು ಕಟ್ಟಿಸಿದ ವಿದ್ಯಾಶಂಕರ ದೇವಾಲಯವು ಅವರ ಶಿಲ್ಪ ಸೌಂದರ್ಯಾಭಿರುಚಿಯನ್ನು ವ್ಯಕ್ತಗೊಳಿಸುವದಲ್ಲದೆ, ಆ ಕಾಲದ ಶಿಲ್ಪಿಗಳ ನೈಪುಣ್ಯವನ್ನೂ, ಚತುರತೆಯನ್ನೂ ತೋರಿಸುತ್ತದೆ. ಆಗ ಪ್ರಾರಂಭವಾದ ಶಿಲ್ಪಕಲಾಪ್ರೋತ್ಸಾಹವು ಕೃಷ್ಣದೇವರಾಯ ಮುಂತಾದವರ ಕಾಲದಲ್ಲಿ ಅತ್ಯದ್ಭುತವಾಗಿ ಬೆಳೆದು ಈಗಿನವರಿಗೆ ವಿಸ್ಮಯವನ್ನುಂಟುಮಾಡುವಂತಹ ಮಹಾಸೌಧಗಳನ್ನೂ, ದೇವಮಂದಿರಗಳನ್ನೂ ಪಂಪಾತೀರದಲ್ಲಿ ನಿರ್ಮಾಣಗೊಳಿಸಿತು. ಆ ಕಟ್ಟಡಗಳ ಭಗ್ನಾವಶಿಷ್ಟ ಭಾಗಗಳು ಕರ್ನಾಟಕದ ಪೂರ್ವವೈಭವಕ್ಕೆ ಸಾಕ್ಷೀಭೂತವಾಗಿ ನಿಂತು, ಪ್ರಪಂಚದ ನಾನಾ ಭಾಗಗಳಿಂದ ಪ್ರೇಕ್ಷಕವೃಂದಗಳನ್ನು ಈಗಲೂ ಆಕರ್ಷಿಸುತ್ತಿವೆ.

ಹೀಗೆ ಬಹುಮುಖವಾದ ದೇಶಾಭ್ಯುದಯ ಸಮಾರಂಭಕ್ಕೆ ಪ್ರೇರಕರಾಗಿಯೂ, ಪ್ರೋತ್ಸಾಹಕರವಾಗಿಯೂ ಯಾವ ಮಹಾಪುರುಷರು ಇದ್ದರೋ ಅವರ ಹೆಸರು, ಆರುನೂರು ವರ್ಷಗಳಾಗಿ ಹೋದರೂ ದೇಶೀಯರ ಹಾಜ್ಮಾನಸಗಳಲ್ಲಿ ಪ್ರಕಾಶಿಸುತ್ತಿರುವದಕ್ಕೆ ಆ ಮಹಾತ್ಮರ ಮಹಿಮೆಯ ಸತ್ತ್ವಗುಣವೇ ಕಾರಣವು. ವಿದ್ಯಾರಣ್ಯರ ವಿಷಯದಲ್ಲಿ ಅನೇಕ ಕಥೆಗಳೂ, ಉಪಾಖ್ಯಾನಗಳೂ, ಹಾಡುಗಳೂ, ಗಾದೆಗಳೂ ವಿರಚಿತವಾಗಿ ದೇಶೀಯರ ಉಪಕಾರ ಸ್ಮರಣೆಗೆ ಗುರುತುಗಳಾಗಿ ಈಗಲೂ ಪ್ರಚಾರದಲ್ಲಿವೆ. ಯಾವ ಸಮಾಜವು ಕಾಲವಿಪರ್ಯಾಸದಿಂದುಂಟಾದ ವಿಪತ್ತುಗಳನ್ನು ಪರಿಹರಿಸಲು ತಕ್ಕ ಮಹನೀಯರನ್ನು ತನಗೆ ತಾನೇ ಒದಗಿಸಿಕೊಳ್ಳಬಲ್ಲುದೋ, ಆ ಸಮಾಜದಲ್ಲಿ ನೈಸರ್ಗಿಕವಾದ ಸತ್ತ್ವಶಕ್ತಿಯಿರುವದೆಂಬುದು ಸ್ವತಃಸಿದ್ಧವಾದ ಮಾತು. ಒಂದಾವೃತ್ತಿ ಶ್ರೀವಿದ್ಯಾರಣ್ಯಸ್ವಾಮಿಗಳಂತಹ ಸಮಾಜ ವ್ಯವಸ್ಥಾಪಕರಿಗೆ ಜನ್ಮವಿತ್ತ ದೇಶವು, ಆವಶ್ಯಕತೆ ಬಿದ್ದರೆ ಇನ್ನೊಂದಾವೃತ್ತಿಯೂ ಮತ್ತೊಂದಾವೃತ್ತಿಯೂ ಅಂತಹರನ್ನು ತನಗೆ ತಾನೇ ಒದಗಿಸಿಕೊಳ್ಳಬಲ್ಲುದೆಂಬುದರಲ್ಲಿ ಸಂದೇಹವಿಲ್ಲ.

ಹಿಂದೆ ಹೇಳಿದಂತೆ—

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ||

ಎಂಬ ಗೀತಾವಾಕ್ಯದ ದೃಷ್ಟಾಂತವನ್ನು ಆರ್ಯರ ಸಮಾಜದ ಈ ಸ್ವಸಂರಕ್ಷಣಶಕ್ತಿಯಲ್ಲಿಯೂ, ಆ ಶಕ್ತಿಯ ಮೂರ್ತರೂಪರಾದ ಮಹಾಪುರುಷರ ಜೀವನ ಚರಿತ್ರೆಯಲ್ಲಿಯೂ ಕಾಣಬಹುದಾಗಿದೆ. ಆರುನೂರು ವರ್ಷಗಳ ಹಿಂದೆ ಯಾವ ಮಹಾನುಭಾವರ ಬ್ರಾಹ್ಮಣ್ಯವು ದೀನವೃತ್ತಿಯದಾಗಿರದೆ ಧೀರವೃತ್ತಿಯಾಗಿ ವೇದಶಾಸ್ತ್ರಾಭ್ಯುದಯಕ್ಕೆ ಹೇತುವಾಯಿತೋ, ಯಾವ ಮಹಾಭಾಗರ ವೈರಾಗ್ಯವು ತಾಟಸ್ಥ್ಯದಲ್ಲಿ ಪರ್ಯವಸಾನ

ವನ್ನು ಹೊಂದದೆ ಪೌರುಷಪ್ರಕಾಶದಲ್ಲಿ ಪ್ರತಿಫಲಿಸಿತೋ, ಯಾವ ವಿದ್ವದ್ವರ್ಯರ ವೇದಾಂತವು ಶುಷ್ಕಾಲಾಪವೆನಿಸದೆ ದೇಶೋನ್ನತಿಕಾರಕವಾಯಿತೋ ಆ ಶ್ರೀಮದ್ವಿದ್ಯಾರಣ್ಯಸ್ವಾಮಿಗಳವರ ಚರಿತ್ರೆಯು ಈ ವಿಷಮಕಾಲದಲ್ಲಿ ನಮಗೆ ಕಗ್ಗತ್ತಲೆಯಲ್ಲಿ ಕಾಣಬಂದ ಪಂಜಿನಂತೆಯೂ, ಮರುಭೂಮಿಯಲ್ಲಿ ಪ್ರಾಪ್ತವಾದ ಸರೋವರದಂತೆಯೂ ಇದೆ. ಆ ಸರಸ್ಸಿನಲ್ಲಿ ನಮ್ಮ ಅಂತಃಕರಣವನ್ನು ತೊಳೆಯೋಣ. ಆ ದೀವಿಗೆಯ ಬೆಳಕಿನಲ್ಲಿ ನಮ್ಮ ಜೀವನಯಾತ್ರೆಯನ್ನು ನಡಿಸೋಣ.

# ಪೂರಕಪ್ರಕರಣ

## ಸಮ್ಮಿಶ್ರಸಂಗತಿ

ಶ್ರೀವಿದ್ಯಾರಣ್ಯರ ಮತ್ತು ವಿಜಯನಗರದ ವಿಷಯದಲ್ಲಿ ಗೊತ್ತಾದ, ಹಿಂದಿನ ಪ್ರಕರಣಗಳಲ್ಲಿ ಬಾರದೆ ಹೋದ ಕೆಲವು ಸಂಗತಿಗಳನ್ನು ಈ ಪ್ರಕರಣದಲ್ಲಿ ಬರೆಯುತ್ತೇವೆ.

### ೧. ವಿದ್ಯಾರಣ್ಯರ ಕಾಲದಲ್ಲಿ ಪಾಶ್ಚಾತ್ಯರ ಸ್ಥಿತಿ

ಶ್ರೀವಿದ್ಯಾರಣ್ಯಸ್ವಾಮಿಗಳ ಕಾಲವು ಪ್ರಪಂಚದ ಚರಿತ್ರೆಯಲ್ಲಿ ಒಂದು ಸಂಧಿ ಸಮಯವಾಗಿತ್ತೆಂದು ಹೇಳಬಹುದು. ಯುರೋಪ ಖಂಡದೊಳಗಿನ ಬೇರೆ ಬೇರೆ ಭಾಗಗಳ ಕ್ರಿಶ್ಚನ್ನರು ತಮ್ಮ ಪುಣ್ಯ ಕ್ಷೇತ್ರವಾದ ಸಿರಿಯಾ ಪ್ರಾಂತವನ್ನು ಮುಸಲ್ಮಾನರಿಂದ ಸೆಳೆದುಕೊಳ್ಳುವದಕ್ಕಾಗಿ ಮುನ್ನೂರು ವರುಷಗಳ ಹಿಂದಿನಿಂದ ನಡೆಯಿಸಿದ 'ಕ್ರೂಸೇಡ್' ಎಂಬ ಧರ್ಮನಿಮಿತ್ತವಾದ ಯುದ್ಧವು ಆಗ ತಾನೆ ಮುಗಿದಿತ್ತು. ಪೂರ್ವ ಮತ್ತು ಪಶ್ಚಿಮ ದೇಶದವರ ಆ ಮಹಾಸಂಘಟನೆಯಿಂದ ಯುರೋಪಖಂಡದ ರಾಜ್ಯಗಳಲ್ಲಿ ಸ್ವಮತಾಭಿಮಾನವು ವೃದ್ಧಿಗೊಂಡಿತು. ಅದರಿಂದ ಅವರ ಬುದ್ಧಿ ವಿಕಸನಕ್ಕೂ ವಿದ್ಯಾಭಿವೃದ್ಧಿಗೂ ಮಾರ್ಗವಾಯಿತು. ಅದೇ ಕಾಲದಲ್ಲಿಯೇ ಆ ಮತಪ್ರಯುಕ್ತವಾದ ಯುದ್ಧಕ್ಕೆ ಮುಖ್ಯೋತ್ತೇಜಕನೂ, ರೋಮು ಪಟ್ಟಣದ ಮಠಾಧಿಪತಿಯೂ ಆದ 'ಪೋಪ'ನೆಂಬ ಮಹಾಗುರುವಿಗೂ, ಆತನ ಲೌಕಿಕಾಧಿಪತ್ಯದಲ್ಲಿ ಭಾಗಸ್ಥನಾದ ರೋಮನ್ ಚಕ್ರವರ್ತಿಗೂ ಅವರವರ ಅಧಿಕಾರವ್ಯಾಪ್ತಿಯ ವಿಷಯದಲ್ಲಿ ವಿರೋಧವುಂಟಾಯಿತು. ಮತ್ತು ಈ ಕಲಹ ಪರಂಪರೆಯ ಮೂಲಕ ಅವರಿಬ್ಬರ ಪ್ರಾಬಲ್ಯವೂ ಇಳಿದು ಸಾಮಂತ ರಾಜರ ಸ್ವತಂತ್ರ ವರ್ತನೆಯು ಹೆಚ್ಚಾಯಿತು. ಹೀಗೆ ಫ್ರಾನ್ಸ ಮತ್ತು ಇಂಗ್ಲಂಡದ ಜನರ ದೃಷ್ಟಿಯು ದೇಶಾಂತರದಿಂದ ತಿರುಗಿತು; ಮತ್ತು ರಾಷ್ಟ್ರೀಯ ಭಾವನೆಯು ಅವರಲ್ಲಿ ಹುಟ್ಟಿತು. ಯುರೋಪಿಯನರ ವಿದ್ಯಾವೈಭವಕ್ಕೆ ಮೂಲಸ್ಥಾನವಾದ ಗ್ರೀಸ ದೇಶವು ಆಗ ಮುಸಲ್ಮಾನರ ಕೈಸೇರಿತ್ತು; ಯುರೋಪ ದೇಶದವರ ವೈದುಷ್ಯಕ್ಕೆ ಎರಡನೆಯ ಜನ್ಮಭೂಮಿಯೆನಿಸಿದ ರೋಮರಾಷ್ಟ್ರದಲ್ಲಿ ಮೇಲೆ ಹೇಳಿದಂತೆ ರಾಜನಿಗೂ ಧರ್ಮಗುರುವಿಗೂ ದೀರ್ಘಕಾಲದ ಹೋರಾಟ ನಡೆದು ಪ್ರಜೆಗಳಲ್ಲಿ ಅಶಾಂತತೆಯೂ ವಿಪ್ಲವಬುದ್ಧಿಯೂ ಹುಟ್ಟಿತ್ತು. ಇಟಲಿ ದೇಶದ ಮಹಾ ಕವಿಯಾದ ಡಾಂಟೆ (ಕ್ರಿ. ಶ. ೧೨೬೫-೧೩೨೧) ಯು ಸ್ವದೇಶದ ದುರವಸ್ಥೆಯನ್ನು ಬಗೆಬಗೆಯಾಗಿ ಬಣ್ಣಿಸಿದನು. ಇಂಗ್ಲಂಡದ ಆದಿಕವಿಯಾದ ಛಾಸರ (ಕ್ರಿ. ಶ. ೧೩೪೦-೧೪೦೦) ನು ತನ್ನ ಕೃತಿಯನ್ನು ಆಗ ತಾನೆ ಆರಂಭಿಸಿದ್ದನು. ಇಂಗ್ಲಂಡ ದೇಶದ ಮತಪರಿಷ್ಕಾರಕನಾದ ವಿಕ್ಲಿಫ್ (ಕ್ರಿ. ಶ. ೧೩೨೦-೧೩೮೪) ಪಂಡಿತನೂ, ಅವನ ತರುವಾಯ ಮತ

ಸಂಸ್ಕಾರಕನಾಗಿ ಬೊಹಿಮಿಯಾ ಮೊದಲಾದ ಮಧ್ಯರಾಷ್ಟ್ರಗಳಲ್ಲಿ ರಾಷ್ಟ್ರೀಯತ್ವವನ್ನು ಉಪದೇಶಿಸಿದ ಜಾನ್ ಹಸ್ (ಕ್ರಿ. ಶ. ೧೩೭೩–೧೪೧೫) ಎಂಬವನೂ ತಮ್ಮ ತಮ್ಮ ಬೋಧನೆಗಳನ್ನು ಪ್ರಾರಂಭಿಸಿದರು. ಯುರೋಪ ದೇಶದವರ ಮನಸ್ಸು ಈ ರೀತಿಯಾಗಿ ಅಲ್ಲೋಲಕಲ್ಲೋಲವಾಗಿ ಅವರ ವೈದುಷ್ಯ ನಾಗರಿಕತೆಗಳು ಈ ಕಾಲದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದುವು, ಆಗ ಇನ್ನೂ ಅಮೇರಿಕಾ ಖಂಡದ ಶೋಧವಾಗಿದ್ದಿಲ್ಲ. ಅರಬಸ್ತಾನ, ತುರ್ಕಸ್ಥಾನ, ಇರಾಣ, ಜಪಾನ, ಚೀನ ಮೊದಲಾದ ಏಶಿಯಾಖಂಡದ ದೇಶಗಳು ನಾಗರಿಕ ಜನರ ಗಣನೆಗೆ ಇನ್ನೂ ಬಂದಿದ್ದಿಲ್ಲ. ಹೀಗೆ ಪ್ರಪಂಚದ ಇತರ ಜನಾಂಗಗಳು ಇನ್ನೂ ಬಹುಮಟ್ಟಿಗೆ ಪ್ರಾಕೃತವೆಶೆಯಲ್ಲಿದ್ದ ಸಮಯದಲ್ಲಿ ಹಿಂದುಸ್ಥಾನದ ಆರ್ಷೇಯ ವಿಭೂತಿಗೆ ಒದಗಿದ ಅಪಾಯದಿಂದ ಅದನ್ನು ಸಂರಕ್ಷಿಸಿ ಸ್ಥಿರಗೊಳಿಸಿದವರು ಶ್ರೀವಿದ್ಯಾರಣ್ಯಸ್ವಾಮಿಗಳೇ !

## ೨. ವಿದ್ಯಾರಣ್ಯರೂ ವೇದಾಂತದೇಶಿಕರೂ

ಶ್ರೀವಿದ್ಯಾರಣ್ಯಸ್ವಾಮಿಗಳು ವಿದ್ಯಾತುರರಾಗಿ ಚಿಕ್ಕ ವಯಸ್ಸಿನಲ್ಲಿಯೇ ಕಾಂಚೀಪುರಕ್ಕೆ ತೆರಳಿದರು. ಅಲ್ಲಿ ವೇದಾಂತದೇಶಿಕರೆಂಬ ಹೆಸರಿನಿಂದ ಪ್ರಸಿದ್ಧರಾದ ವೆಂಕಟನಾಥಾರ್ಯನು ಇವರ ಸಹಾಧ್ಯಾಯಿಗಳಾಗಿದ್ದರೆಂದು ಐತಿಹ್ಯವುಂಟು. ಈ ವೇದಾಂತ ದೇಶಿಕರು ತಮ್ಮ ವಯಸ್ಸಿನ ಇಪ್ಪತ್ತನೆಯ ವರ್ಷದಲ್ಲಿಯೇ ಸಕಲಶಾಸ್ತ್ರಪಾರಂಗತರಾದರು; ಬಳಿಕ ವಿವಾಹವನ್ನು ಮಾಡಿಕೊಂಡರು. ಆ ಮೇಲೆ ತಿರುವಹೀಂದ್ರಪುರ, ತಿರುಪತಿ ಮೊದಲಾದ ಕ್ಷೇತ್ರಗಳಲ್ಲಿ ಕೆಲವು ದಿವಸಗಳ ವರೆಗೆ ಇದ್ದು, ಮಲಿಕ ಕಾಫುರನು ದಂಡೆತ್ತಿಬಂದ ಸಮಯದಲ್ಲಿ ಶ್ರೀರಂಗದಲ್ಲಿ ನೆಲಿಸಿ ಶಿಷ್ಯಾರ್ಜನೆ ಮಾಡಿಕೊಂಡು ಪಾಠ ಪ್ರವಚನಗಳಲ್ಲಿ ಕಾಲಕಳೆಯುತ್ತಿದ್ದರು. ಆಗ ಮಧುರೆಯ ಮೇಲೆ ದಂಡೆತ್ತಿ ಹೋಗುತ್ತಿದ್ದ ಮಲಿಕಕಾಫುರನು ಶ್ರೀರಂಗಕ್ಕೂ ನುಗ್ಗಿದನು. ಅಲ್ಲಿಯ ಸುದರ್ಶನ ಭಟ್ಟರೆಂಬ ಪಂಡಿತರು ತಾವು ಬರೆದು "ಶ್ರುತಪ್ರಕಾಶಿಕೆ" ಎಂಬ ಗ್ರಂಥವನ್ನೂ, ತಮ್ಮ ಇಬ್ಬರು ಮಕ್ಕಳನ್ನೂ ಕಾಪಾಡಬೇಕೆಂದು ವೇದಾಂತದೇಶಿಕರನ್ನು ಬೇಡಿಕೊಂಡರು. ವೇದಾಂತ ದೇಶಿಕರು ಅವರಿಗೆ ಅಭಿವಚನವನ್ನು ಕೊಟ್ಟರು; ಮತ್ತು ಯುದ್ಧ ಕಾಲದಲ್ಲಿ ಓಲೆಯ ಪುಸ್ತಕವನ್ನು ಮರಳಿನಲ್ಲಿ ಹೂತಿಟ್ಟು, ತಾವೂ ಹುಡುಗರೂ ಯುದ್ಧರಂಗದ ಶವ ಮಧ್ಯದಲ್ಲಿ ಶವಗಳಂತೆ ಬಿದ್ದಿದ್ದು ಪ್ರಾಣಗಳನ್ನುಳಿಸಿಕೊಂಡರು. ಶತ್ರುವು ವಿಶ್ರಾಂತನಾದ ಬಳಿಕ ಆ ಗ್ರಂಥವನ್ನು ತೆಗೆದುಕೊಂಡು, ಬಾಲಕರನ್ನು ಸಂಗಡ ಕರೆದುಕೊಂಡು ಸತ್ಯಮಂಗಲಕ್ಕೆ ತೆರಳಿದರು. ಈ ಸಂಗತಿಯು ಅನಂತ ಕಾರ್ಯಕೃತ "ಪ್ರಪನ್ನಾಮೃತ"ದ ೧೨೧ನೆಯ ಅಧ್ಯಾಯದಲ್ಲಿಯೂ, ಶ್ರೀವೈಷ್ಣವರ "ಗುರುಪರಂಪರಾಪ್ರಭಾವ"ದ ೧೪೫ನೆಯ ಪುಟದಲ್ಲಿಯೂ ಇದೆ. ವೇದಾಂತದೇಶಿಕರು ರಚಿಸಿದ "ಅಭೀತಿಸ್ತವ"ದಲ್ಲಿ ಅವರು ಅನುಭವಿಸಿದ ಅನ್ಯದೇಶೀಯರ ಪೀಡೆಯ ಛಾಯೆಯು ಗೋಚರವಾಗುತ್ತದೆ.

## ೩. ವಿಜಯನಗರದ ರಾಜ್ಯವಿಸ್ತರಣವೂ, ಹರಿಹರರಾಯನ ಆಳಿಕೆಯೂ

ಹರಿಹರನ ರಾಜ್ಯಾಭಿಷೇಕವೂ, ವಿಜಯನಗರದ ಪ್ರತಿಷ್ಠೆಯೂ ಕ್ರಿ.ಶ. ೧೩೩೬ರಲ್ಲಿ ಶ್ರೀವಿದ್ಯಾರಣ್ಯಸ್ವಾಮಿಗಳವರ ಪ್ರಯತ್ನದಿಂದ ನಡೆದುವೆಂಬುದಕ್ಕೆ ಹಂಪೆಯ ಒಂದು ದೇವಸ್ಥಾನದಲ್ಲಿರುವ ಈ ಕೆಳಗಿನ ಶ್ಲೋಕವು ಆಧಾರವಾಗಿದೆ :

ನಾಗೇಷ್ವರ್ಕೇ ನಮಿತನೃಪತೇಶ್ಯಾಲಿವಾಹಶ್ಯ ಯಾತೇ |
ಧಾತೋರಬ್ದೇ ಸುಗುಣಸಹಿತೇ ಮಾಸಿ ವೈಶಾಖನಾಮ್ನಿ ||
ಶುಕ್ಲೇ ಪಕ್ಷೇ ಸುರಗುರುಯುತೇ ಸೌಮ್ಯವಾರೇ ಸುಲಗ್ನೇ |
ಸಪ್ತಮ್ಯಾಂ ಶ್ರೀವಿಜಯನಗರಂ ನಿರ್ಮಮೇ ನಿರ್ಮಮೇಂದ್ರಃ ||

ಈ ಹೇಳಿಕೆಯನ್ನು ಸಮರ್ಥಿಸುವದಕ್ಕೆ ಆರುನೂರು ವರ್ಷಗಳಿಂದ ಕರ್ಣೋಪಕರ್ಣವಾಗಿ ಬಂದಿರುವ ಜನವಾಕ್ಯವೊಂದೇ ಅಲ್ಲದೆ, ಅನೇಕ ಪ್ರಾಚೀನ ಲೇಖಗಳೂ ಕಾರಣವಾಗಿವೆ.

(i) ಶೃಂಗೇರಿಯ ಗುರುಪೀಳಿಗೆಯಲ್ಲಿ ಹೀಗೆ ಉಲ್ಲೇಖವಿದೆ —

ವಿದ್ಯಾಶಂಕರತೀರ್ಥಾಖ್ಯೋ ಲಂಬಿಕಾಯೋಗತತ್ಪರಃ |
ಭಾರತೀಕೃಷ್ಣತೀರ್ಥಾಖ್ಯೋ ವಿದ್ಯಾರಣ್ಯಮಹಾಮುನಿಃ ||
ವಿದ್ಯಾನಗರನಿರ್ಮಾತಾ ವೇದಭಾಷ್ಯಾದಿಕೃದ್ಗುರುಃ |

(ii) "ವಿದ್ಯಾರಣ್ಯಾಷ್ಟೋತ್ತರ ಶತನಾಮಾವಳಿ" ಎಂಬ ಪುರಾತನ ಗ್ರಂಥದಲ್ಲಿ ಹೀಗೆ ಇದೆ —

ವಿದ್ಯಾರಣ್ಯಮಹಾಯೋಗಿ ಮಹಾವಿದ್ಯಾಪ್ರಕಾಶಕಃ |
ಶ್ರೀವಿದ್ಯಾನಗರೋದ್ಧರ್ತಾ ವಿದ್ಯಾರತ್ನಮಹೋದಧಿಃ ||
ವಿರೂಪಾಕ್ಷಮಹಾಕ್ಷೇತ್ರಸ್ವರ್ಣವೃಷ್ಟಿಪ್ರಕಲ್ಪಕಃ |
ವೇದತ್ರಯೋಲ್ಲಸದ್ಭಾಷ್ಯಕರ್ತಾ ತತ್ತ್ವಾರ್ಥಕೋವಿದಃ ||
ಶ್ರೀಮತ್ಕರ್ಣಾಟರಾಜ್ಯಶ್ರೀಸಂಪತ್ಸಿಂಹಾಸನಪ್ರಭುಃ |
ಶ್ರೀಮದ್ಬುಕ್ಕಮಹೀಪಾಲರಾಜ್ಯಪಟ್ಟಾಭಿಷೇಕಕೃತ್ ||

(iii) ಅಹೋಬಲ ಪಂಡಿತರು ತಮ್ಮ ಈಶಾನಸ್ತುತಿಯಲ್ಲಿ ಬರೆದಿರುವದೇನಂದರೆ –

ವೇದಾನಾಂ ಭಾಷ್ಯಕರ್ತಾ ವಿವೃತಮುನಿವಚಾ ಧಾತುವೃತ್ತೇರ್ವಿಧಾತಾ |
ಪ್ರೋದ್ಯದ್ವಿದ್ಯಾನಗರ್ಯಾಂ ಹರಿಹರನೃಪತೇಸ್ಸಾರ್ವಭೌಮತ್ವದಾಯೀ ||
ವಾಣೀ ನೀಲಾಹಿ ವೇಣೀ ಸರಸಿಜನಿಲಯಾಕಿಂಕರೀತಿ ಪ್ರಸಿದ್ಧಾ |
ವಿದ್ಯಾರಣ್ಯೋಽಗ್ರಗಣ್ಯೋ ಭವದಖಿಲಗುರುಶ್ಶಂಕರೋ ವೀತಶಂಕಃ ||

ಈ ಅಹೋಬಲ ಪಂಡಿತರು ಮಾಧವಾಚಾರ್ಯರ ಸೋದರಳಿಯರೆಂದು ಗೊತ್ತಾಗಿದೆ. ಅವರು "ಅಹೋಬಲಿ ಪಂಡಿತೀಯ" ಎಂಬ ಒಂದು ಆಂಧ್ರವ್ಯಾಕರಣವನ್ನು "ಕರ್ಣಾಟಕ ಶಬ್ದಾನುಶಾಸನ"ದ ರೀತಿಯಲ್ಲಿ ಬರೆದಿರುವರು.

(iv) ಕ್ರಿ. ಶ. ೧೩೪೪ ನೆಯ ವರ್ಷದ ಮುಳಬಾಗಲು ತಾಲೂಕಿನ ೧೫೮ ನೆಯ ಶಾಸನವು ಹೀಗೆ ಹೇಳುತ್ತದೆ:

ವಿದ್ಯಾಭಿಧಾನನಗರೀ ವಿಜಯೋನ್ನತಶಾಲಿನೀ ।
ವಿದ್ಯಾರಣ್ಯಕೃತಾ ತಸ್ಯಾಂ ರತ್ನಸಿಂಹಾಸನೇ ಸ್ಥಿತಃ ॥

ಹರಿಹರನ ಪಟ್ಟಾಭಿಷೇಕ ಸಮಯದ ಕೆಲವು ದಾನಗಳನ್ನು ವಿವರಿಸುವ, ಬಾಗೇಪಲ್ಲಿಯ ಒಂದು ಶಾಸನವು (ಕ್ರಿ. ಶ. ೧೩೩೬) ಇದೇ ಅರ್ಥವನ್ನು ಹೇಳುತ್ತದೆ.

(v) ಕ್ರಿ. ಶ. ೧೬೫೨ ರಲ್ಲಿ ಬರೆದಿರುವ ಶೃಂಗೇರಿಯ ಒಂದು ಶಾಸನದಲ್ಲಿ ಹೀಗೆ ಉಲ್ಲೇಖವಿದೆ :

ಅಸ್ಮಾಕಂ ಗುರವಃ ಪೂರ್ವೇ ವಿದ್ಯಾರಣ್ಯಮುನೀಶ್ವರಾಃ ।
ಚತುರ್ಣಾಮಪಿ ವೇದಾನಾಂ ಸಾಧುಭಾಷ್ಯಪ್ರವರ್ತಕಾಃ ॥
ಪಂಪಾತೀರನಿವಾಸಶ್ರೀವಿರೂಪಾಕ್ಷಪ್ರಸಾದತಃ ।
ತಪೋಬಲೇನ ಲೋಕಾನಾಮನುಗ್ರಹವಿಧಿತ್ಸಯಾ ॥
ನಿರ್ಮಾಯ ವಿದ್ಯಾನಗರಂ ನೃಪಂ ಹರಿಹರಾಭಿಧಮ್ ।
ಗೋದೇವದ್ವಿಜರಕ್ಷಾರ್ಥಮಭ್ಯಷಿಂಚನ್ ನೃಪಾಸನೇ ॥

ಈ ಹರಿಹರನಿಗೆ ನಾಲ್ವರು ತಮ್ಮಂದಿರಿದ್ದರೆಂದು ಹಿಂದೆ ಹೇಳಿದೆಯಷ್ಟೇ; ಅವರಲ್ಲಿ ಮೊದಲನೆಯವನಾದ ಕಂಪಣ್ಣನು ನೆಲ್ಲೂರು ಮತ್ತು ಕಡಪಾ ಪ್ರಾಂತಗಳಲ್ಲಿ ವಿಜಯಯಾತ್ರೆಯನ್ನು ಮಾಡಿ ರಾಜ್ಯವನ್ನು ವಿಸ್ತರಿಸಿದನು. ಸಾಯಣಾಚಾರ್ಯರು ಇವನ ಮಂತ್ರಿಯಾಗಿದ್ದರು. ಎರಡನೆಯವನಾದ ಬುಕ್ಕನು ಸೇನಾಪತಿಯಾಗಿ ರಾಜ್ಯರಕ್ಷಣ ಕಾರ್ಯದಲ್ಲಿದ್ದಂತೆ ತೋರುತ್ತದೆ. ಮೂರನೆಯವನಾದ ಮಾರಪ್ಪನು ಕದಂಬ ರಾಜ್ಯವನ್ನಾಕ್ರಮಿಸಿ ಚಂದ್ರಗುತ್ತಿಯಲ್ಲಿ ನೆಲೆಸಿದ್ದನು. ಇವನ ಮಂತ್ರಿಯಾದ ಮಾಧವಾಮಾತ್ಯನು (ಮಾದರಸನು) ಮಹಾಪಂಡಿತನೂ ಶೂರನೂ ಆಗಿದ್ದನು. ಕಡೆಯವನಾದ ಮುದ್ದಪ್ಪನು ಬಹುಶಃ ರಾಜಧಾನಿಯಲ್ಲಿಯೇ ಇದ್ದನು. ಹರಿಹರರಾಯನಿಗೆ ಸೋಮಣ್ಣನೆಂಬ ಮಗನೂ, ಬಲ್ಲಪ್ಪನೆಂಬ ಅಳಿಯನೂ ಇದ್ದರು. ಇವರೆಲ್ಲರೂ ನೂತನ ರಾಜ್ಯಲಾಭದಿಂದ ಮದಿಸಿ ಸ್ವಸುಖಲೋಲುಪರಾಗಿ ಮೈಮರೆಯದೆ, ಶೂರರೂ ದಾನಶೀಲರೂ ಆಗಿ ರಾಜ್ಯಕಾರ್ಯದಲ್ಲಿ ಬದ್ಧರಾಗಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.

ಹೀಗೆ ವಿಜಯನಗರದ ರಾಜ್ಯವು, ಪಂಡಿತಾಗ್ರಗಣ್ಯರೆನಿಸಿ ವಿರಕ್ತರಾಗಿ ಜಗದ್ಗುರು ಪದವಿಯನ್ನಡರಿದ್ದ ಯತಿಗಳ ಪೋಷಣೆಯಿಂದಲೂ ಶೂರರಾದ ರಾಜಕುಮಾರರ ಕಾರ್ಯ

ದಕ್ಷತೆಯಿಂದಲೂ ತಲೆಯೆತ್ತಿತು. ಮತ್ತು ಅದೇ ಕಾಲದಲ್ಲಿ ಹಾಳಾಗಿ ಉಳಿದಿದ್ದ ಎದೆಗುಂದಿದವರಾದ ಇತರ ಹಿಂದೂ ರಾಜರ ಹೃದಯದಲ್ಲಿಯೂ ಒಂದು ಪ್ರಕಾರದ ಹೊಸ ಧೈರ್ಯವೂ ಉತ್ಸಾಹವೂ ತಲೆದೋರಿತು. ಅವರು ವಿಜಯನಗರದವರೊಡನೆ ಸ್ನೇಹವನ್ನು ಬೆಳೆಯಿಸಲಾರಂಭಿಸಿದರು. ಹಾಗೆ ಮಾಡದವರನ್ನು ನಿರ್ಬಂಧದಿಂದ ಸ್ವಾಧೀನಪಡಿಸಿಕೊಳ್ಳುವದಕ್ಕೆ ತಕ್ಕ ಶಕ್ತಿ-ಸಾಹಸಗಳು ವಿಜಯನಗರದ ಅರಸರಲ್ಲಿಯೂ ಇದ್ದುವು. ಕ್ರಿ. ಶ. ೧೩೪೪ ನೆಯ ವರುಷ ವರಂಗಲ್ಲಿನ ಕೃಷ್ಣರಾಜನೂ ದ್ವಾರಸಮುದ್ರದ ಬಲ್ಲಾಳರಾಜನೂ ಹರಿಹರನ ಸಹಾಯದಿಂದ ಮಹಮ್ಮದೀಯರನ್ನು ಕೆಲವು ಭಾಗಗಳಿಂದ ಓಡಿಸಿದರು. ಮಲಪ್ರಭಾ ನದಿಯ ಉತ್ತರಕ್ಕಿರುವ ಕಲಾದಿಗೆಯಿಂದ ದಕ್ಷಿಣಕ್ಕಿರುವ ಬಹುಭಾಗವು ಕ್ರಮವಾಗಿ ಹರಿಹರನ ಆಧಿಪತ್ಯಕ್ಕೆ ಒಳಪಟ್ಟಿತು. ಹುಣಸೂರು ತಾಲೂಕಿನ ಚಪ್ಪರದಹಳ್ಳಿಯ ಹತ್ತಿರ ಕ್ರಿ. ಶ ೧೩೪೫ ನೆಯ ವರ್ಷ (ತಾರಣ ಸಂವತ್ಸರ) ಕೆಲವರು ಗೌಡರು "ಹರಿಯಪ್ಪ ಒಡೆಯರಿ" ಗಾಗಿ ಯುದ್ಧದಲ್ಲಿ ಮಡಿದರೆಂದು ಅಲ್ಲಿಯ ವೀರಗಲ್ಲಿನಿಂದ ತಿಳಿಯುತ್ತದೆ. ಅದರ ಹಿಂದಿನ ವರುಷದಲ್ಲಿ ಹರಿಹರನ ಅಧಿಕಾರಿಗಳಲ್ಲೊಬ್ಬನಾದ ಚಾಯಣ್ಣ (ಛಾಯಣ್ಣ) ನು ಮೈಸೂರು ಪ್ರಾಂತದಲ್ಲಿ ಒಂದು ಕೆರೆಯನ್ನೂ ಅಗ್ರಹಾರವನ್ನೂ ಕಟ್ಟಿಸಿ ಬ್ರಾಹ್ಮಣರಿಗೆ ಕೊಟ್ಟುದಲ್ಲದೆ, ತನ್ನ ತಾಯಿಯ ಸ್ಮರಣಾರ್ಥವಾಗಿ ಅದಕ್ಕೆ ಮಂಗಾಪುರವೆಂಬ ಹೆಸರಿಟ್ಟನೆಂದು ಒಂದು ಶಾಸನದಿಂದ ತಿಳಿಯುತ್ತದೆ. ಇದರಿಂದ ಈಗಿನ ಮೈಸೂರು ಪ್ರಾಂತವೆಲ್ಲ ಹರಿಹರನ ಅಧೀನದಲ್ಲಿತ್ತೆಂದು ತೋರುತ್ತದೆ. ಹರಿಹರನು ತನಗೆ ನಾನಾ ದಿಕ್ಕುಗಳಲ್ಲಿ ಜಯಪ್ರಾಪ್ತಿಯಾಗಬೇಕೆಂದು, ವಿದ್ಯಾರಣ್ಯರ ಆಶ್ರಮ ಗುರುಗಳಾದ ಭಾರತೀತೀರ್ಥರವರಿಗೆ ದಾನಗಳನ್ನು ಅರ್ಪಿಸಿದರೆಂದು ಕ್ರಿ. ಶ. ೧೩೪೬ನೆಯ ವರ್ಷದ ಶೃಂಗೇರಿಯ ಒಂದು ಶಾಸನದಲ್ಲಿ ತಿಳಿಯುತ್ತದೆ. ಅದರ ಪೀಠಿಕಾ ಪದ್ಯವು ಭಾವಗರ್ಭಿತವಾಗಿರುವದರಿಂದ ಅದನ್ನಿಲ್ಲಿ ಉದ್ಧರಿಸುತ್ತೇವೆ :

ವಿದ್ಯಾತೀರ್ಥಾಯ ಗುರವೇ ಪರಸ್ಮೈ ತೇಜಸೇ ನಮಃ |
ಯಸ್ಯ ನಾಂಗೀಕೃತಃ ಸ್ನೇಹದಶಾಹಾನಿಃ ಕದಾಚನ ||
ಪೂರ್ವಾಪರಸಮುದ್ರಾಂತಾಂ ಜಿತ್ವಾ ಹರಿಹರೋ ಭುವಮ್ |
ಜಯೋತ್ಸವಂ ಖ್ಯಾಪಯಿತುಮಕರೋದ್ಧರ್ಮಮುತ್ತಮಮ್ ||

"ಸ್ವಸ್ತಿ ಶ್ರೀವಿಜಯಾಭ್ಯುದಯ ಶಕ ವರುಷ ೧೨೬೮ನೆಯ ಪಾರ್ಥಿವ ಸಂವತ್ಸರದ ಫಾಲ್ಗುಣ ಬಹುಳ ೧ ಗುರುವಾರದಂದು ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ಅರಿರಾಯರ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ ಶ್ರೀವೀರಹರಿಯ ಒಡೆಯರು, ಕಂಪಂಣೊಡೆಯರು, ಬುಕಂಣೊಡೆಯರು, ಮಾರಪ್ಪೊಡೆಯರು, ಮುದ್ದಪ್ಪೊಡೆಯರು, ಅಳಿಯ ಬಲ್ಲಪ್ಪ ದಂಣಾಯಕರು, ಕುಮಾರ ಸೋವಂಣೊಡೆಯರು ಮುಖ್ಯ ಈ ಪ್ಪೊಳಗಾದವರು ಭಾರತೀತೀರ್ಥ ಶ್ರೀಪಾದಂಗಳೂ ಅವರ ಶಿಷ್ಯಾದಿಗಳೂ ಆ ಶೃಂಗೇರಿಯ ತೀರ್ಥವಾಸದಲು ಅನುಷ್ಠಾನ ಮಾಡಿಕೊಂಡಿಹದಕ್ಕೆ ಆ ಪರಿಚಾರಕರಾಗಿ ಮಾಡುವ ಬ್ರಾಹ್ಮಣರು ನಾಲ್ವತ್ತಕ್ಕೆ ಕೊಟ್ಟ ಶಿಲಾಶಾಸನದ ಕ್ರಮವೆಂತೆಂದಡೆ–"

ಹರಿಹರರಾಯನು ಸುಮಾರು ಕ್ರಿ. ಶ. ೧೩೫೪ ರಲ್ಲಿ ಕಾಲಾಧೀನನಾದನು. ಅವನ ಮೊದಲನೆಯ ತಮ್ಮನಾದ ಕಂಪಣ್ಣನೂ, ಮಗನಾದ ಸೋವಣ್ಣನೂ ಆ ವೇಳೆಗೆ ಮೃತರಾಗಿದ್ದರು. ಕಂಪಣ್ಣನ ಮಗನಾದ ಸಂಗಮನು ಇನ್ನೂ ಚಿಕ್ಕವನಾಗಿದ್ದ ಕಾರಣ ಸಾಯಣಾಚಾರ್ಯರು ಅವನಿಗೆ ಗುರುಗಳಾಗಿಯೂ ಪ್ರತಿನಿಧಿಪಾಲಕರಾಗಿಯೂ ಇದ್ದರು. ಕ್ರಿ. ಶ. ೧೩೪೬ ನೆಯ ವರುಷದ ಶೃಂಗೇರಿಯ ಶಾಸನದಲ್ಲಿ ಹರಿಹರನ ವಿಷಯವಾಗಿ ಹೀಗೆ ಹೇಳಿದೆ :

ಶ್ರೀಮತ್ಸಾಮ್ರಾಜ್ಯಾಧಿರಾಜೌಘಮಹೇಶೇನ ಮಹೀಭೃತಾ ।
ವೈರಿಭೂಪಾಲನಿಕರಕುಮುದಾಕರಭಾನುನಾ ॥
ಮನಸ್ವಿನಾ ಹರಿಹರಮಹಾರಾಯೇಣ ಸಾದರಮ್ ॥
ಕರ್ಣಾಟರಾಜ್ಯಂ ನಿಜಶೀಲಧರ್ಮತಃ ।
ಪ್ರಶಾಸತಾ ಸಾಧುಕಥಾವಿನೋದತಃ ॥
ಶ್ರೀಶಂಕರಾಚಾರ್ಯವಿನಿರ್ಮಿತೇ ಲಸತ್ ।
ಸಿಂಹಾಸನೇ ಧರ್ಮಮಯೇ ಮಠೇ ಶುಭಾಃ ॥
ಅತ್ರಾಗ್ರಹಾರಾಶ್ಚ ನಿವೇಶನೀಯಾಃ ॥
ಶ್ರೀಭಾರತೀಮುಖ್ಯಸುಪೂಜನಾನಿ ॥
ವೇದಾಶ್ಚ ಶಾಸ್ತ್ರಾಣಿ ಪರೇ ಚ ಧರ್ಮಾಃ ।
ಪ್ರವರ್ತನೀಯಾ ಇತಿ ತಾನ್ ಮುನೀಂದ್ರಾನ್ ॥
ಗುರೂನನುಜ್ಞಾಪ್ಯ ಮಠೀಯಧರ್ಮ ।
ಪ್ರವರ್ತನಾರ್ಥಂ ವಸುಧಾಂ ಸಮಗ್ರಾಮ್ ॥
ಸಮ್ಯಕ್ಪರಿಚ್ಛಿದ್ಯ ಶತತ್ರಯಂ ಚ ।
ಪಂಚಾಶತಂ ಚಾಪಿ ವಿಧಾಯ ವೃತ್ತೀಃ ॥
ವಿದ್ಯಾಪುರೇ ಶೃಂಗಪುರೇ ಚ ತೇನ ।
ಕೃತ್ವಾಗ್ರಹಾರಂ ಪೃಥಿವೀಸುರಾಣಾಮ್ ॥
ಸಮಸ್ತಮೇ ತದ್ಗುರು ಪಾದಪದ್ಮೇ ।
ಸಮರ್ಪಿತಂ ಕ್ಷ್ಮಾಪತಿಶೇಖರೇಣ ॥

## ೪. ಬುಕ್ಕರಾಯನು

ಈತನು ಕ್ರಿ. ಶ. ೧೩೫೪ ರಿಂದ ಕ್ರಿ. ಶ. ೧೩೭೬ ರ ವರೆಗೆ ಮಹೋನ್ನತನಾಗಿ ಪ್ರಭುತ್ವ ಮಾಡಿದನು. ಇವನ ಕಾಲದಲ್ಲಿ ವಿಜಯನಗರದ ಸಂಸ್ಥಾನವು ದೊಡ್ಡ ಚಕ್ರಾಧಿಪತ್ಯವಾಗಿ ವೈಭವಾತಿಶಯವನ್ನು ಪಡೆಯಿತು. ಪರರಾಜ್ಯಗ್ರಹಣದಲ್ಲಿ ಹೇಗೋ ಹಾಗೆಯೇ ಸ್ವರಾಜ್ಯಪಾಲನೆಯಲ್ಲಿಯೂ ಬುಕ್ಕನು ಸಮರ್ಥನಾಗಿದ್ದನು. ಕವಿಗಳೂ

ಪಂಡಿತರೂ ಇವನ ಪೋಷಣೆಯಿಂದ ದೇಶಾಭ್ಯುದಯಕ್ಕೆ ಸಹಾಯಕರಾದರು. ದೇಶದಲ್ಲಿ ಕೆರೆ ಕಾಲುವೆಗಳೂ ಕ್ಷೇತ್ರಾರಾಮಗಳೂ ಗುಡಿಗೋಪುರಗಳೂ ಹೆಚ್ಚಾದವು. ಮಳವಳ್ಳಿಯ ಹತ್ತಿರ ಬಾಚಿರಾಜನೆಂಬ ಮಂತ್ರಿಯು ಬುಕ್ಕರಾಯ ಸಮುದ್ರ, ಕೀರ್ತಿ ಸಮುದ್ರ, ಮಲ್ಲವ್ವೆಯ ಕೆರೆ, ನಾಗವ್ವೆಯ ಕೆರೆ, ಚೌಡಪ್ಪನ ಕಾಲುವೆ, ಬಾಚಣ್ಣನ ತೋಟ, ಕಂಪಣ್ಣನ ತೋಟ ಇವುಗಳನ್ನು ನಿರ್ಮಾಣ ಮಾಡಿಸಿ ಮಲ್ಲಿಕಾರ್ಜುನ ಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿದನಂತೆ. ಮೊದಲನೆಯ ಕಂಪನ ಮಂತ್ರಿಯಾಗಿದ್ದ ಮಾದರಸನು ತಲಕಾಡಿನ ಬಳಿಯಲ್ಲಿರುವ ಮಾಧವ ಮಂತ್ರಿಯ ಕಾಲುವೆಯನ್ನು ಮಾಡಿಸಿದನು. ಇದೇ ರೀತಿಯಲ್ಲಿ ವಿಜಯನಗರದ ಸಾಮ್ರಾಜ್ಯದ ಎಲ್ಲ ಭಾಗಗಳಲ್ಲಿಯೂ ನಡೆಯಿತೆಂದು ಶಾಸನಗಳಿಂದ ಗೊತ್ತಾಗುತ್ತದೆ. ಇರಲಿ.

ಶ್ರೀವಿದ್ಯಾರಣ್ಯ ಸ್ವಾಮಿಗಳು ಈತನ ಕಾಲದಲ್ಲಿಯೂ ಆಸ್ಥಾನದಲ್ಲಿಯೇ ಇದ್ದರು. ಅವರ ಗುರುಗಳಾದ ಭಾರತೀತೀರ್ಥರು ಕ್ರಿ. ಶ. ೧೩೮೦ ರ ವರೆಗೆ ಬದುಕಿದ್ದರು; ಅವರಿಗೆ ಸಹಾಯ ಮಾಡಲು ಚಂದ್ರಶೇಖರ ಭಾರತೀಸ್ವಾಮಿಗಳೆಂಬವರು ಕ್ರಿ.ಶ. ೧೩೬೮ ರಲ್ಲಿಯೇ ಸಿದ್ಧರಾಗಿದ್ದರು; ಆದುದರಿಂದ ಶ್ರೀವಿದ್ಯಾರಣ್ಯಸ್ವಾಮಿಗಳು ಶೃಂಗೇರಿಯಲ್ಲಿ ನಿಲ್ಲಬೇಕಾದ ನಿಮಿತ್ತವಿದ್ದಿಲ್ಲ. ಅವರು ಮಂತ್ರಿಕಾರ್ಯದಲ್ಲಿ ನಿಂತು, ಧರ್ಮೋನ್ನತಿಗೂ ಶಾಸ್ತ್ರಾಭಿವೃದ್ಧಿಗೂ ಆವಶ್ಯಕವಾದ ಜನಪದ ವ್ಯವಸ್ಥೆಯನ್ನು ನಡೆಯಿಸುತ್ತಿದ್ದರು. ಇದರಿಂದ ಶೃಂಗೇರಿಯ ಮಠಕ್ಕೆ ಮನ್ನಣೆಯೂ, ಸಂಪತ್ತೂ ಯಥೇಷ್ಟವಾಗಿ ದೊರೆಯು ವಂತಾದುದು ನ್ಯಾಯವೇ ಸರಿ.

ಶ್ರೀವಿದ್ಯಾರಣ್ಯರು ಹೆಸರಿಗೆ ಮಾತ್ರ ಮಂತ್ರಿಯಾಗಿಯೂ, ರಾಜಗುರುವಾಗಿಯೂ ಇದ್ದವರಲ್ಲ. ರಾಜ್ಯದ ಪ್ರತಿದಿವಸದ ಕಾರ್ಯಕ್ರಮದಲ್ಲಿ ಅವರ ಮಂತ್ರಾಲೋಚನೆ ಯಂತೆಯೇ ಬುಕ್ಕರಾಯನು ನಡೆಯುತ್ತಿದ್ದನೆಂದು ಹೇಳುವದಕ್ಕೆ ಅನೇಕ ಆಧಾರಗಳಿವೆ. ಬುಕ್ಕರಾಯನು ಶಾಸ್ತ್ರರಹಸ್ಯಗಳನ್ನೂ, ಧರ್ಮಸೂಕ್ಷ್ಮಗಳನ್ನೂ ಅವರಿಂದ ತಿಳಿದು ಕೊಳ್ಳುತ್ತಿದ್ದನು. ಆತನ ರಾಜ್ಯಕ್ರಮವು ಪ್ರಜೆಗಳಿಗೆ ಹಿತಕರವಾದುದಾಗಿತ್ತು. ಗ್ರಾಮ ಗಳ ಸ್ಥಾನಿಕ ವಿಷಯದಲ್ಲಿ ಅಲ್ಲಿಯ ಪ್ರಜೆಗಳ ಅಭಿಮತದಂತೆಯೇ ಎಲ್ಲ ಏರ್ಪಾಡುಗಳೂ ನಡೆಯುತ್ತಿದ್ದುವು. ಮೈಸೂರ ಪ್ರಾಂತದಲ್ಲಿ ಈಗಲೂ ರೂಢಿಯಲ್ಲಿರುವ "ಬಾರಾ ಬಲೂತಿ" ಎಂಬ ಆಯಕಟ್ಟು ವಿದ್ಯಾರಣ್ಯರಿಂದ ಆದುದೆಂದು ಜನರಲ್ಲಿ ಪ್ರತೀತಿಯಿದೆ. ಸಾಮ್ರಾಜ್ಯದ ಆಡಳಿತವನ್ನು ವಿಚಕ್ಷಣತೆಯಿಂದ ನಡೆಯಿಸುವದಕ್ಕೋಸ್ಕರ ರಾಜ ಕುಟುಂಬದ ಬೇರೆ ಬೇರೆ ವೀರರು ಬೇರೆ ಬೇರೆ ಭಾಗಗಳಲ್ಲಿ ಮಂಡಲಾಧಿಕಾರಿಗಳಾಗಿ ನಿಯಮಿತರಾಗಿದ್ದರು. ಅವರಿಗೆ ಸನ್ಮಂತ್ರೋಪದೇಶ ಮಾಡುವದಕ್ಕಾಗಿ ನೀತಿವಿಶಾರದ ರಾದ ವಿದ್ವಾಂಸರು ಮಂತ್ರಿಗಳಾಗಿ ನಿಯಂತ್ರಿತರಾಗಿದ್ದರು. ಈ ಬಗೆಯ ಏರ್ಪಾಡು ಹರಿಹರನ ಕಾಲದಲ್ಲಿಯೇ ಆರಂಭವಾಗಿತ್ತು. ಬಾಹುಬಲದೊಂದಿಗೆ ಬುದ್ಧಿಬಲವೂ, ರಾಜ್ಯಾಧಿಕಾರದೊಂದಿಗೆ ಧರ್ಮಾಸಕ್ತಿಯೂ ಹೊಂದಿಕೆಯಾಗಿದ್ದುದರಿಂದ ರಾಜ್ಯದ

ವಿಸ್ತಾರವೂ ಬೆಳೆಯಿತು; ಪ್ರಜೆಗಳ ಸೌಖ್ಯಸಂಪತ್ತುಗಳೂ ಹೆಚ್ಚಿದುವು. ಚಕ್ರಾಧಿಪತ್ಯದ ಬೇರೆ ಬೇರೆ ಭಾಗಗಳಲ್ಲಿ ರಾಜಬಂಧುಗಳೇ ಉಪಪ್ರಭುಗಳಾಗಿ, ಧರ್ಮನಿಷ್ಠರಾದವರೇ ಉಪಮಂತ್ರಿಗಳಾಗಿದ್ದುದರಿಂದ ರಾಜ್ಯವು ನಾನಾ ಮುಖವಾಗಿ ಬೆಳೆದು ಶತ್ರುಗಳಿಂದ ಅಭೇದ್ಯವಾಯಿತು.

ಬುಕ್ಕರಾಯನಿಗೆ ಹಲವರು ಮಹಿಷಿಯರಿದ್ದರು. ಅವರಲ್ಲಿ (೧) ಎರಡನೆಯ ಹರಿಹರ, (೨) ಎರಡನೆಯ ಕಂಪ, (೩) ಚಿಕ್ಕ ಕಂಪ, (೪) ಸಂಗಮ, (೫) ವಿರೂಪಣ್ಣ, (೬) ಭಾಸ್ಕರ ಮತ್ತು (೭) ಮಲ್ಲಿನಾಥ ಎಂಬ ಕುವರರು ಹುಟ್ಟಿದರು. ಮೊದಲಿನ ಮೂವರ ತಾಯಿಯ ಹೆಸರು ದೇಪಾಯಿ. ಬುಕ್ಕನ ಅಣ್ಣನಾದ ಕಂಪನ ಮಗನಾದ ಸಂಗಮನು ನೆಲ್ಲೂರ ಪ್ರಾಂತದ ಚಿತ್ರಗುಂತದಲ್ಲಿ ಸಾಯಣಾಚಾರ್ಯನಿಂದ ಶಿಕ್ಷಿತನೂ ಪೋಷಿತನೂ ಆಗಿದ್ದನೆಂದು ಹಿಂದೆ ಹೇಳಿದೆಯಷ್ಟೇ; ಆತನ ತಮ್ಮನಾದ ಮಾರಪ್ಪನಿಗೆ ಸಾವಣ್ಣನೆಂಬ ಮಗನಿದ್ದನು. ಈ ರಾಜಕುಮಾರರೆಲ್ಲರೂ ದಂಡನಾಯಕ (ದಂಣಾಯಕ)ರಾಗಿಯೂ ಮಂಡಲಾಧಿಪತಿಗಳಾಗಿಯೂ ನಿಯಮಿತರಾಗಿದ್ದರು. ಎರಡನೆಯ ಹರಿಹರನು ಯುವರಾಜನಾಗಿ ವಿಜಯನಗರದಲ್ಲಿಯೇ ಇದ್ದಂತೆ ತೋರುತ್ತದೆ. ಎರಡನೆಯ ಕಂಪನು ಕೋಲಾರ ಜಿಲ್ಹೆಯೊಳಗಿನ ಮುಳಬಾಗಿಲದಲ್ಲಿ ಮುಖ್ಯ ವಸತಿಯನ್ನು ಮಾಡಿಕೊಂಡನು. ಅದಕ್ಕೂ ಮೊದಲು ಅವನು ತಂದೆಯ ಅಪ್ಪಣೆಯಂತೆ ತೊಂಡಮಂಡಲದ ಅರಸನಾದ ಚಂಪರಾಯನ ಮೇಲೆ ದಂಡೆತ್ತಿ ಹೋಗಿ ದ್ವಂದ್ವಯುದ್ಧದಲ್ಲಿ ಅವನನ್ನು ಮುರಿದು, ಬಳಿಕ ಮಧುರೆಗೆ ನಡೆದು ಅಲ್ಲಿಯ ಸುಲತಾನನನ್ನು ಸಂಹರಿಸಿದನೆಂದು ಅವನ ಹೆಂಡತಿಯಾದ ಗಂಗಾದೇವಿಯು ತನ್ನ "ಮಧುರಾವಿಜಯಂ ಅಥವಾ ವೀರಕಂಪಣರಾಯಚರಿತಂ" ಎಂಬ ಕಾವ್ಯದಲ್ಲಿ ಹೇಳಿದ್ದಾಳೆ. ಆಕೆಯ ಉಪಾಖ್ಯಾನದ ಒಂದಂಶವನ್ನು ಇಲ್ಲಿ ಉದಾಹರಿಸಬಹುದು. ಅದೇನೆಂದರೆ– ಕಂಪರಾಯನು ತೊಂಡಮಂಡಲದಿಂದ ಮಧುರೆಗೆ ಹೋಗುತ್ತಿದ್ದಾಗ ದಾರಿಯಲ್ಲೊಬ್ಬ ದೇವಿಯು ಆತನಿಗೆ ಭೆಟ್ಟಿಯಾದಳು; ಮತ್ತು ಮುಸಲ್ಮಾನರಿಂದ ದೇಶಕ್ಕೆ ಒದಗುತ್ತಿದ್ದ ಹಾನಿಯನ್ನು ಬಣ್ಣಿಸಿ ಹೇಳಿ, ಅವನನ್ನು ಯುದ್ಧಕ್ಕೆ ಹುರಿದುಂಬಿಸಿ ಯವನಸಂಹಾರಾರ್ಥವಾಗಿ ಅವನಿಗೊಂದು ಕತ್ತಿಯನ್ನಿತ್ತಳಂತೆ. ಈ ಸಂದರ್ಭದಲ್ಲಿ ಆಕೆಯು ಬರೆದಿರುವ ಪದ್ಯಗಳು ಮರ್ಮಭೇದಕವಾಗಿಯೂ, ಉದ್ರೇಕಜನಕವಾಗಿಯೂ ಇವೆ. ಅವುಗಳಲ್ಲಿ ಎರಡನ್ನು ಮಾತ್ರ ಇಲ್ಲಿ ಕೊಡುವೆವು.

ಶ್ರುತಿರಸ್ತಮಿತಾ ನಯಃ ಪ್ರಲೀನೋ ವಿರತಾ ಧರ್ಮಕಥಾ ಚ್ಯುತಂ ಚರಿತ್ರಮ್ ।
ಸುಕೃತಂ ಗತಮಾಭಿಜಾತ್ಯಮಸ್ತಂ ಕಿಮಿವಾಽನ್ಯತ್ಕಲಿರೇಕ ಏವ ಧನ್ಯಃ ॥

ಅರ್ಥ : ವೇದಗಳು ಅಸ್ತಮಿಸಿದವು; ನೀತಿಯು ನಶಿಸಿತು; ಧರ್ಮಕತೆಗಳು ಮುಗಿದುವು; ಶೀಲವು ಬಿದ್ದಿತು; ಪುಣ್ಯವು ಹೋಯಿತು; ಸತ್ಕುಲವು ಇಲ್ಲದಾಯಿತು; ಇನ್ನೇನಿದೆ? ಕಲಿಪುರುಷನೊಬ್ಬನೇ ಧನ್ಯನು !

ದುರಿತೈಕಪರಂ ತುರುಷ್ಕನಾಥಂ ದ್ರುತಮುತ್ಪಾಟ್ಯ ಜಗತ್ತ್ರಯೈಕಶಲ್ಯಮ್ ।
ಪ್ರತಿಪ್ರರೋಪಯ ರಾಮಸೇತುಮಧ್ಯೇ ವಿಜಯಸ್ತಂಭಶತಾನಿ ಬಾಹುಶಾಲಿನ್ ॥

ಅರ್ಥ : ಎಲೈ ಧೀರನೇ ಪಾಪನಿರತನೂ ತ್ರಿಲೋಕಕಂಟಕನೂ ಆದ ತುರುಕ ದೊರೆಯನ್ನು ಬೇಗನೇ ಧ್ವಂಸ ಮಾಡಿ ರಾಮಸೇತುವಿನಲ್ಲಿ ಸಾವಿರ ಜಯಸ್ತಂಭಗಳನ್ನು ನಿಲ್ಲಿಸುವಂತಹನಾಗು.

ಇಂತಹ ಮಾತುಗಳು ದೇಶಾಭಿಮಾನವಿಲ್ಲದ ಕಾಲದಲ್ಲಿ ಹುಟ್ಟಲಾರವು. ರಾಷ್ಟ್ರ ಮಾತೆಯೆಂಬ ದೇವತೆಯು ರಾಜರ ಅಂತಃಪುರದಲ್ಲಿಯ ರಾಣಿಯರ ಹೃದಯದಲ್ಲಿಯೂ ಆವಿರ್ಭವಿಸಿದ್ದ ಕಾಲದಲ್ಲಿ ದೇಶೋದ್ಧಾರದ ಕಾರ್ಯವು ಸಾರ್ವಜನಿಕ ಸಮಾರಂಭವಾಗಿತ್ತೆಂದು ಧಾರಾಳವಾಗಿ ಹೇಳಬಹುದು. ಬುಕ್ಕರಾಯನ ಇತರ ಮಕ್ಕಳಲ್ಲಿ ಚಿಕ್ಕ ಕಂಪನು ನಂಜನಗೂಡ ಪ್ರಾಂತವನ್ನಾಳುತ್ತಿದ್ದನು; ವಿರೂಪಣ್ಣನೂ ಪೆನುಗೊಂಡೆಯ ಪ್ರಭುವಾಗಿದ್ದನು; ಮಲ್ಲಿನಾಥನು ಚಿತ್ರದುರ್ಗದ ಸೀಮೆಗೆ ಅಧಿಕಾರಿಯಾಗಿದ್ದನು. ಮಿಕ್ಕವರು ಬಹುಶಃ ರಾಜಧಾನಿಯಲ್ಲಿ ಸೇನಾನಾಯಕರಾಗಿರಬಹುದು; ಇಲ್ಲವೆ ವಿಜಯ ಯಾತ್ರಾನಿರತರಾಗಿರಬಹುದು. ಇವರಲ್ಲದೆ ಬಳ್ಳಪ್ಪ ದಂಡನಾಯಕ, ಇರುಗಪ್ಪ ದಂಡ ನಾಯಕ, ಗೋಪಣ್ಣ ದಂಡನಾಯಕ; ಬಸವಯ್ಯ ದಂಡನಾಯಕ, ತಿಪ್ಪರಾಜ ಮೊದಲಾದ ಯೋಧಶ್ರೇಷ್ಠರು ರಾಜ್ಯವಿಸ್ತರಣದಲ್ಲಿ ನಿರತರಾಗಿದ್ದರು. ಇಷ್ಟೇ ಅಲ್ಲದೆ, ಪೂರ್ವ ದಿಗ್ದೇಶಗಳಲ್ಲಿ ಸಾಯಣಾಚಾರ್ಯರೂ ಪಶ್ಚಿಮ ಸಮುದ್ರತೀರದಲ್ಲಿ ಮಾಧವಾಮಾತ್ಯ (ಮಾದರಸ) ನೂ ವಿದ್ವಾಂಸರೂ ರಾಜನೀತಿನಿಪುಣರೂ ಆಗಿದ್ದುದಲ್ಲದೆ ರಣಪಂಡಿತರೂ ಆಗಿ ಸಾಮ್ರಾಜ್ಯವನ್ನು ಬಿತ್ತರಿಸಿದರು.

'ಮ್ಲೇಚ್ಛಬಾಧೆಯನ್ನು, ಪರಿಹರಿಸಿ, ಹಿಂದೂ ಜನರನ್ನುದ್ಧರಿಸಲು ಅವತರಿಸಿದ ದೇವರೇ' ಎಂದು ಬುಕ್ಕರಾಯನನ್ನು ಸಾಮಾನ್ಯ ಜನರು ತಿಳಿದಿದ್ದರು. ಅದನ್ನೇ ಕ್ರಿ. ಶ. ೧೩೭೬ ರ ಈ (Yedasore 46) ಶಾಸನವು ಸೂಚಿಸುತ್ತದೆ—

ಯಶೋದಾ ನಂದಗೋಪಶ್ಚ ಜ್ಞಾತವಂತೌ ತಮಚ್ಯುತಮ್ ।
ಮಾಮುಂಚ ಜಗದೀಶತ್ವಮಾವಾಂ ತ್ವಾಂ ಶರಣಂಗತೌ ॥
ಜನ್ಮಾಂತರೇऽಪಿ ಪುತ್ರತ್ವಮಂಗೀಕುರು ಕೃಪಾನಿಧೇ ।
ಇತ್ಯರ್ಥಿತೋ ಹರಿಸ್ತಾಭ್ಯಾಂ ವರಂ ಪ್ರಾತಾತ್ಕೃಪಾನಿಧಿಃ ॥
ಮ್ಲೇಚ್ಛಾಕ್ರಾಂತಾಂ ಮಹೀಭೇನಾಮುದ್ಧರಿಷ್ಯೇ ನೃಪಾತ್ಮನಾ ।
ಪಾಪೇ ಕಲೌ .... .... .... .... ॥
ಪಂಪಾಪುರೀ ಪರಿಸರೇ ಭವ ಸಂಗಮಾಖ್ಯಃ ।
ಕಾಮಾಂಬಿಕಾ ತ್ವಮನಶೀಲಯ ದೇವಿ ಮಾತಃ ॥
ಶ್ರೀಬುಕ್ಕರಾಜ ಇತಿ ವಾಂ ನೃಪತಿಃ ಸುತಃ ಸ್ಯಾಮ್ ॥

o o o o

ಇತ್ಥಂ ದೈವರಹಸ್ಯತಃ ಕೃತಯುಗೀಕರ್ತುಂ ಕಲಿಂ ಕಾಲತೋ ।
ನಂದಃ ಸಂಗಮಭೂಪತಿಃ ಸಮಭವತ್ ಕಾಮಾಂಬಿಕಾ ತತ್ಪ್ರಿಯಾ ॥
ತತ್ಪುತ್ರೋ ಹರಿಭೂಪತೇರವರಜೋ ಜಿಷ್ಣೋರುಪೇಂದ್ರೋ ಯಥಾ ।
ಶ್ರೀಮದ್ಬುಕ್ಕಮಹೀಪತಿಃ ಸಮಜನಿ ಸ್ವಾಂ ಗೋಪಯನ್ವಿಷ್ಣುತಾಮ್ ॥
ಶೇಷೇಣ ಪ್ರಚಲೀಕೃತಾ ಫಣಶತೈಃರುನ್ನಾಮಿತಾಂ ದಿಗ್ಗಜೈಃ ।
ಆಕ್ರಾಂತಾಂ ಕುಲಪರ್ವತೈಶ್ಚ ಕಲಿತಾಂ ಪೂರ್ವೈಃ ಕ್ಷಿತೀಶೈರಪಿ ॥
ಕ್ಷೋಣೀಂ ಸಾಗರಮೇಖಲಾಂ ಸ ಕಲಯನ್ ಭ್ರೂಕ್ಷೇಪಮಾತ್ರೇ ಸ್ಥಿತಾಮ್ ।
ವಿದ್ಯಾತೀರ್ಥಮುನೇಃ ಕೃಪಾಂಬುಧಿಶಶೀ ಭೋಗಾವತಾರೋ: ಭವತ್ ॥
ಲೋಕಃ ಕುಟುಂಬಮಸ್ಯ ಕ್ಷೋಣೀ ಸರ್ವಾಪಿ ಶಾಶ್ವತಂ ಕ್ಷೇತ್ರಮ್ ।
ಕೋಶಶ್ಚತುಸ್ಸಮುದ್ರೀ ರಾಜ್ಞೋ ತೇ ಕೀರ್ತಿಜಯಲಕ್ಷ್ಮ್ಯೌ ॥

ಇದೇ ರೀತಿಯಲ್ಲಿ ಬುಕ್ಕನ ಶೌರ್ಯೌದಾರ್ಯಗಳನ್ನು ಉದ್ದಾಮ ರೀತಿಯಲ್ಲಿ ಕೊಂಡಾಡುವ ಶ್ಲೋಕಗಳು ನೂರಾರಿವೆ.

ಈ ಮೊದಲು ಉದಾಹರಿಸಿದ ಶೃಂಗೇರಿಯ ಶಾಸನದಲ್ಲಿರುವ "ಭಾಷೆಗೆ ತಪ್ಪುವ ರಾಯರ ಗಂಡ" ಎಂಬ ಬಿರುದು, ಏಕಮತ್ಯವನ್ನು ಕಾಪಾಡುವ ವಿಷಯದಲ್ಲಿ ವಿಜಯ ನಗರದ ದೊರೆಗಳಿಗೆ ಇದ್ದ ಶ್ರದ್ಧೆಯನ್ನು ತೋರಿಸತಕ್ಕುದೆಂದು ಊಹಿಸಬಹುದು. ತಮ್ಮ ದಾರಿಗೆ ಬರಲೊಪ್ಪಿ ಆ ರೀತಿಯಾಗಿ ನಡೆಯುದಿದ್ದವರ ವಿಷಯದಲ್ಲಿ ತಮಗಿರುವ ಆಗ್ರಹವನ್ನು ಸೂಚಿಸಲು ಆ ಒಕ್ಕಣಿಕೆಯನ್ನಿಟ್ಟುಕೊಂಡಿರಬಹುದು. ಬುಕ್ಕರಾಯನ ಕಾಲಕ್ಕೆ ಸೇರಿದ ಮತ್ತೊಂದು ಬಿರುದು ಮತ್ತಷ್ಟು ಬೋಧಪ್ರದವಾಗಿದೆ. ಅದು "ಹಿಂದು ರಾಯ ಸುರತ್ರಾಣ" ಎಂಬ ದೇಶೀಯ ಮಮತಾಬೋಧಕವಾದ ಪದವು ಇತರ ಹಿಂದೂ ರಾಜರು ದೇವತೆಗಳೆಂದೂ, ವಿಜಯನಗರದ ರಾಜನು ಅವರಲ್ಲಿ ಇಂದ್ರನಂತೆ ಇರುವ ನೆಂದೂ ಅದರಲ್ಲಿ ಸೂಚಿಸಿರುವದರಿಂದ, ಆತನ ಆಶ್ರಯವು ಜನಪದೋಜ್ಜೀವನವೇ ಹೊರತು ಆತ್ಮಪ್ರಶಂಸೆಯಲ್ಲವೆಂಬುದು ಸ್ಪಷ್ಟವಾಗಿದೆ.

ಬುಕ್ಕರಾಯನು ಆಗಾಗ ಶೃಂಗೇರಿಗೆ ಹೋಗಿ, ಶ್ರೀವಿದ್ಯಾತೀರ್ಥರನ್ನೂ, ಶ್ರೀಭಾರತೀತೀರ್ಥರನ್ನೂ ಸೇವಿಸಿ ಅವರ ಶಿಷ್ಯಮಂಡಲಿಯ ಪೋಷಣೆಗಾಗಿ ಭೂದಾನ ಸುವರ್ಣದಾನಗಳನ್ನು ಮಾಡಿ ಬರುತ್ತಿದ್ದನು. ವಿದ್ಯಾರಣ್ಯ ಶ್ರೀಪಾದರವರು ಒಮ್ಮೆ ಕಾಶಿಗೆ ಹೋಗಿದ್ದಂತೆಯೂ, ಅಲ್ಲಿಂದ ಹಿಂದಿರುಗಬೇಕೆಂದು ಪ್ರಾರ್ಥಿಸಿ ಬುಕ್ಕರಾಯನು ಕಾಗದ ಬರೆದು ವಿದ್ಯಾತೀರ್ಥರಿಂದಲೂ ಅದೇ ಅರ್ಥದ ನಿರೋಪವನ್ನು ತರಿಸಿ ಅವರಿಗೆ ಕಳುಹಿದಂತೆಯೂ ಶ್ರೀವಿದ್ಯಾರಣ್ಯಸ್ವಾಮಿಗಳು ತಿರುಗಿ ಬಂದ ಬಳಿಕ ಅವರ ಸಂಗಡ ಬಂದಿದ್ದ ಸನ್ಯಾಸಿಗಳ ಹಾಗು ಇತರ ಶಿಷ್ಯಪರಿವಾರದ ಜೀವನಕ್ಕಾಗಿ ಬುಕ್ಕನು ಮಾದರಸ ನಿಂದ ದಾನಗಳನ್ನು ಮಾಡಿಸಿದಂತೆಯೂ ಗೊತ್ತಾಗಿದೆ. * ಹೆಚ್ಚಿಗೆ ಹೇಳುವದೇನು ?

* Sringeri Records P. 57 Mys. Ach. Report 1916.

ಮಹಾಕಾರ್ಯಸಾಧನೆಗೆ ಆವಶ್ಯಕವಾದ ಮನೋಸ್ಥೈರ್ಯಗಳನ್ನೂ, ಧರ್ಮೋತ್ಸಾಹವನ್ನೂ, ಸ್ಥೈರ್ಯಸ್ಥೈರ್ಯಗಳನ್ನೂ, ಔದಾರ್ಯವನ್ನೂ, ಶಾಂತಿಯನ್ನೂ ಬುಕ್ಕರಾಜನಲ್ಲಿ ಉಂಟುಮಾಡಿದವರು ಶ್ರೀವಿದ್ಯಾರಣ್ಯರೇ ಎಂಬುದು ಬುಕ್ಕರಾಯನ ಮಗನಾದ ಹರಿಹರನು ಬರೆಯಿಸಿದ ಈ ಶ್ಲೋಕದಿಂದ ಗೊತ್ತಾಗುತ್ತದೆ —

ವಿದ್ಯಾತೀರ್ಥರಾಜ್ಞಸೀಮತಿ ಶುಭೇ ಭಾರತೀತೀರ್ಥಪದ್ಮೇ ।
ನಿತ್ಯವ್ಯಕ್ತಾದ್ವಯಚಿದಮೃತಾಸದಂ ಸೌರಭ್ಯಭಾಜಿ ॥
ವಿದ್ಯಾರಣ್ಯದ್ಯುಮಣಿ ಮಹಿಮ ಪ್ರಾಪ್ತಲಕ್ಷ್ಮೀವಿಕಾಸೇ ।
ಭೂಯೋ ಭೂಯೋ ವಿಹರತಿ ಸುಖೀ ಬುಕ್ಕಭೂಪಾಲಹಂಸಃ ॥

ವಿದ್ಯಾರಣ್ಯರ ಸನ್ನಿಧಿಯಲ್ಲಿ ಹುಟ್ಟಿದ ಒಂದು ದಾನಶಾಸನದಲ್ಲಿ ಬುಕ್ಕನ ಮಗನಾದ ಹರಿಹರರಾಯನು ತಾನು "ಧರ್ಮಬ್ರಹ್ಮಾಧ್ವನ್ಯ"ನೆಂದು ಹೇಳಿಕೊಂಡಿದ್ದಾನೆ. ಈ ಪದವು ವಿದ್ಯಾರಣ್ಯರ ಆದೇಶವನ್ನು ಸೂತ್ರರೂಪದಲ್ಲಿ ತಿಳಿಸುತ್ತದೆಂದು ಹೇಳಬಹುದು. ಬ್ರಹ್ಮೋಪಾಸನೆಗೂ ತತ್ಸಾಧನಭೂತವಾದ ಧರ್ಮಾಚರಣೆಗೂ ಅನುಕೂಲವಾದ ಮಾರ್ಗದಲ್ಲಿ ನಡೆಯುವದೇ ವಿಜಯನಗರದ ರಾಜರಿಗೆ ವಿಧಿಸಲ್ಪಟ್ಟಿದ್ದ ಕರ್ತವ್ಯವು.

## ೫. ಮಾಧವಮಂತ್ರಿಯು

ಬಕ್ಕರಾಯನ ಆಶ್ರಯದಲ್ಲಿ ಮಾಧವ ವಿದ್ಯಾರಣ್ಯರ ಕಾಲದಲ್ಲಿಯೇ ಮಾಧವ ಮಂತ್ರಿಯೆಂಬೊಬ್ಬ ಬೇರೆ ಅಧಿಕಾರಿಯಿದ್ದನು. ಅವನಾದರೂ ಒಳ್ಳೇ ವಿದ್ವಾಂಸನೂ, ಶೂರನೂ, ಪರಾಕ್ರಮಿಯೂ, ರಾಜಕಾರ್ಯ ಧುರಂಧರನೂ, ಧರ್ಮಸಂಸ್ಥಾಪಕವಾದ ಗ್ರಂಥಕಾರನೂ ಆಗಿದ್ದನು. ಹಲವು ದಾನಪತ್ರಗಳಲ್ಲಿ ಆತನ ಹೆಸರು ಒಳ್ಳೇ ಗೌರವದಿಂದ ಉಲ್ಲೇಖಿತವಾಗಿದೆ. ಹೆಸರು, ಗುಣ ಮತ್ತು ಅಧಿಕಾರ ಇವುಗಳ ಸಾದೃಶ್ಯದ ಮೂಲಕ ಮಾಧವವಿದ್ಯಾರಣ್ಯರ ಮತ್ತು ಮಾಧವ ಮಂತ್ರಿಯ ವೃತ್ತಿಕಥನದಲ್ಲಿ ಸಮ್ಮಿಶ್ರವುಂಟಾಗಿ ಸಂದೇಹ ಆಸ್ಪದವಾಗುವ ಸಂಭವವಿದೆ. ಈ ಮಾಧವಮಂತ್ರಿಯ ತಂದೆಯ ಹೆಸರು ಚೌಂಡನೆಂಬುದು; ಇವನು ಆಂಗಿರಸಗೋತ್ರದವನು; ಕಾಶೀ ವಿಲಾಸ ಕ್ರಿಯಾಶಕ್ತಿಯು ಇವನ ಗುರುವು; ತ್ರ್ಯಂಬಕನಾಥಶಿವನು ಇವನ ಉಪಾಸ್ಯದೈವತವು; ಮತ್ತು ಇವನು ಶಿವಾಮ್ನಾಯೋಕ್ತ ಸಂಪ್ರದಾಯದವನಾಗಿದ್ದನು. ಇವನ ಶೌರ್ಯವನ್ನೂ, ಕಾರ್ಯದಕ್ಷತೆಯನ್ನೂ ನೋಡಿ ಬುಕ್ಕರಾಯನು ಇವನ ಮೇಲೆ ಬಹಳ ವಿಶ್ವಾಸವನ್ನಿಟ್ಟನು. ಆದುದರಿಂದ ಪಶ್ಚಿಮ ದಿಕ್ಕಿಗಿರುವ ಗೋವೆ ಮೊದಲಾದ ಶತ್ರುಪೀಡಿತ ರಾಜ್ಯದ ಅಧಿಕಾರವನ್ನು ಇವನಿಗೆ ಒಪ್ಪಿಸಿದ್ದನು. ಚಂದ್ರಗುತ್ತಿಪುರದ ನಾಯಬಸುಭೆಯ ಕೆಲಸವಾದರೂ ಇವನ ಕಡೆಗೇ ಇತ್ತು. ಇವನು ಸಾರಸ್ವತ ಬ್ರಾಹ್ಮಣನು. ತನ್ನ ಸಜಾತೀಯರಾದ ಕಾಶ್ಮೀರ ದೇಶಸ್ಥ ವಿದ್ವಾಂಸ ಬ್ರಾಹ್ಮಣರನ್ನು ಕರೆಯಿಸಿ ಬುಕ್ಕರಾಜನಿಂದ ಅವರಿಗೆ ಅಗ್ರಹಾರಗಳನ್ನು ಕೊಡಿಸಿದನು. ಶೈವಾಮ್ನಾಯ ಸಾರವೆಂಬಗ್ರಂಥವನ್ನು ಈತನು ಬರೆದಿದ್ದಾನೆ; ಮತ್ತು ಸಾಯಣಮಾಧವೀಯ

ಗ್ರಂಥಗಳಲ್ಲಿಣಿಸಲ್ಪಡುವ ಸೂತಸಂಹಿತೆಯ ಟೀಕೆಯಾದ ತಾತ್ಪರ್ಯದೀಪಿಕೆಯೂ ಇವನದೆಂದೇ ಕೆಲವರು ವಿದ್ವಾಂಸರು ಹೇಳುತ್ತಾರೆ. ಈ ಸಮಕಾಲೀನ ಮಂತ್ರಿದ್ವಯದ ಭಿನ್ನತ್ವವನ್ನು ಶ್ರೀ ಸೂರ್ಯನಾರಾಯಣರಾವ ಇವರು ಅನೇಕ ಶಾಸನಗಳ ಆಧಾರ ದಿಂದ ಸಿದ್ಧಮಾಡಿದ್ದಾರೆ. (ಹಿಂದೆ, ಗೋವೆ ಪ್ರಾಂತದ ವಿಜಯವನ್ನು ಮಾಧವ ವಿದ್ಯಾರಣ್ಯರು ಮಾಡಿದರೆಂದು ಹೇಳಿ ಅವರ ಕಾಲವನ್ನು ನಿರ್ಣಯಿಸುವ ಪ್ರಯತ್ನ ಮಾಡಿದೆಯಷ್ಟೇ; ಈ ಪ್ರಮಾಣದಿಂದ ಅದರಲ್ಲೇನೂ ಹೇಳಿಕೊಳ್ಳುವಂತಹ ಹೆಚ್ಚು ಕಡಿಮೆಯಾಗಲಿಕ್ಕಿಲ್ಲವೆಂದು ತೋರುತ್ತದೆ.)

## ೬. ವಿದ್ಯಾರಣ್ಯರ ಮತ್ತು ವಿಜಯನಗರದ ಅರಸರ ಕಾಲದಲ್ಲಿ ವಾಙ್ಮಯೋತ್ಕರ್ಷ

ಕನ್ನಡ ನುಡಿಯು ಪೂರ್ವದಿಂದಲೂ ರಾಜರುಗಳ ಮತ್ತು ಮಾಂಡಲಿಕರ ಪ್ರೋತ್ಸಾಹದಿಂದ ಏಳಿಗೆಯನ್ನು ಹೊಂದಿರುತ್ತದೆ. ಅವರಲ್ಲಿ ಕೆಲವರು ಸ್ವತಃ ಕವಿಗಳಾಗಿಯೂ, ಕೆಲವರು ಕವಿಪೋಷಕರಾಗಿಯೂ ಇದ್ದರು. ವಿಜಯನಗರದ ಅರಸರ ಕಾಲದಲ್ಲಿ ಹುಟ್ಟಿದ ಕನ್ನಡ ಗ್ರಂಥಗಳನ್ನೂ, ಅವುಗಳ ಲೇಖಕರ ಹೆಸರುಗಳನ್ನೂ ಮಾತ್ರ ಇಲ್ಲಿ ಕೊಡುವೆವು.

ಒಂದನೆಯ ಹರಿಹರನ ಆಳಿಕೆಯಲ್ಲಿ ಮುಗುಳಿಯ ಪುರದ ಅಧಿಪನಾದ ಒಂದನೆಯ ಮಂಗರಸನು 'ಖಗೇಂದ್ರಮಣಿದರ್ಪಣ'ವನ್ನು ಬರೆದನು. 'ಧರ್ಮನಾಥ ಪುರಾಣ'ವನ್ನು ಬರೆದ ಮಧುರನು ಎರಡನೆಯ ಹರಿಹರನ ಕಾಲದಲ್ಲಿ ಆಸ್ಥಾನ ಕವಿಯಾಗಿದ್ದನು. ಒಂದನೆಯ ಬುಕ್ಕರಾಯನ ಮಗನಾದ ಕಂಪರಾಜನ ಪುತ್ರನಾದ ದೇವರಾಯನು 'ಸೊಬಗಿನ ಸೋನೆ', 'ಅಮರುಕ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಎರಡನೆಯ ದೇವರಾಯನ ಮಂತ್ರಿಗಳಲ್ಲಿ ಲಕ್ಕಣ್ಣದಂಡೇಶನು 'ಶಿವತತ್ವಚಿಂತಾಮಣಿ' ಯನ್ನು ಬರೆದನು; ಮತ್ತು ಜಕ್ಕಣಾರ್ಯನು 'ನೂರೊಂದು ಸ್ಥಲ'ವನ್ನು ಬರೆದನು. ಇದೇ ರಾಜನ ಮಹಾಪ್ರಧಾನನಾದ ಗುರುರಾಜನ ಪ್ರೇರಣೆಯಿಂದ ಚಂದ್ರಕವಿಯು 'ವಿರೂಪಾಕ್ಷಾಸ್ಥಾನ' ಮೊದಲಾದ ಗ್ರಂಥಗಳನ್ನು ರಚಿಸಿದನು. ಇದೇ ದೊರೆಯ ಪ್ರೋತ್ಸಾಹದಿಂದ ಚಾಮರಸನು 'ಪ್ರಭುಲಿಂಗ ಲೀಲೆ'ಯನ್ನೂ, ಮಗ್ಗೆಯಮಾಯಿದೇವನು 'ಶತಕತ್ರಯ'ವನ್ನೂ, ಗುರುಬಸವನು 'ಶಿವಯೋಗಾಂಗಭೂಷಣ'ವೇ ಮುಂತಾದ ಸಪ್ತಕಾವ್ಯಗಳನ್ನೂ, ಬತ್ತಲೇಶ್ವರನು 'ರಾಮಾಯಣ'ವನ್ನೂ ಬರೆದರು. ಕುಮಾರವ್ಯಾಸನೂ ಇದೇ ರಾಜನ ಆಳಿಕೆಯಲ್ಲಿ ಭಾರತವನ್ನು ಬರೆದಂತೆ ತೋರುತ್ತದೆ. ಮಲ್ಲಿಕಾರ್ಜುನನ ಆಳಿಕೆಯಲ್ಲಿ ಕಲ್ಲರಸನು 'ಜನವಶ್ಯ'ವನ್ನು ಬರೆದಿದ್ದಾನೆ. 'ಷಟ್‌ಸ್ಥಲ ಜ್ಞಾನಸಾರಾಮೃತ'ವನ್ನು ರಚಿಸಿದ ತೋಂಟದ ಸಿದ್ಧಲಿಂಗನು ವಿರೂಪಾಕ್ಷನ ಆಳಿಕೆಯಲ್ಲಿ ಬಾಳಿದನು. 'ಕವಿಲಿಂಗನಪದ' ಎಂಬ ಗ್ರಂಥವನ್ನು ರಚಿಸಿದ ಕವಿಲಿಂಗನು ಸಾಳ್ವ ನರಸಿಂಗರಾಯನ ಆಸ್ಥಾನಕವಿಯಾಗಿ

ಷ್ಠನು. ಕೃಷ್ಣರಾಯನ ಆಜ್ಞಾನುಸಾರವಾಗಿ ತಿಮ್ಮಣ್ಣಕವಿಯು 'ಭಾರತ'ದ ಉತ್ತರ ಭಾಗವನ್ನು ಬರೆದನು. ಚಾಟುವಿಠ್ಠಲನಾಥ ಎಂಬ ಬಿರುದುಳ್ಳ ಸದಾನಂದಯೋಗಿಯು ಅಚ್ಯುತರಾಯನ ಆಳಿಕೆಯಲ್ಲಿ ಸಲಕರಾಜನ ಮಗನಾದ ತಿರುಮಲರಾಜನು ಕಾಲಜ್ಞಾನವನ್ನು ಬರೆದ ಎಮ್ಮೆ ಬಸವನಿಗೆ ಒಂದು ಗ್ರಾಮವನ್ನು ಕೊಟ್ಟಂತೆ ತಿಳಿಯುತ್ತದೆ. ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕನ ಗುರುವಾದ ಭಟ್ಟಾಕಳಂಕನು ಒಂದನೆಯ ಶ್ರೀರಂಗರಾಯನ ಆಸ್ಥಾನದಲ್ಲಿ ಆತನ ಪ್ರೇರಣೆಯಿಂದ 'ಸಾರತ್ರಯ'ವನ್ನೂ 'ಅಲಂಕಾರತ್ರಯ'ವನ್ನೂ ಓದಿ ಕೀರ್ತಿ ಪಡೆದಂತೆ ಒಂದು ಶಾಸನದಲ್ಲಿ ತಿಳಿಯುತ್ತದೆ. ಅದೇ ಶಾಸನದಲ್ಲಿ ಶಬ್ದಾನುಶಾಸನಕಾರನಾದ ಭಟ್ಟಾಕಳಂಕನು ಒಂದನೆಯ ವೆಂಕಟಪತಿರಾಯನ ಆಳಿಕೆಯಲ್ಲಿ ಬಾಳಿದಂತೆ ಹೇಳಿದೆ.

ಈ ಕಾಲದ ಸಾಹಿತ್ಯದ ಚರಿತ್ರೆಯನ್ನು ವಿಶದವಾಗಿ ಬರೆಯುವದು ಆವಶ್ಯಕವಾಗಿದೆ. ಆದರೆ ಪುಸ್ತಕವು ಈಗಲೇ ನಮ್ಮ ಊಹೆಗಿಂತ ಬಹಳ ಹೆಚ್ಚಾಗಿ ಬೆಳೆದುದರಿಂದ ಮೇಲೆ ಹೇಳಿದಂತೆ ನಾಮನಿರ್ದೇಶನವನ್ನು ಮಾತ್ರ ಇಲ್ಲಿ ಮಾಡಿದ್ದೇವೆ. ಈ ಪ್ರಕರಣದ ಕೊನೆಯಲ್ಲಿ ವಿಜಯನಗರದ ಸಾಮ್ರಾಜ್ಯದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯವು ಎಷ್ಟರ ಮಟ್ಟಿಗಿತ್ತೆಂಬುದನ್ನು ತೋರಿಸುವೆವು.

## ೭. ತಾಳೀಕೋಟೆಯ ಕಾಳಗದ ಈಚೆಯ ವಿಜಯನಗರದ ಇತಿಹಾಸವು

ಕ್ರಿ. ಶ. ೧೫೬೫ ನೆಯ ಜನವರಿ ೨೩ ನೆಯ ತಾರೀಖು ಮಂಗಳವಾರದ ದಿವಸ ತಾಳೀಕೋಟೆಯ ಹೆಸರಾದ ಕಾಳಗವಾಯಿತು. ಅದರಲ್ಲಿ ರಾಮರಾಜನು ಕೊಲ್ಲಲ್ಪಟ್ಟನು; ವೆಂಕಟಾದ್ರಿಯೂ ಕಾಳಗದ ನಂತರ ಗುಡ್ಡಗಾಡುಗಳಲ್ಲಿ ಹೋಗಿ ನಿಂತು ಕೆಲವು ಕಾಲದ ವರೆಗೆ ಮುಸಲ್ಮಾನರ ಸಂಗಡ ಕದನವನ್ನು ಮಾಡಿ ಸ್ವಲ್ಪ ದಿವಸಗಳಲ್ಲಿಯೇ ಮೃತನಾದನು. ತಿರುಮಲರಾಯನು ರಾಜನಾದ ಸದಾಶಿವರಾಯನನ್ನು ತನ್ನ ಸಂಗಡವೇ ಕರೆದುಕೊಂಡು ರಣಾಂಗಣದಿಂದ ರಾಜಧಾನಿಗೆ ಬೇಗ ಮರಳಿ ಬಂದನು; ಮತ್ತು ಲಗುಬಗೆಯಿಂದ ರಾಜಮಂದಿರಗಳಲ್ಲಿ ದೊರೆತ ಧನಸಂಚಯವನ್ನೂ ವಜ್ರವೈಡೂರ್ಯಾದಿ ಬೆಲೆಯುಳ್ಳ ಪದಾರ್ಥಗಳನ್ನೂ ೫೫೦ ಆನೆಗಳ ಮೇಲೆ ಹೇರಿಕೊಂಡು ಪೆನುಗೊಂಡೆಯ ಕಡೆಗೆ ಹೊರಟು ಹೋದನು. ರಾಜಧಾನಿಯ ಜನರು ಕಾಳಗವು ನಡೆದಾಗ ಮುಂದೆ ಬರುವ ಅನಿಷ್ಟದ ವಿಚಾರವನ್ನೇನೂ ಮಾಡದೆ ತಮ್ಮ ದಿನಚರ್ಯೆಯಲ್ಲಿಯೇ ನಿರತರಾಗಿದ್ದರು. ತಿರುಮಲರಾಯನು ನಗರಸಂರಕ್ಷಣೆಗಾಗಿ ಏನೂ ಏರ್ಪಾಡು ಮಾಡದೆ ಹೋದದರಿಂದ ಆ ಅಸಂಖ್ಯೇಯ ಜನರಿಂದ ತುಂಬಿತುಳುಕುತ್ತಿದ್ದ ದೊಡ್ಡ ಪಟ್ಟಣವು ಅನನ್ಯಗತಿಕವಾಯಿತು. ಮರುದಿವಸವೇ ಕಾಡುಜನರ ತಂಡಗಳು ಅಲ್ಲಿಗೆ ಬಂದು ಜನರನ್ನು ಸುಲಿಯಹತ್ತಿದುವು. ಅಷ್ಟರಲ್ಲಿ ಮುಸಲ್ಮಾನರ ಸಂಯುಕ್ತ ಸೈನ್ಯವು ಆ ರಾಜಧಾನಿಯನ್ನು ಹೊಕ್ಕಿತು. ಮುಸಲ್ಮಾನರು ಆ ಸುಂದರವಾದ ಪಟ್ಟಣದಲ್ಲಿ

ಮಾಡಿದ ಅನರ್ಥಗಳೂ, ಕೊಲೆಸುಲಿಗೆಗಳೂ ಪೃಥ್ವಿಯ ಇತಿಹಾಸದಲ್ಲಿ ಮಿಗಿಲಾದವು ಗಳೆಂದು ಇತಿಹಾಸಕಾರರು ಹೇಳುತ್ತಾರೆ.

ತಾಳೀಕೋಟೆಯು ಕಾಳಗವಾದ ಬಳಿಕ ವಿಜಯನಗರದ ಅರಸನಾದ ಸದಾಶಿವ ರಾಯನು ಮುಂದೆ ಕ್ರಿ. ಶ. ೧೫೬೮ ರ ವರೆಗೆ ಆಳಿದನು. ಆಮೇಲೆ ತಿರುಮಲರಾಯನು ಅರಸನನ್ನು ಕೊಲ್ಲಿಸಿ ತಾನೇ ಪಟ್ಟವೇರಿ ಕ್ರಿ. ಶ. ೧೫೭೪ ರ ವರೆಗೆ ಆಳಿದನು. ಇವನ ತರುವಾಯ ಇವನ ಮಗನಾದ ರಂಗರಾಯನೂ ಕ್ರಿ. ಶ. ೧೫೭೪ ರಿಂದ ೧೫೮೬ ರ ವರೆಗೆ ರಾಜನಾಗಿದ್ದನು. ಅವನು ಮರಣಹೊಂದಿದ ಬಳಿಕ ಅವರ ತಮ್ಮನಾದ ವೆಂಕಟ ರಾಯನು ಅರಸನಾದನು. ಅವನು ಕ್ರಿ. ಶ. ೧೬೧೪ ರಲ್ಲಿ ಮರಣಹೊಂದಿದನು. ಆ ಮೇಲೆ ಕ್ರಿ. ಶ. ೧೬೭೬ ರ ವರೆಗೆ ವಿಜಯನಗರದ ರಾಜ್ಯದಲ್ಲಿಯ ಸ್ವಾಸ್ಥ್ಯವು ನಷ್ಟ ವಾದ ಭಯಂಕರವಾದ ಕಾಳಗಗಳಿಂದಲೂ, ಕೊಲೆಸುಲಿಗೆಗಳಿಂದಲೂ, ಅಂತಃಕಲಹ ಗಳಿಂದಲೂ ದೇಶವು ವ್ಯಾಕುಲವಾಗಿ ರಾಜ್ಯವೈಭವವೆಲ್ಲ ಹಾಳಾಗಿ ಹೋಯಿತು. ಈ ಅವಧಿಯಲ್ಲಿ ಸುಮಾರು ೮ ಮಂದಿ ರಾಜರು ಚಂದ್ರಗಿರಿಯಲ್ಲಿ ಆಳಿದರು; ಅವರಲ್ಲಿ ಅನೇಕರ ಕೊಲೆಯಾಯಿತು. ೮ ನೆಯವನ ಹೆಸರು ವೆಂಕಟರಾಯನು. ಅವನ ತರು ವಾಯ ಶ್ರೀರಂಗರಾಯನು ಕ್ರಿ. ಶ. ೧೬೮೦ ರ ವರೆಗೆ ಆಳಿದಂತೆ ತೋರುತ್ತದೆ. ಇವನು ಇಂಗ್ಲಿಷರಿಗೆ ಮದ್ರಾಸ ಪಟ್ಟಣದ ಭೂಪ್ರದೇಶವನ್ನು ಕೊಟ್ಟನು. ಅವನ ತರುವಾಯ ಆಳಿದ ವೆಂಕಟರಾಯನ ಕಾಲದಲ್ಲಿ ಅವರಂಗಜೇಬನು ದಕ್ಷಿಣ ದೇಶವನ್ನೆಲ್ಲ ವಶ ಮಾಡಿ ಕೊಂಡನು. ಈ ವೆಂಕಟರಾಯನಿಂದ ೮ ನೆಯವನಾದ ವೆಂಕಟಪತಿರಾಯನ ಕಾಲದಲ್ಲಿ ನಾನಾಸಾಹೇಬನು ಈ ಸಂಸ್ಥಾನವನ್ನು ಸುಲಿದನು. ಕ್ರಿ. ಶ. ೧೭೭೪ ರಲ್ಲಿ ಹೈದರನು ಇದನ್ನು ತನ್ನ ರಾಜ್ಯಕ್ಕೆ ಸೇರಿಸಿದನು. ಟೀಪೂಸುಲ್ತಾನನು ಕೊಲ್ಲಲ್ಪಟ್ಟ ಬಳಿಕ ನಿಜಾಮ ಸರಕಾರದವರು ಆನೆಗೊಂದೆಯ ಸುತ್ತಮುತ್ತಲಿನ ಪ್ರದೇಶವನ್ನು ವಿಜಯ ನಗರದ ರಾಜವಂಶದವನಾದ ತಿರುಮಲರಾಯನೆಂಬವನಿಗೆ ಕೊಟ್ಟರು. ಇಂಗ್ಲಿಷ ಸರಕಾರದವರು ತಮ್ಮ ವಶವಾದ ಪ್ರದೇಶಕ್ಕೆ ಬದಲು ತಿಂಗಳಿಗೆ ೧೫೦೦ ರೂ. ವೇತನ ವನ್ನು ಗೊತ್ತುಮಾಡಿದರು. ಆ ವೇತನವು ಈಗ ನಿಂತುಹೋಗಿದೆ. ನಿಜಾಮ ಸರಕಾರ ದವರ ಉಂಬಳಿಯು ಇನ್ನೂ ಆ ಮನೆತನದವರ ಕಡೆಗೇ ಇದೆ.

## ೮. ವಿಜಯನಗರವು ಕನ್ನಡದ ಸಾಮ್ರಾಜ್ಯವು

ವಿಜಯನಗರವನ್ನು ಸ್ಥಾಪಿಸಿ, ವಿಜಯನಗರದಲ್ಲಿ ಬಹುಕಾಲ ಆಳಿ, ವಿಜಯ ನಗರದ ಸಿಂಹಾಸನದ ಅಭಿಮಾನದಿಂದ ಅವರ ವೈಭವವನ್ನು ಬೆಳೆಯಿಸಿ, ಹಿಂದುಸ್ಥಾನದ ಮಿಕ್ಕ ಹಿಂದೂ ರಾಷ್ಟ್ರಗಳು ಕೈಸಾಗದೆ ಮೂಲೆಗುಂಪಾಗಿ ಬಿದ್ದ ಕಾಲಕ್ಕೆ ಪರಧರ್ಮಿ ಗಳಾದ ಶತ್ರುಗಳಿಗೆ ಎದೆಗೊಟ್ಟು ಆರ್ಯ ಧರ್ಮವನ್ನೂ, ಆರ್ಯ ವಿದ್ಯೆಯನ್ನೂ ಕಾಪಾಡಿದವರು ಕನ್ನಡಿಗರೇ. ಹೀಗಿದ್ದು ಈಗಿನ ಕಾಲದಲ್ಲಿ ಕನ್ನಡಿಗರಿಗೆ ವಿಜಯ ನಗರವು ಕನ್ನಡ ರಾಜ್ಯವಾಗಿತ್ತೆಂದು ಹೇಳುವ ಪ್ರಸಂಗವೊದಗಿದ್ದು ದೈವದುರ್ವಿಪಾಕವೇ

ಸರಿ. ದೈವವಶದಿಂದ ನಮಗಿಂತಲೂ ಸುಸ್ಥಿತಿಯಲ್ಲಿ ಇದ್ದ ಮಹಾರಾಷ್ಟ್ರರೂ ಆಂಧ್ರರೂ ಇಂಗ್ಲಿಷ ವಿದ್ಯೆಯನ್ನೂ ಕಲಿತು, ನಮಗಿಂತ ಮುಂಚೆ ಆತ್ಮಜಾಗ್ರತಿಯನ್ನು ಹೊಂದಿ ತಮ್ಮ ತಮ್ಮ ಇತಿಹಾಸವನ್ನು ಬರೆಯಲು ಯತ್ನಿಸುವ ಕಾಲಕ್ಕೆ, ಈ ಹೆಸರಾದ ವಿಜಯನಗರದ ಸಾಮ್ರಾಜ್ಯವು ತಮ್ಮದೆಂದು ಮಹಾರಾಷ್ಟ್ರರೂ, ತಮ್ಮದೆಂದು ಆಂಧ್ರರೂ ಪುಸ್ತಕ ರೂಪದಿಂದಲೂ ಲೇಖನ ರೂಪದಿಂದಲೂ ಬರೆದಿಟ್ಟಿದ್ದಾರೆ; ಮತ್ತು ಅವರ ಲೇಖನಗಳೇ ಜನರ ದೃಷ್ಟಿಗೆ ಮೊದಲು ಬಿದ್ದುದರಿಂದ ಅನೇಕ ಸಂಶೋಧಕರಿಗೆ ತಪ್ಪು ತಿಳಿವಳಿಕೆಯಾಗಲಿಕ್ಕೆ ಕಾರಣವಾಗಿದೆ. ಮಹಾರಾಷ್ಟ್ರ ವಿದ್ವನ್ಮಣಿಗಳಾದ ಡಾ. ಭಾಂಡಾರಕರ ಮತ್ತು ಪ್ರಸಿದ್ಧ ಇತಿಹಾಸ ಲೇಖಕರಾದ ಶ್ರೀ ಸರದೇಸಾಯಿ ಮತ್ತು ಭೀಷ್ಮಾಚಾರ್ಯರೆಂದು ಪ್ರಖ್ಯಾತರಾಗಿರುವ ಶ್ರೀ ಚಿ. ವಿ. ವೈದ್ಯ ಮೊದಲಾದ ಮಹನೀಯರು ಕೂಡ ಈ ತರದ ಸಂಕುಚಿತ ಭಾವನೆಯ ಉಲ್ಲೇಖಗಳನ್ನು ಮಾಡಿದ್ದಾರೆ. ಅಲ್ಲದೆ ಮಹಾರಾಷ್ಟ್ರ ಇತಿಹಾಸವು ಪುರಾತನ ಕಾಲದ್ದೆಂದೂ ಕನ್ನಡಿಗರಿಗೆ ಇತಿಹಾಸವೇ ಇಲ್ಲವೆಂದೂ ಬರೆದಿದ್ದಾರೆ. ಇದರಂತೆಯೇ ಆಂಧ್ರರು ಆಗಿನ ಕಾಲಕ್ಕೆ ಆಂಧ್ರ ರಾಷ್ಟ್ರೀಯತ್ವದ ಅಭಿಮಾನದಿಂದ ಪ್ರೇರಿತರಾಗಿ ವಿಜಯನಗರವು ಆಂಧ್ರ ರಾಜ್ಯವೆಂದೂ ವಿಜಯನಗರವಿದ್ದ ಪ್ರದೇಶವು ಆಂಧ್ರ ದೇಶವೆಂದೂ ಬರೆದಿಟ್ಟಿದ್ದಾರೆ. ವಿದೇಶೀಯ ಲೇಖಕರು ಕೂಡ ಇಲ್ಲಿಯ ಅಜ್ಞಾನದಿಂದ ವಿಜಯನಗರದ ವಿಷಯವಾಗಿ ಅನೇಕ ತಪ್ಪು ವಿಚಾರಗಳನ್ನು ಬರೆದಿದ್ದಾರೆ. ಕನ್ನಡಿಗರು ಬಾಯಿ ಮುಚ್ಚಿಕೊಂಡು ಸುಮ್ಮನೆ ಇದ್ದುದರಿಂದಲೇ ಮೇಲಿನಂತಹ ಅಸತ್ಯ ಲೇಖನಗಳು ನಮ್ಮವರಿಗೂ ವಿದೇಶೀಯರಿಗೂ ನಿಜವೆಂದು ತೋರಿದವು. ಮೂಢರಾದ ಅನೇಕ ಕನ್ನಡಿಗರು ಅವರ ಲೇಖನಗಳನ್ನೇ ಓದಿ ನಿಜವೆಂದು ಭಾವಿಸಿ "ಕನ್ನಡಿಗರಿಗೆ ಇತಿಹಾಸವಿಲ್ಲ; ಕನ್ನಡಿಗರಲ್ಲಿ ಶೌರ್ಯವಿಲ್ಲ; ಕನ್ನಡ ನುಡಿ ಕಾಡುನುಡಿ" ಎಂಬುದಾಗಿ ಈ ಪುಸ್ತಕದ ಆರಂಭದಲ್ಲಿ ಹೇಳಿದಂತೆ ಪ್ರಲಾಪ ಮಾಡಿ ಕರ್ನಾಟಕ ದೇಶದ ದ್ರೋಹವನ್ನು ಮಾಡತೊಡಗಿದ್ದಾರೆ. ಆದುದರಿಂದ ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸುವದು ಅವಶ್ಯವಾಯಿತು.

ವಿಜಯನಗರವು ಇದ್ದ ನಾಡಿನಲ್ಲಿ ಈ ಹೊತ್ತಿಗೂ ಅಚ್ಚಗನ್ನಡ ನುಡಿಯೇ ಪ್ರಚಾರದಲ್ಲಿದೆ. ವಿಜಯನಗರದ ಒಂದು ಭಾಗವಾದ ಹೊಸಪೇಟೆಯ ಹೆಸರು ಕನ್ನಡವೇ. ವಿಜಯನಗರದಲ್ಲಿ ಈಗ ದೊರೆಯುವ ಶಿಲಾಲಿಪಿಗಳು ಕೇವಲ ಕನ್ನಡದಲ್ಲಿಯೇ ಇರುತ್ತವೆ. ವಿಜಯನಗರದ ಹಾಳುಪಟ್ಟಣದಲ್ಲಿ ಎತ್ತ ನೋಡಿದರತ್ತ ಕಾಣುವ ಮೂರ್ತಿಗಳೂ, ಪೇಟೆಗಳೂ ಇಂದಿಗೂ ಕನ್ನಡದ ಹೆಸರುಗಳನ್ನೇ ಧರಿಸಿರುತ್ತವೆ. ಉದಾ :- ಕಡಲೆಕಾಳ ಗಣಪ್ಪ, ಸಾಸಿವೆಕಾಳ ಗಣಪ್ಪ, ಉದ್ದಾನ ವೀರಭದ್ರ, ತ್ವರಿತ ಕಾವಲೆ, ಮಹಾನವಮಿ ದಿಬ್ಬ, ಆನೆಸಾಲು, ಸೂಳೆಬಾಜಾರ, ಮಲ್ಲಪ್ಪನಗುಡಿ, ಅಳಿಯಾರಾಮನ ಗರಡಿಮನೆ. ಕೃಷ್ಣನ ಗುಡಿಯಲ್ಲಿಯ ಶಿಲಾಲೇಖವು ಕನ್ನಡದಲ್ಲಿಯೇ ಇದೆ. ವಿಜಯನಗರದಲ್ಲಿಯೂ ಅದರ ಸುತ್ತು ಮುತ್ತಲಿನ ನಾಡಿನಲ್ಲಿಯೂ ಕನ್ನಡದ ಹೊರತಾಗಿ ಬೇರೆ ದೇಶಭಾಷೆಯಿಲ್ಲ. (ಸದ್ಯಕ್ಕೆ ಮಾತ್ರ ಕನ್ನಡಿಗರ ಮೂರ್ತಿಮತ್ತಾದ ಸೋಮಾರಿತನದ

ಫಲದಿಂದ ಸರಕಾರದವರ ಕಾಗದ ಪತ್ರಗಳಲ್ಲಿ ಆಂಧ್ರ ಭಾಷೆಯು ಕಾಣುತ್ತದೆ. ಆಂಧ್ರರ ಕೂಗಾಟದಿಂದ ಬಳ್ಳಾರೀ ಜಿಲ್ಲೆಯು ಆಂಧ್ರ ಜಿಲ್ಲೆಯಾಗಿಹೋಗಿದೆ.) ವಿಜಯನಗರ ವನ್ನು ಸ್ಥಾಪಿಸಿದ ಶ್ರೀವಿದ್ಯಾರಣ್ಯಸ್ವಾಮಿಗಳಿಗೆ "ಕರ್ನಾಟಕ ಸಿಂಹಾಸನ ಸ್ಥಾಪನಾ ಚಾರ್ಯ"ರೆಂಬ ಬಿರುದು ಈ ಹೊತ್ತಿಗೂ ಇದೆ. ವಿಜಯನಗರದ ಮೊದಲನೆಯ ಅರಸ ನಾದ ಹರಿಹರನು ದೋರಸಮುದ್ರದಿಂದ ಬಂದ ರಾಜನೆಂದು ಶೃಂಗೇರಿಯಲ್ಲಿ ದೊರೆತ ಶಾಸನಲೇಖದ ಸಂದರ್ಭದಿಂದ ಪೂರ್ಣವಾಗಿ ಕಂಡುಬರುತ್ತದೆ. (ಆದರೂ ಈ ಪುಸ್ತಕ ದಲ್ಲಿ ಓರಂಗಲ್ಲಿನಿಂದ ಬಂದವನೆಂಬ ತಪ್ಪು ತಿಳಿವಳಿಕೆಯನ್ನೇ ಈ ಮೊದಲು ಪ್ರಕಟಿಸಿದ್ದ ಕ್ಕಾಗಿ ವಾಚಕರು ನಮ್ಮನ್ನು ಕ್ಷಮಿಸಬೇಕು.) ಹರಿಹರರಾಯನಿಗೆ "ಹರಿಯಪ್ಪ ಒಡೆ ಯರು" ಎಂಬ ಬಿರುದು ಇತ್ತು; ಬುಕ್ಕರಾಯನಿಗೆ "ಭಾಷೆಗೆ ತಪ್ಪುವ ರಾಯರ ಗಂಡ" ಎಂಬುದಾಗಿ ಬಿರುದು ಇತ್ತು; ಅವನು ಆಂಧ್ರರನ್ನು ಜಯಿಸಿದನೆಂದು ಶಿಲಾಲೇಖದಲ್ಲಿ ಉಲ್ಲೇಖವಿದೆ. ಅವನೂ ಆಂಧ್ರನಾಗಿದ್ದರೆ ಹೀಗೆಂದಿಗೂ ಇರುತ್ತಿದ್ದಿಲ್ಲ. ಬುಕ್ಕರಾಯನ ಮಗನಾದ ಹರಿಹರರಾಯನಿಗೆ "ಕರ್ನಾಟಕ ವಿದ್ಯಾವಿಲಾಸ" ಎಂಬ ಬಿರುದಿತ್ತು. ೨ನೆಯ ದೇವರಾಯನು 'ಆನೆಯ ಬೇಟೆಗಾರ'ನೆಂಬ ಬಿರುದನ್ನು ಧರಿಸಿದವನು. ಆ ಕಾಲದ ಆಂಧ್ರ ಕವಿಗಳು ಶ್ರೀಕೃಷ್ಣದೇವರಾಯನನ್ನು 'ಕನ್ನಡ ರಾಜ್ಯರಮಾರಮಣ' ಎಂದು ಸಂಬೋಧಿಸಿದ್ದಾರೆ. ರಾಮರಾಜನ ವಂಶವನ್ನು ಈಗಲೂ ಕರ್ಣಾಟಕ ವಂಶ ವೆಂದು ಕರೆಯುತ್ತಾರೆ. ಈ ಕಾಲದಲ್ಲಿ ಹೆಸರಾದವರ ಹೆಸರುಗಳು ಕೂಡ ಕನ್ನಡದಲ್ಲಿಯೇ ಇರುತ್ತವೆ. ಬಸವಯ್ಯ ಧನ್ನನಾಯಕ, ಮಲ್ಲಪ್ಪ ಒಡೆಯರ, ಸಾಯಣ ಮಂತ್ರಿ, ಕಂಪಣ್ಣ, ದಂಡಾಧಿಪತಿ ಗಂಡ ಬಚ್ಚಪ್ಪ, ಮಲ್ಲನಾಥ, ತಿಮ್ಮರಾಜ ಈ ಹೆಸರಿನವರು ಕೇವಲ ಕನ್ನಡಿಗರೇ ಆಗಿದ್ದಾರೆ. ಆನೆಗೊಂದಿಯ ರಾಜರಲ್ಲಿ ಈ ಹೊತ್ತಿಗೂ ಕನ್ನಡ ಕಾಗದಪತ್ರಗಳು ಅನೇಕವಾಗಿ ದೊರೆಯುತ್ತವೆ. ಅವುಗಳನ್ನು ಪರಿಶೋಧಿಸಿ ನೋಡಿ ದರೆ ಮನಸ್ಸಿಗೊಪ್ಪುವ ಅನೇಕ ಸಂಗತಿಗಳು ದೊರೆಯಬಹುದು.

ವಿಜಯನಗರವು ಕನ್ನಡದ ಸಾಮ್ರಾಜ್ಯವಾಗಿತ್ತೆಂದೂ, ಅದನ್ನು ಕರ್ಣಾಟಕ ಸಿಂಹಾಸನವೆಂದೇ ಕರೆಯುತ್ತಿದ್ದರೆಂದೂ, ಅಲ್ಲಿ ಕನ್ನಡ ಭಾಷೆಯೇ ಪ್ರಧಾನ ಪದವನ್ನು ಹೊಂದಿತ್ತೆಂದೂ ಹೇಳುವುದಕ್ಕೆ ತೆಲಗು ಗ್ರಂಥಗಳಲ್ಲಿಯೂ ಆಧಾರಗಳುಂಟು. ಶ್ರೀಕೃಷ್ಣ ದೇವರಾಯನು ಬರೆದ 'ಅಮುಕ್ತಮಾಲ್ಯದ' ಎಂಬ ಗ್ರಂಥದ ಆರಂಭದ ಶ್ಲೋಕವು ಇದಕ್ಕೆ ಸಾಕ್ಷಿಯಾಗಿರುತ್ತದೆ. ತಿರುಪತಿಯಲ್ಲಿ ಈ ಹೊತ್ತಿಗೂ ಮಹಾದ್ವಾರದ ಒಳಸ್ಥೆ ಯಲ್ಲಿ ಎಡಬಲಕ್ಕೆ ನಿಂತ ಮೂರ್ತಿಗಳ ಮೇಲೆ ಬರೆದ ಅಕ್ಷರಗಳ ಮೇಲಿಂದಲೂ ಈ ಮಾತಿನ ನಿಜಸ್ವರೂಪವು ಕಂಡುಬರುತ್ತದೆ. ಮಹಾದ್ವಾರದಲ್ಲಿ ಕೃಷ್ಣದೇವರಾಯರೂ, ಅವರ ಹೆಂಡತಿಯರಾದ ತಿರುಮಲಮ್ಮನವರೂ, ಚಿನ್ನಮ್ಮನವರೂ ಈ ಮೂವರ ಮೂರ್ತಿ ಗಳು ನಿಂತಿರುತ್ತವೆ. ಅವುಗಳ ಮೇಲೆ "ಶ್ರೀಕೃಷ್ಣದೇವರಾಯರು, ಚಿನ್ನಮ್ಮನವರು, ತಿರುಮಲಮ್ಮನವರು" ಎಂದು ಕನ್ನಡ ಅಕ್ಷರಗಳು ಕೊರೆಯಲ್ಪಟ್ಟಿವೆ. ಇದಕ್ಕೆ ಚಂದ್ರ ಗಿರಿಯ ವೆಂಕಟಪತಿರಾಯನ ಮೂರ್ತಿಯು ನಿಂತಿರುತ್ತದೆ. ಆ ಮೂರ್ತಿಯ ಮೇಲೆ

"ವೆಂಕಟಪತಿಯರಾಲು" ಎಂದು ತೆಲಗು ಹೆಸರು ಬರೆದಿರುತ್ತದೆ. ಈ ಮೂರ್ತಿಗಳೂ ಅವುಗಳ ಮೇಲಿನ ಅಕ್ಷರಗಳೂ ಇವುಗಳಿಂದ ಬಹಳ ಬೋಧವು ಆಗುವಂತೆ ಇದೆ. ವಿಜಯನಗರದ ರಾಜರು ಚಂದ್ರಗಿರಿಗೆ ಹೋಗುವವರೆಗೆ ಕನ್ನಡ ಮಾತನ್ನೇ ಆಡುತ್ತಿದ್ದರು.

ವಿಜಯನಗರದ ತಾಮ್ರಶಾಸನಗಳಲ್ಲಿಯೂ, ಶಿಲಾಶಾಸನಗಳಲ್ಲಿಯೂ ಶಾಸನದ ಲಿಪಿಯು ಯಾವ ಭಾಷೆಯಲ್ಲಿದ್ದರೂ 'ಶ್ರೀವಿರೂಪಾಕ್ಷ' ಎಂಬ ರಾಜವಿಲಾಸವು ಮಾತ್ರ ಕನ್ನಡದಲ್ಲಿಯೇ ಇದೆ. ವಿಜಯನಗರದಂತಹ ಸಾಮ್ರಾಜ್ಯದ ರಾಜಭಾಷೆಯಾದ ಕನ್ನಡವು ಈಗಿನ ಕಾಲದ ಕನ್ನಡಿಗರಿಗೆ ಮಾತ್ರ ಕಾಡುಭಾಷೆಯೆಂದು ತೋರುವದು ಎಷ್ಟು ನಾಚಿಕೆಗೇಡು ! ಪಶ್ಚಿಮ ಚಾಲುಕ್ಯರ ಮತ್ತು ವಿಜಯನಗರದ ರಾಜರ ಸಾಮ್ರಾಜ್ಯದ ಧ್ವಜಚಿಹ್ನವು ವರಾಹಮೂರ್ತಿ; ಪಶ್ಚಿಮಚಾಲುಕ್ಯರು ಕನ್ನಡಿಗರು. ದಕ್ಷಿಣ ಹಿಂದುಸ್ಥಾನದಲ್ಲಿ ಅವರಂತೆ ಹೆಸರಾದ ರಾಜವಂಶವು ವಿಜಯನಗರದ ಹೊರತು ಮತ್ತೆ ಯಾವದೂ ಇಲ್ಲ. ತಮ್ಮ ಪೂರ್ವಜರಾದ ಚಾಲುಕ್ಯರ ಧ್ವಜಚಿಹ್ನವನ್ನೇ ವಿಜಯನಗರದವರೂ ಧರಿಸಿದುದರಿಂದ ಕೇವಲ ಕನ್ನಡ ರಾಷ್ಟ್ರವೆಂಬ ಅಭಿಮಾನವೇ ವಿಜಯನಗರದ ರಾಜ್ಯದಲ್ಲಿ ತುಂಬಿ ತುಳುಕುತ್ತಿತ್ತೆಂದು ತೋರಿಸಲಿಕ್ಕೆ ಬೇರೆ ಕಾರಣವು ಅಗತ್ಯವಿಲ್ಲ. ವಿಜಯನಗರದವರ ಕಾಲದಲ್ಲಿ ಹೆಸರಾದ ಕನ್ನಡ ಕವಿಗಳು ಅನೇಕರು ಆಗಿಹೋಗಿದ್ದಾರೆ. ರಾಜರು ಕನ್ನಡಿಗರಾಗಿದ್ದುದರಿಂದಲೇ ಪ್ರಸಿದ್ಧವಾದ ಅನೇಕ ಕನ್ನಡ ಕವಿಗಳು ಆ ಕಾಲದಲ್ಲಿ ಪ್ರಕಾಶಿಸಿದರು. ಕರ್ನಾಟಕದಲ್ಲಿ ಈಹೊತ್ತಿಗೂ ಮೆರೆಯುತ್ತಿರುವ ವೈಷ್ಣವ ದಾಸಕೂಟವು ವಿಜಯನಗರದವರ ಕಾಲದಲ್ಲಿಯೇ ಆರಂಭವಾಯಿತು. ದಾಸ ಶಿರೋಮಣಿಯಾದ ಪುರಂದರದಾಸರ ಮಂದಿರವು ಈಹೊತ್ತಿಗೂ ವಿಜಯನಗರದಲ್ಲಿ ಚಕ್ರತೀರ್ಥದ ಹಾದಿಯ ಮೇಲೆ ಕಾಣುತ್ತದೆ.

ಇವೇ ಮೊದಲಾದ ಎಲ್ಲ ಸಂಗತಿಗಳನ್ನು ಸಮಾಲೋಚಿಸಿದರೆ ವಿಜಯನಗರವು ಕನ್ನಡದ ಸಾಮ್ರಾಜ್ಯವೆಂಬ ವಿಷಯದಲ್ಲಿ ಎಳ್ಳಷ್ಟು ಸಂದೇಹವು ಉಳಿಯುವದಿಲ್ಲ.

ವಿಜಯನಗರವು ಹಾಳಾದ ದಿನದಿಂದ ಕರ್ನಾಟಕಸ್ಥರಲ್ಲಿಯ ಒಕ್ಕಟ್ಟು ಹಾಳಾಗಿ ಸಹೋದರತ್ವವು ನಷ್ಟವಾಗಿ ಹೋಯಿತು. ಆ ಸ್ಥಿತಿಯು ಈಹೊತ್ತಿಗೂ ಹಾಗೆಯೇ ಉಳಿದಿರುತ್ತದೆ. ವಿಜಾಪುರದವರ ಅಂಕಿತವಾದ ಭೂಪ್ರದೇಶದಲ್ಲಿ ವಾಸಿಸುವ ಕರ್ನಾಟಕಸ್ಥರ ಸ್ಥಿತಿಯಂತೂ ಬಹಳ ವಿಚಿತ್ರವಾಯಿತು. ಕರ್ನಾಟಕಸ್ಥರು ವಿಜಾಪುರದವರ ಹಗೆಗಳು; ಆದುದರಿಂದ ಅವರನ್ನು ಗೆದ್ದನಂತರ ರಾಜಕೀಯ ತತ್ವವನ್ನು ಅನುಸರಿಸಿ ವಿಜಾಪುರದವರು ಕರ್ನಾಟಕಸ್ಥರ ಭಾಷೆಯ ಮೇಲಿನ ಪ್ರೇಮವನ್ನು ಹೋಗಲಾಡಿಸುವದಕ್ಕಾಗಿ ಆ ನಾಡಿನಲ್ಲಿಯ ರಾಜಕೀಯ ಭಾಷೆಯನ್ನು ಮರಾಠಿಯನ್ನಾಗಿ ಮಾಡಿದರು. ಮೆಲ್ಲಮೆಲ್ಲನೆ ರಾಜಸೇವೆಯಲ್ಲಿ ಸೇರಲಿಚ್ಛಿಸುವ ಕರ್ನಾಟಕಸ್ಥರು ತಮ್ಮ ಮಾತೃಭಾಷೆಯ ಅಭಿಮಾನವನ್ನು ಬಿಟ್ಟು ಆ ದಿನದಿಂದ ಉರ್ದು, ಮಹಾರಾಷ್ಟ್ರ ಭಾಷೆಗಳನ್ನು ಕಲಿಯತೊಡಗಿದ ಮೂಲಕ ಕರ್ನಾಟಕದ ಉತ್ತರ ಸೀಮೆಯಲ್ಲಿಯ ಕರ್ನಾಟಕ ಭಾಷೆಯು

ಲುಪ್ತವಾಗುತ್ತ ನಡೆಯಿತು. ಅದೇ ಕ್ರಮವು ಮರಾಟರ ಕಾಲದಲ್ಲಿಯೂ, ಅನಂತರದ ಇಂಗ್ಲಿಷರ ಅಮಲಿನಲ್ಲಿಯೂ ಈ ಹೊತ್ತಿಗೂ ನಡೆದಿರುತ್ತದೆ.

ಯಾವ ನಾಡಿನವರಲ್ಲಿಯಾಗಲಿ ಸ್ವಾಭಿಮಾನಾದಿ ಅನೇಕ ಗುಣಗಳನ್ನು ಲೋಪ ಮಾಡಿ ಅವರಲ್ಲಿಯ ಸ್ವತ್ವವನ್ನು ನಾಶಪಡಿಸಬೇಕಾದರೆ ಅವರಲ್ಲಿಯ ಸ್ವಭಾಷೆಯ ಮೇಲಿನ ಪ್ರೇಮವನ್ನು ಹಗೆಗಳು ತೆಗೆದುಹಾಕುವ ಪ್ರಯತ್ನವನ್ನು ಮಾಡುತ್ತಾರೆ. ಈ ವಿಷಯದಲ್ಲಿ ಜರ್ಮನರು ಅಲ್ಸೆಸ್ ಲೋರೇನ್ ಪ್ರಾಂತಗಳಲ್ಲಿಯೂ, ಪೋಲಂಡ ದೇಶದಲ್ಲಿಯೂ ಮಾಡಿದ ಕಟ್ಟನ್ನು ಪ್ರತಿಯೊಬ್ಬ ಭಾರತೀಯನೂ,- ಅದರಲ್ಲಿಯೂ ಕರ್ಣಾಟಕಸ್ಥನು-ಮನ್ನಿಸುವಂತೆ ಇದೆ. ಅಲ್ಲಿರುವ ಜನರಿಗೆ ಜರ್ಮನರು ಎಲ್ಲ ಬಗೆಯ ಹಕ್ಕುಗಳನ್ನು ಕೊಟ್ಟು ಅವರನ್ನು ಪೂರ್ವಜರ್ಮನರನ್ನಾಗಿ ಮಾಡಲು ಬಲು ಶ್ರಮಬಟ್ಟರು. ಜೇತೃವರ್ಗದಲ್ಲಿಯೂ ಜಿತವರ್ಗದಲ್ಲಿಯೂ ಯಾವ ಭೇದವನ್ನೂ ಇಡಲಿಲ್ಲ. ಆದರೆ ಆ ಜನರು ತಮ್ಮ ಮಾತೃಭಾಷೆಯಲ್ಲಿ ತಮ್ಮ ವ್ಯವಹಾರಗಳನ್ನು ಮಾಡಬಾರದೆಂದು ಕಟ್ಟು ಮಾಡಿದರು. ಅಲ್ಸೆಸದಲ್ಲಿಯ ಫ್ರೆಂಚ ಜನರೂ, ಪೋಲಂಡದಲ್ಲಿಯ ಪೋಲಿಶ್ ಜನರೂ ಇದಕ್ಕೆ ಒಪ್ಪಲಿಲ್ಲ. ಅನೇಕ ಕಷ್ಟ ಸಾಹಸಗಳನ್ನು ಪಟ್ಟು ತಮ್ಮ ಮಾತೃಭಾಷೆಯನ್ನು ಅವರು ಕಾದುಕೊಂಡರು. ಅವರ ಮಾತೃಭಾಷೆಯ ಪ್ರೇಮದ ಫಲವು ಮಹಾಯುದ್ಧದ ಕೊನೆಗೆ ಅವರಿಗೆ ದೊರೆಯಿತು. ಈ ಸಂಗತಿಯು ಕರ್ಣಾಟಕಭಾಷೆಯನ್ನು ತಿರಸ್ಕರಿಸುವ ಕರ್ಣಾಟಕಸ್ಥರಾದ ಸ್ತ್ರೀಪುರುಷರೆಲ್ಲರೂ ಮನ್ನಿಸುವಂತೆ ಇದೆ.

ಮಾತೃಭಾಷೆಯನ್ನು ಮರೆತವರು ಪೂರ್ವಸಂಸ್ಕೃತಿಯನ್ನೂ, ಪೂರ್ವೇತಿಹಾಸವನ್ನೂ ಸಹಜವಾಗಿ ಮರೆತುಬಿಡುತ್ತಾರೆ. ಅವರಲ್ಲಿಯ ಆತ್ಮವಿಶ್ವಾಸವು ಹಾರಿ ಹೋಗುತ್ತದೆ. ಅವರಿಂದ ಯಾವ ಪುರುಷಾರ್ಥವೂ ಆಗಲಾರದು. ಸದ್ಯಕ್ಕೆ ಕನ್ನಡಿಗರಲ್ಲಿ ಕಂಡುಬರುವ ಅನೇಕ ದುರ್ಗುಣಗಳಾದರೂ ಈ ಪ್ರಕಾರದ ಅವರಲ್ಲಿಯ ನಾಡನುಡಿಯ ಮೇಲಿನ ಪ್ರೇಮಾಭಾವದ ಫಲಗಳೇ ಆಗಿರುತ್ತವೆ. ಮಹಾರಾಷ್ಟ್ರ ಮತ್ತು ಬಂಗಾಲದ ಲೋಕನಾಯಕರು ೪೦-೫೦ ವರ್ಷಗಳ ಹಿಂದೆಯೇ ಸ್ವಸ್ಥಿತಿಯನ್ನು ಅರಿತು ತಮ್ಮ ತಮ್ಮ ದೇಶಗಳಲ್ಲಿಯ ಜನರಲ್ಲಿ ಮಾತೃಭಾಷೆಯ ಮೇಲಿನ ಪ್ರೇಮವನ್ನುಂಟುಮಾಡಿದ್ದರಿಂದ ಭರತಖಂಡದಲ್ಲಿ ಅವರು ಹೆಚ್ಚಿನ ದೇಶಭಕ್ತರಾಗಿದ್ದಾರೆ. ಆಂಧ್ರರಲ್ಲುಂಟಾದ ಹೊಸ ಜಾಗೃತಿಯಾದರೂ ಅವರಲ್ಲಿ ಹೊಸದಾಗಿ ಹುಟ್ಟಿದ ಭಾಷಾಪ್ರೇಮದ ಲಕ್ಷಣವೇ ಆಗಿರುತ್ತದೆ. ಕನ್ನಡಿಗರಲ್ಲಿ ಸದ್ಯಕ್ಕೆ ಭಾಷಾಪ್ರೇಮದ ಬೀಜವು ನಾಟುವ ಸುಚಿಹ್ನವು ಕಂಡುಬರುತ್ತದೆ. ಜನರಲ್ಲಿ ಭಾಷಾಪ್ರೇಮದ ವೃದ್ಧಿಯ ಸಂಗಡಲೇ ಆತ್ಮವಿಶ್ವಾಸ, ಸ್ವೇತಿಹಾಸಪ್ರೀತಿ ಮೊದಲಾದ ಗುಣಗಳೂ ಉದ್ಭವಿಸುತ್ತಿವೆ. ಆಶಾಪೂರಣ ಮಾಡುವ ಭವಿಷ್ಯತ್ಕಾಲದ ಸುಲಕ್ಷಣಗಳು ಎತ್ತ ನೋಡಿದತ್ತ ಕಂಡುಬರುತ್ತಿವೆ.

---

# ಕೊನೆಯ ಒಂದೆರಡು ಮಾತುಗಳು

ಇಲ್ಲಿಯ ವರೆಗೆ ವೇದಾರ್ಥಪ್ರಕಾಶಾದಿ ಗ್ರಂಥಗಳಿಂದಲೂ, ಇತರ ಉಲ್ಲೇಖಗಳಿಂದಲೂ ಸಾಯಣಮಾಧವರ ವಿಷಯವಾಗಿ ತಿಳಿದ ಸಂಗತಿಯನ್ನು ಮುಖ್ಯವಾಗಿಯೂ ವಿಜಯ ನಗರದ ವಿಷಯವಾಗಿ ಗೊತ್ತಾದ ಸಂಗತಿಯನ್ನು ಸಾಮಾನ್ಯವಾಗಿಯೂ ವಾಚಕರ ಮುಂದೆ ಇಟ್ಟೆವು; ಮತ್ತು ಈ ಸಂಗತಿಯು ಅಲ್ಪವಾಗಿದೆಯೆಂಬುದನ್ನೂ ಬಲ್ಲೆವು. ಆದರೂ ನಮಗೆ ದೊರೆತ ಉಲ್ಲೇಖಗಳಲ್ಲಿ ಅನೇಕ ಮಹತ್ವದ ಸಂಗತಿಗಳು ಉಪಲಬ್ಧ ವಾದುವೆಂಬುದು ಸಂತೋಷದ ಸಂಗತಿಯು. ಇತರ ಗ್ರಂಥಕಾರರ ಕೃತಿಗಳಲ್ಲಿ ಸ್ವವಿಷಯಕ ವಾದ ವೃತ್ತಾಂತವು ಇಷ್ಟು ಮಟ್ಟಿಗೆ ದೊರೆಯುವುದೂ ಕಠಿನವಾಗುತ್ತದೆ.

ಇರಲಿ. ಗ್ರಂಥದ ವಿಸ್ತಾರವು ನಮ್ಮ ಊಹೆಗಿಂತ ಹೆಚ್ಚಾಗಿರುವದರಿಂದಲೂ, ಸಾಯಣಮಾಧವೀಯ ಗ್ರಂಥಗಳು ಬಹುಮಟ್ಟಿಗೆ ಉಪಲಬ್ಧವಾಗದೆ ಇದ್ದುದರಿಂದಲೂ ಲೆಕ್ಕಣಿಕೆಯನ್ನು ಇಲ್ಲಿಗೆ ನಿಲ್ಲಿಸಲೇಬೇಕಾಗಿದೆ. "ವಿದ್ಯಾರಣ್ಯರು ಮತ್ತು ವಿಜಯ ನಗರವು" ಈ ವಿಷಯವು ಜಿಜ್ಞಾಸುಗಳಾದ ವಿದ್ವಾಂಸರ ಶೋಧಕ್ಕೆ ಪಾತ್ರವಾಗಿದೆ. ಅಂತಹ ಒಬ್ಬರಾದರೂ ಪರಿಶೋಧನೆ ಮಾಡಿ ಸಾಯಣಮಾಧವೀಯ ದಿವ್ಯಕಾಲವನ್ನು ಕುರಿತು ಸವಿಸ್ತರವಾದ ಒಂದು ಪುಸ್ತಕವನ್ನು ಕನ್ನಡದಲ್ಲಿ ಬರೆದರೆ ಅದು ಮನನೀಯವೂ ಮಾನನೀಯವೂ ಆಗುವದೆಂಬಲ್ಲಿ ಸಂದೇಹವಿಲ್ಲ.

ಇದೇ ಸಂದರ್ಭದಲ್ಲಿ ಇನ್ನೊಂದು ಸೂಚನೆಯನ್ನು ಇಲ್ಲಿ ಮಾಡದೆ ಇರಲಾರೆವು. ಶ್ರೀವಿದ್ಯಾರಣ್ಯರ ಕಾಲವನ್ನು ನಿರ್ಣಯಿಸುವಾಗ ನಾವು ಶ್ರೀ ಕಾಶೀನಾಥ ಕೃಷ್ಣ ಲೇಲೆ ಇವರ ಅಭಿಪ್ರಾಯವನ್ನು ಅನುಸರಿಸಿದ್ದೇವೆ. ಶ್ರೀ ಆಲೂರರವರೂ, ಶ್ರೀ ಡಿ. ವಿ. ಗುಂಡಪ್ಪನವರೂ ತಮ್ಮ ಉಲ್ಲೇಖಗಳಿಗೆ ಸಬಲವಾದ ಆಧಾರಗಳನ್ನೇನೂ ಕೊಟ್ಟಿಲ್ಲ. ಮತ್ತು ಇತಿಹಾಸವಿಚಕ್ಷಣರಾದ ಶ್ರೀ ಸೂರ್ಯನಾರಾಯಣರಾಯರೂ ಕೂಡ ಈ ವಿಷಯದಲ್ಲಿ ನಿರ್ವಿವಾದ ಆಧಾರಗಳನ್ನು ತೋರಿಸದೆ, ಗತಾನುಗತಿಕತ್ವವನ್ನು ಅನುಸರಿ ಸಿರುವದನ್ನು ನೋಡಿ ಆಶ್ಚರ್ಯವೂ ಖೇದವೂ ಉಂಟಾಗುತ್ತವೆ. ಪ್ರಸ್ತುತ ಲೇಖಕನು ಇತಿಹಾಸ ಸಂಶೋಧನದಲ್ಲಿ ನುರಿತವನಲ್ಲವಾದುದರಿಂದಲೂ, ಈ ಪುಸ್ತಕದ ಮಧ್ಯದಲ್ಲಿ ಅಲ್ಲಲ್ಲಿ ಸೂಚಿಸುತ್ತ ಬಂದ ಮೇರೆಗೆ ಸಾಕಷ್ಟು ಕಾಲವು ದೊರೆಯಲಿಲ್ಲವಾದುದರಿಂದಲೂ ಈ ವಿಷಯದಲ್ಲಿ ಮುಂದಿಯ ಮೋರೆಯನ್ನೇ ನೋಡುವ ಪ್ರಸಂಗವು ಅವನಿಗೆ ಪ್ರಾಪ್ತ ವಾಯಿತು. ಆದುದರಿಂದ ವಿದ್ವಾಂಸರೂ, ಅಭಿಮಾನಿಗಳೂ, ಇತಿಹಾಸಜ್ಞರೂ ಆದ ಮಹನೀಯರು ಈ ಕಾಲನಿರ್ಣಯವನ್ನು ನಿಶ್ಚಿತವಾಗಿ ಗೊತ್ತುಪಡಿಸಿದರೆ ಮಹೋಪ ಕಾರವಾಗುವದು. "ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ"ವು ಇತ್ತಕಡೆಗೆ ಲಕ್ಷ್ಯವನ್ನು ಕೊಡಬಲ್ಲುದೇನು ?

ಇನ್ನು ಈ ಪುಸ್ತಕದಲ್ಲಿ ಚರಿತ್ರನಾಯಕರ ಸಾಕ್ಷಾತ್ಸಂಗತಿಗಿಂತ ಇತರ ವೃತ್ತಾಂತವೇ ಹೆಚ್ಚಾಗಿದೆಯೆಂದು ಮೇಲೆ ಮೇಲೆ ನೋಡುವವರಿಗೆ ಗೋಚರವಾಗ ಬಹುದು. ಪ್ರತಿಯೊಂದು ವ್ಯಕ್ತಿಯೂ ತನ್ನ ನಿತ್ಯ ಯಾತ್ರೆಯಲ್ಲಿ ಕೂಡ ತನಗೆ ಬಹುಮಟ್ಟಿಗೆ ಸಂಬಂಧವಿಲ್ಲದಂತೆ ಕಾಣುವ ಅನೇಕ ವಿಷಯಗಳಲ್ಲಿ ವ್ಯವಹರಿಸ ಬೇಕಾಗುತ್ತದೆಂಬುದನ್ನು ಮರೆಯಕೂಡದು. ಅಂದಮೇಲೆ ವಿಭೂತಿಗಳ ಚರಿತ್ರವು ಪರಾರ್ಥಮಯವಾಗಿರುವದು. ಸಹಜಿಕವೇ ಅಲ್ಲವೆ? ಇನ್ನು ಲೇಖಕನಲ್ಲಿರತಕ್ಕ ಕೊರತೆಯನ್ನೂ ಅಸಾಮರ್ಥ್ಯವನ್ನೂ ಅಲ್ಲಲ್ಲಿ ನಾವು ವಿಶದೀಕರಿಸುತ್ತ ಬಂದಿದ್ದೇವೆ. ಅಂತಹ ಪ್ರಮಾದಗಳನ್ನು ಸದಯ ವಾಚಕರು ನಮ್ಮ ಪದರಿಗೆ ಕಟ್ಟಿ, ಅವುಗಳನ್ನು ತಿದ್ದುವ ಬಗೆಯನ್ನೂ ಸೂಚಿಸಿದರೆ ಗ್ರಾಹ್ಯವೆಂದು ತೋರುವ ಅಂಶಗಳೆಲ್ಲವನ್ನೂ ಕೃತಜ್ಞತಾಪೂರ್ವಕವಾಗಿ ಅಂಗೀಕರಿಸುವೆವು.

ಈ ಪುಸ್ತಕವನ್ನು ಬರೆಯಹತ್ತಿದ ಮೇಲೆ ನನಗೆ ಈ ಊರಲ್ಲಿ ( ಧಾರವಾಡ ) ಪುಸ್ತಕಾಲಯದ ಕೊರತೆಯೊಂದು ಅತಿಶಯವಾಗಿ ಬಾಧಿಸಿತು. ಬೇಕಾದ ಪುಸ್ತಕವು ಹೊತ್ತಿಗೆ ಸಿಕ್ಕಲೇ ಇಲ್ಲ. ಸಂಸ್ಕೃತ ಪುಸ್ತಕಗಳ ಸಂಗ್ರಹವಂತೂ ಬಹಳ ಕಡಿಮೆ. ಅದರಂತೆಯೇ ನಾನು ಕೇಳಿದ ಮತ್ತು ನೋಡಿದ ಇಂಗ್ಲಿಷ ಪುಸ್ತಕಗಳು ಕೂಡ ಇಲ್ಲಿ ದೊರೆಯುವದು ದುರ್ಲಭವಾಯಿತು. ಈ ವಿಷಯದಲ್ಲಿ ಮೈಸೂರ ಪಟ್ಟಣವನ್ನು ನಾನೆಷ್ಟು ಪ್ರಶಂಸೆಮಾಡಿದರೂ ಕಡಿಮೆಯೇ. ಮೈಸೂರಲ್ಲಿರುವ "ಪಬ್ಲಿಕ್ ಲಾಯಬ್ರರಿ", "ಓರಿಯಂಟಲ್ ಲಾಯಬ್ರರಿ", "ಯುನಿವ್ಹರ್ಸಿಟಿ ಲಾಯಬ್ರರಿ" ಈ ಮೂರು ಪುಸ್ತ ಕಾಲಯಗಳಲ್ಲಿ ಸಾಧಾರಣವಾಗಿ ಬೇಕಾದ ತರದ ಪುಸ್ತಕಗಳು ನನಗೆ ದೊರೆಯುತ್ತಿ ದ್ದುವು. ಲೇಖನವಾಚನಗಳಲ್ಲಿ ಆಸಕ್ತರಾದವರು ಮೈಸೂರಿಗೆ ಹೋದಾಗ ಈ ಮೂರನ್ನು ಅವಶ್ಯವಾಗಿ ನೋಡಿ ಬರಬೇಕೆಂದು ಹೇಳುವೆವು; ನೋಡುವದಕ್ಕಾಗಿಯೇ ಹೋದರಂತೂ ಅವರೇ ನಿಜವಾದ ಲೇಖನವಾಚನಾಸಕ್ತರು; ಮತ್ತು ಭಾಷಾಭಿ ಮಾನಿಗಳು. ಇರಲಿ. ಈ ಪ್ರಕಾರದ ಕೊರತೆಯ ಮೂಲಕ ಈ ಕೃತಿಯು ಲೇಖಕನ ಮನಸ್ಸಿಗೇ ಸಾಕಷ್ಟು ತೃಪ್ತಿಕರವಾಗಿ ಆಗಿಲ್ಲ. ಆದುದರಿಂದ ವಿದ್ವಾಂಸರ ಸೂಚನೆ ಗಳಿಂದಲೂ, ಇನ್ನು ಮುಂದೆ ದೊರೆಯಬಹುದಾದ ನವೀನ ಉಲ್ಲೇಖಾದಿಗಳಿಂದಲೂ, ಈ ಪುಸ್ತಕದಲ್ಲಿ ಸದ್ಯಕ್ಕೆ ಇರುವ ಕೊರತೆಗಳನ್ನು ಮುಂದೆ ದೂರ ಮಾಡುವ ಉತ್ಸು ಕತೆಯು ಈ ಲೇಖನದಲ್ಲಿ ಅತ್ಯುತ್ಕಟವಾಗಿದೆ. ಆದರೆ ಅಭಿಮಾನಿಗಳಾದ ಕನ್ನಡಿಗರ ಪ್ರೋತ್ಸಾಹವನ್ನು ಆ ಉತ್ಸುಕತೆಯ ಸ್ಥಿರತಾಸ್ಥಿರತೆಯು ಅವಲಂಬಿಸಿದೆ. ಉದಾ ರಾಶ್ರಯವನ್ನಿತ್ತು ದ್ವಿತೀಯಾವೃತ್ತಿಯನ್ನು ತೆಗೆಯುವ ಸುಯೋಗವನ್ನು ಒದಗಿಸಿ ಕೊಟ್ಟರೆ, ಈಗಿರುವ ದೋಷಗಳನ್ನು ದೂರ ಮಾಡಲು ಕುತೂಹಲಿಯಾಗಿರುವೆನು.

ಶ್ರೀವಿದ್ಯಾರಣ್ಯಸ್ವಾಮಿಗಳಂತಹರ ಚರಿತ್ರೆಯು ಬೇರೆ ಬೇರೆ ಮಠಸ್ಥಳದಲ್ಲಿ ಉಪ ಲಬ್ಧವಾಗುವ ಸಂಭವವು ಹೆಚ್ಚಾಗಿ ಉಂಟು. ಅಂತಹ ಮಠಗಳಲ್ಲಿ ಪ್ರಾಚೀನ ಪುಸ್ತಕ

ಗಳಾದರೂ ದೊರೆಯಬಹುದು. ಎಲ್ಲ ಪೀಠದವರು ಇಂತಹ ಸಂಗತಿಗಳನ್ನು ಕೂಡಿ ಹಾಕುವದರ ಕಡೆಗೆ ಲಕ್ಷ್ಯವನ್ನು ಪೂರಯಿಸಿದರೆ ಭಾರತ ವರ್ಷದ ಧಾರ್ಮಿಕ ಸಾಮಾಜಿಕ ಮತ್ತು ವಾಙ್ಮಯಾತ್ಮಕ ಇತಿಹಾಸ ಲೇಖನಕ್ಕೆ ಅತ್ಯುತ್ತಮ ಸಹಾಯವಾಗುವದೆಂಬಲ್ಲಿ ಎಳ್ಳಷ್ಟು ಸಂದೇಹವಿಲ್ಲ; ಮತ್ತು ಅದರಿಂದ ಭರತಖಂಡದ ಇತಿಹಾಸದೊಳಗಿನ ಎಷ್ಟೋ ಗೂಢಪ್ರಶ್ನೆಗಳು ಸ್ಪಷ್ಟವಾಗಬಹುದು. ಒಂದಾನೊಂದು ಕಾಲದಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದ ಶೃಂಗೇರೀ ಮಠವು ಕಾಲಚಕ್ರವಶದಿಂದ ಲುಪ್ತಪ್ರಾಯವಾಗಿತ್ತು. ಜೀರ್ಣೋದ್ಧಾರದಿಂದಲೂ, ಪುನರುಜ್ಜೀವನದಿಂದಲೂ, ನೂತನ ಸಂಸ್ಕಾರದಿಂದಲೂ ಯಾವ ಮಹನೀಯರು ಆ ಮಠವನ್ನು ಪೂಜ್ಯಕೋಟಿಗೆ ಏರಿಸಿದರೋ, ಆ ಮಹಾಗುರು ವಿದ್ಯಾರಣ್ಯಸ್ವಾಮಿಗಳ ಋಣವನ್ನು ಮೇಲೆ ಹೇಳಿದ ರೀತಿಯಿಂದ ಆ ಮಠವು ತೀರಿಸಬೇಕೆಂದು ಪ್ರಸ್ತುತ ಲೇಖಕನು ಸವಿನಯವಾಗಿ ಬೇಡುತ್ತಾನೆ.

ಶ್ರೀವಿದ್ಯಾರಣ್ಯಸ್ವಾಮಿಗಳಂತಹರು, ಹಿಂದೆ ಹೇಳಿದ 'ಯದಾ ಯದಾಹಿ ಧರ್ಮಸ್ಯ' ಎಂಬ ಭಗವದುಕ್ತಿಯಂತೆ ಲೋಕೋಪಕಾರಾರ್ಥವಾಗಿ ಕಾಲಕಾಲಕ್ಕೆ ಅವತರಿಸುತ್ತಿರುತ್ತಾರೆ. ಅವರು ಸಾಯುವದಕ್ಕಾಗಿ ಹುಟ್ಟುವವರಲ್ಲ; ಅವರ ಶಬ್ದಗಳು ಚಿರಸ್ಥಾಯಿಗಳು. ಮನುಷ್ಯಮಾತ್ರರ ವಿಷಯದಲ್ಲಿದ್ದ ಅವರ ತಾತ್ಕಾಲಿಕ ಕರ್ತವ್ಯವು ಪೂರ್ಣವಾದೊಡನೆಯೇ ಅವರು ಅಂತರ್ಧಾನವನ್ನು ಹೊಂದುವರು; ಮಾಯವಾಗುವರು. ಆದರೆ ಅವರ ಶಿಷ್ಯಪ್ರಶಿಷ್ಯರ ಬುದ್ಧಿಚಾತುರ್ಯದ ಬೆಳವಣಿಗೆಯೂ ಅವರು ಹಾಕಿಕೊಟ್ಟ ಪಂಥದ ಅನುಸರಣವೂ ಅವರ ಅಮರ್ತ್ಯತ್ವವನ್ನು ಸಿದ್ಧಗೊಳಿಸುವವು. ಹೀಗೆಯೇ ಕಾಲಕಾಲಕ್ಕೆ ಇಂತಹ ಮಹನೀಯರು ಆವಿರ್ಭವಿಸಿ ಲೋಕಸಂಗ್ರಹವನ್ನೂ ಲೋಕಕಲ್ಯಾಣವನ್ನೂ ನೆರವೇರಿಸುವರು. ಯುರೋಪದೊಳಗಿದ್ದ ವಿದ್ಯಾರಣ್ಯತುಲ್ಯ ಪಂಡಿತನಾದ ಇರಾಸ್ಮಸನ ವಿಷಯದಲ್ಲಿ ಚಾರ್ಲಸ ರೀಡ್ ಎಂಬವರು ಇದೇ ಆಶಯದ ಉದ್ಗಾರಗಳನ್ನು ತೆಗೆದಿದ್ದಾರೆ. ಅವನ್ನಿಲ್ಲಿ ಉದ್ಧರಿಸಿದರೆ ಅಪ್ರಾಸಂಗಿಕವಾಗಲಿಕ್ಕಿಲ್ಲೆಂದು ತಿಳಿಯುತ್ತೇವೆ.

"The words of a genious so high as his are not born to die; their immediate work upon mankind fulfilled they may seem to lie torpid; bat at each fresh shower of intelligence time pours upon their students. they prove their immortal race; they revive, they spring from the dust of great libraries: they bud, they flower, they fruit they seed from generation to generation and from age to age."

ಕೊನೆಯಲ್ಲಿ ಹೇಳುವದೇನಂದರೆ :— ಶ್ರೀವಿದ್ಯಾರಣ್ಯಸ್ವಾಮಿಗಳ ವಿಷಯದಲ್ಲಿ ಎಷ್ಟು ಸಂಗತಿಯನ್ನು ದೊರಕಿಸುವದು ಸಾಧ್ಯವಾಯಿತೋ ಅಷ್ಟನ್ನೆಲ್ಲ ವಾಚಕ ಮಹಾಶಯರ ಮುಂದೆ ಇಟ್ಟಿದ್ದೇನೆ. ಕಾಲಸಾಂಕೋಚ್ಯ ಮತ್ತು ಲೇಖಕನ ಅಯೋಗ್ಯ

ತೆಯ ಮೂಲಕ ಎಷ್ಟೋ ಕೊರತೆಗಳು ಇದರಲ್ಲಿ ಉಳಿದಿರಬಹುದು. ಅಲ್ಲದೆ ಸಂಗತಿಯು ದೊರೆದೊರೆದಂತೆ ಪುಸ್ತಕದಲ್ಲಿ ಸೇರಿಸುತ್ತ, ಬರೆಬರೆದಷ್ಟನ್ನು ಮುದ್ರಣಕ್ಕೆ ಕೊಡುತ್ತ ಬಂದುದರಿಂದ ಕ್ರಮಭಂಗ, ಪೌನರುಕ್ತ್ಯ, ಗೌರವ, ಲಾಘವ ಮೊದಲಾದ ಅನೇಕ ದೋಷಗಳು ಇದರಲ್ಲಿ ಇರಬಹುದು. ಇವೆಲ್ಲ ತಪ್ಪುಗಳಿಗಾಗಿ ನಾನು —

ಗುಣದೋಷೌ ಬುಧೋ ಗೃಹ್ಣನ್ನಿಂದುಕ್ಷ್ವೇಡಾವಿವೇಶ್ವರಃ ।
ಶಿರಸಾ ಶ್ಲಾಘತೇ ಪೂರ್ವಂ ಪರಂ ಕಂಠೇ ನಿಯಚ್ಛತಿ ॥

ಎಂಬಂತಿರುವ ಬುಧರಿಗೆ ಹೆಚ್ಚಾಗಿ ಹೇಳಿಕೊಳ್ಳತಕ್ಕುದೇನು ? ಇನ್ನು ಇದರ ವಿರುದ್ಧ ಸ್ವಭಾವವುಳ್ಳ ಜನರಿಗಾದರೂ ನಾನು ಹೇಳಿಕೊಳ್ಳತಕ್ಕದ್ದೇನೂ ಇಲ್ಲವೇ ಇಲ್ಲ; ಹೇಳಿದರೆ ಉಪಯೋಗವೂ ಇಲ್ಲ. ಇರಲಿ, ಪ್ರಸ್ತಾವನೆಯಲ್ಲಿ ಹೇಳಿದ ಮೇರೆಗೆ ಸ್ವಾಮಿಗಳವರ ಚರಿತ್ರರೂಪವಾದ ಈ ಪುಸ್ತಕವನ್ನು ಪೂರ್ಣಗೊಳಿಸಲು ಯಾವ ಯಾವ ಮಹನೀಯರ ಸಹಾಯವು ಒಂದಿಲ್ಲೊಂದು ವಿಧದಿಂದ ನನಗೆ ದೊರೆಯಿತೋ ಅವರೆಲ್ಲರಿಗೆ ಇನ್ನೊಮ್ಮೆ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುವೆನು. ಸಾಕಷ್ಟು ಯೋಗ್ಯತೆಯೂ ಸಾಧನಗಳೂ ಇಲ್ಲದೆ ಇದ್ದರೂ, ಶ್ರೀಸ್ವಾಮಿಗಳವರ ಮೇಲಿರುವ ಭಕ್ತಿಯಿಂದಲೂ, ಅವರ ಅನುಗ್ರಹಬಲದ ಮೇಲಿನ ದೃಢವಿಶ್ವಾಸದಿಂದಲೂ ಈ ಕೆಲಸವನ್ನು ಕೈಕೊಂಡೆನಾದುದರಿಂದ ಕಟ್ಟಕಡೆಯಲ್ಲಿ ಈ ಅಲ್ಪಕೃತಿಯನ್ನು ಶ್ರೀಸ್ವಾಮಿಗಳವರ ಪಾದಗಳ ಮೇಲೆಯೇ ಇಟ್ಟು ನಮಸ್ಕರಿಸಿ ಲೆಕ್ಕಣಿಕೆಯನ್ನು ಕೆಳಗೆ ಇರಿಸುತ್ತೇನೆ.

ವಿದ್ಯಾರಣ್ಯಚರಿತ್ರೇಣ ಮನೋಜಾಡ್ಯಂ ನಿವಾರಯನ್ ।
**ಈಪ್ಸಿತಂ** ಪೂರಯೇತ್ಸರ್ವಂ ವಿದ್ಯಾತೀರ್ಥ ಮಹೇಶ್ವರಃ ॥

**ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥**

**ಜಯ ಬಲಭೀಮ ಸಮರ್ಥ.**

———

# ಶ್ರೀವಿದ್ಯಾರಣ್ಯಾಷ್ಟಕವು

ವರಕರ್ನಾಟಕ ಸಿಂಹಪೀಠ ನಳಿನಕ್ಕಾಚಾರ್ಯನಂ ಸೂರ್ಯನಂ |
ವರವೈರಾಗ್ಯಸುಧಾರ್ಣವಕ್ಕೆಸೆವ ಸದ್ಯೋಗೀಂದ್ರನಂ ಚಂದ್ರನಂ ||
ಪರವಿದ್ಯಾಘನಲಕ್ಷ್ಮಿಗಂ ಮೆರೆವ ಸದ್ವಾಗೀಶನಂ ಶ್ರೀಶನಂ |
ನಿನುತಂ ಧ್ಯಾನಿಸಿಬೇಡುವೆಂ ವಿನುತ ವಿದ್ಯಾರಣ್ಯನಂ ಪುಣ್ಯನಂ || ೧
ಜಯಕರ್ನಾಟಕಮಾತೆಯೆಂಬ ಜಯಘೋಷಂ ಪುಟ್ಟಿತಾರಿಂದೆಪೂ- |
ರ್ಣಯಶೋವಲ್ಲರಿ ಪರ್ಬಿತಾವ ವಿಭುವಿಂ ಕರ್ನಾಟಸಾಮ್ರಾಜ್ಯದಾ ||
ಜಯಭೇರೀನಿನದಕ್ಕೆ ಬೆರ್ಚಿ ನಡುಗಿತ್ತಾರಿಂದೆ ಧಾತ್ರೀತಲಂ |
ನಯಸಂಪನ್ನನರೋತ್ತಮಾ ! ವಿಮಲ ವಿದ್ಯಾರಣ್ಯಯೋಗೀಶ್ವರಾ ! || ೨
ತಪಮಂ ಗೆಯ್ದವನೀತನೀಶನೆ ವಲಂ ಕರ್ನಾಟಸಿಂಹಾಸನಾ- |
ಧಿಪನಂ ಗೆಯ್ದವನೀತನೀತನೆ ಗಡಾ ! ಸದ್ಭಕ್ತನಂ ಹುಕ್ಕನಂ ||
ನೃಪರಂ ಗೆಲ್ದವನೀತನೀತನೆ ಸುಮಂತ್ರಾಲೋಚನಾಶಕ್ತಿಯಿಂ- |
ದಪವರ್ಗಪ್ರದನೀತನೀತನೆ ಸುವಿದ್ಯಾರಣ್ಯಯೋಗೀಶ್ವರಂ || ೩
ಚಲಮಂ ತೊಟ್ಟವನೀತನೀತನೆ ಸ್ವದೇಶೋದ್ಧಾರ ಸತ್ಕಾರ್ಯಕಂ |
ನಿಲಯಂ ಬಿಟ್ಟವನೀತನೀತನೆ ತಪಃಸಾಮರ್ಥ್ಯದಿಂ ಪೊನ್ನಿನಾ ||
ಮಳೆಯಂ ಕೊಟ್ಟವನೀತನೀತನೆ ಜನಪ್ರೋದ್ಭೂತಘೋರಾಘಸಂ- |
ಕುಲಮಂ ಸುಟ್ಟವನೀತನೀತನೆಲೆ ವಿದ್ಯಾರಣ್ಯ ಯೋಗೀಶ್ವರಂ || ೪
ಇವನೇ ಸದ್ಗುಣ ಪುಷ್ಪಸೌರಭಲಸದ್ಭೃಂಗಂ ಸದಾಚಾರಸಿಂ- |
ಧುವಿರಾಜಾಮೃತರಶ್ಮಿಯೋಗಿಜನಹೃತ್ಪದ್ಮಾರ್ಕನುದ್ಯದ್ಯಶೋ- ||
ಧವಲೇಂದ್ವಾತಪನಿರ್ಝರ ಪ್ರಕರಸಚ್ಚಂಚಚ್ಚಕೋರಂ ವಲಂ |
ವಿವಿಧಜ್ಞಾನವನಾಳಿ ಚೈತ್ರನಿವನೇ ಯೋಗೀಶವಿದ್ಯಾವನಂ || ೫
ಇವನಲ್ತೇ ಯತಿಪುಂಗವಂ ವಿಮಲಚಾರಿತ್ರಂ ತ್ರಿಕಾಲಜ್ಞನಿಂ- |
ತಿವನಲ್ತೇ ಬಹುನಿಸ್ಪೃಹಂ ಪ್ರಬಲವಿದ್ವಾಂಸಂ ಸದಾಶಾಂತನಿಂ- ||
ತಿವನಲ್ತೇ ನೃಪನೀತಿನೇತ್ರನನಘಂ ವಿದ್ಯಾವನಂ ಪಾವನಂ || ೬
ಬುವಿತಾಂ ಧರ್ಮವಿಹೀನವಾಗಿಜನರೆಲ್ಲರ್ ನೀಚಕರ್ಮಾವೃತರ್ |
ದಿವಿಜಾರಾತಿ ಸಮಾನಶೀಲರನಿಶಂ ಪಾಪಾತ್ಮರಿರ್ದಂದು ನೀಂ ||
ಜವದಿಂ ಜನ್ಮಿಸಿ ದುಷ್ಕರಸದೆಯುತಂ ಸದ್ಧರ್ಮಮಂ ಕಾಯ್ದು ವೇ- |
ಧವಾಕ್ಯಂ ನಿಜವೆಂದು ತೋರಿದೆಯೊವಿದ್ಯಾರಣ್ಯಯೋಗೀಶ್ವರಾ || ೭
ಎನಸುಂ ಕನ್ನಡನಾಡಿನೇಳ್ಗೆಗೆ ತವಾಶೀರ್ವಾದಮೊಂದಿರ್ಕೆಯೆಂ- |
ದನಿಶಂ ನಿನ್ನಯನಾಮಮಂ ಭಜಿಪೆನಾಂಸದ್ಭಕ್ತಿಯಿಂಚಿತ್ತದೊಳ್ ||
ಘನಚಾರಿತ್ರವಿರಾಜಿತಾ ವಿವಿಧ ವಿದ್ಯಾರಣ್ಯ ಪುಣ್ಯಾರ್ಜಿತಾ |
ಜನಸಂಪ್ರೀತಿಕರಾ ! ಸದಾಶುಭಕರಾ ? ಧರ್ಮಾಕರಾ ? ಶಂಕರಾ ! || ೮

## ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

### ೧೫ ಪುಷ್ಪಗಳ ಪ್ರಕಟಣೆ

| | | | |
|---|---|---|---|
| ೧ | ಪಂಡಿತರಾಜ ಜಗನ್ನಾಥ | ... | ೫-೦೦ |
| ೨ | ಕನ್ನಡಿಗರ ಜನ್ಮಸಾರ್ಥಕತೆ | ... | ೫-೦೦ |
| ೩ | ಕರ್ನಾಟಕ ನರಕಾಸುರ ವಿಜಯ ವ್ಯಾಯೋಗಂ | ... | ೪-೦೦ |
| ೪ | ಕರ್ನಾಟಕ ಕಥಾಸರಿತ್ಸಾಗರ | ... | ೬-೦೦ |
| ೫ | ಶೌರ್ಯಸಾಗರ | ... | ೬-೦೦ |
| ೬ | ಕನ್ನಡಮಾತು ತಲೆಯೆತ್ತುವ ಬಗೆ | ... | ೩-೦೦ |
| ೭ | ಕಾಲಿದಾಸ ಚರಿತ್ರ | ... | ೬-೦೦ |
| ೮ | ಕರ್ನಾಟಕ ಯಯಾತಿ ನಾಟಕಂ | ... | ೮-೦೦ |
| ೯ | ಮೋಹಿನೀ ಅಥವಾ ನಿಂದಕರ ನಡವಳಿ | ... | ೧೦-೦೦ |
| ೧೦ | ಭಾರತೀಯ ವಿದುಷಿಯರು | ... | ೮-೦೦ |
| ೧೧ | ಶ್ರೇಯಃಸಾಧನ | ... | ೮-೦೦ |
| ೧೨ | ಗೃಹವೈದ್ಯಕವು | ... | ೮-೦೦ |
| ೧೩ | ಇಸೋಪನ ಚರಿತ್ರ | ... | ೩-೦೦ |
| ೧೪ | ವಿದ್ಯಾರಣ್ಯ ಸ್ವಾಮಿಗಳು | ... | ೧೦-೦೦ |
| ೧೫ | ನರಗುಂದದ ಬಂಡಾಯ | ... | ೧೦-೦೦ |

